ಬಿಸಿಲ

ರೂ. 20



ದೀಪಾವಳಿ ವಿಶೇಷಾಂಕ - 2000


ನಿರ್ಮಿತಿ ಕೇಂದ್ರ, ಬಳ್ಳಾರಿ

(ಕಡಿಮೆ ವೆಚ್ಚದ ಸಾಮಗ್ರಿಗಳ
ಹಾಗೂ ತಾಂತ್ರಿಕತೆಯ ವರ್ಗಾವಣೆ ಕೇಂದ್ರ)

Nirmiti Kendra, Bellary

(Cost Effective Building Materials and Technology Transffer Centre)

Registered Society Sponsored by Hudco & Govt. of Karnataka



ಗುರಿ ಮತ್ತು ಉದ್ದೇಶಗಳು

1. **ತರಬೇತಿ :** ಸ್ಥಳೀಯ ಕೆಲಸಗಾರರಿಗೆ ಕಟ್ಟಡ ನಿರ್ಮಾಣದಲ್ಲಿ ಮಾಹಿತಿ ನೀಡಿ ಹಳ್ಳಿಯ ಜನರಿಗೆ ಸ್ವ-ಉದ್ಯೋಗದ ಬಗ್ಗೆ ಮಾರ್ಗದರ್ಶನ ಮಾಡುವುದು.
2. **ಉತ್ಪಾದನೆ :** ಪರಿಸರ ಸ್ನೇಹಿ ಕಟ್ಟಡದ ಸಾಮಗ್ರಿಗಳನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದಿಸಿ, ಉತ್ಪಾದನಾ ವೆಚ್ಚವನ್ನು ಶೇಕಡಾ 20ರಷ್ಟು ಕಡಿಮೆ ಮಾಡುವುದು.
3. **ಗೃಹನಿರ್ಮಾಣ ಮಾರ್ಗದರ್ಶನ :** ನಿರ್ಮಿತಿ ಕೇಂದ್ರದ ಮೂಲಕ ಗ್ರಾಮೀಣ ಹಾಗೂ ನಗರ ಪ್ರದೇಶದ ಜನರಿಗೆ ಪರಿಸರ ಸ್ನೇಹಿ ಸಾಮಗ್ರಿ ಬಗ್ಗೆ ಮಾಹಿತಿ ನೀಡಿ ಕಟ್ಟಡ ನಿರ್ಮಾಣ ವೆಚ್ಚವನ್ನು ಕಡಿಮೆಗೊಳಿಸುವುದು.

   ಅಲ್ಲದೆ ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿಯಲ್ಲಿ ಮತ್ತೊಂದು ಗ್ರಾಮೀಣ ನಿರ್ಮಿತಿ ಕೇಂದ್ರ ಆರಂಭವಾಗಿದ್ದು ಗ್ರಾಮೀಣ ಪ್ರದೇಶದಲ್ಲಿ ಕಟ್ಟಡ ನಿರ್ಮಾಣದಲ್ಲಿ ಸಹಾಯ ಮಾಡುತ್ತಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಸೆಂಟ್ರಲ್ ಹೆಡ್ ಆಫೀಸ್, ಕಾರ್ನಿಕ್, ಕಾವೇರಿಭವನ,
4ನೇ ಮಹಡಿ, ಕೆ.ಎಚ್.ಬಿ., ಕೆ. ಜಿ. ರೋಡ್, ಬೆಂಗಳೂರು-9. ದೂರವಾಣಿ : 2232067.

ಅಧ್ಯಕ್ಷರು :
ಜಿಲ್ಲಾಧಿಕಾರಿಗಳು,
ಬಳ್ಳಾರಿ

ಕಾರ್ಯ ನಿರ್ವಾಹಕ ಅಧ್ಯಕ್ಷರು :
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ, ಬಳ್ಳಾರಿ

ಸದಸ್ಯ ಕಾರ್ಯದರ್ಶಿ :
ಉಪ ಕಾರ್ಯದರ್ಶಿ - II
ಜಿಲ್ಲಾ ಪಂಚಾಯತ, ಬಳ್ಳಾರಿ

ಬದುಕು

ದೀಪಾವಳಿ ವಿಶೇಷಾಂಕ ನವೆಂಬರ್ - 2000

ಸಂಪುಟ-4 ಸಂಚಿಕೆ-3

ಸಂಪಾದಕ
ಚಂದ್ರಕಾಂತ ವಡ್ಡು

ಗೌರವ ಸಂಪಾದಕ
'ಚಿರಂಜೀವಿ'

ಉಪ ಸಂಪಾದಕ
ಎಚ್.ಆರ್.ವಸ್ತ್ರದ

ವಿಶೇಷ ನೆರವು
ಯು.ಭೂಪತಿ

ಅಕ್ಷರ ಜೋಡಣೆ
ಪ್ರಕಾಶ ಎಂ.ವಾಲಿ
ಮಲ್ಲಿಕಾ ಕೆ.ಎಂ.
ಜೈಭೀಮ ಜಿ.ಮೇಳಗೀಕರ್

ನಿರ್ವಹಣೆ
ಸಿದ್ದಪ್ಪ ವೈ. ಕಬ್ಬೂರ
ಮೊಹಿನುದ್ದೀನ್ ಐ.

ಕಚೇರಿ ವ್ಯವಸ್ಥಾಪಕಿ
ರಮಾಮಣಿ ಸಿ.ಎಸ್

ಕಲೆ
ರವಿಕುಮಾರ್. ಹ.
ಟಿ.ಕೆ.ರಾವ್

ಮುಖಚಿತ್ರ
ಸಿನಿಮಾತಾರೆ ಅಭಿನಯ

ವರ್ಣಪಾರದರ್ಶಿಕೆ
ಕೆ.ಎನ್.ನಾಗೇಶ್‌ಕುಮಾರ್

ವಿಳಾಸ :
'ಬದುಕು' ಮಾಸಪತ್ರಿಕೆ,
ಅಂಕುರ ಪ್ರಕಾಶನ, 552, 15ನೇ ಮೇನ್, 3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್, ಬಸವೇಶ್ವರ ನಗರ, ಬೆಂಗಳೂರು - 560079 ✆ : 3227810

Printed, Published and Owned by Chandrakanta Vaddu
552, 15th Main, 3rd Stage, 4th Block,
Water Tank Road, Basaveshwaranagar, Bangalore-79.
Tel : 080 3227810 Email:Ankura@rediffmail.com
Pager No : 9622 738638 Editor : Chandrakanta Vaddu

ಒಳನೋಟ



ಲೇಖನಗಳು :

ಕಥೆಗಳು

ಹಾಸ್ಯ / ಲಲಿತ ಪ್ರಬಂಧ

ಕವನ

ಓದುಗರ ವೇದಿಕೆ

ಸಿನಿಮಾ ಬದುಕು

ಪ್ರಿಯ ಮಿತ್ರನಿಗೊಂದು ಪತ್ರ .....



ಶುಭ ಮುಂಜಾವು. ಶುಭ ದೀಪಾವಳಿ. ಏಕೆ ಇನ್ನೂ ಎಚ್ಚರಿಕೆಯಾಗಲಿಲ್ಲವೇ? ನಿನಗಿನ್ನೂ ಬೆಳಗಾಗಲಿಲ್ಲವೇ? ನನ್ನ ಪ್ರತಿನಿಧಿ ಸೂರ್ಯ ಮೂಡಿ ಆಗಲೇ ಬಹಳ ಹೊತ್ತಾಯಿತಲ್ಲ! ಇನ್ನೊಂದು ಮೂರು ದಿವಸಗಳಲ್ಲಿ ದೀಪಾವಳಿ ಬರುತ್ತಿದೆ. ನನ್ನ ಹೆಸರಿನಲ್ಲಿ ನಿನಗೆ ರಜ, ಹಬ್ಬದೂಟ, ಹೊಸ ಉಡುಪು, ಬಂಧು ಬಾಂಧವರ ಆಗಮನ. ಪ್ರಪಂಚವನ್ನೆ ಮರೆತುಬಿಡುವಷ್ಟು ಸುಖ ಸಂತೋಷಗಳ ಮಿಡಿತಗಳು. ನನಗೆ ಖಂಡಿತ ಗೊತ್ತು - ದೀಪಾವಳಿ ಹಬ್ಬದ ದಿನವೂ ನೀನು ನನ್ನನ್ನು ನೆನಪು ಮಾಡಿಕೊಳ್ಳುವುದಿಲ್ಲ. ಹೌದು ನಿನಗೆ ಹೇಗೆ ನೆನಪಿಗೆ ಬರಲು ಸಾಧ್ಯ? ಬೆಳಗಾಗೆದ್ದು ಎಣ್ಣೆ ಹಚ್ಚಿಸಿಕೊಂಡು ಅಭ್ಯಂಗ ಸ್ನಾನದ ಸುಖ, ಅದಾದ ಕೂಡಲೇ ಹೊಸ ಉಡುಪುಗಳನ್ನು ಧರಿಸುವ ಸಂಭ್ರಮ, ಅದಾದ ಕೂಡಲೇ ಮನೆಮಂದಿ ಜೊತೆ ಪಟಾಕಿಗಳನ್ನು ಸುಟ್ಟು ಆನಂದಿಸುವ ಸಂದರ್ಭ., ಆಗಲೇ ಯಾರೋ ನೆಂಟರಿಷ್ಟರು, ಮಿತ್ರರು ಬರುತ್ತಾರೆ. ಅವರೊಂದಿಗೆ ಏನಾದರೂ ಸಿಹಿತಿಂಡಿ ತಿನ್ನಬೇಕು. ಮನಸ್ಸು ತುಂಬಿ ಹರಿಯುವಂತೆ ಹರಟೆ ಹೊಡೆಯಬೇಕು. ಈ ದಿನದ ಪತ್ರಿಕೆಗಳು ಬೇರೆ ರಂಗುರಂಗಿನ ಸುದ್ದಿ ಸಮಾಚಾರ ಚಿತ್ರಗಳನ್ನು ನಿನ್ನ ಮುಂದಿಟ್ಟಿವೆ. ಸಮಯ ಸಿಕ್ಕಾಗ ಅದನ್ನು ಬೇರೆ ತಿರುವಿಹಾಕಬೇಕು (ಇದಕ್ಕೆ ಹಣ ಕೊಟ್ಟಿದ್ದಿಯಲ್ಲಪ್ಪ ನೀನು!). ಆಮೇಲೆ, ಭೂರಿಭೋಜನ - ಮನೆಮಂದಿ, ಆತ್ಮೀಯರ ಜೊತೆಗೆ ಸಿಹಿಖಾರದ ಖಾದ್ಯಗಳು. ನೀನು ಕೊಂಡು ತಂದದ್ದು ನಿನ್ನ ಮಿತ್ರರು ತಂದುಕೊಟ್ಟದ್ದು. ಅವೆಲ್ಲದರ ಜೊತೆಗೆ, ಭರ್ಜರಿ ಊಟದ ವೈವಿಧ್ಯತೆ. ಇಂಥದೊಂದು ಊಟವಾದ ಮೇಲೆ ಕಣ್ಣೆಳೆಯದಿರುತ್ತದೆಯೆ? ಮೆತ್ತನೆ ಹಾಸುಗೆಯ ಮೇಲೆ ಹಾಗೇ ತಲೆಯಿಟ್ಟರೆ ಸಾಕು. ಹಗಲುಗನಸುಗಳ ಆಳದಲ್ಲಿ ನಿನ್ನ ಪ್ರಯಾಣ ಹೊರಟುಬಿಡುತ್ತದೆ. ಆ ಹಗಲುಗನಸುಗಳಲ್ಲಿ ನಿನ್ನ ಮನಸ್ಸಿಗೆ ಸಂತೋಷಕೊಡುವ ಯಾರುಯಾರು ಸಿಗುತ್ತಾರೊ? ನಿದ್ದೆ ಆದಮೇಲೆ ಮತ್ತೆ ಸಂಜೆ ದೀಪಾವಳಿ ಸಂಭ್ರಮ, ಒಂದು ನಿಮಿಷವೂ ನಿನಗೆ ಬಿಡುವಿಲ್ಲ. ಬರುವವರು, ಹೋಗುವವರು, ಫೋನ್ ಶುಭಾಶಯಗಳು, ಸುತ್ತಲೂ ಪಟಾಕಿ ಮತಾಪು ಬಾಣ ಬಿರುಸುಗಳ ಸುಂದರಲೋಕ, ನಿನ್ನ ಮನಸ್ಸು ಗಾಳಿಪಟದಂತಾಗಿರುತ್ತದೆ. ಬೆಳಗ್ಗಿನಿಂದ ಮಾತು, ಸಂಭ್ರಮದ ಚಟುವಟಿಕೆಯಲ್ಲಿ ನಿನಗೆ ಆಗಲೇ ಆಯಾಸ. ರಾತ್ರಿ ಊಟವೂ ಸಾಕುಸಾಕು ಎನ್ನಿಸುವಂಥ ಮಂಪರು, ಮತ್ತೆ ಹಾಸುಗೆ, ಸೊಗಸಾದ ಸುಖನಿದ್ರೆ.

ಅಣ್ಣಾ, ಆಗಿಹೋಯಿತಲ್ಲಪ್ಪ ನಿನ್ನ ದೀಪಾವಳಿ! ಆ ಇಡೀ ದಿನ ನಾನು ನಿನ್ನ ನೆನಪಿಗೆ ಬರಲೇ ಇಲ್ಲವಲ್ಲೋ? ಅಭ್ಯಂಗ ಸ್ನಾನವಾದ ಮೇಲೆ, ಭರ್ಜರಿ ಊಟಕ್ಕೆ ಮೊದಲು, ರಾತ್ರಿ ಹಾಸುಗೆ ಏರುವ ಮೊದಲು ಚೂರುಪಾರು ಸಮಯವಿರಲಿಲ್ಲೇನಪ್ಪಾ?

ಇರಲಿ, ಇರಲಿ, ನಾಡಿದ್ದು, ಆಚೆನಾಡಿದ್ದರ ವಿಷಯ ನಾನು ಮಾತನಾಡುತ್ತಿದ್ದೇನೆ. ದೀಪಾವಳಿ ದಿವಸದ ಯಾವ ಕ್ಷಣದಲ್ಲಾದರೂ ನನ್ನನ್ನು ನೀನು ನೆನಪುಮಾಡಿಕೊಳ್ಳುತ್ತೀಯ ಎನ್ನುವ ನಂಬಿಕೆ ನನಗಿದೆ.

ಈ ದಿವಸ ನೀನು ಆಫೀಸ್‌ಗೆ ಹೋಗಬೇಕು, ನಾಳೆಯೂ ಹೋಗಬೇಕು, ನಾಡಿದ್ದು ದೀಪಾವಳಿ ರಜ. ಬೇಗ ಏಳು ಸೂರ್ಯ ಮೂಡಿಯಾಯಿತು. ಅರೆ, ಏನು ಹಾಸುಗೆಯಿಂದ ಎದ್ದು ಹೊರಟೇಬಿಟ್ಟೆ? ಬೆಳಗಾಗೆದ್ದು ಎರಡೂ ಕೈಗಳನ್ನು ಉಜ್ಜಿಕೊಳ್ಳುತ್ತ, ನನ್ನ ನೆನಪು, ನನ್ನಾಕೆಯ ನೆನಪು ಮಾಡಿಕೊಳ್ಳುತ್ತೀಯ ಅಂದುಕೊಂಡೆನಲ್ಲ. ಇರಲಿ, ಪಾಪ, ನಿನಗೆ ಹೊತ್ತಾಯಿತು. ಇನ್ನು ಮುಖಮೂತಿ ತೊಳೆದುಕೊಂಡು, ಮುಖಕ್ಷೌರ ಮಾಡಿಕೊಂಡು, ಸ್ನಾನಕ್ಕೆ ನುಗ್ಗಬೇಕು. ಒಂದಾದ ಮೇಲೊಂದರಂತೆ ಮಾಡಿಕೊಂಡರೇನೇ ನಿನಗೆ ಸರಿಯಾದ ಸಮಯಕ್ಕೆ ಆಫೀಸ್‌ಗೆ ಹೋಗಲು ಸಾಧ್ಯವಾಗುತ್ತದೆ. ಸ್ನಾನ ಮಾಡುವಾಗ ನಿನಗೆ ಈ ದಿವಸದ ಉಡುಪಿನ ಯೋಚನೆ ಬಂದುಬಿಡುತ್ತದೆ. ನೆನ್ನೆ ಮನೆ ಕೆಲಸದವಳು ಬಂದಿಲ್ಲ. ಬನಿಯನ್ ಚೆಡ್ಡಿಗಳು ಒಗೆಯಲಾಗಿದೆಯೊ ಇಲ್ಲವೊ ಎನ್ನುವ ಚಿಂತೆ ಆವರಿಸಿಕೊಂಡಿದೆ. ಇವತ್ತು ಆಫೀಸ್‌ನಲ್ಲಿ ಒಂದು ಮೀಟಿಂಗ್ ಬೇರೆ ಇದೆ. ಸರಿಯಾಗಿ ಡ್ರೆಸ್ ಮಾಡಿಕೊಂಡು ಹೋಗಬೇಕು. ಪ್ಯಾಂಟ್-ಷರ್ಟ್ ಇಸ್ತ್ರಿ ಆಗಬೇಕು. ಷೂಗಳಿಗೆ ಪಾಲಿಷ್ ಬೇರೆ ಹಾಕಬೇಕು, ನನಗೆ ಗೊತ್ತು, ಈ ಅವಸರಗಳ ನಡುವೆ ನಿನಗೆ ನನ್ನ ಜ್ಞಾಪಕ ಬರುವುದು ಸಾಧ್ಯವಿಲ್ಲ. ಆದರೆ, ಇವುಗಳ ನಡುವೆ ಒಂದು ಕ್ಷಣ ನನ್ನ ಕಡೆ ತಿರುಗಿ

‘ಹಾಯ್’ ಎಂದಿದ್ದರೂ ನನಗೆ ಸಂತೋಷವಾಗಿ ಹೋಗುತ್ತಿತ್ತು, ‘ಊಹೂಂ’ ನೀನು ಮಾಡಲಾಗಲಿಲ್ಲ. ಸ್ನಾನ, ಡ್ರೆಸ್ಸಿಂಗ್ ನಡುವೆ ನಿನಗೆ ಸಮಯದ ಅವಕಾಶವಾಗಲಿಲ್ಲ. ಹೆಂಡ್ತಿಯ ಮೇಲೆ ಸಿಡಿಮಿಡಿಗುಟ್ಟುತ್ತ ಬೇಗಬೇಗ ಉಡುಪು ಧರಿಸಿ, ಷೂ ಪಾಲಿಷ್ ಮಾಡಿ ಅವಸರವಸರವಾಗಿ ಧರಿಸಿದೆ, ನಿನ್ನ ಹೆಂಡತಿ ಊಟ ಬಡಿಸುವುದು ಕೆಲನಿಮಿಷ ನಿಧಾನವಾಗಿ, ನೀನು ಸುಮ್ಮನೆ ಕಾಯಬೇಕಾಗಿ ಬಂತು. ಆಗ ನಿನಗೆ ಹೆಂಡತಿಯ ಮೇಲೆ ಕೋಪ, ಏನು ಮಾಡಲೂ ತೋಚುತ್ತಿಲ್ಲ. ಆಗ ಕಾಯುತ್ತಿರುವಾಗ ನನ್ನನ್ನು ನೆನಪು ಮಾಡಿಕೊಳ್ಳಬಹುದಿತ್ತು. ಊಹೂಂ ನೀನು ಮನಸ್ಸು ಮಾಡಲಿಲ್ಲ.

ಹೆಂಡತಿಗೆ ಏನೊ ಸಿಡಿಮಿಡಿದು ಬಸ್‌ಸ್ಟಾಪ್‌ಗೆ ಓಡಿಬಂದೆ, ಬಸ್ ಬರಲಿಲ್ಲ, ಆಟೋ ಹತ್ತಿದೆ. ಹಾಯಾಗಿ ಕುಳಿತೆ, ಆಗ ಖಂಡಿತ ನನ್ನನ್ನು ನೆನಪು ಮಾಡಿಕೊಳ್ಳಬಹುದಾಗಿತ್ತು, ಒಳ್ಳೆಯ ಅವಕಾಶವಿತ್ತು, ಊಹೂಂ ನಿನಗೆ ಆಫೀಸ್ ನೆನಪು ಬಂತು, ನೆನ್ನೆ ನಿನ್ನ ಬಾಸ್ ನಿನ್ನನ್ನು ಬಯ್ದಿದ್ದ. ಯಾವುದೊ ಕೆಲಸ ನೀನು ಪೂರೈಸಲಿಲ್ಲ, ಅವನೂ ಸಿಡಿಮಿಡಿ. ನಿನ್ನ ಮನಸ್ಸಿನಲ್ಲೂ ಸಿಡಿಮಿಡಿ. ಈ ಆಟೋದಲ್ಲೂ ಅದೇ ಚಡಪಡಿಕೆ. ಜೊತೆಗೆ, ಆಟೋದವನೊಂದಿಗೆ ಏನೋ ಸಂಬಂಧವಿಲ್ಲದ ಹರಟೆ. ಇಲ್ಲ, ನನ್ನ ನೆನಪು ಬರಲು ನಿನಗಾಗ ಖಂಡಿತ ಸಾಧ್ಯವಿಲ್ಲ. ನಾನೇನೂ ಅನ್ಯಥಾ ಭಾವಿಸಲಿಲ್ಲ ಬಿಡು.

ಆಫೀಸ್‌ನಲ್ಲಿ ನಿನಗಿವತ್ತು ಶುಭದಿನ, ಬಾಸ್ ಒಳ್ಳೆಯ ಮೂಡ್‌ನಲ್ಲಿ ಇದ್ದ, ನಿನ್ನನ್ನು ಚೆನ್ನಾಗಿ ಮಾತನಾಡಿಸಿದ, ನೀನು ಚೆನ್ನಾಗಿ ಕೆಲಸ ಮಾಡುತ್ತಿದ್ದೀಯ ಎಂದ, ಪ್ರಮೋಷನ್ ಕೊಡುತ್ತೇನೆ, ಮುಂದೂ ಚೆನ್ನಾಗಿ ಕೆಲಸ ಮಾಡು ಎಂದ. ನೀನು ಉಬ್ಬಿ ಹೋದೆ. ಬಾಸ್ ಮೇಲೆ ಪ್ರೀತಿವಿಶ್ವಾಸ ತುಂಬಿ ಹರಿಯಿತು. ಅವರನ್ನು ಹೊಗಳಿ ಹಾಡಿದೆ. ಮಾನಸಿಕ ಸಾಷ್ಟಾಂಗ ಮಾಡಿಬಿಟ್ಟೆ, ನಿನ್ನ ಬಾಸ್‌ಗೆ ಆ ಬುದ್ಧಿ ಕೊಟ್ಟದ್ದು ನಾನು, ನಿನಗೆ ಪ್ರಮೋಷನ್ ಕೊಡಲು ಹೇಳಿದ್ದು ನಾನು. ಹಾಗಿದ್ದರೂ ನೀನು ನನ್ನನ್ನು ಕೃತಜ್ಞತೆಯಿಂದ ನೆನೆಯಲಿಲ್ಲ.

ನಾನು ಕಾಯುತ್ತಲೇ ಇದ್ದೆ. ನಿನಗೆ ಸಮಯಾವಕಾಶವೇ ಆಗಲಿಲ್ಲ. ಊಟ ಮಾಡುವಾಗ, ಮಧ್ಯಾಹ್ನ ತಿಂಡಿ ತಿನ್ನುವಾಗ ನೀನು ಹೊಸ ಪ್ರಮೋಷನ್‌ನಿಂದ ಬರುವ ಹೆಚ್ಚಿನ ಸಂಬಳದ ಬಗ್ಗೆ ಯೋಚಿಸುತ್ತಿದ್ದೆ. ಇದು ಸಹಜ ಬಿಡು. ನಿನ್ನ ಆಲೋಚನೆಗಳ ನಡುವೆ ಅಕಸ್ಮಾತ್ ‘ಧನ್ಯವಾದ, ನಿನ್ನಿಂದ ನನಗೆ ಪ್ರಮೋಷನ್ ಬಂತು. ಇನ್ನು ಸಂಸಾರ ನಡೆಸುವುದು ಒಂದಿಷ್ಟು ಸುಲಭ ಆಯ್ತು’ ಎಂದು ನೀನು ಹೇಳಿಬಿಡಬಹುದು ಎಂದೆಲ್ಲ ಕಾದೆ. ಊಹೂಂ, ನಿನ್ನ ಮನಸ್ಸಿಗೆ ಹಾಗೆಲ್ಲ ಅನ್ನಿಸಲೇ ಇಲ್ಲ. ಮತ್ತೆ ಆಫೀಸ್‌ನಿಂದ ಹೊರಗೆ, ಬಸ್‌ಗಾಗಿ ಚಡಪಡಿಕೆ, ಬಸ್‌ನ ನುಗ್ಗಾಟದಲ್ಲಿ ಕೋಪತಾಪ ಬೇಜಾರು. ‘ಥೂ, ಹಾಳು ಒಂದು ಕಾರು ಇದ್ದಿದ್ರೆ ಹೀಗೆಲ್ಲ ಸಾಯ್ಬೇಕಾಗಿರ್ಲಿಲ್ಲ’ ಎಂದು ನಿನ್ನ ಹಣೆ ಬರೆಹವನ್ನು ಹಳಿದುಕೊಂಡೆಯೇ ಹೊರತು, ‘ನನಗೆ ವಾಹನಯೋಗ ಕೊಡಪ್ಪ’ ಎಂದು ನನ್ನನ್ನು ನೆನಪುಮಾಡಿಕೊಂಡು ಪ್ರಾರ್ಥಿಸಲಿಲ್ಲ. ಇರಲಿ, ನಿನ್ನ ತಾಪತ್ರಯ ನಿನಗೆ.

ಮನೆಗೆ ಬಂದಕೂಡಲೇ, ಷೂಗಳನ್ನು ಕಿತ್ತೆಸೆದು ಹಾಗೇ ಸೋಫಾದ ಮೇಲೆ ಉರುಳಿಕೊಂಡೆ. ಆಯಾಸ, ಹಸಿವೆ, ನಿದ್ದೆ ಎಲ್ಲ ನಿನ್ನನ್ನು ಆವರಿಸಿಕೊಂಡು ಬಿಟ್ಟಿತ್ತು. ಹಾಗೆ ಸುಮ್ಮನೆ ಬಿದ್ದುಕೊಂಡಿದ್ದಾಗ ನನ್ನನ್ನು ನೆನಪು ಮಾಡಿಕೊಳ್ಳಬಹುದು ಅಂದುಕೊಂಡೆ. ಅಷ್ಟರಲ್ಲಿ, ನಿನ್ನ ಹೆಂಡತಿ ಕಾಫಿ ತಂದುಕೊಟ್ಟಳು. ಅಕ್ಕಪಕ್ಕದ ಮನೆಗಳ ವಿಷಯ ಹೇಳತೊಡಗಿದಳು. ನಿನಗದು ಬೇಕಾಗಿರಲಿಲ್ಲ. ಆದರೂ ಕೇಳಿದೆ. ಆಮೇಲೆ ಟಿವಿಯಲ್ಲಿ ಯಾವುದೊ ಸ್ವಾರಸ್ಯ ಕಾರ್ಯಕ್ರಮ. ಅಲ್ಲಿ ಬರುವುದನ್ನೆಲ್ಲ ನೋಡುವ ಅಭ್ಯಾಸ ನಿನಗೆ. ಆಗ ನಿನಗೆ ಬೇರೇನೂ ಹೊಳೆಯುವುದೇ ಇಲ್ಲ. ನನ್ನ ನೆನಪು ಬರುವುದಂತೂ ದೂರವೇ ಉಳಿಯಿತು. ರಾತ್ರಿ ಊಟ ಮಾಡಿದೆ.

ಹಾಸುಗೆ ಮೇಲೆ ಮೈಚಾಚಿದ ಕೂಡಲೇ ನಿನಗೆ ನಿದ್ದೆ ಎಳೆಯಿತು. ಮನೆಯವರೊಂದಿಗೆ, ಹೆಂಡತಿಯೊಂದಿಗೆ ನಗುತ್ತ ಏನೋ ಮಾತನಾಡಿ ಮುಗಿಸಿ ಹಾಸುಗೆಗೆ ಬಂದೆ. ನನ್ನನ್ನೂ ನೀನು ಮಾತನಾಡಿಸಬಹುದು ಎಂದುಕೊಂಡಿದ್ದೆ. ಊಹೂಂ, ನಿನಗೆ ನಿದ್ದೆ ಎಳೆಯಿತು. ಪಾಪ, ನೀನು ಬೆಳಗ್ಗಿನಿಂದ ಆ ಕೆಲಸ-ಈ ಕೆಲಸ ಎಂದು ಮಾಡುತ್ತಲೇ ಇದ್ದೀಯ. ಈಗ ನಿದ್ದೆ ಎಳೆಯದಿರುತ್ತದೆಯೇ? ಪರವಾಗಿಲ್ಲ ಬಿಡು, ನಿನ್ನ ನೆನಪಿಗಾಗಿ, ಪ್ರಾರ್ಥನೆಗಾಗಿ ತಾಳ್ಮೆಯಿಂದ ಕಾಯುತ್ತೇನೆ. ನನ್ನಲ್ಲಿ ಅಪಾರ ತಾಳ್ಮೆ ಇದೆ. ನನಗೆ ನಿನ್ನಮೇಲೆ ತುಂಬಾ ಪ್ರೀತಿ ಇದೆ. ನಿನ್ನ ಹೃದಯದಾಳದಿಂದ ಮೂಡುವ ಒಂದು ನೆನಪಿಗೆ, ಒಂದು ಪ್ರಾರ್ಥನೆಗೆ, ಒಂದು ಕೃತಜ್ಞತಾಭಾವಕ್ಕೆ ನಾನು ಕಾಯುತ್ತೇನೆ, ಬಹುಶಃ, ನಾಳೆ ನಿನಗೆ ಪುರುಸೊತ್ತಾಗಬಹುದು. ನನ್ನ ನೆನಪು ಬರಬಹುದು. ನನ್ನನ್ನು ಪ್ರೀತಿಯಿಂದ ಮಾತನಾಡಿಸಬಹುದು, ನಾನು ಕಾಯುತ್ತೇನೆ; ನಾಳೆಯೊ ನಾಡಿದ್ದೊ ಅಥವ ಇನ್ನೊಂದು ದಿವಸ ನಿನ್ನ ನೆನಪಿಗೆ ನಾನು ಬರಬಹುದು. ನನಗಾಗಿ ನಿನ್ನ ದಿನದಲ್ಲಿ ಒಂದು ಸ್ವಲ್ಪ ಸಮಯ ಸಿಗಬಹುದು ಎನ್ನುವ ನಂಬಿಕೆ ನನಗಿದೆ. ನಿನಗೆ ಒಳ್ಳೆಯದಾಗಲಿ. ನನ್ನ ಬೆಂಬಲ ನಿನಗೆ ಯಾವಾಗಲೂ ಇರುತ್ತದೆ. ಈ ದಿವಸ ನಿನಗೆ ಶುಭವಾಗಲಿ! ನಿನಗೆ ಸುಖ ಸಂತೋಷ ತರಲಿ.

ಶುಭ ದೀಪಾವಳಿ!

ಎಂದು ನಿನ್ನ ಪ್ರೀತಿಯ ಸ್ನೇಹಿತ

ದೇವರು.

ಮಲೆನಾಡು ಭುಗಿಲೆದ್ದಿತು.

ಆ ರಾಜ್ಯದ ವಿಸ್ತೀರ್ಣದಲ್ಲಿ ನಾಲ್ವತ್ತು ಭಾಗ ಕಾಡು ಹಾಗೂ ಅರಣ್ಯ ಸಂಪತ್ತೇ ಅಗಾಧವಾಗಿ ಇರುವ ಆ ಭಾಗ, ಈ ದೇಶದಲ್ಲಿಯೇ ದೊಡ್ಡ ಅರಣ್ಯ ಪ್ರದೇಶ ಎನ್ನುವ ಹೆಗ್ಗಳಿಕೆಯನ್ನು ಪಡೆದಿತ್ತು. ಇಲ್ಲಿನ ಕಾಡು ಎಂದರೆ ಶ್ರೀಮಂತ ಕಾಡು, ಜೀ ಜೀಗುಡುವ ಕಾಡು. ತೇಗು, ಶ್ರೀಗಂಧ, ಬೀಟೆ, ಹೊನ್ನೆ ಇತ್ಯಾದಿ ಮರಗಳ ಸಮೂಹ ಅಲ್ಲದೆ, ಆ ಬೃಹತ್ ನಾಡಿನಲ್ಲಿಯೇ ಎಲ್ಲೂ ಸಿಗದ ಔಷಧಗಳ ಗಿಡಮೂಲಿಕೆಗಳೂ ಇಲ್ಲಿಯೇ ಇವೆ. ಈ ಬೆಟ್ಟಗಾಡು ಅಂಥವಕ್ಕೆ ತವರು ಎಂದು ಅದು ಪ್ರಸಿದ್ಧವಾಗಿತ್ತು. .ಎಂದಮೇಲೆ ಇದರ ಮಹತ್ವವನ್ನು ಹೇಳುವುದು ಹೆಚ್ಚು ಏನಿದೆ?


ಮರಗಳ ರಾಶಿ, ಬಿದಿರ ಹೆಳಲು ಇಂಥ ವೈಭವಗಳೊಂದಿಗೆ ಆನೆ, ಹುಲಿ, ಕಾಡೆಮ್ಮೆ, ಚಿರತೆ, ನವಿಲು ಕಾಡುಹಂದಿ ಇಂಥ ಪ್ರಾಣಿಗಳಿಗೆ ಆ ಕಾಡು ಪ್ರಸಿದ್ಧವೂ ಹೌದು. ಈ ಕಾಡಿನಲ್ಲಿ ಸಿಂಹರಾಜ ಒಂದನ್ನು ಬಿಟ್ಟು ಮತ್ತೆ ಎಲ್ಲ ಪ್ರಾಣಿಗಳೂ ಇವೆ. ಎಲ್ಲ ಪ್ರಾಣಿಗಳಿಗೂ ಈ ಕಾಡು ಆಡುಂಬೊಲವಾಗಿದೆ.

ಬುಡಕಟ್ಟು ಜನಾಂಗದವರೇ ಇಲ್ಲಿನ ಆದಿವಾಸಿಗಳು. ಕಾಡು ಎಂದಮೇಲೆ ಬೆಟ್ಟಗುಡ್ಡಗಳೇ ಇವುಗಳಿಗೆ ಬೆನ್ನೆಲುಬು ಆಗಿರುವಾಗ ಇಲ್ಲಿ ಜನಸಾಂದ್ರತೆ ಕಡಿಮೆ. ಇಡೀ ಕಾಡೇ ಒಂದು ಜಿಲ್ಲೆ ಆಗಿದೆ. ಆರು ಏಳು ತಾಲ್ಲೂಕುಗಳೂ ಇವೆ. ದೊಡ್ಡ ಊರುಗಳು ಎಂದು ಹೇಳಿಕೊಳ್ಳುವಂಥವು ಸಂಖ್ಯೆಯಲ್ಲಿ ಕಡಿಮೆ. ಬಹುಪಾಲು ಊರುಗಳಲ್ಲಿ ಐದುನೂರ ಸಾವಿರ ಹೀಗೆಯೇ ಮನೆಗಳು ಇವೆ ಅಷ್ಟೇ.

ಈ ಕಾಡಿಗೂ ಸೀತೆ ಬಂದಿದ್ದಳಂತೆ. ದ್ರೌಪದಿ ತಲೆ ಬಾಚಿಕೊಂಡಳಂತೆ. ಇಂಥ ಕಥೆಗಳೂ ಇವೆ. ಕಥೆಗಳು ಹೇಗಾದರೂ ಇರಲಿ ಈ ಆಧುನಿಕ ಯುಗದಲ್ಲಿಯೇ ಗದ್ದಲ ಗೋಜುಗಳೇ ನಗರಗಳಲ್ಲಿ ತುಂಬಿ ತುಳುಕುತ್ತ, ಜನಸಂಖ್ಯಾಸ್ಫೋಟದಿಂದ ನಾಡು ತತ್ತರಿಸುತ್ತ ಇರುವ ಈ ಸ್ಥಿತಿಯಲ್ಲಿ ಈ ಕಾಡು ಪ್ರದೇಶ ಮಾತ್ರ ಶಾಂತವಾಗಿದೆ. ಒಮ್ಮೆ ಇಲ್ಲಿನ ಚೆಲುವನ್ನೂ, ಅರಣ್ಯ ಸಂಪತ್ತನ್ನು ನೋಡಿದವರು ಮತ್ತೊಮ್ಮೆ ಇಲ್ಲಿಗೆ ಬರಲೇಬೇಕು ಎಂದೆನ್ನಿಸುವ ಸೊಬಗಿನ ನೆಲೆಗಳೂ ಝರಿ ತೊರೆಗಳೂ ಇಲ್ಲಿ ತುಂಬಾ ಇವೆ. ಪ್ರವಾಸಿಗರು ಬಸ್ಸುಗಳಲ್ಲಿ ವ್ಯಾನುಗಳಲ್ಲಿ ಆಗಾಗ್ಗೆ ಇಲ್ಲಿಗೆ ಬರುತ್ತ ಹೋಗುತ್ತ ಇರುತ್ತಾರೆ. ಗಲೀಜುಮಾಡಿ ಹಿಂದಿರುಗುತ್ತಾರೆ.

ಅರಣ್ಯಭಾಗ ಇಲ್ಲಿ ಹೆಚ್ಚು ಇರುವುದರಿಂದ ವ್ಯವಸಾಯಕ್ಕೆ ಪ್ರಾಶಸ್ತ್ಯ ಕಡಿಮೆ. ಬೆಟ್ಟಗುಡ್ಡಗಳೇ ಜಿಲ್ಲೆಯ ಎಲ್ಲ ಭಾಗಕ್ಕೂ ವ್ಯಾಪಿಸಿಕೊಂಡಿವೆ.

ಮೊದಲು ಬೇಟೆ ಇಲ್ಲಿ ಪ್ರಸಿದ್ಧವಾಗಿತ್ತು. ಹೀಗಾಗಿ, ಬೇಟೆಯಾಡುವುದು ಜಾಸ್ತಿಯಾಗಿ, ಕಾಡುಪ್ರಾಣಿಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತ ಬರಲು, ಸರಕಾರ ಇದನ್ನು 'ರಕ್ಷಿತ ಪ್ರದೇಶ' ಎಂದು ಘೋಷಿಸಿಬಿಟ್ಟಿದೆ. ಈಗ ಯಾರೂ ಬಂದೂಕನ್ನು ಹಿಡಿದು ಹೆಗಲಿಗೇರಿಸಿ ಇಲ್ಲಿನ ಕಾಡಿನ ಒಳಗೆ



ಅಭಿವೃದ್ಧಿ

● ಶೇಷನಾರಾಯಣ,
759, 15ನೆ 'ಬಿ' ಮೇನ್, ಗೋಕುಲಂ
ಮೊದಲ ಘಟ್ಟ, ಮೊದಲ ಹಂತ,
ಮತ್ತೀಕೆರೆ, ಬೆಂಗಳೂರು-560 054.

ಹಿರಿಯರು ಮರೆತದ್ದನ್ನು
ಆ ಕಿರಿಯ ಮಾಡಿದ್ದ.
ಅದರಲ್ಲೂ ಅರ್ಥವಿತ್ತು.

ಪ್ರವೇಶಿಸುವ ಹಾಗಿಲ್ಲ. ದಂತಕ್ಕಾಗಿ ಆನೆಗಳನ್ನೂ, ಚರ್ಮಕ್ಕಾಗಿ ಜಿಂಕೆ ಹುಲಿ ಇತ್ಯಾದಿ ಪ್ರಾಣಿಗಳನ್ನು ಕೊಲ್ಲುವ ಹಾಗಿಲ್ಲ. ಅರಣ್ಯ ಸಂರಕ್ಷಕರೂ ಪೊಲೀಸಿನವರೂ ಅಲ್ಲಲ್ಲಿ ಅಲ್ಲಲ್ಲಿ ಆಯಕಟ್ಟಿನ ಜಾಗಗಳಲ್ಲಿ ಕಾವಲು ಇದ್ದಾರೆ.

★

ಶಾಂತವಾದ ಈ ಪ್ರದೇಶಕ್ಕೆ ಇದ್ದಕ್ಕಿದ್ದ ಹಾಗೆ ಬರಸಿಡಿಲು.

ಹೌದು. ಯಾವನೋ ಒಬ್ಬ ಬಲಾಢ್ಯ ಶ್ರೀಮಂತ, ಹೊರನಾಡಿನಲ್ಲಿ ಪ್ರಸಿದ್ಧನಾಗಿರುವವನು, ಎಂಥೆಂಥವೋ ಹತ್ತೆಂಟು ಉದ್ಯಮಗಳನ್ನು ಸ್ಥಾಪಿಸಿ ಲಾಭಗಳಿಸಿ ಜಗತ್ತಿನ ಕೋಟ್ಯಾಧಿಪತಿಗಳ ಸಾಲಿನಲ್ಲಿ ಇರುವವನು, ಈ ನಾಡಿಗೆ ಬಂದ. ಐದು ದಿನಗಳು ಈ ನಾಡಿನಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೊರಟ. ಪ್ರೇಕ್ಷಣೀಯ ಸ್ಥಳಗಳು ಎಂದರೆ ಈ ಅರಣ್ಯ ಪ್ರದೇಶವೂ ಸಹಜವಾಗಿ ಅದರಲ್ಲಿ ಸೇರಿಬಿಡುತ್ತದೆ. ಇಲ್ಲಿನ ಅರಣ್ಯ ಸೊಬಗನ್ನು ನೋಡದೆ ಯಾವ ವಿದೇಶೀಯನೂ ತನ್ನ ನಾಡಿಗೆ ಹಿಂದಿರುಗುವುದಿಲ್ಲ!

ಸರಿ, ಆ ಬಲಾಢ್ಯನೂ ಅವನ ಪರಿವಾರವೂ ಒಂದು ದಿನ ರಕ್ಷಿತ ಪ್ರದೇಶದ ಈ ಅರಣ್ಯ ಭಾಗಕ್ಕೆ ಭೇಟಿಕೊಟ್ಟಿತು. ಇಲ್ಲಿನ ಶ್ರೀಮಂತಿಕೆ ನಿಸರ್ಗ ನಿರ್ಮಿಸಿರುವ ಕಣ್ಮನ ತಣಿಸುವ ಝರಿತೊರೆಗಳು ಪ್ರಪಾತವೋ ಎನ್ನುವ ಹಾಗೆ ಎತ್ತರದ ಪ್ರದೇಶಗಳಿಂದ ಧುಮುಕುವ ಮಣಿ ಮಣಿ ನೀರು - ಎಲ್ಲವೂ ಎಲ್ಲವೂ ಅವನ ಮನಸ್ಸನ್ನು ಸೂರೆಗೊಂಡುಬಿಟ್ಟವು.

ಆತ ಮಹಾ ಚಾಣಾಕ್ಷ. ಯಾವುದನ್ನೂ ವ್ಯಾಪಾರೀ ಬುದ್ಧಿಯಿಂದ ನೋಡುವವ. ಆಕಳಿಸಿದರೂ ಚಿಟಿಕೆ ಹೊಡೆದರೂ ಅದರಲ್ಲಿ ವ್ಯಾಪಾರೀ ಚಾಕಚಕ್ಯತೆ. ಹಾಗಿಲ್ಲದಿದ್ದಮೇಲೆ ಅವನು ಕೋಟ್ಯಾಧಿಪತಿ ಆಗುವುದು ಹೇಗೆ ಸಾಧ್ಯವಾಗುತ್ತಿತ್ತೊ? ಅವನ ತಲೆಯಲ್ಲಿ ಈಗ ಮಿಂಚು, ಹೊರಳು ಆಗಲೆ ಅವನ ತಲೆ ಒಂದು ರೂಪುರೇಷೆಯನ್ನು ಸಿದ್ಧಪಡಿಸಿಬಿಟ್ಟಿತು.

ಹಿಡಿದ ಕೆಲಸವನ್ನು ಮನಸ್ಸು ಮಾಡಿದ್ದನ್ನು ಸಾಧಿಸುವುದರಲ್ಲಿ ಪೂರೈಸುವುದರಲ್ಲಿ ಆತ ನಿಪುಣ, ಬುದ್ದಿವಂತ ಬೇರೆ. ಜಗತ್ತಿನ ಬಹುತೇಕ ಸರಕಾರಗಳನ್ನೂ ಅಲ್ಲಿನ ರಾಜಕೀಯ ಜನರನ್ನೂ ಅಧಿಕಾರಿಗಳನ್ನೂ ಮುಖಂಡರನ್ನೂ ಬಲೆಗೆ ಹಾಕಿಕೊಳ್ಳುವುದರಲ್ಲಿ ಈತ ಮಹಾ ಖದೀಮ. ಮೀನುಗಳನ್ನು ಎತ್ತಿ ಬುಟ್ಟಿಗಳಿಗೆ ಹಾಕುವ ಹಾಗೆ ಸಲೀಸು.

ಈ ಪ್ರದೇಶ ಅವನಿಗೆ ಹೇಳಿ ಮಾಡಿಸಿದಂತಿದೆ. ಒಂದು ರಾಸಾಯನಿಕ ಕಾರ್ಖಾನೆ, ಒಂದು ವಿದ್ಯುತ್ ಕೇಂದ್ರ - ಇಲ್ಲಿ ಸ್ಥಾಪಿಸುವುದು ಸುಲಭ. ಲಾಭಾಂಶವೂ ಅಧಿಕ ಎಂದು ಅವನ ತಲೆಯ ಲೆಕ್ಕಾಚಾರ. ಇಲ್ಲಿನ ಮುಕ್ಕಾಲು ಭಾಗ ಕಾಡನ್ನೂ ಅಳಿಸಿ ಹಾಕುವುದೂ ಸುಲಭ, ಕಡಿಮೆ ಕೂಲಿಗೆ ಇಲ್ಲಿನ ಜನರೇ ಅಂಥ ಕೆಲಸವನ್ನು ಸಮರ್ಪಕವಾಗಿ ಮಾಡಿ ಮುಗಿಸುತ್ತಾರೆ, ಇಲ್ಲಿನ ಜನ ದಟ್ಟ ದರಿದ್ರ ಜನ, ನಾಲ್ಕುಕಾಸು ಹೆಚ್ಚು ಎಸೆದರೆ ಏನೆಲ್ಲವನ್ನೂ ಸಾಧಿಸಬಹುದು ಎಂದು ಅವನು ಯೋಜನೆಯೊಂದನ್ನು ರೂಪಿಸಿಯೇ ಬಿಟ್ಟ.

ಹಾಗೆಯೇ ಇಲ್ಲಿನ ರಾಜಕೀಯ ಜನರ ಬಂಡವಾಳವನ್ನೂ ಆತ ಆಗಲೇ ತಿಳಿದಿದ್ದ. ಹಣಕ್ಕಾಗಿ ಇಲ್ಲಿನ ಮುಖಂಡರು ಎನಿಸಿಕೊಳ್ಳುವವರು ಎಂಥ ಹೇಸಿಗೆಗೂ ಕೈಹಾಕುತ್ತಾರೆ, ಇಲ್ಲಿನ ಜನ ಬುಡ ಭದ್ರ ಎರಡೂ ಇಲ್ಲದ ಗೋಸಂಬಿ ಜನ ಎನ್ನುವುದನ್ನು ಆತ ಚೆನ್ನಾಗಿಯೇ ಅರಿತಿದ್ದ.

ಸರಿ, ಆ ರಾಜ್ಯದ ಮುಖ್ಯಮಂತ್ರಿಯನ್ನು ಆತ ದೊಡ್ಡ ಬ್ರೀಫ್‌ಕೇಸು ಹಿಡಿದು ಭೆಟ್ಟಿಯಾಗಿಯೇ



ಬಿಟ್ಟ.

ಆ ಮುಖ್ಯಮಂತ್ರಿ ಭ್ರಷ್ಟರಲ್ಲಿ ಭ್ರಷ್ಟ. ಹಣಕ್ಕಾಗಿ ಏನು ಮಾಡಲು ಹೇಸದವನು. ಜಾತಿಯ ಬಲದಿಂದ ಅವನು ಆ ರಾಜ್ಯಕ್ಕೆ ಮುಖ್ಯಮಂತ್ರಿ ಆಗಿದ್ದಾನೆ ಅಷ್ಟೆ.

ಈಗ ಈ ಭಾರೀ ಬ್ರೀಫ್‌ಕೇಸನ್ನು ಅವನು ಬಿಟ್ಟು ಬಿಡುತ್ತಾನೆಯೇ? ತಥಾಸ್ತು ಎಂದ.

★

ಪ್ರಾರಂಭದಲ್ಲಿ ವಿಷಸೂಜಿ ತಮ್ಮ ಮೇಲೆ ಪ್ರಯೋಗ ಆಗುತ್ತ ಇದೆ ಎನ್ನುವ ಅರಿವು ಅಲ್ಲಿನ ಜನರಿಗೆ ಉಂಟಾಗಲಿಲ್ಲ. ಎಲ್ಲ ಮುಗ್ಧಜನ; ಬೆಟ್ಟಗಾಡಿನ ಜನ. ಸಾಕ್ಷರತೆ ಕಡಿಮೆ. ಅವಿದ್ಯಾವಂತರೇ ಜಾಸ್ತಿ.

ಆದರೆ ದಿನ ಕಳೆದಂತೆ ಅಲ್ಲಿನ ಕಾಡಿನ ವೈಭವವನ್ನು ಅಗಾಧ ಸಂಪತ್ತನ್ನೂ ನಾಶಪಡಿಸಲು ಭಾರೀ ಭಾರೀ ಯಂತ್ರಗಳೂ ಬುಲ್‌ಡೋಜರುಗಳೂ ರಾಕ್ಷಸರ ಬೆನ್ನುಗಳ ಹಾಗೆ ಭಯಂಕರವಾಗಿ ಆ ಸುಂದರ ಕಾಡಿನೊಳಗೆ ಪ್ರವೇಶಿಸಿ ಅಲ್ಲಿನ ಸಿರಿಯನ್ನೂ ಚೆಲುವನ್ನೂ ಎಸಳನ್ನೂ ಸುರುಟಿ ಹಾಕತೊಡಗಿದಾಗ ಜನ ದಿಗ್ಭ್ರಮೆಗೊಂಡರು. ತಾವು ಆರಾಧಿಸುವ ತಲೆತಲಾಂತರಗಳಿಂದ ಪೋಷಿಸಿಕೊಂಡು ಬಂದಿರುವ ನಿಸರ್ಗಸಂಪತ್ತು ವೈಭವ ಈಗ ಬೋಳಾಗತೊಡಗಿದೆ. ಗಗನ ಚುಂಬಿ ಮರಗಳು ಕೆಳಗೆ ಒರಗುತ್ತ ಇವೆ. ಹಸಿರು ನಾಶವಾಗುತ್ತ ಇದೆ. ಈ ಸ್ಥಿತಿಯನ್ನು ಕಂಡವರಿಗೆ ಯಾರಿಗೆ ಭಯ, ವ್ಯಥೆ ಉಂಟಾಗುವುದಿಲ್ಲ?

ಜನ ಪ್ರತಿಭಟನೆಗೆ ಮುಂದಾದರು. ನಾಡಿನ ನಗರಗಳಲ್ಲಿಯೂ ಕೂಗು. ಜಗತ್ತಿನಲ್ಲಿಯೇ ಅತಿ ಸುಂದರವಾದ ಸ್ಥಳ ಎಂದು ಪ್ರಖ್ಯಾತವಾಗಿರುವ ಈ ಅರಣ್ಯ ಪ್ರದೇಶವನ್ನು ನಾಶಪಡಿಸಲು ಈ ಮುಖ್ಯಮಂತ್ರಿಗೆ ಅಧಿಕಾರ ಕೊಟ್ಟವರು ಯಾರು? ಎಂದು. ವಿರೋಧಿ ಕಪ್ಪೆ, ಕಾಗೆ, ಗೂಬೆ ಪಕ್ಷಗಳ ಮುಖಂಡರ ತಮಟೆ ಬಡಿತ. ಶಾಸನ ಸಭೆಯಲ್ಲಿ ಈ ವಿಷಯವೇ ಪ್ರಚಾರ ಆಗಿಲ್ಲ, ಮುಖ್ಯಮಂತ್ರಿಗಳಿಗೆ ಎಷ್ಟು ಸಿಕ್ಕಿದೆ? ಎಷ್ಟು ಕೋಟಿ? ಇಂಥ ಬೊಬ್ಬೆ ಪತ್ರಿಕೆಗಳೂ ಉಗ್ರವಾಗಿ ಟೀಕಿಸಿ ಬರೆದವು.

ಈಗ ಭ್ರಷ್ಟ ಮುಖ್ಯಮಂತ್ರಿ ಒಂದು ಹೇಳಿಕೆ ನೀಡಿದ:

'ನಾಡಿನಲ್ಲಿ ವಿದ್ಯುತ್ ಕೊರತೆ ತುಂಬಾ ಇದೆ. ಇದು ಎಲ್ಲರಿಗೂ ತಿಳಿದದ್ದೇ. ರಾಸಾಯನಿಕ ವಸ್ತುಗಳ ಉತ್ಪಾದನೆಯಂತೂ ನಮ್ಮ ರಾಜ್ಯದಲ್ಲಿ ಇಲ್ಲವೇ ಇಲ್ಲ. ಬೇರೆಯವರನ್ನೇ ನಾವು ಪ್ರತಿಯೊಂದಕ್ಕೂ ಆಶ್ರಯಿಸಬೇಕಾಗಿದೆ. ಈ ಯೋಜನೆಗಳು ಪೂರ್ಣಗೊಂಡರೆ ನಮ್ಮ ನಾಡಿನಲ್ಲಿ ಚಿನ್ನದ ಹೊಗೆ ಹಾಯುತ್ತದೆ. ವಿದ್ಯುತ್ ಕೊರತೆ ತಪ್ಪುತ್ತದೆ. ನಾನು ಶುದ್ಧ ಹಸ್ತದ ಎಂಜಲಿಗೆ ಕೈಹಾಕುವವನು ಅಲ್ಲ. ಈ ರಾಜ್ಯದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತ ಇದ್ದೇನೆ.'

ಈ ಗೋಸುಂಬೆಯ ಮಾತನ್ನು ಈಗ



ಯಾರೂ ಕೇಳಲು ಸಿದ್ಧರಿಲ್ಲ. ಏನು? ಸುಂದರವಾದ ಈ ಪ್ರದೇಶ ಬೋಳಾಗುತ್ತ ಇದೆ. ಚಿಗುರುಗಳು ನಾಶ ಆಗುತ್ತ ಇವೆ. ನಿಸರ್ಗ ನೀಡಿರುವ ಈ ಚೆಲುವನ್ನೂ ಸಂಪತ್ತನ್ನೂ ಈ ರಾಸಾಯನಿಕ ಕಾರ್ಖಾನೆಯೂ ವಿದ್ಯುತ್ ಕೇಂದ್ರವೂ ಜನತೆಗೆ ಒದಗಿಸಿಕೊಟ್ಟೀತೆ? ಕನಸಿನಲ್ಲಾದರೂ ಇದು ಸಾಧ್ಯವೆ? ನಿಸರ್ಗದ ಕೊಡುಗೆಯನ್ನು ಈ ಜನ ತಂದುಕೊಟ್ಟಾರೆ? ಈ ಬೊಗಳೆ ಜನ?



ಇದೇನಯ್ಯಾ ಟಿ.ವಿಯಲ್ಲಿ ಬರುವ ಹಾಡುಗಳ ಹಾಗೆ ಎಲ್ಲ ಪ್ರಶ್ನೆಗಳಿಗೂ ಅರ್ಥರ್ಥನೇ ಉತ್ತರ ಬರೆದಿರುವಿಯಲ್ಲೋ !!

ಜನ ಹೋರಾಟಕ್ಕೆ ಇಳಿದರು. ಪ್ರತಿಭಟನೆಗೆ ಮುಂದಾದರು. ಅಕ್ಕಪಕ್ಕದ ನಾಡುಗಳ ಜನರ ಸಹಕಾರವೂ ಇವರಿಗೆ ಲಭಿಸಿತು. 'ಅರಣ್ಯ ಸಂರಕ್ಷಣೆ ಸಮಿತಿ' ಎನ್ನುವ ಕಮಿಟಿ ಸಿದ್ಧವಾಯಿತು. ಚಂದಾ ಎತ್ತಿದರು. ಹಣ ಕೂಡಿಸಿದರು.

ಆದರೆ ಆ ಉದ್ಯಮಿ ಬಲಿಷ್ಠ, ಸರಕಾರ ಸಂಪೂರ್ಣವಾಗಿ ಅವನ ಬೆಂಬಲಕ್ಕೆ ಇದೆ. ನೋಟುಗಳು ಈಗ ಚಿಟ್ಟೆಗಳಂತೆ ಹಾರಾಡತೊಡಗಿದವು.

ಹಾಗಾಗಿ ಈ ಸಮಿತಿಯೇ ವಿಸರ್ಜನೆಗೊಳ್ಳುವ ಹಾಗೆ ಏರ್ಪಾಡು ನಡೆಯತೊಡಗಿತು. ಸಂರಕ್ಷಣಾ ಸಮಿತಿಯ ಕೆಲವರಿಗೆ ಬ್ರೀಫ್‌ಕೇಸ್ ಹೋಯಿತು. ಎಂಜಲು ನಾಯಿಗಳು ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಇದ್ದಾರಷ್ಟೆ. ಹೀಗಾಗಿ ಅಂಥ ಪ್ರಯತ್ನ.

ಉಹೂಂ, ಅಂಥ ಪ್ರಯತ್ನ ನಡೆಯಲಿಲ್ಲ. ಜನ ಒಗ್ಗಟ್ಟು, ಆ ಬೆಟ್ಟಗಾಡಿನ ಹಾಗೆಯೇ, ಬಂಡೆ. ಎಷ್ಟು ಹೆಚ್ಚು ಕೂಲಿ ಕೊಟ್ಟರೂ ಜನ ತಾವು ಆರಾಧಿಸುವ ಪ್ರೀತಿಸುವ ಮರಗಿಡಗಳಿಗೆ ಕೊಡಲಿ ಚಾಚಲು ನಿರಾಕರಿಸಿದರು. ಈ ಸಂಪತ್ತಿನಿಂದಲೇ ನಾವು ರೂಪ ಆಕಾರ ಎಲ್ಲವನ್ನೂ ತಳೆದಿದ್ದೇವೆ, ಇವು ಬರೇ ಗಿಡಮರಗಳು ಮಾತ್ರ ಅಲ್ಲ, ಇವು ನಮ್ಮ ಇಂದ್ರಿಯಗಳು, ಪ್ರಾಣ ಎಂದರು.

ಲಾರಿಲಾರಿಗಳಲ್ಲಿ ಟ್ರಕ್ಕು ಟ್ರಕ್ಕುಗಳಲ್ಲಿ ಈಗ ಹೊರ ರಾಜ್ಯಗಳಿಂದ ಕೂಲಿಗಳನ್ನು ಕರೆತಂದರು. ಜನ ಬಗ್ಗಿಯಾರೆ? ಲಾರಿಗಳ ಮುಂದೆ ಮಲಗಿಬಿಟ್ಟರು. ಸಾಷ್ಟಾಂಗ ಉದ್ದಂಡ. ಪೋಲೀಸರು ಬಂದರು. ಥಾಡ್ ಥೋಡ್ ಎಂದರು. ಲಾಠೀ ಚಾರ್ಜು, ಪಿಶಾಚಿ ಆಟ. ಜನರನ್ನು ಲಾರಿ ಲಾರಿಗಳಲ್ಲಿ ತುಂಬಿ ಜಿಲ್ಲಾ ಕೇಂದ್ರದ ಸೆರೆಮನೆಯಲ್ಲಿ ತುಂಬಿದರು.

ಆದರೆ ಪ್ರತಿಭಟನೆ ಮತ್ತಷ್ಟು ಜೋರಾಯಿತು. ಹೆಂಗಸರು ಮಕ್ಕಳು ಎಲ್ಲರೂ ತಮ್ಮ ಸಂಪತ್ತನ್ನು ರಕ್ಷಿಸಲು ಹೋರಾಟಕ್ಕೆ ಧುಮುಕಿಬಿಟ್ಟರು. ಇಲ್ಲಿನ ವೃಕ್ಷಸಂಪತ್ತನ್ನು ಕಡಿಯಲು ಬಿಡುವುದಿಲ್ಲ ಎಂದು ಮರಗಳನ್ನು ಅಪ್ಪಿಕೊಂಡರು. ಬಾಲಕರೂ ಬಾಲಿಕೆಯರೂ ಸಹ ಇಂಥ ಕೆಲಸಕ್ಕೆ ಮುಂದಾದರು. ಅಲ್ಲಿನ ಬೆಟ್ಟಗುಡ್ಡಗಳು ಅಪ್ಪಿಕೋ ಅಪ್ಪಿಕೋ ಎಂದು ಪ್ರತಿಧ್ವನಿಸಿದವು.

ಮರಗಳನ್ನು ಅಪ್ಪಿಕೊಳ್ಳುವ ಗಂಡಸರನ್ನು ಬಲಾತ್ಕಾರವಾಗಿ ಮರದಿಂದ ಕಿತ್ತು, ಜಪ್ಪಿಸಿ, ದಬ್ಬಿ ಎಳೆದು ಹಾಕುವ ಹಾಗೆ ಹೆಂಗಸರನ್ನು ಹಾಗೆ ಮಾಡುವ ಹಾಗಿಲ್ಲ. ಹೆಂಗಸರನ್ನು ಹಾಗೆ ಮಾಡಬೇಕಾದರೆ ಮಹಿಳಾ ಪೋಲೀಸರೇ ಆಗಬೇಕು. ಮಹಿಳಾ ಪೋಲೀಸರು ಅಷ್ಟು ಜನ ಎಲ್ಲಿದ್ದಾರೆ? ಬಾಲ ಬಾಲಿಕೆಯರನ್ನಂತೂ ಎಷ್ಟು ಗದರಿಸಿದರೂ ಪೋಲೀಸ್ ಸಂಸ್ಕೃತದಲ್ಲಿ ಬೈದರೂ ಜಗ್ಗುವ ಹಾಗಿಲ್ಲ. ಕಿವಿಗೆ ಹಾಕಿಕೊಳ್ಳುವ ಹಾಗಿಲ್ಲ. ಈ ಮರದಿಂದ ಕಿತ್ತು ಹಾಕಿದರೆ ಆ ಮರ ಹೋಗಿ ಅಪ್ಪಿಕೋ. ಅದರಿಂದ ಕಿತ್ತರೆ ಇದನ್ನು ಅಪ್ಪಿಕೋ.

ಕೂಗು 'ಅಪ್ಪಿಕೋ.... ಅಪ್ಪಿಕೋ.....'

ಇಂಥ ಒಗ್ಗಟ್ಟಿನ ಮುಗ್ಧ ಜನರನ್ನು ಸದೆಬಡಿಯಲು ಏನೆಲ್ಲ ಪ್ರಯತ್ನಗಳೂ ನಡೆದವು. ಆದರೆ ಸಮಿತಿಯವರು ಈಗ

ಹೋರಾಟ ಅಲ್ಲದೆ ನ್ಯಾಯಾಲಯಕ್ಕೂ ಹೋದರು. ತಡೆ ಆಜ್ಞೆ ಬಂತು. ತೀರ್ಪು ಹೊರ ಬೀಳುವವರೆಗೆ ಕಾಡಿನೊಳಗೆ ಆ ಉದ್ಯಮಿ ಮತ್ತು ಅವನ ಚೇಲಾಗಳು ಪ್ರವೇಶಿಸಕೂಡದು ಎನ್ನುವ ಆಜ್ಞೆ.

ಜನ ಘೋಷ ಮೊಳಗಿಸಿದರು. ಜಿಂದಾಬಾದ್, ಜಿಂದಾಬಾದ್, ಅಪ್ಪಿಕೋ ಅಪ್ಪಿಕೋ.

ಆ ಭವ್ಯ ಕಾಡು ಈಗ ನಿಟ್ಟುಸಿರು ಬಿಟ್ಟಿತು. ತನ್ನ ಹರ್ಷವನ್ನು ವ್ಯಕ್ತಪಡಿಸಿತು.

★

ಆ ಮಲೆನಾಡಿನ ಆ ಪ್ರದೇಶದ ಒಬ್ಬ ಹುಡುಗ. ವಯಸ್ಸು ಆರು. ತಮ್ಮ ಹಳ್ಳಿಯ ಶಾಲೆಗೆ ಹೋಗುತ್ತ ಇದ್ದಾನೆ. ಒಂದು ತಿಂಗಳ ಹಿಂದೆಯಷ್ಟೆ ಅವನ ಅಕ್ಕನಿಗೆ ಮದುವೆ ಆಗಿದೆ. ಹುಡುಗನ ಭಾವ ಬೆಂಗಳೂರಿನವನು, ಇಂಜಿನಿಯರ್. ನಗರದ ಒಂದು ಬಡಾವಣೆಯಲ್ಲಿ ಸ್ವಂತ ಮನೆ ಇದೆ.

ಅಕ್ಕ ಹೊಸತಾಗಿ ಸಂಸಾರ ಹೂಡುತ್ತ ಇದ್ದಾಳೆ. ತಮ್ಮನಿಗಿಂತ ಅಕ್ಕನಿಗೆ ಹದಿನಾಲ್ಕು ವರುಷಗಳ ಅಂತರ. ಇಷ್ಟು ವರ್ಷ ಕಳೆದ ಮೇಲೆ ಈ ಗಂಡು. ನಾಚಿಕೆಗೇಡು. ಅದು ಹೇಗಾದರೂ ಆಗಲಿ. ತಾಯಿಯಂತೆಯೇ ಅಕ್ಕನೂ ತಮ್ಮನನ್ನು ಎತ್ತಿ ಮುದ್ದಾಡಿ ಬೆಳೆಸಿದ್ದಾಳೆ. ಆದುದರಿಂದ ಇವನು ಅವಳಿಗೆ ತುಂಬಾ ಮುದ್ದು. ಹಾಗಿರುವಾಗ ಅಕ್ಕ ಹೊಸತಾಗಿ ಸಂಸಾರ ಹೂಡುವಾಗ ಈ ತಮ್ಮ ಇಲ್ಲದೇ ಇರಲು ಸಾಧ್ಯವೇ? ಚೆನ್ನವೆ? ಹಾಗಾಗಿ ಅಕ್ಕನೊಂದಿಗೆ ಅವನೂ ಬೆಂಗಳೂರಿಗೆ ಬಂದ.

ಮೆಜೆಸ್ಟಿಕ್‌ಗೆ ಇವರು ಬಂದಾಗ ಅಲ್ಲಿನ ಜನಜಂಗುಳಿಯನ್ನು ನೋಡಿ ಹುಡುಗ ಮೊದಲು ಬೆಚ್ಚಿದ, ಆಮೇಲೆ ಬೆರಗಾದ. ಇಷ್ಟು ಜನ ಹೀಗೆ ಹಿಂಡು ಹಿಂಡಾಗಿರುವುದನ್ನು ಅವನು ನೋಡಿಯೇ ಇರಲಿಲ್ಲ.

ಹೆಂಡತಿ, ಭಾವಮೈದುನ, ಅತ್ತೆ ಇವರನ್ನು ಒಂದು ಕಾರಿನಲ್ಲಿ ಕೂರಿಸಿ ಭಾವ ಹೊರಟ. ಹುಡುಗನಿಗೆ ತಂದೆ ಇಲ್ಲ, ಭಾವನಿಗೆ ಮಾವ ಇಲ್ಲ.

ಕಾರು ಎಷ್ಟು ದೂರ ಸಾಗಿದರೂ ಅವನ ಮನೆಯೇ ಸಿಗುತ್ತ ಇಲ್ಲ. ಹೌದು, ಭಾವನ ಮನೆ ಈಗ ಅದು ಅಕ್ಕನ ಮನೆಯೂ ಸಹ. ಮೆಜೆಸ್ಟಿಕ್‌ನಿಂದ ಇಪ್ಪತ್ತು ಕಿಲೋಮಿಟರ್ ದೂರ ಇದೆಯಂತೆ. ಎಂಥದೋ ಬಡಾವಣೆ. ಬೆಂಗಳೂರು ನಗರದಲ್ಲಿ ಒಂದು ಬಡಾವಣೆಯಿಂದ ಮತ್ತೊಂದು ಬಡಾವಣೆಗೆ ಹದಿನೈದು ಇಪ್ಪತ್ತು ಕಿಲೋಮೀಟರ್ ಸಹಜವಂತೆ. ತನ್ನ ತಾಯಿಗೆ ಭಾವ ಹೇಳುತ್ತ ಇರುವ ಮಾತುಗಳು ಕಿವಿಗೂ ಬೀಳುತ್ತ ಇವೆ.

ಅಂತೂ ಕೊನೆಗೂ ಮನೆ ಸಿಕ್ಕಿಯೇ ಬಿಟ್ಟಿತು. ದೊಡ್ಡ ಮನೆಯೇ. ಬೆಂಗಳೂರು ಗಿಜಿಗಿಜಿ ನಗರವಾದರೂ ಈ ಬಡಾವಣೆ ಶಾಂತ. ಇದು ಹೊಸ ಬಡಾವಣೆಯಂತೆ. ಆದ್ದರಿಂದ ಸಾಲು ಸಾಲು ಬೀದಿ ಬೀದಿ ಒಪ್ಪವಾಗಿ ಓರಣವಾಗಿ




ಮನೆಗಳು, ಎರಡು ಸಾಲು ಮನೆಗಳು, ಒಂದು ಬೀದಿ. ಅದರ ಹಿಂದೆ ಒಂದು ಸಾಲು. ಬೀದಿ ಉದ್ದಕ್ಕೂ ಹೀಗೆಯೇ.

ಮನೆಯಲ್ಲಿ ಎಲ್ಲ ಸೌಲಭ್ಯಗಳೂ ಇವೆ. ಬಣ್ಣದ ಟಿವಿ, ಫ್ರಿಜ್ ಸೊಗಸಾದ ಸೋಫಾಸೆಟ್ ವಾಷಿಂಗ್ ಮಿಷಿನ್ ಡೈನಿಂಗ್ ಟೇಬಲ್ ಹೀಗೆ. ಭಾವನ ತಮ್ಮ ತಾಯಿ ಬಿಟ್ಟರೆ ಬೇರೆ ಯಾರೂ ಮನೆಯಲ್ಲಿ ಇಲ್ಲದುದರಿಂದ ತುಂಬಿದ ಮನೆ ಎಂದು ಹೇಳುವ ಹಾಗೆಯೂ ಇಲ್ಲ. ಈಗ ಆ ಬೆಟ್ಟಗಾಡಿನಿಂದ ಅಕ್ಕ ಬಂದು ಸೇರಿಕೊಂಡಿದ್ದಾಳೆ. ಭಾವನ ತಮ್ಮನೂ ಯಾವುದೋ ಕೆಲಸಕ್ಕೆ ಹೋಗುತ್ತ ಇದ್ದಾನೆ.

ಕೃತಕ

ಕೆಲ
ಯುವತಿಯರ
ನಡೆ-ನುಡಿ
ಎಲ್ಲವೂ
ಕೃತಕ.
ಬಹುಶಃ
ಅವರ
ಮನ
'ತುಂಬಿ'
ಕೊಂಡಿರಬೇಕು
ಹೃತೀಕ.



– ಪ್ರಕಾಶ ಅಂಬರಕರ,
ಚಿಕ್ಕೇರೂರ

ತಾಯಿಗೆ ವಯಸ್ಸು ಐವತ್ತ ಆರು. ಒಳ್ಳೆಯವಳು. ಮಾತಿನಿಂದಲೇ ಮಾತಿನ ಮೃದುತ್ವಧಾಟಿಯಿಂದಲೇ ಆಕೆ ಒಳ್ಳೆಯವಳು ಎಂದು ಹೇಳಿಬಿಡಬಹುದು.

ರಾತ್ರಿ ಊಟ ಮುಗಿಯಿತು. ಇವೊತ್ತೆ ಈ ಮನೆಗೆ ಅಕ್ಕ ಪ್ರಥಮವಾಗಿ ಪ್ರವೇಶಿಸುತ್ತ ಇದ್ದರೂ ಅತ್ತೇ ಅತ್ತೇ ಎನ್ನುತ್ತ ಅವರಲ್ಲಿ ಮಹಾ ವಿಧೇಯಳಾಗಿ ನಡೆದುಕೊಳ್ಳತೊಡಗಿದಳು.

ಅತ್ತೆ ಮೆಣಸಿನ ಸಾರು ಮಾಡಿದರು. ಹಪ್ಪಳ ಕರಿದರು. ಬೀನ್ಸ್ ಪಲ್ಯ ಮಾಡಿದರು. ಬೀನ್ಸ್ ಹೆಚ್ಚಿದ್ದು ಅಕ್ಕನೇ.

ಊಟ ಮುಗಿದ ಮೇಲೆ ಟಿವಿ ಸೀರಿಯಲ್ 'ಹೊಸ ಸಂಸಾರ' ನೋಡಿದ ಮೇಲೆ ಎಲ್ಲರೂ ಮಲಗಿದರು.

ಹುಡುಗನಿಗೆ ಒಂದೇ ಕೊರತೆ. ಅವನು ಬೆಟ್ಟಗಾಡಿನ ಆ ಹಳ್ಳಿಯಲ್ಲಿ ಅಕ್ಕನೊಂದಿಗೆ ಮಲಗುತ್ತ ಇದ್ದ. ಕೆಲವು ಸಲ ತಾಯಿಯೊಂದಿಗೂ ಸಹ. ಆದರೆ ಅಕ್ಕನೊಂದಿಗೆ ಮಲಗುವುದೇ ಜಾಸ್ತಿ.

ರಾತ್ರಿ ಹತ್ತು ಗಂಟೆ ಆಗಿರುವಾಗ ಅತ್ತೆಯೊಂದಿಗೂ ತಾಯಿಯೊಂದಿಗೂ ಮಾತು ಹಾಗೆಯೇ ಕೆಲಸ ಎರಡೂ ಮುಗಿದ ಮೇಲೆ ಅಕ್ಕ ಮೆಲ್ಲಗೆ ಮೇಲೆದ್ದು ಆ ಕೊಠಡಿಗೆ ಹೋಗಿ ಬಾಗಿಲು ಹಾಕಿಕೊಂಡು ಬಿಟ್ಟಳು. ಮತ್ತೊಂದು ಕೊಠಡಿಯಲ್ಲಿ ಭಾವನ ತಮ್ಮ ಮಲಗಿದ್ದಾನೆ. ಅವನು ಆಗಲೇ ಮಲಗಿಬಿಟ್ಟ. ಊಟ ಮುಗಿದ ತಕ್ಷಣವೇ ಒಂಬತ್ತು ನಾಲ್ವತ್ತಕ್ಕೆ. ಹಾಲಿನಲ್ಲಿ ತಾಯಿ, ಭಾವನ ತಾಯಿ, ಹುಡುಗ - ಈ ಮೂವರು. ಭಾವನ ತಾಯಿಯೂ ತನ್ನ ತಾಯಿಯೂ ಮಲಗಿದ ಮೇಲೂ ದೀಪ ಆರಿಸಿದ ಮೇಲೂ ಎಷ್ಟೋ ಹೊತ್ತು ಏನೇನೋ ಮಾತಾಡಿಕೊಂಡೇ ಇದ್ದರು. ಏನು ಮಾತೋ? ಏನು ವಿಷಯವೋ? ಹುಡುಗನಿಗೆ ಬಹುಪಾಲು ಅವು ಅರ್ಥವಾಗುವಂತೆಯೇ ಇಲ್ಲ,

★

ಬೆಳಗಾಯಿತು.

ಹುಡುಗ ಆರೂವರೆಗೇ ಎದ್ದುಬಿಟ್ಟ. ಆ ಸಮಯಕ್ಕೆ ಅವನಿಗೆ ಎಚ್ಚರ ಆಗಿಬಿಡುತ್ತದೆ. ಪಟ್ಟಣದ ಹುಡುಗರ ಹಾಗೆ ಎಬ್ಬಿಸಿದರೇ ಏಳಬೇಕು, ಇಲ್ಲವೋ ಬೆಳಗಿನ ಒಂಬತ್ತಾದರೂ ಆಯಿತು ಹತ್ತಾದರೂ ಆಯಿತು - ಸುರುಟಿಕೊಂಡು ಸೋಮಾರಿಯಾಗಿ ಮಲಗುವ ಅಭ್ಯಾಸ ಅವನಿಗೆ ಇಲ್ಲ. ಅವನ ಹಳ್ಳಿಯಲ್ಲಿ ಅವನು ಶಾಲೆಗೆ ಹೋಗುತ್ತ ಇದ್ದರೂ ಬೆಳಗ್ಗೆ ಕೆಲವು ಮನೆಗೆಲಸಗಳನ್ನು ಹೂ ಕಿತ್ತು ಬರುವುದು ಅವನ ವಯಸ್ಸಿಗೆ ಮತ್ತೆ ಎಂಥ ಕೆಲಸ - ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಅವನು ಮಾಡುವಂಥದು, ಮಾಡಿಯೇ ಹೋಗುತ್ತ ಇದ್ದ. ಒಟ್ಟಿನ ಮೇಲೆ ಬೇಗ ಏಳಬೇಕು. ಸೂರ್ಯೋದಯ ಆಗುವಾಗ ಸೂರ್ಯ ಅಸ್ತಮಾನ ಆಗುವಾಗ ಮಲಗಬಾರದು. ಮಲಗಿದರೆ ಮನೆಗೆ ದರಿದ್ರ, ಹೀಗೆ ಮನೆಯಲ್ಲಿ ಪಾಠ.

ಈಗ ಎದ್ದಕೂಡಲೇ ಅವನ ಮನೆಯಿಂದ ಹೊರಗೆ ಬಂದು ನೋಡುತ್ತಾನೆ. ರಸ್ತೆ ಶುಭ್ರವಾಗಿದೆ. ಹೊಸ ಬಡಾವಣೆ ಆದುದರಿಂದ ಹೊಸ ಮನೆಗಳೇ. ಒಂದಕ್ಕಿಂತ ಒಂದು ಚೆನ್ನ. ಬೆಲ್ಲದ ಅಚ್ಚು, ಹಾಗೆ ನೋಡಿದರೆ ಭಾವನ ಮನೆಗಿಂತ ಬೇರೆ ಕೆಲವು ಮನೆಗಳು ಈ ಸಾಲಿನಲ್ಲಿ ಎದುರು ಸಾಲಿನಲ್ಲಿ ಇನ್ನೂ ಎತ್ತರ ಎತ್ತರ ಇವೆ.

ಹುಡುಗನಿಗೆ ತೃಪ್ತಿ ತಂದದ್ದು ಸರಿಸುಮಾರು ಮನೆಗಳ ಮುಂದೆ ಉದ್ದಕ್ಕೂ ಮರಗಳೂ ಇವೆ.



ಹಸಿರು ಇದೆ. ಕಣ್ಣಿಗೆ ತಂಪು. ಹಸಿರಿನೊಂದಿಗೇ ಬೆಳೆದವರಿಗೆ ಹಸಿರಿನೊಂದಿಗೇ ಒಡನಾಡಿದವರಿಗೆ ಹಸಿರಿನ ಸಾಮೀಪ್ಯ ಇಲ್ಲದೆ ಹೋದರೆ ಮನಸ್ಸು ಬಿಕೋ ಎಂದು ಪಾಳುಮನೆ.

ಈ ಮರಗಳು ತಮ್ಮ ಬೆಟ್ಟಗಾಡಿನ ಮರಗಳ ಹಾಗೆ ದೊಡ್ಡ ದೊಡ್ಡವು ಅಲ್ಲವಾದರೂ, ಆ ಬೀದಿಯ ಮನೆಗಳ ಎತ್ತರಕ್ಕೂ ಹಾಯ್ದಿವೆ. ಮೂರೋ ನಾಲ್ಕೋ ಕೊಂಬೆಗಳು ಇಷ್ಟೇ. ಆ ಮರದ ಕೊಂಬೆಗಳು ಹೀಗೆ ಹರಡಿಕೊಂಡು ಒಂದಕ್ಕೊಂದು ಹಸ್ತಲಾಘವ ಮಾಡುವಂತಿವೆ. ಸರಿಸುಮಾರು ಮರಗಳು ಹೊಸ ಹೂ ಬಿಟ್ಟಿವೆ. ಹಳದಿ ಹೂ. ಕೆಲವು ಮರಗಳ ಕೊಂಬೆಗಳ ಮೇಲೆ ಕಾಗೆಗಳೂ ಕುಳಿತು ಬೆಳಗೆದ್ದು ಏನು ರಾಗವೋ ಕಾಕಾಕಾಕಾ ಎನ್ನತೊಡಗಿವೆ.

ಬೀದಿಯಲ್ಲಿ ಆಗಲೇ ಕನಕಾಂಬರ ಅಂಬೂರು ಮಲ್ಲಿಗೆ ಮೊಗ್ಗೂ.... ಟೊಮೊಟೋ, ಬದನೇಕಾಯಿ ಈರುಳ್ಳಿ...

ನಗರಗಳ ಮನೆಗಳಲ್ಲಿ ಬೆಳಗಿನ ಸಮಯ ಗಡಿಬಿಡಿ. ನಗರಗಳ ಮನೆಗಳು ಬೆಳಗಿನ ಸಮಯ ಯಂತ್ರಗಳು ಆಗಿಬಿಡುತ್ತವೆ. ಎಲ್ಲರೂ ಕೆಲಸಗಳಿಗೆ ಹೋಗುವವರಷ್ಟೆ. ಏಳು ಏಳೂವರೆಗೇ ಮನೆ ಖಾಲಿ. ಈ ಮನೆಯಲ್ಲಿಯೂ ಹಾಗೆಯೇ. ಭಾವ ಭಾವನ ತಮ್ಮ ಭಾವನ ತಾಯಿ ಎಲ್ಲರ ಸ್ನಾನ ಮುಗಿದ ಮೇಲೆ ಹುಡುಗನ ತಾಯಿಯೂ ಸ್ನಾನ ಮುಗಿಸಿದಳು. ಅಕ್ಕನಿಗೂ ಆಯಿತು. ಅಕ್ಕ ತಲೆ ಒದರಿಕೊಳ್ಳುತ್ತ ಬೀರೂ ಕನ್ನಡಿಯ ಮುಂದೆ ನಿಂತಿದ್ದಾಳೆ.

ಇಷ್ಟಕ್ಕೇ ಗಂಟೆ ಎಂಟು. ಆಗ ಅಕ್ಕ 'ಮರೀ, ಬಾರೋ ಸ್ನಾನ ಮಾಡಿಸಿಕೊಡ್ತೀನಿ. ಅವರೇಕಾಳು ಉಪ್ಪಿಟ್ಟು ಕಣೋ....' ಎಂದು ಕೂಗನ್ನು ಹಾಕಿದಳು. ಅಡಿಗೆ ಮನೆಯಲ್ಲಿ ಅತ್ತೆ, ಅಮ್ಮ ಮಾತಾಡುತ್ತ ಇದ್ದಾರೆ. ಏನು ಮಾತೋ? ಇವರ ಮಾತು ಮುಗಿಯುವುದೇ ಇಲ್ಲವೋ? ದ್ರೌಪದಿಯ ಸೀರೆಯೋ? ಹನುಮಂತನ ಬಾಲವೋ?

ಅಕ್ಕನ ಕೂಗಿಗೆ ಹುಡುಗನ ಉತ್ತರ ಇಲ್ಲ. ತಮ್ಮ ಏನು ಮಾಡುತ್ತ ಇದ್ದಾನೆ ಎಂದು ಅಕ್ಕ ಬಾಗಿಲಿಗೆ ಬಂದು ನೋಡಿದರೆ -

ಅವಳಿಗೆ ಭಾರೀ ನಗು ಬಂದು ಬಿಟ್ಟಿತು.

ಹೌದು. ಈ ಮನೆಯ ಎದುರು ಸಾಲಿನಲ್ಲಿ ಆ ಮನೆ. ಆ ಮನೆಯ ಮುಂದೆಯೂ ಒಂದು ಮರ. ಮರ ಅಂಥ ದೊಡ್ಡದೇನೂ ಅಲ್ಲ. ದೊಡ್ಡವರು ಅದರ ಬುಡ ತಬ್ಬಿ ಹಿಡಿಯುವಷ್ಟು ಗಾತ್ರದ್ದು. ಆದರೆ ಅದೂ ಮೂರು ಕೊಂಬೆಗಳನ್ನು ಬಿಡಿಸಿ ಹರಡಿಕೊಂಡಿದೆ. ಒಂದು ಕೊಂಬೆಯೇನೋ ರಸ್ತೆಯ ಕಡೆಗೆ ಚಾಚಿದೆ. ಉಳಿದ ಎರಡು ಕೊಂಬೆಗಳು ಆ ಮನೆಯ ಎತ್ತರಕ್ಕೂ ಬೆಳೆದಿವೆ. ವಿದ್ಯುತ್ ತಂತಿಗಳ ಮೇಲೂ ಹಾಯ್ದಿದೆ.

ವಿದ್ಯುತ್ ನೌಕರರು ಈಗ ಮೂವರು ಬಂದಿದ್ದಾರೆ. ಆ ಮನೆಯ ಮುಂದೆ ಆ ಮರದ ಕೆಳಗೆ ನಿಂತಿದ್ದಾರೆ. ಏಣಿಯನ್ನೂ ಅವರು ತಂದಿದ್ದಾರೆ. ಇನ್ನೂ ಏನೇನೋ ಸಾಮಗ್ರಿಗಳನ್ನೂ ಸಹ. ಅವರಲ್ಲಿ ಒಬ್ಬ ಮತ್ತೊಬ್ಬನಿಗೆ ಹೇಳಿದ.

'ಹುಷಾರು, ಕೊಂಬೆ ಸಣ್ಣ ಐತೆ. ಒಂದು ಕೈಲಿ ಸಜ್ಜ ಹಿಡ್ಕೋ. ಆ ಕೊಂಬೆ ಮ್ಯಾಕೇ ಹೋಗಿ ವೈರ್‌ಮ್ಯಾಲೆ ಬಂದೈತಲ್ಲ, ಆ ಕೊಂಬೇನಲ್ಲಿ ವೈರ್ ಆ ಕಡೆ ಇರಾದು, ಕತ್ತರಿಸಿ ಹಾಕು. ಆ ಕೊಂಬೆಗಳು ಬಡಿದು ಬಡಿದೇ ಫ್ಯೂಜ್ ಬಿದ್ದುಓಗೈತೆ. ಹುಷಾರು ಕಣ್ಲಾ....'

ಹೌದು. ಆ ವಿದ್ಯುತ್ತು ತಂತಿಗಳ ಮೇಲೆ ಆ ಮರದ ಎರಡು ಕೊಂಬೆಗಳು ಹಾಯ್ದು ಅವುಗಳು ತೂಗಿ ತೂಗಿ, ತೊನೆದು ತೊನೆದು, ಎಳೆದು ಎಳೆದು ವಿದ್ಯುತ್ತು ಕಂಭದಲ್ಲಿ ತಂತಿಗಳ ಜೋಡಣೆ ಏರುಪೇರಾಗಿದೆ. ತಂತಿಗಳು ಬಿದ್ದುಕೊಂಡಿವೆ. ಬಿಚ್ಚಿಕೊಂಡಿವೆ. ಹಾಗಾಗಿ ಆ ಕಂಭದಿಂದ ವಿದ್ಯುತ್ ತಂತಿಗಳನ್ನು ಎಳೆದು ಸಂಪರ್ಕ ಕಲ್ಪಿಸಿರುವ ಎದುರು ಸಾಲಿನ ನಾಲ್ಕು ಐದು ಮನೆಗಳಿಗೂ ಈಗ ವಿದ್ಯುತ್ತು ಇಲ್ಲವಾಗಿದೆ. ಅವರು ಕಂಪ್ಲೇಂಟ್ ಕೊಟ್ಟು ಅದನ್ನು ಸರಿಪಡಿಸುವುದಕ್ಕಾಗಿಯೇ ಈಗ ಮೂವರು ವಿದ್ಯುತ್ ನೌಕರರು ಅಲ್ಲಿ ಬಂದಿದ್ದಾರೆ. ವಿದ್ಯುತ್ ಇಲ್ಲವಾಗಿರುವ ಆ ಐದು ಮನೆಗಳಲ್ಲಿ ಒಂದು ಮನೆ, ಆ ವಿಭಾಗದ ಎಂ.ಎಲ್.ಎ ಭಾವ ಮೈದುನನದು. ಹಾಗಾಗಿಯೇ ಕರೆ ಕೊಟ್ಟೊಡನೆಯೇ ರಿಪೇರಿ. ಬೇರೆಯವರಾಗಿದ್ದರೆ ಹೀಗೆ ಬೆಳಗ್ಗೆ ಬೆಳಗ್ಗೆ ದೂರು ಕೊಟ್ಟಾಕ್ಷಣ ಎಲ್ಲಿ ಬರುತ್ತಿದ್ದರು?

ಈ ಹುಡುಗನಿಗೆ ಇದೆಲ್ಲವೂ ಹೇಗೆ ತಿಳಿಯಬೇಕು? 'ಆ ಕೊಂಬೇನೆಲ್ಲ ಕತ್ತರಿಸಿ ಹಾಕು....' ಎಂದು ಅವರಲ್ಲೊಬ್ಬ ಹೇಳಿದ ಮಾತಷ್ಟೆ ಇವನ ಕಿವಿಗೆ ಬಿದ್ದದ್ದು. ಅಭ್ಯಾಸ ಬಲ. ತನ್ನ ಕಾಡಿನಲ್ಲಿ ಬೆಟ್ಟಗಾಡಿನಲ್ಲಿ ಮಾಡುತ್ತಿದ್ದ ಕೆಲಸ. ಅವನು, ಅವನ ಅಕ್ಕ, ಅವನ ತಾಯಿ - ಹೀಗೆ ಎಲ್ಲರೂ. ಆ ಚಳುವಳಿಯಲ್ಲಿ ಭಾಗವಹಿಸಿದ್ದವರೇ. ಮರಗಳನ್ನು ಅಪ್ಪಿ ಹೋರಾಟ ಮಾಡಿದವರು. ಪೋಲೀಸನವರೊಂದಿಗೆ ಹೆಣಗಿದವರು. ಲಾಠಿ ಏಟು ತಿಂದು ಕೆಲವರು ಪೋಲಿಸ್ ಸ್ಟೇಷನ್‌ಗಳಿಗೂ ಹೋಗಿ ಬಂದಿದ್ದಾರೆ.

ಇನ್ನೂ ಅದರ ತೀರ್ಪು ಹೊರಬಿದ್ದಿಲ್ಲ.

ಈಗ ಒಡನೆ ಈ ಹುಡುಗ ಓಡಿಹೋಗಿ ಆ ಮರವನ್ನು ತಬ್ಬಿ ನಿಂತ. ಅದರ ಬುಡಕ್ಕೆ ಏಣಿ ಹಾಕಿ ಹತ್ತಬೇಕು ಎಂದು ಆ ವಿದ್ಯುತ್ ನೌಕರ ಮುಂದಾಗುವಷ್ಟರಲ್ಲಿ ಹುಡುಗನ ಇಂಥ ಚಟುವಟಿಕೆ; ಚಡಪಡಿಕೆ.

ಹುಡುಗ ಹೀಗೆ ಏಕೆ ಮಾಡುತ್ತ ಇದ್ದಾನೆ ಎನ್ನುವುದು ಆ ನೌಕರರಿಗೆ ಗೊತ್ತಾಗಲಿಲ್ಲ. ಅವರಲ್ಲೊಬ್ಬ 'ಕೂಸೂ, ದಾರಿ ಬುಡು. ಮರ ಯಾಕೆ ತಬ್ಬಿಕೊಂಡು ನಿಂತಿದ್ದೀಯ?' ಎಂದ.

'ಅಪ್ಪಿಕೋ... ಅಪ್ಪಿಕೋ....' ಹುಡುಗನ ಕೂಗು.

ಈ ಸಂದರ್ಭದಲ್ಲಿಯೇ ಅಕ್ಕ ಮನೆಯ ಬಾಗಿಲಿಗೆ ಬಂದಳು. ಅವಳಿಗೆ ನಗು ಬಂದು ಬಿಟ್ಟಿತು. ಹುಡುಗನ ತಾಯಿಯೂ ಮನೆಯ ಮುಂದೆ ಏನು ನಡೆಯುತ್ತೆ ಎಂದು ಇಣುಕಿ ನೋಡುತ್ತ ಇದ್ದಾಳೆ.

ಅಕ್ಕ ಈಗ ರಸ್ತೆಗೆ ಓಡಿಬಂದು ಹುಡುಗನ ರಟ್ಟೆ ಹಿಡಿದು ಎಳೆದು 'ಬಾರೋ ಮರೀ, ಇವರು ಮರ ಕಡೀತಾ ಇಲ್ಲಾಮ್ಮಾ. ತಂತಿ ಮೇಲೆ ಹಾಯ್ದಿರೋ ಆ ಸಣ್ಣ ಕೊಂಬೆಗಳನ್ನು ಕತ್ತರಿಸಿ ಸರಿಮಾಡ್ತಾರೆ' ಎಂದು ಅವನನ್ನು ಆ ಮರದಿಂದ ಬಿಡಿಸಿಕೊಂಡು ಒಳಗೆ ಕರೆದುಕೊಂಡು ಹೋದಳು.

ಹುಡುಗ ಹೀಗೆ ಏಕೆ ಮಾಡಿದ ಎನ್ನುವ ವಿಷಯ ಆಮೇಲಷ್ಟೆ ಎಲ್ಲರಿಗೂ ತಿಳಿದದ್ದು. ಆಗ ಎಲ್ಲರೂ ಬಿದ್ದು ಬಿದ್ದು ನಕ್ಕಿದ್ದೇ ನಕ್ಕಿದ್ದು. ■


ಬೆಳಕಿನಲ್ಲಿ



ದೀಪಾವಳಿಯ
ಶುಭಾಶಯ ಕೋರಲು
ಪದೇ ಪದೇ
ನನ್ನ ಮನೆಯ
ಹತ್ತಿರ ಸುಳಿದಾಡಬೇಡ
ನನ್ನ ನಲ್ಲ,
ದೀಪಗಳ ಬೆಳಕಿನಲ್ಲಿ
ನಮ್ಮಿಬ್ಬರ ಪ್ರೇಮ
ಗೊತ್ತಾದೀತು ಊರಿಗೆಲ್ಲಾ

- ಚನ್ನಪ್ಪ ಶೇಖರಪ್ಪ ಹೂಗಾರ
ಗದಗ.

ಲಲಿತ ಪ್ರಬಂಧ



ನಮ್ಮಮ್ಮ ಕಣ್ಮರೆಯಾಗಿ ಎಷ್ಟೋ ವರ್ಷಗಳು ಆಗಿಹೋಗಿದ್ದರೂ, ಅಮ್ಮನ ಕೈ ಅಡುಗೆ ರುಚಿ ನೆನಪು ಆಗಾಗ ಬರುತ್ತಲೇ ಇರುತ್ತದೆ.

ಅಮ್ಮನ ಕೈ ಅಡುಗೆ

• ಪ್ರೊ. ಎಚ್ಚೆಸ್ಕೆ
41, 6ನೇ ಮುಖ್ಯ ರಸ್ತೆ,
ಸರಸ್ವತೀಪುರ, ಮೈಸೂರು-570 009.

'ಇಂಥ ಊಟ ಮಾಡಿ ಎಷ್ಟೋ ದಿನ ಆಗಿತ್ತಯ್ಯ! ಎಂದ, ಅಪರೂಪಕ್ಕೆ ಬಂದಿದ್ದ ನನ್ನ ಸ್ನೇಹಿತ, ಮೈಸೂರುಪಾಕಿನ ಮೂರನೆಯ ತುಣುಕನ್ನು ಹಾಕಿಸಿಕೊಳ್ಳುತ್ತ.

ಬಡಿಸುತ್ತಿದ್ದ ನನ್ನ ಹೆಂಡತಿ ಥಟ್ಟನೆ ಮಾತು ಕೂಡಿಸಿದಳು. 'ಇದನ್ನು ನಿಮ್ಮ ಸ್ನೇಹಿತರಿಗೆ ಇನ್ನೊಂದು ಸಾರಿ ಹೇಳಿ.. ಅಮ್ಮನ ಕೈ ಅಡುಗೆ ಸಮಾನ ಇಲ್ಲ ಅಂತ ಅವರು ಹೇಳ್ತಾನೇ ಇರ್ತಾರೆ,' ಅವಳ ಮಾತಿನಷ್ಟೇ ಚೂಪು, ಅವಳ ಕಣ್ಣಿನ ಹೊಳಪು.

'ಏನಯ್ಯ? ಇದಕ್ಕೇನು ಹೇಳ್ತೀಯ?' ಎಂದ, ನನ್ನ ಸ್ನೇಹಿತ, ನಗುತ್ತ, ಮೈಸೂರು ಪಾಕ್‌ನ ತುಣುಕನ್ನು ಮುರಿಯುತ್ತ, ಅದರಿಂದ ಜಿನುಗಿ ಕೈ ಬೆರಳಿಗೆ ಅಂಟಿಕೊಂಡಿದ್ದ ರಸವನ್ನು ಚೀಪುತ್ತ.

'ಇಷ್ಟಕ್ಕೂ ನನ್ನ ಸ್ನೇಹಿತ ಹೇಳಿದ್ದೇನು? ಇಂಥ ಊಟ ಮಾಡಿ ಎಷ್ಟೋ ದಿನ ಆಗಿತ್ತು ಎಂದ. ಒಳ್ಳೆಯ ಊಟ ಅಂತ ಅವನೇನೂ ಹೇಳಲಿಲ್ಲವಲ್ಲ?' ಎಂದೆ, ಅವಳನ್ನು ಕೀಟಲೆ ಮಾಡುವ ಧ್ವನಿಯಿಂದ. ಅಮ್ಮನ ಕೈ ಅಡುಗೆ ಅಮ್ಮಂದೇ, ನಿಂದು ನಿಂದೇ. ನಿನ್ನ ಅಡುಗೆ ಅಮ್ಮಂದಾಗಲಿ, ಅಮ್ಮಂದು ನಿಂದಾಗಲಿ ಆಗೋದು ಹೇಗೆ ಸಾಧ್ಯ? ಒಬ್ಬರು ಮಾಡಿದ ಅಡಿಗೆ ತರಹ ಇನ್ನೊಬ್ಬರದು ಇರೋದಿಲ್ಲ.

'ಅದೂ ನಿಜಾನೇ ಅನ್ನು. ಒಬ್ಬೊಬ್ಬರದು ಒಂದೊಂದು ಥರ. ಒಬ್ಬರೇ ಒಂದು ದಿನ ಮಾಡಿದ ಹಾಗೆ ಇನ್ನೊಂದು ದಿನ ಇರೋದಿಲ್ಲ. ಅಡಿಗೇನೂ ಒಂದು ಕಲೆ. ನಮ್ಮ ಸಂಗೀತ ಕಛೇರಿ ಇದ್ದ ಹಾಗೆ,' ಎಂದ ನನ್ನ ಸ್ನೇಹಿತ, ನಮ್ಮಿಬ್ಬರ ನಡುವೆ ರಾಜಿ ಮಾಡಿಸುವ ಧ್ವನಿಯಲ್ಲಿ 'ನೀ ಏನೇ ಹೇಳು, ಊಟ ತನ್ನಿಚ್ಛೆ, ನೋಟ ಪರರಿಚ್ಛೆ ಎಂತ ಗಾದೆ ಇಲ್ಲವೆ? ಅಂತೂ ನಂಗೆ ತುಂಬಾ ಇಷ್ಟ ಆಯ್ತಯ್ಯ ಈ ಊಟ, ಉಪಚಾರ ಈ ಮೈಸೂರು ಪಾಕೋ.......'

' ಹಾಂ! ತಾಳು! ತಾಳು! ಮೈಸೂರು ಪಾಕು ನನ್ನ ಹೆಂಡತಿ ಮಾಡಿದ್ದಲ್ಲ, ಈ ಬೀದಿ ಕೊನೇ ಹೋಟಲಿನಿಂದ ತರಿಸಿದ್ದು. ಅಲ್ಲಿಯ ಮೈಸೂರು ಪಾಕ್‌ನ ಹಾಗೆ ಈ ಪ್ರಪಂಚದಲ್ಲೇ ಇನ್ನೆಲ್ಲೂ ಮಾಡೋಲ್ಲ- ನಮ್ಮಮ್ಮ ಮಾಡ್ತಾ ಇದ್ದದ್ದನ್ನು ಬಿಟ್ಟು.'

ಇದಕ್ಕೆ ಏನು ಹೇಳಬೇಕೆಂದು ನನ್ನ ಸ್ನೇಹಿತ ಯೋಚಿಸುತ್ತಿದ್ದಾಗ ನಾನೇ ಮಾತು ಮುಂದುವರಿಸಿದೆ 'ನೀ ಅನ್ನೋ ಹಾಗೆ, ಊಟ ತನ್ನಿಚ್ಛೆ, ನೋಟ ಪರರಿಚ್ಛೆ, ಅಡಿಗೆ ದೈವೇಚ್ಛೆ! ಆ ದೇವರಿಗೇ ಪ್ರೀತಿ! ಅಲ್ಲವೇ, ಶುಭಾ?'

ನನ್ನ ಹೆಂಡತಿ ಹುಸಿಗೋಪದಿಂದ ನೆಟ್ಟಗೆ ಅಡುಗೆ ಮನೆಗೆ ನಡೆದೇ ಬಿಟ್ಟಳು. ನಮ್ಮದು ಯಾವಾಗಲೂ ಹೀಗೇ-Love-hate relationship ಅನ್ನುವ ಹಾಗೆ. ಪ್ರೀತಿ, ದ್ವೇಷ ಒಂದೇ ನಾಣ್ಯದ ಎರಡು ಬದಿಗಳ ಹಾಗಂತೆ.

ಆದರೆ ಈ ದ್ವೇಷ ದ್ವೇಷವಲ್ಲ, ಬರೀ ಕೋಪ, ಹುಸಿಗೋಪ.

ಅಮ್ಮನ ಕೈ ಅಡುಗೆಯ ಮಾತು ಹೇಳಿ ಪದೇ ಪದೇ ನನ್ನಾಕೆಯನ್ನು ರೇಗಿಸುವುದರಲ್ಲೇ ನನಗೆ ಖುಷಿ. ಅವಳಿಗೂ ಗೊತ್ತು, ಇದೆಲ್ಲಾ ಬರೀ ನಾಟಕವೆಂದು. ಸಂಸಾರ ಎನ್ನುವುದು ಸರಳ ರೇಖೆಯ ಹಾಗಿರಬಾರದು. ಏರಿಳಿತ ಇರಬೇಕು. ಅಲೆಯಲೆ ಇದ್ದಷ್ಟೂ ಅಪ್ಯಾಯಮಾನ. ನೀರಿನ ಮೇಲೆ ನೇರವಾಗಿ ಸಾಗುವ ದೋಣಿಯ ಮೈ ನೇರವಲ್ಲ, ವಕ್ರ! ಆ ವಕ್ರತೆಯಲ್ಲೇ ಸೌಂದರ್ಯವಾದ, ಹುಸಿ, ಜಗಳ ಇಲ್ಲದ ಸಂಸಾರ ಬಹಳ ಸಪ್ಪೆ. ಒಂದು ಸಣ್ಣ ಪೆಟ್ಟುಬಿದ್ದರೆ ಸಾಕು, ಇಸ್ಪೀಟಿನ ಎಲೆಗಳಿಂದ ಕಟ್ಟಿದ ಮನೆಯ ಹಾಗೆ ಅದು ಕುಸಿದೇ ಬೀಳಬಹುದು.

ಮಾತುಮಾತಿಗೂ ನಾನು ಅಮ್ಮನ ಕೈ ಅಡುಗೆಯನ್ನು ನೆನಸಿಕೊಳ್ಳುವುದನ್ನು ಕೇಳಿ ನನ್ನ ಹೆಂಡತಿಗೆ ಕೋಪ ಬರುವುದು ಸಹಜವೇ ಅನ್ನಿ. ನನ್ನ ಮೆಚ್ಚುಗೆ ಪಡೆಯುವ ಸಲುವಾಗಿ ಅವಳು ಶಕ್ತಿ ಮೀರಿ ಪ್ರಯತ್ನಿಸುತ್ತಾಳೆ. ರುಚಿ ರುಚಿಯಾದ ಹೊಸ ಹೊಸ ತಿನಿಸು ತಯಾರಿಸುತ್ತಾಳೆ. ರೇಡಿಯೋ ದೂರದರ್ಶನಗಳ 'ಹೊಸ ರುಚಿ' ಕಾರ್ಯಕ್ರಮಗಳನ್ನು ತಪ್ಪದೆ ಕೇಳಿ, ನೋಡಿ ಬರೆದುಕೊಳ್ಳುತ್ತಾಳೆ. ಪತ್ರಿಕೆಗಳಲ್ಲಿ ಬರುವ ಲೇಖನಗಳನ್ನೆಲ್ಲ ಕತ್ತರಿಸಿಟ್ಟುಕೊಳ್ಳುತ್ತಾಳೆ. ಎಲ್ಲವನ್ನು ಮಾಡಿ ನನ್ನ ಮೇಲೆ ಪ್ರಯೋಗಿಸುತ್ತಾಳೆ. ಒಂದು ರೀತಿಯಲ್ಲಿ ನಾನು ಅವಳ ಪ್ರಯೋಗಗಳಿಗೆಲ್ಲ ಮೊದಲ 'ಬಲಿ'- ಪ್ರಯೋಗ ಶಾಲೆಯ 'ಇಲಿ'! ಹೊಸ ರುಚಿಯನ್ನು ಸ್ವಾದಿಸುತ್ತ ನಾನು ವ್ಯಕ್ತಪಡಿಸುವ ಪ್ರತಿಕ್ರಿಯೆಯನ್ನು - ಎಂದರೆ 'ಪತಿಕ್ರಿಯೆ'ಯನ್ನು ಅವಳು ಅಪಾರ ಕುತೂಹಲದಿಂದ ವೀಕ್ಷಿಸುತ್ತಾಳೆ. ಒಂದೊಂದು ಸಾರಿ ನಾನು ಬೇಕೆಂದೇ ಗಂಟಲ ಕೆರೆತದಿಂದೋ ಹೊಟ್ಟೆ ನುಲಿಯುವುದೆಂದೋ ಹೇಳಿ ಒದ್ದಾಡುವುದುಂಟು. ಆಗ ಅವಳು ಅನುಭವಿಸುವ ಸಂಕಟವನ್ನು ಹೇಳತೀರದು. 'ನಾ ಏನೋ ಮಾಡಿ ಬಿಟ್ಟೆ. ತಪ್ಪಾಯ್ತು' ಎಂದು ಪೇಚಾಡುತ್ತಾಳೆ. ಡಾಕ್ಟರನ್ನೆ ಕರೀಲೇ ಎನ್ನುತ್ತಾ ಫೋನ್ ಬಳಿಗೂ ಓಡುತ್ತಾಳೆ. ಆದರೂ ಎಂದೂ ಫೋನ್ ಮಾಡಿ ಡಾಕ್ಟರನ್ನು ಕರೆದದ್ದಿಲ್ಲ. ಸ್ವಲ್ಪ ಕಾದು ನೋಡೋಣ ಎಂದಿರಬಹುದು. ಅಥವಾ ನನ್ನದು ಬರೀ ನಟನೆ ಎಂದು ಅವಳಿಗೂ ಗೊತ್ತಾಗಿ, ಬೇಕೆಂದೇ ತಾನೂ ನಟಿಸುತ್ತಿದ್ದಾಳೋ ಎಂದು ಅನುಮಾನ ಬರದೆ ಇರುವುದಿಲ್ಲ. ನಟನೆ ಸಾಕೆಂದು ನಾನಾಗಿಯೇ ಸರಿ ಹೋಗಿ ಬಿಡುತ್ತೇನೆ. ಅವಳ ಮೋಡ ಕವಿದ ಮುಖದ ಮೇಲೆ ಮಂದಹಾಸ ಮೂಡುತ್ತದೆ. ಆ ನೋಟಕ್ಕಾಗಿ ನಾನು ಎಷ್ಟು ನೋವಾದರೂ ಅನುಭವಿಸಿಯೇನು ಎಂದೂ ನಾನು ಅಂದುಕೊಳ್ಳುವುದುಂಟು.

ಅಂತೂ ಒಂದು ದಿನವಾದರೂ ನಾನು ಅವಳ ಅಡಿಗೆಗೆ ಹೆಚ್ಚಿನ ಅಂಕ ಕೊಟ್ಟಿದ್ದೇ ಇಲ್ಲ. ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ 'ಪರವಾಯಿಲ್ಲ? ಎಂದು ಹೇಳಿ ಬಚಾವಾಗುತ್ತೇನೆ. 'ನಮ್ಮಮ್ಮ ಮಾಡ್ತಾ ಇದ್ದ ಅಡಿಗೆ ಜ್ಞಾಪಕಕ್ಕೆ ಬರುತ್ತೆ' ಎಂದು ಹೇಳುತ್ತೇನೆ. ತನ್ನ ಅಡಿಗೆ ಆ



ಅಡಿಗೆಯ ಹಾಗೆಯೇ ಇದೆ ಎಂದು ಇದರ ಅರ್ಥವೇ? ಎಂದು ಅವಳು ಸೊಂಟಕ್ಕೆ ಕೈಯಿಟ್ಟು ಯೋಚಿಸುತ್ತ ನಿಲ್ಲುತ್ತಾಳೆ. ಒಮ್ಮೊಮ್ಮೆ ಅವಳು ತನ್ನ ಮೇಲೆ ತಿರುಗಿ ಬೀಳುವುದೂ ಉಂಟು. 'ನಾನು ಇವತ್ತು ಮಾಡಿದ್ದು ಹೊಸಾ ಹೊಸ ರುಚಿ, ರೀ, ಪೇಪರಿನಲ್ಲಿ ನೋಡಿ ಮಾಡಿದ್ದು. ನಿಮ್ಮಮ್ಮನ ಕಾಲದಲ್ಲಿ ಈ ಅಡಿಗೆ ಇರಲಿಲ್ಲ, ಇದಕ್ಕೆ ಹಾಕುವ ಸಾಮಗ್ರೀನೂ ಇರಲಿಲ್ಲ. ಸುಳ್ಳು ಅಂದರೆ ಹೀಗಿರಬೇಕು ಎನ್ನುವುದುಂಟು. 'ಅದಕ್ಕೆ ನನ್ನ ಉತ್ತರವೂ ಸಿದ್ಧವಾಗಿರುತ್ತೆನ್ನಿ. 'ಈ ಅಡಿಗೆ, ಈ ಸಾಮಗ್ರಿ ಹಾಕಿ ಮಾಡಿದ್ದು, ಆಗ ಇಲ್ಲದೆ ಇದ್ದಿರಬಹುದು. ಆದರೂ ಆ ರುಚಿ ಇದೆಯಲ್ಲಾ...' ಎಂದು ಮುಂದೇನು ಹೇಳಬೇಕೆಂಬುದು ಗೊತ್ತಿಲ್ಲದೆ ತಡವರಿಸುತ್ತೇನೆ. ನನ್ನ ಫಜೀತಿ ಅವಳಿಗೆ ಅರ್ಥವಾಗಿ, ಸರಿ, ನಿಮ್ಮೊಂದಿಗೆ ಕಣಿ ಹೂಡುತ್ತ ನಿಂತುಕೊಳ್ಳೇಕೆ ನಂಗೆ ಪುರಸೊತ್ತಿಲ್ಲ' ಎನ್ನುತ್ತಾ ನೇಪಥ್ಯಕ್ಕೆ ತೆರಳುತ್ತಾಳೆ. ಅಂತೂ ನಿತ್ಯ ನಾಟಕದ ಆ ಅಂಕ ಅಲ್ಲಿಗೆ ಸಂಪೂರ್ಣ.

ನಮ್ಮಮ್ಮ ಕಣ್ಮರೆಯಾಗಿ ಎಷ್ಟೋ ವರ್ಷವೇ ಆಗಿದ್ದರೂ ಅವಳ ಕೈ ಅಡುಗೆಯನ್ನು ನಾನು ಪದೇ ಪದೇ ಏಕೆ ಜ್ಞಾಪಿಸಿಕೊಳ್ಳುತ್ತಿರುತ್ತೇನೆ ಎಂದು ನಾನು ಎಷ್ಟೋ ಸಾರಿ ಯೋಚಿಸಿದ್ದೇನೆ. ನಾವು ಹುಡುಗರಾಗಿದ್ದಾಗ ಅಮ್ಮ ಅಡುಗೆ ಮಾಡಿ ಹಾಕಿದರೆ ಉಂಟು, ಇಲ್ಲದಿದ್ದರೆ ಇಲ್ಲ. ಇದು ಆಗಿನ ನಮ್ಮ ಸ್ಥಿತಿ. ಈಗಿನ ಹಾಗೆ ನಮ್ಮ ಹಿರಿಯರು ಹುಡುಗರಾದ ನಮ್ಮ ಕೈಗೆ ದುಡ್ಡು ಕೊಟ್ಟು ಕೊಡಿಸುತ್ತಿರಲಿಲ್ಲ. ಮನೆಯಲ್ಲೇ ಎಲ್ಲಾ ಆಗಬೇಕು. ಆಗ ನಮ್ಮ ಹಸಿವೋ- ಅಗಾಧ! 'ದೇವರು ನಿಮ್ಮ ಮೈಗೆಲ್ಲಾ ಹೊಟ್ಟೆ ಒಂದನ್ನೇ ಇಟ್ಟಿದಾನೆ. ಹಸಿವು ಅಂತ ಅದೇನು ಧಾವಂತ ಪಡ್ತೀರೋ, ನಾ ಕಾಣೆ!' ಎಂದು ನಮ್ಮಮ್ಮ ಹೇಳುತ್ತಲೇ ಇದ್ದಳು. ಆದರೂ ಒಳಗೊಳಗೇ ಅವಳಿಗೆ ನಮ್ಮಲ್ಲಿ ಅಪಾರವಾದ ಮಮತೆ. ಬೆಳೆಯುವ ವಯಸ್ಸು... ಹೊಟ್ಟೆ ಕಟ್ಟಬಾರದು. ಅದು ಕುಗ್ಗಿಹೋದರೆ ಮುಂದೆ ಸದಾ ತೊಂದರೆ ಅನುಭವಿಸ ಬೇಕಾಗುತ್ತೆ ಎಂದೂ ಅವಳು ಹೇಳುತ್ತಿದ್ದಳು. ನಮ್ಮಲ್ಲಿ ಯಾರಾದರೂ ಮಾಮೂಲಿಗಿಂತ ಕಡಿಮೆ ತಿಂದರೆ ಅವಳಿಗೆ ಬಹಳ ಪೇಚಾಟ. ಅದಕ್ಕೆ ಕಾರಣವನ್ನು ಅವನು ಹೇಳಬೇಕು, ಅಮ್ಮನನ್ನು ಒಪ್ಪಿಸಬೇಕು ಯಾರದೋ ಮನೆಯಲ್ಲಿ ಉಪ್ಪಿಟ್ಟುಕೊಟ್ಟರೂ ಕೋಡುಬಳೆ ಕೊಟ್ಟರೂ ಎಲ್ಲವನ್ನು ವಿವರಿಸಬೇಕು. ಹಾಗೆ ಎಲ್ಲೆಲ್ಲೋ ತಿನ್ನಬಾರದು ಕಣ್ರೋ, ಕಾಲ ಕೆಟ್ಟಿದ್ದು ಎಂದು ಅಮ್ಮ ಎಚ್ಚರಿಸುತ್ತಿದ್ದಳು. ಅಂತೂ ಅಮ್ಮ ಮಾಡುತ್ತಿದ್ದ ಅಡುಗೆಯಲ್ಲಿ ಆ ಪ್ರೀತಿಯೂ ಕಾಳಜಿಯೂ ಸೇರಿಕೊಂಡು ಅದರ ರುಚಿ ಹೆಚ್ಚುತ್ತಿತ್ತೋ ಏನೋ.

ಬೆಳಗಾಗೆ ನಮ್ಮ ಹೊಟ್ಟೆಗೆ ಹಾಕಲು ಅಮ್ಮ ಏನಾದರೂ ಮಾಡಲೇಬೇಕಲ್ಲ? ದಿನಕ್ಕೊಂದು ತಿಂಡಿ. ಏನೂ ಇಲ್ಲದಿದ್ದರೆ ಅಕ್ಕಿಯ ಹಿಟ್ಟಿಗೆ ಉಪ್ಪು ಮೆಣಸಿನ ಕಾಯಿ ಚೂರು ಹಾಕಿ ನೀರಿನಲ್ಲಿ ಕಲಸಿ ಕಟ್ಟಿ ಮುತ್ತುಗದೆಲೆಯ ಮೇಲೆ ಇಟ್ಟು ಇನ್ನೊಂದು ಎಲೆಯಿಂದ ಮುಚ್ಚಿ ಬಚ್ಚಲು ಮನೆಯ ಒಲೆಯ ಉರಿಯೊಳಗೆ ಹಾಕುತ್ತಿದ್ದಳು. ಅದು ಹದವಾಗಿ ಬೆಂದು, ಆಚೀಚೆಯ ಎಲೆ ಸುಟ್ಟು ಕರಕಲಾಗಿರುತ್ತಿತ್ತು. ಮುತ್ತುಗದೆಲೆಯ ಗಮ್ಮನೆಯ ಪರಿಮಳವೂ ರೊಟ್ಟಿಯಲ್ಲಿ ಸೇರಿ ಹೋಗಿ, ಆ ಸುವಾಸನೆ ನಮ್ಮ ಮೂಗಿನ ಹೊಳ್ಳೆಗಳನ್ನು ಮಲ್ಲಿಗೆ ಹೂವಿನಂತೆ ಅರಳಿಸುತ್ತಿತ್ತು. ರೊಟ್ಟಿಯನ್ನು ಹೊರ ತೆಗೆದು ಹಸುವಿನ ಬೆಣ್ಣೆ ಹಾಕಿ ಕೊಡುತ್ತಿದ್ದಳು. ಆ ರೊಟ್ಟಿಯ ರುಚಿಯನ್ನು ವರ್ಣಿಸುವುದು ಸಾಧ್ಯವಿಲ್ಲ. ಎಷ್ಟೋ ಸಾರಿ ನಮಗೆ ಸಿಗುತ್ತಿದ್ದದ್ದು ಇಂಥದೇ ತಿಂಡಿ. ಊಟವೂ ಹೀಗೆಯೇ. ಇತರರಿಗೆ ಬಲು ಸಾದಾ ಎನಿಸಬಹುದು. ಆದರೆ ಇದನ್ನು ತಿಂದವರಿಗೆ ಗೊತ್ತು ಇದರ ಸುಖ. ನಮಗಂತೂ ಇದು ಅಮೃತ ಸಮ, ಅನುಪಮ.

ಅಂದು ಪ್ರಯಾಣದ ಉದ್ವಕ್ಕೂ ಏನೂ ತಿನ್ನಲು ಮನಸ್ಸಿಲ್ಲದೆ ಹಸಿದು ಬಂದಿದ್ದ ನನ್ನ ಸ್ನೇಹಿತ ನಮ್ಮ ಮನೆಯ ಊಟವನ್ನು ಚಪ್ಪರಿಸಿ ತಿಂದು ಮುಕ್ತ ಕಂಠದಿಂದ ಹೊಗಳಿದ್ದಕ್ಕೆ ಮುಖ್ಯ ಕಾರಣವೆಂದರೆ ಅವನ ಹಸಿವೇ, ಎನ್ನಬೇಕು. ಅಡುಗೆಯೂ ಚೆನ್ನಾಗಿದ್ದು, ಹಸಿವೂ ಇದ್ದಾಗ ದೊರಕುವ ಸುಖಕ್ಕೆ ಸಮನಾದ್ದು ಬೇರಿಲ್ಲ. ಜೋಳದ ಬೋನಕ್ಕೆ ಬೇಳೆಯ ತೊಗೆಯಾಗಿ, ಇಚ್ಛೆಗೆ ಬರುವ ಸತಿ ಇದ್ದರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದು ಸರ್ವಜ್ಞ ಹೇಳಿದ್ದು ಸುಳ್ಳಲ್ಲ. ಆದರೆ ಕಿಚ್ಚು ಹಚ್ಚಲು ಮಾತ್ರ ಹೋಗಬೇಡಿ. ಇಂಥ ಊಟ ಉಂಡು ತೃಪ್ತಿಯಾದ ಮೇಲೆ ಕಿಚ್ಚು ಉಳಿಯುವುದಾದರೂ ಹೇಗೆ? ಇಂಥ ಊಟ ತಮಗಿಲ್ಲವಲ್ಲಾ ಎಂದು ಇತರರಿಗೆ 'ಹೊಟ್ಟೆಯ' 'ಕಿಚ್ಚು' ಬಂದೀತು, ಅಷ್ಟೆ!

ಈ ಕಾಲದಲ್ಲಿ ಅಡುಗೆಗೆ ಅನೇಕ ಪರಿಕರಗಳು ಲಭ್ಯವುಂಟು. ಅನಿಲ ಒಲೆ, ಒತ್ತಡದ ಅಡು ಪಾತ್ರೆ ಮುಂತಾದವೆಲ್ಲ ಗೃಹಿಣಿಯ ಮನೆಗೆಲಸವನ್ನು ಹಗುರಮಾಡಿವೆ. ಹಿಂದೆ ಹಾಗಿರಲಿಲ್ಲ. 'ಹೊರಗೆ ಹೊರಟಿತು ಗಂಡು! ಸಿನಿಮ ಹೋಟೆಲ್ ಬಿಲ್ಲು ಮೂರುವರೆ ರೂಪಾಯಿ ಮೂವರೇ ಜನಕೆ! ಮನೆಯಲುಳಿಯಿತು ಹೆಣ್ಣು, ಆದರೆ ಬೀಸುವ ಕಲ್ಲು, ಕಸ ಮುಸರೆ, ತಪ್ಪಿದರೆ ಮೊರ ಹಾರೆ ಒನಕೆ!' ಎಂಬ ರಾಜರತ್ನಂ 'ಪುಟಾಣಿ' ಯನ್ನು ನೆನಸಿಕೊಳ್ಳುವ ಕಾಲವದು. ಈಗ ಈ ಆಧುನಿಕ ಉಪಕರಣಗಳಿಂದ ಅಡಿಗೆಯ ರುಚಿಯನ್ನು ಪರಿಮಳವನ್ನು ಪೋಷಕಾಂಶವನ್ನು ನಷ್ಟವಾಗದಂತೆ ಉಳಿಸಿಕೊಳ್ಳಬಹುದು. ಆ ಕಾಲದಲ್ಲಿ ಸೌದೆ ಒಲೆ, ಕಲ್ಮರಿಗೆ, ಹಿತ್ತಾಳೆ ಕಂಚುಗಳ ತಪ್ಪಲೆ, ಕೊಳದಪ್ಪಲೆ! ಅಡುಗೆ ಎಂಬುದು ಒಂದು ಪ್ರಯಾಸ. ಮಹಾಯಜ್ಞ. ಒಲೆ ಹಚ್ಚುವುದರಿಂದ ಹಿಡಿದು, ಮಸಿ ಮೆತ್ತಿದ ಪಾತ್ರೆಯನ್ನು ಉಜ್ಜಿ ತೊಳೆಯುವವರೆಗೆ ಪ್ರತಿಯೊಂದೂ ಒಂದು ಮಹಾ ಪರೀಕ್ಷೆ. ಇದನ್ನೆಲ್ಲ ಗೆದ್ದು, ಸಹನೆಗೆಡದೆ ಇದ್ದು, ಅಪ್ಯಾಯಮಾನವಾದ ಅಡಿಗೆ ಮಾಡುವುದೆಂದರೆ ಅದೊಂದು ಸಾಹಸವೇ. ಆದರೂ ಅಮ್ಮನಿಗೆ ಅದೇ ಬಹಳ ಇಷ್ಟ. ಒಂದು ದಿನವೂ ಯಾರ ಮೇಲೂ ಸಿಡುಕಿದ್ದಿಲ್ಲ, ಏನು ಮಾಡಿದರೂ ಉರಿಯಲೊಲ್ಲದ ಹಸಿ ಸೌದೆ ತಂದು ಹಾಕಿದರೆಂದು ಅಪ್ಪನ ಮೇಲೆ ಹಾರಿಬಿದ್ದದ್ದಿಲ್ಲ. ಏನೇ ಆಗಲಿ, ಅಡುಗೆಯೆಂದೂ ಕೆಟ್ಟದ್ದಿಲ್ಲ. ಅಮ್ಮನೊಬ್ಬ ಸಹನಾಮೂರ್ತಿ. ಸಾಕಾರವಾದ ಪ್ರೀತಿ. ಆ ಅಡುಗೆ ರುಚಿಯೆನಿಸುತ್ತಿದ್ದದ್ದಕ್ಕೆ ಇದೂ ಕಾರಣ. ಕಲ್ಮರಿಗೆಯಲ್ಲಿ ಮಾಡಿದ ಸಾರಿನ ರುಚಿಯನ್ನು ಬಲ್ಲವರೇ ಬಲ್ಲರು! ಕಂಚಿನ, ಹಿತ್ತಾಳೆಯ, ಕಲಾಯಿ ಮಾಡಿದ, ಚೆನ್ನಾಗಿ ಬೆಳಗಿ ಹೊಳೆ ಹೊಳೆಯುವಂತೆ ಮಾಡಿದ ಪಾತ್ರೆಗಳು ನೋಟಕ್ಕೂ ಚೆಂದ. ಅವುಗಳಲ್ಲಿ ಮಾಡಿದ್ದು ಊಟಕ್ಕೂ ಚೆಂದ. ಈಗ ಅದನ್ನೆಲ್ಲ ನೆನಸಿಕೊಂಡರೇ ಆನಂದ.

ಅಮ್ಮ ಹೊಸರುಚಿಯ ಬಗ್ಗೆ ಎಂದೂ ತಲೆ ಕೆಡಿಸಿಕೊಂಡಿದ್ದಿಲ್ಲ. ರೇಡಿಯೋ ಟೀವಿಗಳ ಹಾವಳಿಯಾಗಲಿ, ಪೆದ್ದುತನವಾಗಲಿ, ಅಧಿಕ ಪ್ರಸಂಗವಾಗಲಿ ಆಗ ಇರಲಿಲ್ಲ. ಪತ್ರಿಕೆಯನ್ನೋದಿ ಪಡೆದ ಜ್ಞಾನ ಅವಳದಲ್ಲ; ಅಮ್ಮನ ಪಾಕ ವಿದ್ಯೆಯೆಲ್ಲ ವಂಶ ಪಾರಂಪರ್ಯವಾಗಿ ಬಂದದ್ದು, ಸಹಜವಾಗಿ ಕಲಿತದ್ದು, ಬಾಳ ಸಂಗಾತಿಯಾಗಿ ಕೊನೆಯವರೆಗೂ ಉಳಿದದ್ದು. ಮನೆಗೆ ಸೊಸೆಯಂದಿರು ಬಂದರೂ, ತನಗೆ ಮುಪ್ಪೇ ಆದರೂ ಅಡುಗೆಯ ಖಾತೆಯನ್ನು ಮಾತ್ರ ಅಮ್ಮ ಕೊನೆಯವರೆಗೂ ತನ್ನಲ್ಲೇ ಉಳಿಸಿಕೊಂಡಿದ್ದಳು. ಅದರಲ್ಲೇ ಅಮ್ಮನ ಬದುಕಿನ ಸಾರ್ಥಕ್ಯವೇನೋ ಎನಿಸುತ್ತಿತ್ತು. ಅದು ಅಮ್ಮನ ಜೀವನ ಧರ್ಮಯೋಗ. ಆದ್ದರಿಂದಲೇ ಅಮ್ಮನ ಕೈ ಅಡುಗೆ ಅಮೃತೋಪಮ. ಅಮ್ಮನ ಕೈ ಅಮೃತಹಸ್ತ. 'ಅಮ್ಮನ ಕೈ ಅಡುಗೆಯೆತ್ತ! ನೀನೆತ್ತ! ಹೋಗತ್ತ ಮರುಳೇ!? ಎಂದು ಯಾರನ್ನಾದರೂ ನಾನು ಗತ್ತಿನಿಂದ ಬೆದರಿಸಬಹುದಾಗಿತ್ತು! ಆ ಅಡುಗೆಯನ್ನೂಟ ಮಾಡದವರಿಗೆ ಆಕೆಯ ಕೈತುತ್ತಿನ ಮಹತ್ತು ಹೇಗೆ ಗೊತ್ತಾಗುತ್ತಿತ್ತು?

ಸಂಗೀತಗಾರನ ಸ್ಮೃತಿಸಂಚಿಯಲ್ಲಿರುವ ಅನೇಕಾನೇಕ ರಾಗಗಳ ಹಾಗೆ, ಕೃತಿಗಳಂತೆ, ಅಮ್ಮನಿಗೆ ಮಾಡಲು ಬರುತ್ತಿದ್ದ ತಿಂಡಿ ತಿನಿಸು ಭಕ್ಷ್ಯ ಭೋಜ್ಯಗಳ ಪಟ್ಟಿ ಅಪಾರ. ಚಕ್ಕುಲಿ ಕೋಡುಬಳೆ ಮುಚ್ಚೋರೆ, ಅಂಬೊಡೆಗಳಿಂದ ಹಿಡಿದು ಪಾಯಸ ಪರಮಾನ್ನ ಪೊಂಗಲು ಹೋಳಿಗೆ ಕಜ್ಜಾಯ, ಅದಿರಸ, ತೇಂಗೊಳಲು, ರವೆಉಂಡೆ ಇತ್ಯಾದಿಯಾಗಿ ಲೆಕ್ಕವಿಲ್ಲದಷ್ಟು. ಇಂಥ ಹಬ್ಬಕ್ಕೆ, ಈ ಸಂದರ್ಭಕ್ಕೆ ಇದಿದೇ ಅಡುಗೆ, ಭಕ್ಷ್ಯ



ಎಂದು ಸಕಲ ಪ್ರವರವೂ ಅಮ್ಮನಿಗೆ ಗೊತ್ತಿತ್ತು. ಅಮ್ಮನ ಅಡುಗೆ ಬರೀ ಆಹಾರವೆಂದಲ್ಲ, ಒಂದೊಂದು ಅಡುಗೆಯೂ ನಾಲಗೆಗೆ ರುಚಿಯನ್ನು ಮನಸ್ಸಿಗೆ ಇಂಪನ್ನೂ ಹೊಟ್ಟೆಗೆ ತಂಪನ್ನೂ ನೀಡುತ್ತಿದ್ದದ್ದು ಮಾತ್ರವಲ್ಲ, ಅಡುಗೆಯೇ ಔಷಧಿಯೂ ಆಗಿರುತ್ತಿತ್ತು. ಹುಣಸೆ ಚಿಗುರು, ಬೇವಿನ ಹೂ, ಜೀರಿಗೆ, ಮೆಣಸು, ಮೆಂತ್ಯ, ಮೊಸರು, ನೆಲ್ಲೀಕಾಯಿ, ವಿಷ್ಣುಕ್ರಾಂತಿ ಹೀಗೆ ಸಾಮಾನ್ಯವಾಗಿ ಸಿಗುತ್ತಿದ್ದ ಹೆಚ್ಚಿನ ಬೆಲೆಯವಲ್ಲದ ಪರಿಕರಗಳಿಂದ ತಯಾರಿಸುತ್ತಿದ್ದ ಗೊಜ್ಜು, ಚಟ್ನಿ, ಬಜ್ಜಿ ಮುಂತಾದವು ಬಾಯಿಗೆ ರುಚಿ, ರೋಗಕ್ಕೆ ರಾಮಬಾಣ. ಯಾರಿಗೆ ಏನಾಗಿದೆ ಎಂಬುದು ಗೊತ್ತಾಗುವುದೇ ತಡ, ಅವರಿಗೆ ತಕ್ಕ ಅಡುಗೆ ಸಿದ್ಧ. ಅವರ ಹೆಸರು ಹೇಳಿದ್ದು ನಮಗೂ ಇಲ್ಲದೆ ಉಂಟೆ? ಜ್ವರ ಬಂದು ನಾಲಗೆ ಕೆಟ್ಟು ಯಾವುದೂ ರುಚಿಸದವರೂ ಅಮ್ಮ ಬಡಿಸಿದ್ದನ್ನುಂಡು ಗೆಲುವಿನಿಂದ ಕೂಡಿರುತ್ತಿದ್ದದ್ದು ಸಾಮಾನ್ಯ. ಮನೆಗೆ ಬಂದವರಿಗೆ ಯಾವ ತಿಂಡಿ ಇಷ್ಟ, ಯಾರಾದರೂ ಪ್ರಯಾಣ ಮಾಡುವಾಗ ಅವರಿಗೆ ಏನು ತಿಂಡಿ ಮಾಡಿಕೊಡಬೇಕು ಎಂಬ ಎಲ್ಲದರ ಪರಿಜ್ಞಾನ ಅಮ್ಮನಿಗೆ ಇದ್ದ ಹಾಗೆ ಈಗಿನವರಿಗೆ ಇರುವುದು ಸಾಧ್ಯವಿಲ್ಲ. ಆಗಿನ ಹಾಗೆ ಇಷ್ಟಪಟ್ಟು ಕಷ್ಟಪಡುವ ಮನೋಧರ್ಮವೇ ಈಗಿನವರಿಗೆ ಇಲ್ಲ ಎನಿಸುತ್ತದೆ. ಅತಿಥಿಗಳು ಬಂದಾಗ ಮುಖ್ಯ ಭಕ್ಷ್ಯವನ್ನು ಹೋಟಲಿನಿಂದ ತಂದು ಬಡಿಸಿದರಾಯಿತು.ಇಲ್ಲವೇ, ಎಲ್ಲರೂ ಹೋಟಲಿಗೇ ಹೋದರೂ ಆಯಿತು ಎಂಬುದು ಈಗಿನವರ ಮನೋಧರ್ಮ. ಅಮ್ಮನಂಥವರ ಕೈ ಅಡುಗೆಯ ಸುಖ ಅನುಭವಿಸುವುದಕ್ಕೂ ಕೇಳಿಕೊಂಡು ಬಂದಿರಬೇಕು! 'ಬೆಲೆಯಿಂದಕ್ಕುಮೆ ಕೃತಿಗಾವಿಲ! ಭುವನದ ಭಾಗ್ಯದಿಂದ ಮಕ್ಕುಂ. ನೋಟ್ಟಂ, ಬೆಲೆಗೊಟ್ಟು ತಾರ ಮಧುವಂ ಮಲಯಾನಿಲನಂ ಮನೋಜನಂ ಕೌಮುದಿಯಂ' ಎನ್ನುತ್ತಾನೆ ನೇಮಿಚಂದ್ರ. ಈ ಪಟ್ಟಿಗೆ ನಾನು ಇದನ್ನು ಸೇರಿಸಬೇಕು. ಈ ಪಟ್ಟಿಗೆ ನಾನು ಇದನ್ನೂ ಸೇರಿಸಬೇಕು, 'ನೋಬ್ಬಂ ಬೆಲೆಗೊಟ್ಟು ಕಾರ ಈ ರುಚಿಯು, ಈ ಸುಖಮಂ, ಅಮ್ಮನ ಕೈಯಡುಗೆಯ ದಿವ್ಯಾನುಭವಮಂ' ಎಂದೂ ಹೇಳಬೇಕು. ಗಂಡ ಹೆಂಡಿರು ನಿಜಕ್ಕೂ ಸುಖವಾಗಿ ಸಂಸಾರ ಮಾಡಬೇಕಾದರೆ ಅಮ್ಮನಂತೆ ತಾದಾತ್ಮ್ಯ ಭಾವದಿಂದ ಅಡುಗೆ ಮಾಡಬೇಕು. ಪ್ರೀತಿಯ ಲೋಕಕ್ಕೆ ಅಡುಗೆಯೇ ರಹದಾರಿ. ಸಂಗಾತಿಯ ನಾಲಗೆಯನ್ನು ಗೆಲ್ಲುವುದೇ ಪ್ರೀತಿಯ ಸಾಧನೆಗೆ ಸೋಪಾನ. ಇದೇ ಗ್ರಹಸ್ಥ ಧರ್ಮದ ಪ್ರಥಮ ಸೂತ್ರ.

ನಮ್ಮ ಧರ್ಮ ಸಂಸ್ಕೃತಿಗಳಿಗೆ ಅಡಿಗೆ ಊಟಗಳ ಪದ್ಧತಿಯೇ ಅಡಿಪಾಯ ಎಂದು ನನ್ನ ಅಭಿಮತ. ಗಂಡ-ಹೆಂಡಿರು ಒಂದೇ ಬಗೆಯ ಅಡಿಗೆ-ಊಟದ ಸಂಸ್ಕೃತಿಗೆ ಸೇರಿದವರಾಗಿದ್ದರೆ ಅಂಥವರ ಸಂಸಾರ ಸ್ವರ್ಗಸಮಾನ. ಸರ್ವಜ್ಞ ಹೇಳುವುದೂ ಇದನ್ನೇ. ಜೋಳದ ಬೋನ, ಬೇಳೆಯ ತೊಗೆ ಆಮೇಲೆ ಇಚ್ಛೆಗೆ ಬರುವ ಸತಿ, ಎನ್ನುತ್ತಾನೆ ಸರ್ವಜ್ಞ. ನಾನು ಮೊದಲೇ ಹೇಳಿದ ಹಾಗೆ ಉಮ್ಮರ್ ಖಯ್ಯಾಮ್ ಎಂಬ ಪಾರಸೀ ಕವಿ ಹಾಡುವುದನ್ನು ಕೇಳಿ, 'ಅಲ್ಲಿ ಮರದಡಿಯಲ್ಲಿ ನಲ್ಗಾವ್ಯ ಮೊಂದಿರಲು, ರೊಟ್ಟಿಯೊಂದಿನಿಸೊಂದು ಕುಡಿಕೆಯಲಿ ಮಧುವು, ಮೇಣ್ ಮುಗುದೆ ನೀನೆನ್ನ ಬಳಿ ಕುಳಿತು ಪಾಡಲಹ ಗಿಡಾದೊಡೇನದುವೆ ಸಗ್ಗ ಸುಖ ನನಗೆ' ಎನ್ನುತಾನೆ ಖಯ್ಯಾಮ್. ಮೊದಲು ಕಾವ್ಯ, ಆಮೇಲೆ ರೊಟ್ಟಿ, ಅನಂತರ ಮಧು, ಆಮೇಲೆ ಹೆಣ್ಣಿನ ಆಸೆ, ಆಕೆಯ ಮಧುರಗಾನ, ಪ್ರೀತಿಯ ಪೀಯೂಷ ಪಾನ. 'ಗಂಡ ಹೆಂಡಿರ ಜಗಳ ಉಂಡು ಮಲಗುವವರೆಗೆ' ಎಂದು ಗಾದೆ. ಆದರೆ ಒಂದೇ ರುಚಿಧರ್ಮ ಉಳ್ಳ ಗಂಡ ಹೆಂಡಿರ ನಡುವೆ ಜಗಳಕ್ಕೆ ಕಾರಣವೇ ಇಲ್ಲ. ಯಾರಿಗೆ ಯಾವ ಅಡುಗೆ ಊಟ ಆಗಿಬಂದಿದೆಯೋ ಅದನ್ನೇ ನಾವು ಆಚಾರವೆಂದು ಕರೆಯುತ್ತೇವೆ. ಪ್ರತಿಯೊಂದು ಸಂಸ್ಕೃತಿಗೂ ಅವರದೇ ಊಟ ಆದ ಅಡುಗೆ ಮನೆಯ ಪದ್ಧತಿ ಇದೆಯಂತೆ. ಇದು ಹಿಂದುಗಳ ವೈಶಿಷ್ಟ್ಯವೆಂದೇನೂ ಅಲ್ಲ. ಅಬ್ದುಲ್ ಹಲೀಂ ಷರಾಕ್ ಎಂಬ ಉರ್ದು ಲೇಖಕರೊಬ್ಬರು ಹೀಗೆ ಹೇಳಿದ್ದಾರೆ! ಪಾಶ್ಚಾತ್ಯರಲ್ಲೂ 'ಟೇಬಲ್ ಮ್ಯಾನರ್ಸ್' ಗೆ ವಿಶೇಷ ಪ್ರಾಶಸ್ತ್ಯ.

ಬೆಳಗ್ಗೆ ಶಾಲೆಗೋ ಕಾಲೇಜಿಗೋ ಕೆಲಸಕ್ಕೋ ಹೋಗುವ ಮುನ್ನ ಇಷ್ಟವಾದ ತಿಂಡಿಯನ್ನು ಗಡದ್ದಾಗಿ ಗದುಕಿದರೆ ಇಡೀ ದಿನ ಅದು ನಮ್ಮ ಆತ್ಮವಿಶ್ವಾಸವನ್ನು ರಕ್ಷಿಸುತ್ತದೆ, ಲೋಕವನ್ನೇ ಗೆಲ್ಲುವೆನೆಂಬ ಉತ್ಸಾಹ ಮೂಡಿಸುತ್ತದೆ. ಅಮ್ಮನಿಗೆ ಇದು ಗೊತ್ತಿತ್ತು. ಆದ್ದರಿಂದಲೇ ಬೆಳೆದಾಗ ಮಕ್ಕಳಿಗೆಲ್ಲ ಹೊಟ್ಟೆ ತುಂಬ ತಿನ್ನಿಸುವುದಕ್ಕೆ ಆದ್ಯತೆ ನೀಡುತ್ತಿದ್ದಳು. ಅದು ಅಮ್ಮನ ಪ್ರಪ್ರಥಮ ಪ್ರಾತರ್ವಿಧಿ.

ಆದರೆ ತುಂಬ ದುರದೃಷ್ಟದ ಸಂಗತಿಯೆಂದರೆ, ನಮ್ಮ ಅಡುಗೆ ಊಟದ ಸಂಸ್ಕೃತಿಯೇ ಇಂದು ಮಾಯವಾಗುತ್ತಿದೆ. ವೇಗದ ಬದುಕಿಗೆ ನಾವು ಈ ಸಂಸ್ಕೃತಿಯನ್ನು ಬಲಿ ಕೊಡುತ್ತಿದ್ದೇವೆ. ದಿಢೀರ್ ಊಟ, ತಟ್ಟೆ ಊಟ, ದರ್ಶಿನಿಯಲ್ಲಿ ಸ್ವಯಂ ಸೇವೆ, ಚಾಟ್ ಗಲಭೆ, ತಿಂಡಿಗಾಡಿಯ ಮುಂದೆ ನಿಂತು ಗುಳಕ್ಕನೆ ನುಂಗಿ ಗುಟುಕರಿಸುವ ಪ್ರಕ್ರಿಯೆ - ಇವೆಲ್ಲ ನಮ್ಮ ಸಂಸ್ಕೃತಿಯನ್ನೇ ನಾಶಮಾಡುತ್ತಿವೆ. ನಿಂತು ತಿನ್ನುವುದು, ಕೆಲಸದ ನಡುವೆ ಭೋಜನ - ವರ್ಕಿಂಗ್ ಲಂಚ್ - ಎಂಬುದು ನಮ್ಮ ಸ್ವಾಸ್ಥ್ಯವನ್ನೇ ಕೆಡಿಸುತ್ತಿದೆ. ಕೆಲಸ ಮತ್ತು ಭೋಜನ - ಇವೆರಡೂ ಪರಸ್ಪರ ವಿರುದ್ಧ ಇವೆರಡನ್ನು ಬೆರಸುವುದು, ಸಮನ್ವಯಗೊಳಿಸುವುದು ಹೇಗೆ? 'ತಕ್ಕುದೆ ಬೆರಸಲ್ಕೆ ಘೃತಮುಮಂ ಕೈಲಮುಮಂ?' ಕಲಬೆರಕೆಯ ಪಾಶ್ಚಾತ್ಯ ಪದ್ಧತಿಗಳು ನಮ್ಮ ಆಹಾರ ಸಂಸ್ಕೃತಿಯ ಮೇಲೆ ದಾಳಿ ನಡೆಸುತ್ತಿವೆ. ನಮ್ಮ ಕಾವ್ಯ ದರ್ಶನ ಸಂಗೀತ ಇತ್ಯಾದಿಗಳಿಗೆ ಮಾರು ಹೋದ ಪಾಶ್ಚಾತ್ಯರು ನಮ್ಮ ಅಡಿಗೆಯನ್ನು ಚಪ್ಪರಿಸಿ ಆನಂದ ಅನುಭವಿಸುತ್ತಿದ್ದಾರೆ. ಅವರ ಹ್ಯಾಂಬರ್ಗರ್, ಪಿಜ್ಜಾಗಳು ನಮ್ಮ ಜನಕ್ಕೆ ಅಂಟಿಕೊಳ್ಳುತ್ತಿವೆ. ಈ ಹೆಸರುಗಳನ್ನು ಕೇಳಿದ ನನ್ನ ಪುಟ್ಟ ಮೊಮ್ಮಗ ಮುಖ ಸಿಂಡರಿಸಿಕೊಂಡು ಉದ್ಗರಿಸಿದ! ಇಸ್ಸಿ! ಹೆಸರು ಚೆನ್ನಾಗಿಲ್ಲ? ಎಂದ. ಮಕ್ಕಳ ಕಿವಿಗೂ ಕರ್ಕಶವೆನಿಸಿದ್ದು ನಮ್ಮ ಗಂಟಲುಗಳಿಗೆ ಹೇಗೆ ಇಳಿಯುವುದೋ, ನಾನು ಕಾಣೆ! ನಮ್ಮ ಹಳಸಿದ ಅಡುಗೆಗಳೂ ಅವಕ್ಕಿಂತ ಎಷ್ಟೋ ವಾಸಿ ಎನಿಸುತ್ತದೆ ನನಗೆ. ನಾವು ಎಂಥ ಮೂರ್ಖರಾಗುತ್ತಿದ್ದೇವೆ - ಎಂದು ಸಂಕಟವಾಗುತ್ತದೆ.

ಅಮ್ಮನ ಕೈ ಅಡುಗೆ ಎಂದು ನಾನು ಹೇಳಿದರೆ ನಮ್ಮ ಅಮ್ಮ ಮಾಡಿದ ಅಡುಗೆ ಎಂದಷ್ಟೇ ತೆಗೆದುಕೊಳ್ಳಬೇಕಾದ್ದೇನೂ ಇಲ್ಲ. ಆ ಪರಿಸರ, ಅಂದಿನ ಮನೋಧರ್ಮ, ವಯೋಧರ್ಮ, ವಿಕಾಸಗೊಂಡ ಕ್ರಿಯೆಯಿಂದ ಗಳಿಸಿದ ಅನುಭವದ ಆಧಾರದ ಮೇಲೆ ರೂಪುಗೊಂಡ ಅಡುಗೆ - ಊಟದ ವಿಧಾನ ಅಥವಾ ಸಂಪ್ರದಾಯ ಎಂದು ನಾವು ಇದನ್ನು ತಿಳಿದುಕೊಳ್ಳಬೇಕು. ಅಮ್ಮನ ಕೈ ಅಡುಗೆಯ ವಿಚಾರ ಬಂದಾಗಲೆಲ್ಲ ನನ್ನ ಹೆಂಡತಿ ಕೋಪಗೊಂಡ ಹಾಗೆ ನಟಿಸಿದರೂ ಅದು ಹುಸಿಮುನಿಸೆಂಬುದು ನನಗೂ ಗೊತ್ತು. ತಾಯಿಯ ಮಮತೆ, ಮಂತ್ರಿಯ ಕೌಶಲ, ದಾಸಿಯ ನಿಷ್ಠೆ, ಕಾಮಿನಿಯ ಅನುರಾಗ, ಧರಿತ್ರಿಯ ಕ್ಷಮಾಗುಣ - ಇವೆಲ್ಲ ಇರುವ ಗೃಹಿಣಿಯನ್ನು ನಮ್ಮ ಸಂಸ್ಕೃತ ಸುಭಾಷಿತವೊಂದು ಕೊಂಡಾಡುತ್ತದೆ. ಭೋಜ್ಯದಲ್ಲಿ ತಾಯಿಯಂತೆ, ಕ್ಷಮೆಯಲ್ಲಿ ಧರಿತ್ರಿಯಂತೆ ಇರುವ, ಇತರ ವಿಚಾರಗಳಲ್ಲೂ ಗುಣವಂತೆಯಾದ ಪತ್ನಿಯನ್ನು ಹೊಂದಿದಾತನೇ ಪುಣ್ಯವಂತ. ಅಂಥವಳಿಗೆ ಅವನು ತಕ್ಕ ಗಂಡನಾಗಬೇಕು ಎಂಬುದೂ ಮುಖ್ಯ.

ನನ್ನ ಮಿತ್ರನ ಭೋಜನದ ಸಮಯದಲ್ಲಿ ತೊಡಗಿದ ಮಾತಿನಿಂದ ಆರಂಭವಾದ ಈ ವಿಚಾರಲಹರಿಯನ್ನು ಈಗ ನಿಮ್ಮ ಮುಂದೆ ಹೇಳಿದಂತೆಯೇ ಬರೆದು, ನನ್ನ ಪತ್ನಿಗೆ ಕಾಣುವ ಹಾಗೆ, ಆಕೆಯ ಕಣ್ಣಿಗೆ ಬೀಳುವ ಹಾಗೆ, ಇಡುತ್ತಿದ್ದೇನೆ. ಅವಳು ಓದಿಯೇ ಓದುತ್ತಾಳೆಂದು ನಂಬಿಕೆ. ನನ್ನ ಮೊದಲ ಓದುಗಳೆಂದರೆ ನನ್ನ ಪತ್ನಿಯೇ.

■

ಸ್ವಚ್ಛವಾಯಿತು ಮುಗಿಲು

ಬದುಕು ಕೊಡುವುದಕ್ಕೆ ಕೊನೆಯಿಲ್ಲ. ಕೊಟ್ಟಷ್ಟು ಪಡೆ-
ದು ಅಟ್ಟುಣುವ ಬಗೆ ಬೇರೆ. ಇಷ್ಟಾನಿಷ್ಟಗಳ
ಕಷ್ಟ ಸುಖದಲಿ ಕುದಿಸಿ, ಸ್ಥಾಯಿ-ಸಂಚಾರಿಗಳ

ತಾಯಾಗಿ, ಅನುಭವಕೆ ಬಾಯಾಗಿ, ನಿಂತ ಕಡೆ
ನೆರಳು ಹರಡುವ ಗಿಡದ ಚಿಗುರು-ಹೂ-ಕಾಯಾಗಿ

ಸಂಪ್ರದಾಯವ ಮೀರಿ ಮಾಗಿದ ಹೆಮ್ಮೆಗೆ-ನಗೆ.
ನಡುಗುವ ಬೆರಳ ನಡುವಿನಲಿ ತುಡಿವ ಲೇಖನಿಗೆ


ಮಿಡಿವ ಹೃದಯದ ಸೂಕ್ಷ್ಮ ಸಹಜಾತ್ಮ ಕಥೆ. ತಿರುಗಿ
ಮಕ್ಕಳಿಗೆ ಬೀಸಿ ಮಾಯದ ಕೋಲು, ನಕ್ಕುನಲಿ-

ದಾಡಿಸಿತು ಬಣ್ಣದ ಚಿಟ್ಟೆ ಹೂವಿಂದ ಹಾರಿ.
ಅರಳು-ಮರಳಿಗು ಹೊಗರು ಹೊಮ್ಮಿದ ಸ್ವಗತಲಹರಿ!

ಮತ್ತೇನು ಹುದುಗಿತ್ತೊ ನೆನಪಿನ ಹಗೇವಿನಲಿ-

ಎಷ್ಟೋ ರಾತ್ರಿಗಳ ದಾಟಿ ಬೆಳಗ ನಿರೀಕ್ಷಿಸಲು-
ಬರೆದು ಮುಗಿಸಿದ ಹಾಗೆ ಸ್ವಚ್ಛವಾಯಿತು ಮುಗಿಲು.

● ಚೆನ್ನವೀರ ಕಣವಿ



ಹಾಸ್ಯ

● ಅನಂತ ಕಲ್ಲೋಳ
'ರಮಾರಮಣ', 506, ಕುಲಕರ್ಣಿಬೀದಿ
ಬೆಳಗಾವಿ - 590 002.



ಆದರೆ ಅಂಜಾನಪ್ಪ



ಶಾಲೆಯಲ್ಲಿ ದಾಖಲಾಗುವಾಗ ಮಾಡಿಕೊಂಡಿದ್ದ ಹೆಸರು ಅವನ ಜೀವನವಿಡೀ ಅವಾಂತರವಾಗಿಯೇ ಉಳಿದುಕೊಂಡಿತು.

ನಮ್ಮ ಆದರೆ ಅಂಜಾನಪ್ಪನ ಬಗ್ಗೆ ಹೇಳಬೇಕೆಂದರೆ ಮೊದಲು ಆತನ ಈ 'ಆದರೆ ಅಂಜಾನಪ್ಪ' ಎಂಬ ನಾಮಪದಾವಳಿಯಲ್ಲಿಯ 'ಆದರೆ'ಯ ಬಗ್ಗೆ ವಿವರಿಸುವುದು ಅಗತ್ಯವಾಗಿದೆ. ಆದರೆ ಅಂಜಾನಪ್ಪನ ತಾಯಿ ತಂದೆಗೆ ಬಹಳ ದಿನಗಳವರೆಗೆ ಸಂತಾನವಿರಲಿಲ್ಲ ಅಂತ ಅವರು ಬಹಳ ಸಂತಾಪ ಪಟ್ಟಿದ್ದರು. ಆಮೇಲೆ ಅವರು ತಮ್ಮ ಊರಿನ ಆಂಜನೇಯ ಸ್ವಾಮಿಗೆ ನಡ್ಕೊಂಡು 'ನಮಗ ಮಗ ಆದರೆ ನಿನ್ನ ಹೆಸರನ್ನೇ ಇಡ್ತೀವಿ' ಅಂತ ಸಂಕಲ್ಪ ತೊಟ್ಟು ಪರಿಪರಿಯಿಂದ ಸೇವೆ ಮಾಡಿದ್ರಂತ. ಮಗ ಹುಟ್ಟಿದ, ಆ ತಾಯ್ತಂದೆಗಳು ಆಂಜನೇಯಪ್ಪ ಅಂತ ಹೆಸರು ಇಟ್ಟರು. ಆತನನ್ನು ಅಂಜಾನಪ್ಪ, ಅಂಜಾನಪ್ಪ ಅಂತ ಅಕ್ಕರೆಯಿಂದ ಕರೀತಿದ್ರು.

ಮಗ ದೊಡ್ಡಂವ ಆದ. ಶಾಲೆಗೆ ಸೇರಿಸುವ ವಯಸ್ಸಿಗೆ ಬಂದ. ಆಗೆಲ್ಲ ಶಾಲೆಗೆ ಸೇರಿಸಬೇಕಾದರೆ ಆರು ವರ್ಷ ವಯಸ್ಸು ಆಗಬೇಕಿತ್ತು; ಈಗಿನಂತೆ ಎರಡೂವರೆ ವರ್ಷಕ್ಕೆ ಹುಡುಗರನ್ನು ಸ್ಕೂಲಿಗೆ ಅಟ್ಟಿ ಟಿ.ವಿ. ನೋಡಿಕೋತ ಕುಂಡ್ರುವ ದಿನಗಳಲ್ಲ ಅವು!

ಅಂಜಾನಪ್ಪನ ತಂದೆ, ಮಗನನ್ನು ಶಾಲೆಗೆ ಸೇರಿಸಲು ಕರೆದುಕೊಂಡು ಹೋದಾಗ ಶಾಲಾ ಮಾಸ್ತರರು ಹೆಸರೇನು? ಎಂದು ಕೇಳಿದ್ದರು. ಅಂಜಾನಪ್ಪನವರ ತಂದೆ, ತನ್ನ ಹೆಸರು, ತನ್ನ ಮಡದಿಯ ಹೆಸರು ಹೇಳಿ, ತಮಗೆ ಬಹಳ ದಿನಗಳವರೆಗೆ ಮಕ್ಕಳಾಗದ ಸಂಗತಿ ವಿವರಿಸಿ, ತಾವು ದೇವರಿಗೆ ಹರಕೆ ಹೊತ್ತಿದ್ದ ವಿಷಯವನ್ನು ಚಾಚೂ ತಪ್ಪದಂತೆ ಅರುಹಿ,

'......ಗಂಡ ಮಗ ಆದರೆ ಅಂಜಾನಪ್ಪ ಅಂತ ಹೆಸರು ಇಡ್ತೀನಿ ಅಂತ ಬೇಡ್ಕೊಂಡಿದ್ದೀನಿ. ಹಾಂಗ ಇಟ್ಟೇನ್ರಿ' ಎಂದು ಹೇಳಿದ್ರಂತೆ.

ಈ ವಿವರಗಳನ್ನೆಲ್ಲ ಕೇಳುತ್ತ ಕೇಳುತ್ತ ಆಕಳಿಸುತ್ತಿದ್ದ ಆ ಮಾಸ್ತರರುದಾಖಲೆ ಪುಸ್ತಕದಲ್ಲಿ 'ಆದರೆ ಅಂಜಾನಪ್ಪ' ಅಂತಹ ಹೆಸರು ನಮೂದು ಮಾಡಿಕೊಂಡದ್ದು ಶಾಲಾ ಪ್ರಮಾಣಪತ್ರದಲ್ಲಿ ಸಹ ಹಾಗೇ ಉಳಿದುಕೊಂಡು ಬಂದಿತ್ತು. ಹೀಗಾಗಿ ಅಂಜಾನಪ್ಪನಿಗೆ ಪೂರ್ಣ ಹೆಸರು ಹೇಳಪ್ಪ ಅಂತಂದ್ರ, 'ಆದರೆ ಅಂಜಾನಪ್ಪ' ಎಂದೇ ಹೇಳುವ ಅಪರಿಹಾರ್ಯತೆ ಬೆಳೆದುಕೊಂಡು ಬಂದಿತ್ತು.

ಆತ ಪ್ರೌಢನಾದ ಬಳಿಕ ಈ ಅವಾಂತರವನ್ನು ಸರಿಪಡಿಸಲು ಪತ್ರಿಕೆಯಲ್ಲಿ ಜಾಹೀರಾತು ನೀಡಿ, ಸರಕಾರದ ರಾಜಪತ್ರದಾಗ ಪ್ರಕಟಿಸಿಕೊಳ್ಳಬಹುದಿತ್ತು. ಆದರೆ ಆತನಿಗೆ ಒಂದು ಸೂಜ್ಞ ವಿಚಾರ ಹೊಳೆದಿತ್ತು; 'ಪ್ರಪಂಚದಾಗ ಎಂಥೆಂಥವೋ ಚಿತ್ರವಿಚಿತ್ರ ಹೆಸರುಗಳು ಚಾಲ್ತಿಯಲ್ಲಿರುವಾಗ ಆದರೆಯಿಂದ ಆದಿಗೊಳ್ಳುವ, ಆದರೆ ಅಂಜಾನಪ್ಪ ಅಂಬೂದು ಅಂಥಾ ಪರಿ ತಿರಸ್ಕರಣೀಯವೇನಲ್ಲ ಅಂತ ಅದರ ಬಗ್ಗೆ ಆದರಭಾವ ಹೊಮ್ಮಿತ್ತು. ಹೀಗಾಗಿ ಆತ 'ಹೆಸರಿನಲ್ಲಿ ಬದಲಾವಣೆ' ಎಂಬ ಪ್ರಕ್ರಿಯೆಯ ಹಾದಿಯನ್ನು ಬಿಟ್ಟು ಆದರೆಗೆ ಅರ್ಥವಂತಿಕೆ ಬರುವಂತೆ ಯತ್ನಶೀಲನಾದ.

ಹುಟ್ಟಿದಾರಭ್ಯ ಅಂಟಿಕೊಂಡಿದ್ದ 'ಆದರೆ ಅಂಜಾನಪ್ಪ'ನಲ್ಲಿ 'ಆದರೆ'ಯು 'ಆಗು' ಎಂಬ ಧಾತುವಿನಿಂದ ಸಾಧಿತವಾಗಿದ್ದರೂ ಅಂಜಾನಪ್ಪ ಬೆಳೆಯುತ್ತಿದ್ದಂತೆ ಆತನಿಗೆ ಅಂಟಿಕೊಂಡಿದ್ದ ಒಂದು ಚಾಳಿಯ ಚರ್ಯೆಯಿಂದಾಗಿ ಅವ್ಯಯ 'ಆದರೆ'ಯೇ ಆತನ ಮಾತಿನಾಗ ಸುಳಿಯುತ್ತಿದ್ದುದರಿಂದ ಆತನನ್ನು 'ಆದರೆ ಅಂಜಾನಪ್ಪ' ಎಂದು ಜನರು ಬಾಯ್ತುಂಬ ಕರೆಯುತ್ತಿದ್ದರು.

'ಏನು ಪೇಟೆಗೆ ಹೊರಟಿರಾ?' ಎಂದ ಯಾರಾದರೂ ಕೇಳಿದರೆ ಆತ,

ಹ್ಞೂಂ, ಪೇಟೆಯ ಕಡೆಗೆ ನಡೆದೀನಿ ಆದರೆ ವ್ಯಾಪಾರಕ್ಕಲ್ಲ ಎಂದೋ ಅಥವಾ,

'ಈ ಸಲ ಮಳೆ ಛಲೋ ಆಯ್ತಲ್ಲs?' ಎಂದು ಯಾರಾದರೂ ಅಂದರೆ,

'ಮಳೆ ಛಲೂ ಆಯ್ತು ಆದರೆ ಹೊಳ್ಯಾಗ ನೀರೇ ಬರಲಿಲ್ಲ' ಎಂದೋ, ಇಲ್ಲವೆ,

'ಇಂದು ಸೋಮವಾರ ಅಲ್ವೇ?' ಅಂತ ಯಾರಾದರೂ ಕೇಳಿದರೆ,

'ಹ್ಞೂಂ, ಇಂದು ಸೋಮವಾರ, ಆದರೆ ಶ್ರಾವಣದ ಸೋಮವಾರ

ಅಲ್ಲ' ಎಂದೋ ಸೋಮವಾರದಂದೇ ಯಾರಾದರು 'ಇಂದು ಸೋಮವಾರವಲ್ಲವೇ!' ಎಂದು ಉದ್ಗರಿಸಿದರೆ

'ಹೌದು ಶ್ರಾವಣ ಸೋಮವಾರವೇ! ಆದರೆ ಕಡೆಯ ಶ್ರಾವಣ ಸೋಮವಾರ ಅಲ್ಲ' ಎಂದು ಆತ ಯಥಾಪ್ರಕಾರ 'ಆದರೆ' ಗೆ ಮಣೆ ಹಾಕಿ ಮಾತು ಮುಗಿಸಿದಾಗ ಕೇಳಿದವನು ಹಣೆ ಗಟ್ಟಿಸಿಕೊಳ್ಳಬೇಕಿತ್ತು!

ಕನ್ನಡದಲ್ಲಿ ಆದರೆ ಎಂದರೆ ಇಂಗ್ಲಿಷಿನ ಇಫ್ ಇಟ್ ಹ್ಯಾಪನ್ಸ್‌ಗೆ ಸಂವಾದಿಯಾಗಬಹುದು ಅಥವಾ 'ಪರಂತು - ಬಟ್ ಎಂಬುದೂ ಆಗಬಹುದು. ಅಲ್ಲವೇ! ಅಂಜಾನಪ್ಪ ಶಾಲೆಯಲ್ಲಿ ಆಂಗ್ಲಭಾಷೆ ಕಲಿತ ಬಳಿಕ ಆದರೆಗೆ ಬದಲಾಗಿ 'ಬಟ್' ಹಾಕುವುದಕ್ಕೆ ಪ್ರಾರಂಭಿಸಿದಾಗ, ಗುರುಗಳು ಒಂದು ಸಲ ಚೆನ್ನಾಗಿ ದಬಾಯಿಸಿದ್ದರು, 'ಸಿಕ್ಕ ಸಿಕ್ಕಲ್ಲಿ ಬಟ್ ಹಾಕೋದು ಛಲೂ ಅಲ್ಲ; ಕೆಟ್ಟ ಚಾಳಿ! ಹುಶ್ಯಾರ್!!'

ಅಂಜಾನಪ್ಪ ಅಂದಿನಿಂದ 'ಬಟ್'ದ ಗೊಡವೆ ಬಿಟ್ಟು 'ಆದರೆ'ಯನ್ನೇ ಅಮುಚಿಕೊಂಡ. ಆತನ ಮಾತಿನಾಗ ಆದರೆಯನ್ನು ಸಂಲಗ್ನಿಸುವುದನ್ನು ಕಟ್ಟುನಿಟ್ಟಾಗಿ ಪರಿಪಾಲಿಸುತ್ತ ಬಂದಿದ್ದಾನೆ.

ಆತನ ಲಗ್ನವಾಯಿತು. ಅನಘಾ ಎಂಬ ಯುವತಿಯೊಡನೆ ಎಲ್ಲಾ ನವಪರಿಣಿತ ಯುವತಿಯರಿಗೆ ಇರುವಂತೆ, 'ಈ ಸೀರೆಯಲ್ಲಿ ನಾಹ್ಯಾಂಗ್ ಕಾಣ್ತೇನಿ?', 'ಇಂದಿನ ನನ್ನ ಹೇರ್ ಸ್ಟೈಲ್ ಹೇಗೆ ಅನಿಸ್ತದ?' 'ನಾ ಮಾಡಿದ ಮೈಸೂರ್ ಪಾಕ್ ಹೇಗೆ ಆಗಿದೆ?' ಎಂದು ತಮ್ಮ ಗಂಡಂದಿರುಗಳಿಗೆ ಪದೇ ಪದೇ ಕೇಳಿ ಪ್ರಶಂಸೆಯ ಪ್ರಮಾಣಪತ್ರ ಪಡೆದು ಪರಮಾನಂದಗೊಳ್ಳುವಂಥ ಚಾಳಿ ಈ ಅನಘಾಳಿಗೂ ಇತ್ತು.

'ಅಲ್ರಾ, ಮತ್ತ ನಾ ಈ ಚೂಡಿದಾರ್-ಕಮೀಜ್‌ನಾಗ ಹ್ಯಾಂಗ ಕಾಣಿಸ್ತೇನಿ?' ಎಂದು ಅನಘಾ ಕೇಳಿದಾಗ ಅಂಜಾನಪ್ಪ,

'ಛಂದ ಕಾಣಿಸ್ತಿ; ಆದರೆ ಪಕ್ಕದ ಮನೆಯ ಸೋನಾ ಚೂಡಿದಾರದಾಗ ಮತ್ತೂ ಮಸ್ತ್ ಕಾಣ್ತಾಳ' ಎಂದುತ್ತರಿಸಿದ್ದ.

'ಇಂದು ನನ್ನ ಹೇರ್ ಸ್ಟೈಲ್ ಹ್ಯಾಂಗ್ ಆಗೇದ?' ಎಂದು ಅನಘಾ ಆಸೆಗಣ್ಣಿನಿಂದ ಕೇಳಿದಾಗ ಅಂಜಾನಪ್ಪ,

'ಗುಡ್; ಆದರೆ ಬಾಯ್‌ಕಟ್ಟಿನಾಗ ನೀನು ಇನ್ನಷ್ಟು ಛಂದ ಕಾಣಬಹುದೇನೋ!' ಎಂದಂದಿದ್ದ.

'ನಾ ಮಾಡಿದ ಸಾರು ಹ್ಯಾಂಗ ಆಗೇದ?' ಎಂದು ಆಕೆ ಕೇಳಿದಾಗ,

'ನೀ ಮಾಡಿದ ಖೀರು, ಅಲ್ಲ, ಸಾರು ರುಚಿಯಾಗಿದೆ ಆದರೆ ಎದುರು ಮನೆಯ ಮಾಲತಿ ಮಾಡುವ ಸಾರು ಬಹಳ ರುಚಿ ಆಗಿರ್‍ತದ' ಎಂದು ಕುದುರೆಯನ್ನು ಧಡಕ್ಕನೇ ಮುಗ್ಗರಿಸಿ ಬಿಡುತ್ತಿತ್ತು; ಆದರೆ ಆತನಿಗೆ ಅತ್ತ ಇನಿತೂ ಗಮನವಿರುತ್ತಿರಲಿಲ್ಲ. ಆತನ 'ಆದರೆ' ಯುಕ್ತ ಪ್ರಶಂಸೆ ಎಂದರೆ ಅಪಸವ್ಯದ ಪ್ರಶಂಸೆ (ಲೆಫ್ಟ್ ಹ್ಯಾಂಡೆಡ್ ಕಾಂಪ್ಲಿಮೆಂಟ್) ಎಂದೆನಿಸಿ ಅವಳು ಸೆಟ್ಕೊಂಡು ತವರು ಸೇರಿದ್ದಳು.

ಎರಡೂ ಕಡೆಯವರು ಪಂಚಾಯಿತಿ ಸೇರಿಸಿದಾಗ ಹಿರಿಯರಿಗೆ ಬಲು ಪಂಚೇತಿ ಆಯಿತು. ಅನಘಾಳಿಗೆ ಹೊಗಳಿಕೆ, ಪ್ರಶಂಸೆಯ ಮಾತುಗಳನ್ನು ಕೇಳುವ ಅಭ್ಯಾಸ ಅಂಟಿಕೊಂಡಿದ್ದರೆ ಅವಳ ಗಂಡನಿಗೆ ಪ್ರತಿಮಾತಿನಲ್ಲೂ ಆದರೆಯನ್ನು ತೂರಿಸಿ ಟಿಪ್ಪಣಿಸುವ ಹವ್ಯಾಸ. ಇದಕ್ಕೆ ಹಿರಿಯರು ಒಂದು ಉಪಾಯವನ್ನು ಸೂಚಿಸಿದರು. ಅಂಜಾನಪ್ಪನ ಮಾತಿನಲ್ಲಿ ಆದರೆಯನ್ನು ತಪ್ಪಿಸುವುದು ಎಂದರೆ ನೀರಿಲ್ಲದ ಮಳೆಯನ್ನು ನಿರೀಕ್ಷಿಸಿದಂತೇ! ಆದ್ದರಿಂದ ಆತ ಮಾತನಾಡಲು ಬಾಯನ್ನೇ ತೆರೆಯದೇ ಫಲಕಗಳ ಮೂಲಕ ತನ್ನ ಮೆಚ್ಚುಗೆ ಸೂಚಿಸುವುದು ಸೂಕ್ತ. ಉಭಯ ಪಕ್ಷದವರು ತಾವೇ ವೆಚ್ಚ ಭರಿಸಿ 'ನೀನು ಈ ಸೀರೆಯಲ್ಲಿ ಬಹಳ ಮೋಹಕವಾಗಿ ಕಾಣುತ್ತಿ', 'ನಿನ್ನ ಕೇಶಕಲಾಪ ಅತ್ಯಾಕರ್ಷಕವಾಗಿದೆ' 'ನೀ ಮಾಡಿರುವ ಪದಾರ್ಥ ಅಮೃತತುಲ್ಯವಾಗಿದೆ' ಎಂಬಂಥ ನೂರಕ್ಕೆ ನೂರರಷ್ಟು ಪ್ರಶಂಸೆಯ ಕಾರ್ಡ್‌ಬೋರ್ಡ್ ಫಲಕ ಬರೆಯಿಸಿ ಮಾರುದ್ದ ಕೋಲುಗಳಿಗೆ ಸಿಗಿಸಿ ಅಂಜಾನಪ್ಪನ ವಶಕ್ಕೆ ಒಪ್ಪಿಸಿದರು. ಆ ಫಲಕಗಳಲ್ಲಿ 'ಆದರೆ'ಗೆ ಎಲ್ಲಿಯೂ ಆಸ್ಪದವಿಲ್ಲದ್ದರಿಂದ ಕೆಟ್ಟುನಿಂತ ಅಂಜಾನಪ್ಪ ಅನಘಾರವರ ಸಂಸಾರ ರಥ ಸುಗಮ ಪಥದಲ್ಲಿ ಸಾಗೀತು ಎಂದು ಪಂಚಾಯತಿದಾರರು ಬಯಸಿದ್ದರು, ಆದರೆ...!

ಆದರೆ ಇದರಿಂದ ಅನಘಾಳಿಗೆ ಒಂದು ತರಹದ ಅಸಮಾಧಾನ ಒಳಗಿಂದೊಳಗೆ ಕುದಿಯುತ್ತಿತ್ತು. ಬಾಯಿಬಿಟ್ಟ ಮುಕ್ತ ಪ್ರಶಂಸೆಗಾಗಿ ಹಪಹಪಿಸುತ್ತಿದ್ದ ಅನಘಾಳಿಗೆ ಮನೆಯಲ್ಲಿಯ ಈ 'ಮೌನಕ್ರಾಂತಿ' ಮತ್ತು 'ಬ್ಯಾನರ್ ಪ್ರದರ್ಶನ' ದಿಂದಾಗಿ ಒಂದು ತರಹ ಕಸಿವಿಸಿಯಾಗತೊಡಗಿತು.

ಒಂದ್ಸಲ ಅವಳು ಜಾರಿ ಬಿದ್ದಾಗ ಮುಂದುಟಿ ಹರಿದು, ಮುಖ ಮಂಗನಂತೆ ಊದಿಕೊಂಡಿತು.

'ರೀ ಹ್ಯಾಂಗ ಕಾಣ್ತೇನಿ, ನೋಡ್ರಿ' ಎಂದು ಅವಳು ಅಂದಾಗ ಆದರೆ ಅಂಜಾನಪ್ಪ 'ನೀನು ಬಹಳೇ ಮೋಹಕ ಕಾಣುತ್ತಿ' ಎಂಬ ಫಲಕ ಎತ್ತಿ ತೋರಿಸಬೇಕೆ?

'ರೀ ಸಾರಿನಾಗ ತಪ್ಪಿ ಎರಡು ಸಲ ಉಪ್ಪು ಹಾಕೀನಿ....' ಎಂದು ಅವಳು ಉಸುರುತ್ತಿದ್ದಂತೇ, 'ನೀ ಮಾಡಿದ ಪದಾರ್ಥ ರುಚಿಕರವಾಗಿದೆ' ಎಂಬ ಫಲಕವನ್ನು ಮುಖದ ಮುಂದೆ ಹಿಡಿದು ಒಂದು ತರಹ ಮುಖಭಂಗ ಮಾಡಿದ್ದ. ಆದರೆ ಅಂಜಾನಪ್ಪ, ಅಂದಿನಿಂದ ಅವಳು ಈತನ ಪ್ರಶಂಸೆಯೇ ಬೇಡವೆಂದು ಬಗೆದು ಕೇಳುವುದನ್ನೇ ಬಿಟ್ಟುಬಿಟ್ಟಳು. ಆದರೆ ಹೊಗಳಿಕೆಯನ್ನು ಕೇಳಬೇಕೆಂಬ ಅವಳ ಆಸೆ ಮಾತ್ರ ಒಳಗೊಳಗೆ ಕುದಿಯುತ್ತಿತ್ತು.


ಅನಘಾ ಹೆಳಲು ಹಾಕಿಕೊಳ್ಳುತ್ತ ಕನ್ನಡಿಯ ಮುಂದೆ ನಿಂತಿದ್ದಳು. ಅದೇ ಕಾಲಕ್ಕೆ ಮನೆಯ ಎದುರಿಗೆ ಭಿಕ್ಷುಕನೊಬ್ಬ 'ಮೂರು ದಿನದಿಂದ ಉಂಡಿಲ್ಲ. ಏನಾದರೂ ನೀಡಿರಿ...' ಎಂದು ದನಿ ತೆಗೆದ. ಅನಘಾ ಹೊರಬರುತ್ತ,

'ಲೋ ಭಿಕ್ಷೆ ಬೇಡಲು ನಿನಗೇನಾಗಿದೆ ಧಾಡಿ? ಕಡೆದರ ನಾಲ್ಕು ಆಳು ಆಗುವಷ್ಟು ಇದ್ದೀಯಾ ಭಿಕ್ಷೆ ಬೇಡಲು ನಾಚಿಕೆ ಆಗೂದಿಲ್ಲವೇ.....! ಎಂದು ಯದ್ವಾತದ್ವಾ ಕೂಗುತ್ತ ಗದರಿಸಿದಳು. ಭಿಕ್ಷುಕ ವಿಚಲಿತನಾಗದೆ ಅವಳನ್ನೇ ಎವೆ ಇಕ್ಕದೇ ನೋಡುತ್ತ,

'ಏನ್ಮಾಡೋದು ಮ್ಯಾಡಂ, ಒಬ್ಬೊಬ್ಬರ ದೈವವೇ ಹಾಗೆ ನೀಚವಿರುತ್ತದೆ. ಈಗ ನಿಮ್ಮದೇ ಉದಾಹರಣೆ ನೋಡಿರಲ್ಲ; ನಿಮ್ಮ ಈ ಸೌಂದರ್ಯದ ಮುಂದೆ ಆ ಐಶ್ವರ್ಯಾ ರಾಯ್, ಕರಿಷ್ಮಾ ಕಪೂರ್, ಶಿಲ್ಪಾ ಶೆಟ್ಟಿಗಳನ್ನೆಲ್ಲಾ ನಿವಾಳಿಸಿ ಎಸೆಯಬಹುದು. ಆದರೆ ಅವರ ಅದೃಷ್ಟ; ಅಲ್ಲಿ ಬಾಲಿವುಡ್‌ನಲ್ಲಿ ಅವರು ಕೋಟ್ಯಾಂತರ ರೂಪಾಯಿ ಗಳಿಸುತ್ತ ವೈಭವದಿಂದ ಮೆರೆಯುತ್ತಿದ್ದಾರೆ. ನೀವು ಇಲ್ಲಿ ಮನೆ, ಮಕ್ಕಳು ಅಂತ ಸಂಸಾರದ ಚಕ್ರದಾಗ ಸಿಕ್ಕೀರಿ......' ಎಂದಂದ. ಹೊರಡಲು ಉದ್ಯುಕ್ತನಾದ, ಅನಘಾ ಕೂಡಲೇ,

'ಇರು.. ಇರು' ಏನಾದರೂ ಉಳಿದದೇನೋ ನೋಡಿ ಹಾಕ್ತೀನಿ' ಎಂದಂದವಳೇ ಅಡುಗೆ ಮನೆಗೆ ಧಾವಿಸಿದಳು. ಅಲ್ಲಿಯೇ ಮೂಲೆಯಲ್ಲಿ ಪತ್ರಿಕೆ ಓದುತ್ತ ಕುಳಿತಿದ್ದ ಅಂಜಾನಪ್ಪನಿಗೆ ಯಾಕೋ ಏನೋ ಸಿಟ್ಟು ಬಂದಿತು. ಆದರೆ ಇಂಥ ಸಂದರ್ಭದಲ್ಲಿ ಯಾವ ಫಲಕ ಎತ್ತಿ ತೋರಬೇಕೆಂಬುದು ತಿಳಿಯದೇ ಆತ ಸುಮ್ಮನುಳಿದ. ಆದರೆ ಸುಮ್ಮನುಳಿದ ಆತನ ಬಾಯಲ್ಲಿಯ ಹಲ್ಲುಗಳು ಕಟಕಟನೆ ಕಡಿಯುತ್ತಿದ್ದವು! ಫಲಕದ ಕೋಲು ಎತ್ತಿ ಆ ಭಿಕ್ಷುಕನ ತಲೆಗೆ ಇಕ್ಕರಿಸಲೇ ಎಂದು ಯೋಚಿಸಿದ. ಆದರೆ ಕಾರ್ಡು ಬೋರ್ಡು ಹಾಳಾದೀತಲ್ಲ ಎಂದು ಬಗೆದು ಕೈಚೆಲ್ಲಿ ಕುಳಿತುಕೊಂಡ. ■

ವರ್ಣನೆ



ನನ್ನವಳು
ನಡೆದರೆ
ಹಂಸದಂತೆ
ಕುಣಿದರೆ
ನವಿಲಂತೆ
ಹಾಡಿದರೆ
ಕೋಗಿಲೆಯಂತೆ
ಎಂದು ಹೊಗಳುತ್ತಿದ್ದೆ
ಸಾರಿ ಹೋದಲೊಮ್ಮೆ
ಅವಳು
ರಂಗೀನ
ಚಿಟ್ಟೆಯಂತೆ

- ವನಚೇತನ.

ಕವನಗಳು

● ಎಂ.ಪಿ. ಮನೋಹರ ಚಂದ್ರನ್



ಭವಿಷ್ಯ

ಇನ್ನು ಮುಂದೆ ಕಾಲದ ಹಾಳೆ ತಿರುವಿದಂತೆ
ವಸಂತಗಳು ಬರುವುದಿಲ್ಲ. ನೆತ್ತರಿಗೆ
ಬಂಗಾರದ ಬಣ್ಣ. ಬೀಜ ಮೊಳೆತು
ಎಲ್ಲೆಲ್ಲೂ ಕಾಂಕ್ರೀಟ್ ಹೆಮ್ಮರ. ಸುತ್ತೆಲ್ಲ
ಕಾರು ಬಸ್ಸು ಇತ್ಯಾದಿ ಪ್ಲಾಸ್ಟಿಕ್, ಲೋಹ.
ಮಾಂಸಕ್ಕೆ ಬೆಲೆಯಿಲ್ಲ ರಂಗುಗಳೆಲ್ಲ
ಕಪ್ಪಲ್ಲಿ ಲೀನ.


ಎಳೆ ಚಿಗುರಿನ ಹಸಿರು, ಮರಗಳ ದಟ್ಟೆಲೆಗಳ
ಮಧ್ಯೆ ತೂರುವ ತಂಗಾಳಿಯ ಸಂಗೀತ,
ಚೆಲ್ಲಿದ ಹಾಲು ಬೆಳದಿಂಗಳು, ಕೆರೆದಂಡೆಯ
ಕೆನೆ ಮೊಸರಿನ ಭೋಜನ, ಪ್ರೇಮದ
ಬಳೆ ಸದ್ದು, ತಾಯಿಭಾಷೆಯ ತೊದಲ ಮಾತು
ಈ ಸೊಬಗುಗಳೆಲ್ಲ ಕನಸು. ■

ಬದುಕು



ಸಾಪೇಕ್ಷ ಬದುಕಿನ ಎದುರಾಗುವ
ಸವಾಲುಗಳಿಗೆ ಸುವರ್ಣ ಸೇತುವೆ
ಅರ್ಥ ವ್ಯವಹಾರ, ಅದುವೆ ಕೃಷ್ಣ ರಾಯಭಾರ.

ಪ್ರಜ್ಞೆ ಸರುಕಿನ ಕೊರತೆ. ನಾಗರಿಕತೆ
ಬತ್ತಲೆ. ಥಳಕು ಬೆಳಕು ಬದುಕು.
ಹಾಲು ಹಸುಳೆಗಳು ಅಮುಲ್ ಬೇಬಿಗಳು.
ಉದ್ದಕ್ಕೂ ಮಲಗಿದ ಕಪ್ಪು ಬೀದಿ. ಅಕ್ಕ
ಪಕ್ಕದಲ್ಲಿ ಬಿಳೀ ಕಟ್ಟಡಗಳು ಗಗನ ಚುಂಬಿಸಿ
ಬೀದಿ ಇನ್ನಷ್ಟು ಕಪ್ಪು.
ಕಪ್ಪಿನಲ್ಲಿ ಕರಗಿ ನಿದ್ರಿಸುವ ಹೆಪ್ಪುಗಟ್ಟಿದ
ಹೃದಯಗಳು.
ಬಿಳೀ ಮಹಡಿಗಳಲಿ ಬಾರದ ನಿದ್ರೆಯ
ಡನ್‌ಲಪ್ಪಿಗಳು. ■



ಕಡಲ ಘರ್ಜನೆಯ ಆಚೀಚೆ

ಭಾರತದ ವಿಸ್ತಾರ ಕಡಲ ತೀರ ಅತ್ಯಂತ ಸೊಬಗಿನದು, ಕಡಲ ಆಹಾರ ಉತ್ಪತ್ತಿಯ ಭಂಡಾರ, ಆದರೆ ಅದರಲ್ಲಿ ಸೇರುವ ನದಿಗಳು ಮಾತ್ರ ಮಲಿನ.

• ಶ್ರೀನಿವಾಸ ಜೋಕಟ್ಟೆ
ಜೋಕಟ್ಟೆ ಪೋಸ್ಟ್, ಬಜ್‌ಪೆ ಮೂಲಕ,
ಮಂಗಳೂರು ತಾಲೂಕು,
ದ.ಕ ಜಿಲ್ಲೆ-574 173.

ದೃಶ್ಯ-1

ಭಾರತೀಯರು ಸೌಭಾಗ್ಯಶಾಲಿಗಳಾಗಿದ್ದಾರೆ. ಕಾರಣ ನಮ್ಮ ಬಳಿ 7516.5 ಕಿಲೋಮೀಟರ್ ದೀರ್ಘದ ಸಮುದ್ರತೀರ ಇದೆ. ಗುಜರಾತ್‌ನ ದ್ವಾರಕಾದಿಂದ ಪಶ್ಚಿಮ ಬಂಗಾಳದಲ್ಲಿ ದೀಘಾ ತನಕ ಸಾಗರದ ಸೊಬಗು ಕಾಣಬಹುದು. ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳ, ಗೋವಾ ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶ, ತಮಿಳುನಾಡು, ಒರಿಸ್ಸಾ, ಪ.ಬಂಗಾಳ ರಾಜ್ಯಗಳು ಕರಾವಳಿ ತೀರವನ್ನು ಹೊಂದಿವೆ.

ಆಶ್ಚರ್ಯದ ಮಾತೆಂದರೆ ಸಾಗರದ ಅಲೆಗಳು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ನಮ್ಮನ್ನು ಆಕರ್ಷಿಸುತ್ತವೆ. ಮುಂಬಯಿ, ಗೋವಾ, ಪಾಂಡಿಚೇರಿ, ಪುರಿ, ತ್ರಿವೇಂಡ್ರಮ್, ಮಂಗಳೂರು, ಕನ್ಯಾಕುಮಾರಿ, ಮದ್ರಾಸ್, ದೀಘಾ.... ಇವೆಲ್ಲ ಸಮುದ್ರ ತೀರಗಳು ವಿಶ್ವ ಪ್ರವಾಸ ನಕ್ಷೆಯಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿವೆ. ಕುಂದಾಪುರದ ಮರವಂತೆ ಬಳಿ ಸಮುದ್ರ ತೀರಕ್ಕೆ ತಾಗಿಕೊಂಡೇ ಇರುವ ರಾಜಮಾರ್ಗದಲ್ಲಿ ವಾಹನಗಳಲ್ಲಿ ಕೂತು ಓಡಾಡುವಾಗ ಆ ರಮ್ಯ ದೃಶ್ಯ ಎಂಥವರನ್ನೂ ಮೋಹಗೊಳಿಸದೆ ಇರದು.

ಸಮುದ್ರದ ತೆರೆಗಳಿಗೆ ಅದರದೇ ಆದ ಸಂಗೀತವಿದೆ. ಈ ಸಂಗೀತ ಕೇಳಲೆಂದೇ ಎಲ್ಲೆಲ್ಲಿಂದಲೋ ಜನ ಬರುತ್ತಾರೆ. ಈ ಸುಖವನ್ನು ಭಾರತದ ಯಾವುದೇ ಸಮುದ್ರ ತೀರದಲ್ಲಿ ಕೂತು ಆನಂದಿಸಬಹುದು. ಮುಂಬಯಿ ಮಹಾನಗರದಲ್ಲೇ ಸುಪ್ರಸಿದ್ಧ ಏಳೆಂಟು ಬೀಚ್‌ಗಳಿವೆ. ಸಂಜೆಯ ಹೊತ್ತಿಗೆ ಇಲ್ಲಿ ಕಿಕ್ಕಿರಿದ ಜನಸಂದಣಿ ಇರುತ್ತದೆ. ಗಣೇಶೋತ್ಸವದ ಸಂದರ್ಭದಲ್ಲಂತೂ ಬೀಚ್ ತುಂಬಾ ವಿಸರ್ಜಿಸಲ್ಪಟ್ಟ ಗಣೇಶ ಮೂರ್ತಿಗಳು ರಾಶಿ ರಾಶಿ ಬಿದ್ದಿರುತ್ತವೆ. ಒಂದೆರಡು ದಿನ ಇವುಗಳನ್ನು ಸ್ವಚ್ಛ ಮಾಡುವುದೇ ಮಹಾನಗರ ಪಾಲಿಕೆಯ ಕೆಲಸವಾಗಿರುತ್ತದೆ.

ಬೆಳಗ್ಗಿನ ಹೊತ್ತು ಬಂಗಾಳಕೊಲ್ಲಿಯ ನೀರು ಬಣ್ಣ ಬದಲಾಯಿಸುತ್ತಾ ಬಂದಂತೆ ಮಧ್ಯಾಹ್ನದ ನಂತರ ಅರಬ್ಬೀ ಸಮುದ್ರದ ನೀರು ತನ್ನ ಬಣ್ಣ ಬದಲಾಯಿಸುತ್ತದೆ. ಸೂರ್ಯ ಉದಯವಾಗುವಾಗಲೂ ಕೆಂಪು ಬಣ್ಣ ಮುಳುಗುವಾಗಲೂ ಬಣ್ಣ ಕೆಂಪು. ಇನ್ನು ಸಮುದ್ರ ತೀರದ ಬಳಿ ಬಂಡೆಗಳಿದ್ದರಂತೂ ತೆರೆಗಳು ಅಪ್ಪಳಿಸುವ ದೃಶ್ಯ ಅದ್ಭುತ. ಹತ್ತು ಅಡಿಗೂ ಹೆಚ್ಚು ಎತ್ತರ ಅದು ಹಾರಬಲ್ಲುದು.

ರಾತ್ರಿಗಂತೂ ಸಮುದ್ರದ ಚೀತ್ಕಾರ ಇನ್ನಷ್ಟು ಜೋರಾಗಿ ಕೇಳಿ ಬರುತ್ತದೆ. ಸಮುದ್ರ ತೀರದ ಬಳಿ ದೇವಸ್ಥಾನಗಳಿದ್ದರಂತೂ ಯಾತ್ರಾರ್ಥಿಗಳಿಗೆ ಇನ್ನಷ್ಟು ಸಂತೋಷದ ಸಂಗತಿಯಾಗುವುದು. ಮುಂಬಯಿಯ ಮಹಾಲಕ್ಷ್ಮಿ ಮಂದಿರದ ಹಿಂಬದಿಯಲ್ಲಿರುವ ಬಂಡೆಕಲ್ಲುಗಳಲ್ಲಿ ಕೂತು ಅರಬ್ಬೀ ಸಮುದ್ರದ ಸೌಂದರ್ಯ, ಅದರಲ್ಲೂ ಸೂರ್ಯಾಸ್ತದ ಸುಂದರ ದೃಶ್ಯ ವೀಕ್ಷಿಸುವುದರ ಆನಂದವೇ ಬೇರೆ. ಮಂಗಳೂರಿನ ಸೋಮೇಶ್ವರ ದೇವಸ್ಥಾನದ ಪಕ್ಕದ ಬಂಡೆಕಲ್ಲುಗಳ ಮೇಲೆ ಸಮುದ್ರದ ಭೋರ್ಗರೆತದ ಆನಂದ ಸವಿಯಬಹುದಾಗಿದೆ.

ಮುಂಬಯಿಯ ಗೇಟ್‌ವೇ ಆಫ್ ಇಂಡಿಯಾದಿಂದ ಎಲಿಫೆಂಟಾ ಗುಹೆಯತ್ತ ಸ್ಟೀಮರ್‌ನಲ್ಲಿ ಹೋಗಬೇಕು. ಸುಮಾರು ಒಂದು ಗಂಟೆ



ದಾರಿಯ ಈ ಸಮುದ್ರ ಪ್ರಯಾಣ ಬಹು ರೋಮಾಂಚಕಾರಿ. (ಮಲ್ಪೆಯ ಸೈಂಟ್ ಮೇರೀಸ್ ದ್ವೀಪಕ್ಕೆ ಹೋದಂತೆ)

ದಕ್ಷಿಣಕ್ಕೆ ಬಂದರೆ ಕನ್ಯಾಕುಮಾರಿಯಲ್ಲಿ ಬಂಡೆಕಲ್ಲುಗಳ ನಡುವೆ ಸ್ವಾಮಿ ವಿವೇಕಾನಂದರ ಸ್ಮಾರಕದವರೆಗೂ ಸ್ಟೀಮರನಿಂದ ತಲುಪಬಹುದು. ಎಳ್ಳಮವಾಸ್ಯೆಯ ದಿನ ಸಮುದ್ರ ಸ್ನಾನಕ್ಕಾಗಿ ಅದೆಷ್ಟೋ ಸಾವಿರಾರು ಜನ ತೀರದಲ್ಲಿ ಗುಂಪು ಸೇರುತ್ತಾರೆ.

ಭಾರತವನ್ನು ಮೂರು ಸಾಗರಗಳು ಸುತ್ತುವರಿದಿವೆ. ಅರಬ್ಬೀ ಸಮುದ್ರ, ಹಿಂದು ಮಹಾಸಾಗರ ಮತ್ತು ಬಂಗಾಳ ಕೊಲ್ಲಿ. ಈ ಮೂರು ಸಾಗರಗಳ ಸಂಗಮ ಸ್ಥಳದಲ್ಲಿ ಸಮುದ್ರ ತೀವ್ರ ಗತಿಯಲ್ಲಿ ಕಂಡುಬರುತ್ತದೆ. ವೇಗವಾಗಿ ಅಲೆಗಳನ್ನು ಬಂಡೆಕಲ್ಲುಗಳಿಗೆ ಅಪ್ಪಳಿಸುತ್ತದೆ.

ಕನ್ಯಾಕುಮಾರಿಯಿಂದ ಸುಮಾರು 83 ಕಿಲೋಮೀಟರ್ ಮೊದಲಿಗೆ ತ್ರಿವೇಂಡ್ರಮ್‌ನ ವಿಶ್ವ ಪ್ರಸಿದ್ಧ ಕೋವಲಮ್ ಸಮುದ್ರ ತೀರವಿದೆ. ನಗರದಿಂದ 15 ಕಿಲೋಮೀಟರ್ ದೂರದಲ್ಲಿರುವ ಈ ಅರ್ಧಚಂದ್ರಾಕಾರ ತೀರದಲ್ಲಿ ದಿನವಿಡೀ ಜನ ಇದ್ದೇ ಇರುತ್ತಾರೆ. ಕರಾವಳಿ ತೀರದುದ್ದಕ್ಕೂ ತೆಂಗಿನ ಹಸಿರು ಮರಗಳು. ಅಂತೆಯೇ ಗೋಕರ್ಣದ ಓಂ ಬೀಚ್ ಕೂಡಾ ಪ್ರಸಿದ್ಧಿ ಇದೆ. ಮುಂಬಯಿ ಸಮೀಪದ ಅಕ್ಸಾ ಬೀಚನ್ನು 'ಸಾವಿನ ಬೀಚ್' ಎಂದೂ ಕರೆಯುವುದಿದೆ. ಇಲ್ಲಿ ಈಜಲು ಹೋದ ಹೆಚ್ಚಿನವರು ಸಾವಿಗೀಡಾಗುತ್ತಾರೆ.

ಪಶ್ಚಿಮ ಕರಾವಳಿಯಲ್ಲಿ ಗೋವಾ ಬೀಚ್‌ಗೂ ಅಷ್ಟೇ ಮಹತ್ವವಿದೆ. ಪ್ರವಾಸ ಸ್ಥಳದಲ್ಲಿ ಇದು ಮೊದಲನೆಯ ಸ್ಥಾನದಲ್ಲಿದೆ. ಪ್ರಪಂಚದಾದ್ಯಂತ ಈ ಸಮುದ್ರ ತೀರ ಬಹಳ ಪ್ರಸಿದ್ಧಿ ಇದೆ. ಭಾರತಕ್ಕೆ ಬರುವ ಯಾವನೇ ವಿದೇಶಿ ಗೋವಾ ಅಗತ್ಯ ನೋಡುತ್ತಾನೆ. ಗೋವಾದ ಒಂದು ದೊಡ್ಡ ಭಾಗ ನೀರಲ್ಲಿ ಮುಳುಗಿದೆ.

ಕೇರಳದಲ್ಲಿ ಅಲ್ಲಲ್ಲಿ ನುಸುಳಿರುವ 'ಬ್ಯಾಕ್ ವಾಟರ್ಸ್' ಇನ್ನಷ್ಟು ಸೌಂದರ್ಯ ಹೆಚ್ಚಿಸಿದ್ದು ಹಸಿರು ಸಮುದ್ರ ಆಗಿದೆ ಈ ರಾಜ್ಯ.

ಪೂರ್ವಕ್ಕೆ ಹೋದರೆ ಪುರಿ ಸಾಗರತೀರ ಹೆಚ್ಚು ಸ್ವಚ್ಛವಾಗಿದೆ. ಇಲ್ಲಿಂದ 40 ಕಿಲೋಮೀಟರ್ ಮುಂದಕ್ಕೆ ಕೋಣಾರ್ಕದ ವಿಶ್ವಪ್ರಸಿದ್ಧ ಸೂರ್ಯ ಮಂದಿರ ಸಿಗುವುದು. ಪುರಿಯ ಚಿಲ್ಕಾ ಸರೋವರ ಮೊದಲು ಬಂಗಾಳಕೊಲ್ಲಿಯದ್ದೇ ಭಾಗ ಆಗಿತ್ತು. ನಂತರ ಮರಳು ರಾಶಿ ಬಿದ್ದು ಸರೋವರ ಎನಿಸಿದೆ. ಚೆನ್ನೈನ ಮರೀನಾ ಬೀಚ್ ಕೂಡಾ ಅಷ್ಟೇ ಪ್ರಸಿದ್ಧಿ ಇದೆ. ರಾಮನಾಥಪುರಂ, ತೂತಿಕೊರಿನ್, ತಂಜಾವೂರು.... ಇಲ್ಲಿಯ ಸಮುದ್ರ ತೀರಗಳೂ ಆಕರ್ಷಣೀಯವಾಗಿವೆ.


ಫೋಟೋ : ರಾಮಕೃಷ್ಣ ಭಟ್

ಒಟ್ಟಾರೆ ಸಾಗರದ ಪ್ರಪಂಚವೇ ಪ್ರತ್ಯೇಕವಾದ ಸ್ಥಾನ ಗಳಿಸಿದೆ. ಅದರ ಸೌಂದರ್ಯ ಅದ್ಭುತ.

ನೂರೈವತ್ತು ವರ್ಷಗಳ ಹಿಂದೆ ಮುಂಬಯಿಯಲ್ಲಿ ನಲ್ಲಿ ಇರಲಿಲ್ಲ. ಇನ್ನು ನೂರೈವತ್ತು ವರ್ಷಗಳ ನಂತರ ನಲ್ಲಿ ಇದ್ದರೂ ಅದರಲ್ಲಿ ನೀರು ಇಳಿಯುವುದೇ? ಎಂಬ ಪ್ರಶ್ನೆ ಹಾಕಲಾಗುತ್ತಿದೆ. ಇದೀಗ ಮೂರೂ ದಿಕ್ಕುಗಳಲ್ಲಿ ನೀರಿನಿಂದ ಆವೃತವಾದ ಮುಂಬಯಿಯಲ್ಲಿ ಅರಬ್ಬೀ ಸಮುದ್ರದ ಯಾವ ಯಾವ ಭಾಗಗಳಲ್ಲಿ ಕುಡಿಯಲು ಯೋಗ್ಯವಾದ ನೀರು ಸಿಗುತ್ತದೆ ಎಂಬ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ.

ದೃಶ್ಯ 2

ಸಮುದ್ರ ತೀರದಲ್ಲಿ ಕೊಳಕು ರಾಶಿ

ವಿಪರ್ಯಾಸವೆಂದರೆ ಮಹಾನಗರಗಳಿಗೆ ತಾಗಿಕೊಂಡಿರುವ ಹೆಚ್ಚಿನ ಸಮುದ್ರ ತೀರಗಳು ಕೊಳಕಿನಿಂದ ತುಂಬಿವೆ. 'ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (ಡಬ್ಲ್ಯು.ಡಬ್ಲ್ಯು.ಎಫ್) 1997ರಿಂದ ಮುಂಬಯಿಯ ಸಮುದ್ರ ತೀರಗಳ ಸ್ವಚ್ಛತಾಕಾರ್ಯಕ್ಕೆ ಇಳಿದಿದೆ. ಇದು ಐದು ವರ್ಷಗಳ ಕಾಲ ನಡೆಯಲಿದೆ. ಹಾಗಿದ್ದರೆ ಇಷ್ಟೊಂದು ಕೊಳಕೇ?

ಹೌದು, ಸಮುದ್ರ ತೀರದ ಪರಿಸರ ಸ್ವಚ್ಛ ಇರಿಸುವ ಬಗ್ಗೆ ಯಾರೂ ಹೆಚ್ಚಿನ ಕಾಳಜಿ ಇರಿಸಿದಂತಿಲ್ಲ. ಪರಿಸರ ಸುರಕ್ಷಾ ಕಾನೂನಿನಂತೆ 1991ರಲ್ಲಿ ಜಾರಿಗೊಳಿಸಿದ ಕೋಸ್ಟಲ್ ರೆಗ್ಯುಲೇಶನ್ ಜೋನ್ (ಸಿ.ಆರ್.ಜೆಡ್) ನೋಟಿಫಿಕೇಶನ್ ಹೊರತಾಗಿ ಸರಕಾರವು ಈ ತನಕ ಇನ್ಯಾವ ಉಪಾಯಗಳನ್ನೂ ಕೈಗೆತ್ತಿಕೊಂಡಿಲ್ಲ. ಈ ಜಾಹೀರಾತು ಸಮುದ್ರ ತೀರವನ್ನು ಅಪಾಯಕಾರಿ ಚಟುವಟಿಕೆಗಳಿಂದ ಪಾರಾಗಿಸುವುದಾಗಿ ಹೇಳುತ್ತದೆ. ನಂತರ ಸರಕಾರವು ಓಶಿಯನ್ ರೆಗ್ಯುಲೇಶನ್ ಜೋನ್ (ಓ.ಆರ್.ಜೆಡ್) ಜಾರಿಗೊಳಿಸಿದೆ. ಸಂಯುಕ್ತ ರಾಷ್ಟ್ರ ಸಂಘ ಪರಿಸರ ಕಾರ್ಯಕ್ರಮದ ವರದಿಯೊಂದರ ಪ್ರಕಾರ ಸಮುದ್ರ ತೀರ ಹೆಚ್ಚೆಚ್ಚು ಕೊಳಕುಮಯ ಆಗುತ್ತಿದೆ.

ಪೃಥ್ವಿಯ ಮೂರನೇ ಎರಡು ಪಾಲು ನೆಲ ಸಾಗರಗಳಲ್ಲಿ ಮುಳುಗಿದೆ. ಹಾಗಿರುವಾಗ ಮೂರನೇ ಒಂದು ಭಾಗದಲ್ಲಿರುವ ಜನ ಎಸೆದ ಕೊಳಕುಗಳು ಸಾಗರವನ್ನು ಪ್ರಭಾವಿತಗೊಳಿಸಲು ಸಾಧ್ಯವೇ? ಆದರೆ ಇದು ನಿಜ. ವಿಷಯುಕ್ತ ರಾಸಾಯನಿಕಗಳಿಂದ ಹಿಡಿದು ಸಾಮಾನ್ಯ ಕೊಳಕುಗಳೂ ಇಂದು ಸಮುದ್ರವನ್ನು ಸೇರುತ್ತಿವೆ.

ಭೂಮಿಯಲ್ಲಿ ಉತ್ಪನ್ನವಾಗುತ್ತಿರುವ ಹೆಚ್ಚಿನ ಪ್ರಕಾರದ ಕಸಕಡ್ಡಿಗಳು ಕೊನೆಗೂ ಸಮುದ್ರವನ್ನೇ ಸೇರುತ್ತದೆ. ಇಂದು ಸಮುದ್ರ ತೀರದಲ್ಲಿ ಜನಸಂಖ್ಯೆ ಏರುತ್ತಿದೆ. ಉದ್ಯಮಗಳು ಸ್ಥಾಪನೆಯಾಗುತ್ತಿವೆ. ಹೀಗಾಗಿ ವಾಯುಮಾಲಿನ್ಯ, ಪರಿಸರ ಮಾಲಿನ್ಯ ದಿನೇ ದಿನೇ ಅಧಿಕವಾಗುತ್ತಿದೆ.

ಬ್ಯಾಕ್ಟೀರಿಯಾಗಳಿಂದ ಉಂಟಾಗುವ ಮಾಲಿನ್ಯ ತೀರಕ್ಕಷ್ಟೇ ಸೀಮಿತವಾಗಿದ್ದರೆ ರಾಸಾಯನಿಕ ಪದಾರ್ಥಗಳ ಅವಶೇಷಗಳು ಸಮುದ್ರವನ್ನು ಸೇರಿ ಅಲ್ಲಿರುವ ಜೀವಜಂತುಗಳಿಗೆ ಮಾರಕವಾಗಬಲ್ಲುದು. ಈ ವರೆಗೆ ಕಂಡುಹಿಡಿದ ಸಂಶೋಧನೆಯಂತೆ ಪ್ರಾಣಿಗಳ ಮುಖ್ಯ 33 ವರ್ಗಗಳು ಪೃಥ್ವಿಯಲ್ಲಿದ್ದರೆ ಇವುಗಳಲ್ಲಿ 32ನ್ನು ಸಮುದ್ರದಲ್ಲೂ ಕಂಡುಕೊಳ್ಳಬಹುದು. ಆದರೆ ಇನ್ನೂ 15 ವರ್ಗಗಳಂತೂ ಸಮುದ್ರದ ಹೊರತು ಭೂಮಿಯಲ್ಲಿ ಇಲ್ಲವೇ ಇಲ್ಲ. ಆಳ ಸಾಗರದಲ್ಲಿ ಸುಮಾರು ಸಾವಿರಾರು ಜೀವಜಂತುಗಳು ಇನ್ನೂ ಇದ್ದು ಅವುಗಳ ಸರಿಯಾದ ಮಾಹಿತಿ ತಜ್ಞರಿಗಿನ್ನೂ ಕಂಡು ಹುಡುಕಲಾಗಿಲ್ಲವಂತೆ. ಈಗೀಗ ಸಮುದ್ರ ಪ್ರಾಣಿಗಳಿಂದ ಔಷಧಿ ತಯಾರಿಸುವ ಕುರಿತೂ ಸಂಶೋಧನೆಗಳು ಹೆಚ್ಚುತ್ತಿವೆ. ಅಂತೆಯೇ ಇವುಗಳ ಮಹತ್ವ ನಾವು ಅರಿತುಕೊಳ್ಳಬೇಕಾಗಿದೆ.

ಭೌಗೋಳಿಕವಾಗಿ ಭಾರತವು ಪ್ರಪಂಚದ ದೊಡ್ಡ ದೇಶದಲ್ಲಿ ಏಳನೆಯ ಸ್ಥಾನದಲ್ಲಿದೆ. ಇಲ್ಲಿ 113 ಸ್ವತಂತ್ರ ಮತ್ತು ಸಾವಿರಾರು ಉಪನದಿಗಳು ಹರಿಯುತ್ತವೆ. ದೇಶದ ಶೇಕಡಾ 25 ಜನರು ಸಮುದ್ರ ತೀರದಲ್ಲೇ ವಾಸಿಸುತ್ತಾರೆ. ಪಾಂಡಿಚೇರಿ, ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹಗಳಲ್ಲಿದ್ದ ಜನರೂ ಇದರಲ್ಲಿ ಬರುತ್ತಾರೆ.



ದೇಶದಲ್ಲಿ ಉತ್ಪನ್ನವಾಗುವ ಮಾಲಿನ್ಯದ ಬಹುಭಾಗ ಸಾಗರವನ್ನೆ ಸೇರುವುದು ಎಂದಿದೆ ಸಮೀಕ್ಷೆ.


ನದಿಗಳಿಂದ ಬರುವ ಕೊಳಕುಗಳು, ನಗರದ ಕಸಕಡ್ಡಿಗಳು, ಉದ್ಯಮಗಳು ತ್ಯಾಜ್ಯ ವಸ್ತುಗಳು, ಬಂದರುಗಳ ಕೊಳಕು, ಶಿಪ್‌ಯಾರ್ಡ್ ಮತ್ತು ನೌಕಾಸೇನೆಗಳಿಂದ ಹರಿದು ಬರುವ ಮಾಲಿನ್ಯಗಳು ಸಾಗರ ತೀರಗಳ ಕಡಲು ಅಂದ ಕೆಡಲು ಬಹುಪಾಲು ಕಾರಣವಾಗಿದೆ. ಇನ್ನೊಂದೆಡೆ ಕಡಲುಗಳ್ಳರು ಮತ್ತೆ ಸುದ್ದಿಯಾಗುತ್ತಿದ್ದಾರೆ.

ಸಮುದ್ರ ನಮ್ಮ ಜೀವನದ ಆಧಾರವೂ ಹೌದು. ಇದು ಕಲುಷಿತಗೊಂಡರೆ ಮಾನವ ಅಸ್ತಿತ್ವದ ಸಂಕಟಕ್ಕೆ ಕಾರಣವಾಗುವುದು. ಗಂಗಾನದಿಯ ಸ್ವಚ್ಛತಾ ಕಾರ್ಯ ಆಗಾಗ ನಾವು ಕೇಳುತ್ತೇವೆ. ಆದರೂ ಗಂಗಾನದಿಯ ಕೊಳಕು ಹೆಚ್ಚುತ್ತಲೇ ಇದೆ.

ಸಮೀಕ್ಷೆಯ ಪ್ರಕಾರ ಇಂದು ನಮ್ಮ ಸಮುದ್ರ ತೀರಗಳಲ್ಲಿ 30ರಿಂದ 40 ಪ್ರತಿಶತ 'ಡೆಡ್ ಜೋನ್' ಎಂದು ಕರೆಸಿಕೊಂಡಿದೆ. ಪ್ರತಿವರ್ಷ 25 ಲಕ್ಷಕ್ಕೂ ಹೆಚ್ಚು ಪ್ಲಾಸ್ಟಿಕ್ ಚೀಲವನ್ನು ಸಮುದ್ರಕ್ಕೆ ಎಸೆಯಲಾಗುತ್ತಿದೆ. ತೀರ ಬಳಿಯಲ್ಲಿರುವ 30 ಪ್ರತಿಶತಕ್ಕೂ ಹೆಚ್ಚು ಅರಣ್ಯಗಳು ಕಡಿಯಲ್ಪಟ್ಟಿವೆ.

1991ರಲ್ಲಿ ಭಾರತದಲ್ಲಿ ಸುಮಾರು 60 ಲಕ್ಷ ಟನ್ ಮತ್ಸ್ಯ ಉತ್ಪಾದನೆಯಾಗಿದ್ದರೆ ಇದೀಗ 20 ಲಕ್ಷ ಟನ್‌ಗೆ ಇಳಿದಿದೆ. 2010ನೇ ಇಸವಿಯಲ್ಲಿ ಇದು 5 ಲಕ್ಷ ಟನ್‌ಗೂ ಇಳಿಯುವ ಸಾಧ್ಯತೆಗಳು ಕಂಡುಬಂದಿವೆ. ಇನ್ನೊಂದೆಡೆ ಆಳ ಸಮುದ್ರದಲ್ಲಿ ಬಹು ಅಮೂಲ್ಯ ಖನಿಜಗಳಿರುವುದೆಂದು ನಂಬಲಾಗಿದೆ. ಇದರ ಹುಡುಕಾಟ ಕೆಲಸಗಳೂ ಮುಂದುವರಿಯುತ್ತಿದೆ. ಭಾರತಕ್ಕೆ 1987ರಲ್ಲಿ ವಿಶೇಷ ಅನುಮತಿ ದೊರೆತದ್ದು ಹಿಂದೂ ಮಹಾಸಾಗರ ಕ್ಷೇತ್ರದಲ್ಲಿ ಒಂದೂವರೆ ಲಕ್ಷ ವರ್ಗ ಕಿಲೋಮೀಟರ್ ಕ್ಷೇತ್ರವು ಲಭಿಸಿದೆ. ಇದರಲ್ಲಿ ಭಾರತ ಏನು ಮಾಡಲೂ ಸ್ವತಂತ್ರವಾಗಿದೆ. ಒಂದು ಅನುಮಾನದಂತೆ ಭಾರತೀಯ ಕ್ಷೇತ್ರದಲ್ಲಿ ಸುಮಾರು 38 ಕೋಟಿ ಟನ್ ಬಹುಮೂಲ್ಯ ಲೋಹಗಳು ಹುದುಗಿವೆಯಂತೆ. ಈ ಖನಿಜಗಳಲ್ಲಿ ತಾಮ್ರ ಮೂವತ್ತು ಲಕ್ಷಟನ್, ನಿಕ್ಕೆಲ್ 32 ಲಕ್ಷ ಟನ್, ಕೋಬಾಲ್ಟ್ 5 ಲಕ್ಷ ಟನ್ ಮತ್ತು ಮ್ಯಾಂಗನೀಸ್ ಅದಿರು 73 ಲಕ್ಷ ಟನ್ ಇರುವ ಅನುಮಾನ ಪಡಲಾಗಿದೆ. ಇವುಗಳನ್ನು ವಿಶೇಷ ಪ್ರಕಾರದ ಪೈಪ್‌ಗಳ ಮೂಲಕ ಸಮುದ್ರದಿಂದ ಮೇಲಕ್ಕೆ ತರಬೇಕಾಗಿದೆ. ಭಾರತ ಜರ್ಮನಿಯ ಸಹಾಯದಿಂದ ಕೆಲಸಕ್ಕೆ ಮಾತುಕತೆ ನಡೆಸಿದೆ.

ಅನಿವಾರ್ಯತೆ



ಕೇಳೆ
ಜೀವ ಜೀವದ ಗೆಳತಿ
ನನ್ನಂತರಂಗದ
ಕೊರಗ....
ಅಕ್ಕನ ಮಗಳ ಅನಿವಾರ್ಯತೆ
ಬೇರ್ಪಡಿಸುತಿದೆ
ನನ್ನನ್ನು ನಿನ್ನಿಂದ
ಹೊರಗ....

- ಜಯದೇವ ಗಂಜಿಹಾಳ,
ರಾಜೂರ.

ನಮ್ಮ ಬಳಿ ಸಮುದ್ರ ಜಲ ಶುದ್ಧೀಕರಣದ ಪ್ರಣಾಳಿ ಇಲ್ಲ. ಇದನ್ನು ತಯಾರಿಸಲೂ ಸಾಕಷ್ಟು ಬಂಡವಾಳ ಬೇಕು. ಹಾಗಾಗಿ ಮಹಾನಗರಗಳಿಗೆ ಸಮುದ್ರ ನೀರನ್ನು ಸಾಗಿಸುವ ಮಾತು ಸುಲಭವಲ್ಲ. ಮಹಾನಗರಗಳ ಸಮುದ್ರ ತೀರಗಳೆಲ್ಲ ಹೆಚ್ಚಿನವುಗಳು ಪಿಕ್ನಿಕ್ ಸ್ಪಾಟ್‌ಗಳಾಗಿವೆ. ಬರುವವರೂ ಸಾಕಷ್ಟು ಕೊಳಕು ಮಾಡಿಯೇ ಹೋಗುತ್ತಾರೆ.

ಮತ್ತೊಮ್ಮೆ ಸಮುದ್ರದ ಸೌಂದರ್ಯವನ್ನು ಕಲ್ಪನೆ ಮಾಡೋಣ. ಅದರ ಘರ್ಜನೆಯಲ್ಲಿ ಏನೋ ಸಂದೇಶ ಇದೆಯೆಂದು ತಿಳಿಯೋಣ. ಕೊನೆಗೂ ಭಾರತ ಧನ್ಯಶಾಲಿ. 7516.5 ಕಿಲೋ ಮೀಟರ್ ದೀರ್ಘ ಸಮುದ್ರ ತೀರದ ಸೊಬಗನ್ನು ಬನ್ನಿ, ಹುಡುಕೋಣ. ■

ಗರ ಬಡಿದ ನಗರ

● ಪ್ರೊ.ಕೆ. ಎಸ್. ನಿಸಾರ್ ಅಹಮದ್

ಈ ಮಹಾ ನಗರಕ್ಕೆ ಈಗ ಎಲ್ಲಿದೆ ಹೇಳಿ
ಅಂದಿನ ಘನಂದಾರಿತನ, ಗರಿಮೆ, ಗುರು ವ್ಯಕ್ತಿತ್ವ ?
ಎಲ್ಲಿ ಉಳಿದಿದೆ ಅದರ ಅಂತರಾಳದೊಳಿನ್ನು
ಭೇದವಿರದೆಲ್ಲರನು ಸಂತುಷ್ಟಗೊಳಿಸಿದ್ದ
ಯೋಗ್ಯತೆಗೆ ತಕ್ಕಂತೆ ವಾಸಿಗಳ ಬಲಿಸಿದ್ದ
ಸಮ ಆದರದ ಅಸಮಾನ ಪ್ರಾಣ ಪೋಷಕ ಸತ್ವ ?

ದಿಗ್ಭ್ರಸೆಗು ಚಾಚುತ್ತ ದಿವಸದಿವಸಕ್ಕೊಂದು
ಹೊಸ ಬಡಾವಣೆಯ ಕಬಂಧ ಬಾಹು
ಹೃದಯಸ್ಥ ಪೊಟರೆಗಳ ಸಂದುಗೊಂದು
ಗಳಲ್ಲಿ ಸಲಹಿ ಕೊಳಗೇರಿಗಳ ವಿಷಯುಕ್ತ ಹಾವು
ಚೈನು ತಲವಾರುಗಳ, ನಿತ್ಯ ಗ್ಯಾಂಗ್‌ವಾರುಗಳ
ನೆತ್ತರೌತಣವನ್ನು ಬೀದಿ ಬೀದಿಗು ಬಡಿಸಿ
ಷಹರಿಗರ ನೆಮ್ಮದಿಯ ಶೀಲಗೆಡಿಸಿ
ತಿರುವಿ ಗಿರಿಜಾ ಮೀಸೆ ನಿಗುರಿರುವ ಪಟ್ಟಣಕೆ
ಉಳಿದಿರುವುದಾವ ದೊಡ್ಡಸ್ತಿಕೆಯ ಘನತೆ ?

ಅಂದೊಮ್ಮೆ ಈ ಊರು ಅಂಗಸಾಧಕ ಚೆಟ್ಟಿ,
ತಾಲೀಮು ಒದಗಿಸಿರೆ ನಿತ್ಯ ಈ ತಾಯ್ನೆಲದ ಗರುಡಿ ಮಟ್ಟಿ.
ಸೋಸಿ ಹಾಯಿಸಿದಂತೆ ಹವೆ ನಿರ್ಮಲ,
ರೋಗಾಣುರಹಿತ ಜಲ
ಮಡುವಾಗಿ ದುರ್ನಾತಿಸದೆ ಉಸಿರು ಕಟ್ಟಿ,
ಸೀಮೋಲ್ಲಂಘಿಸುವ ನಿರಪಾಯಕರ ಚರಂಡಿ
ಪೆಟ್ರೋಲು ಪಾನೋನ್ಮತ್ತ ವಾಹನ ವಿರಳ ವಿಜನ ರಸ್ತೆಗಳಲ್ಲಿ
ಆಗೀಗ ಹಳೆ ಮಾದರಿಯ ಸೈಕಲ್ಲು ಅಥವಾ ಜಟಕಾ ಬಂಡಿ ;
ಅಲ್ಲಿಲ್ಲಿ ಜವ್ವನೆಯ ಕೆನ್ನೆಗುಳಿ ಅರಳಿಸುವ ಚೆಂದುಳ್ಳ ಕೆರೆ ಕಟ್ಟೆ
ಷಹರಿಗೆಲ್ಲ ಒಂದೆ ಬಸ್ ನಿಲ್ದಾಣ, ಸರ್ಕಾರಿ ಆಸ್ಪತ್ರೆ, ಮಾರುಕಟ್ಟೆ.
ಇಬ್ಬದಿಗೆ ಸಾಲ್ಮರಗಳನವರತ ಬೀಸಣಿಗೆ
ಸುತ್ತಲೂ ತಣ್ಣೆಳಲ ಚೆಲು ಹೆಣಿಗೆ ಮಂದಲಿಗೆ.

ಸಭ್ಯವಾಗಿತ್ತು ಈ ನಗರ
ಮಧ್ಯಮ ವರ್ಗೀಯ ಮಾಮೂಲಿ ಸಂಸಾರಿಯಂತೆ
ಇರದೆ ಆಸರೆ ಅನ್ನ ಅರಿವೆಗಳ ಚಿಂತೆ -
ಇದ್ದಿದ್ದರಲ್ಲೆ ಹಾಯಾಗಿತ್ತು
ಮನೆಯ ಸುವಿಧೇಯ ನಾಯಾಗಿತ್ತು.
ಆದರೀಚೆಗೆ ಬಡಿದು ಸಿರಿವಂತಿಕೆಯ ಗರ
ಹೆಚ್ಚಿಕೊಂಡಿದೆ ಸ್ವಪ್ರತಿಷ್ಠೆ ಸೊಕ್ಕುಗಳ ದರ.
ಗುಂಡುಗೋವಿಯ ಹಾಗೆ ಗಲ್ಲಿಗಳನಂಡಲೆಯುತ್ತ
ಯಾರನೇ ಕಂಡರೂ ಬೊಗಳಿ ಗುರ್ರೆನ್ನುತ್ತ
ತನ್ನತನದರಿವನ್ನೆ ದೂರ ದೂಡಿ
ಸಂಗಾತಿಗಳ ಜೊತೆಗೆ ಹುರುಡಿನಲಿ ಹೊಡೆದಾಡಿ
ಲಪಟಾಯಿಸುತ ಪರದೇಶದವರೆಸೆವ ದುರ್ಲಾಭದೆಲುಬನ್ನು
ತಣಿಸಿಕೊಂಡಿದೆ ತನ್ನ ಲೋಭಿತನದ ಹುಲು ತಲಬನ್ನು.

ಕೇಳಿ ಅರಿಯದ ಎಷ್ಟೊ ತೆವಲು ತೀಟೆಗಳ
ದುಷ್ಕೃತ್ಯಗಳ ಬಂಗಾರ ಚಿಗರೆಗಳ ಬೇಟೆಗಳ
ಬೆಂಬತ್ತಿ ಅನ್ಯಾಯ ಅಕ್ರಮಗಳಡವಿಯಲಿ
ಹಾದಿ ತಪ್ಪಿದೆ ನಮ್ಮ ಈ ಮೆಗಾ ನಗರ,
ಯಾರೊ ತಗ್ಗಿಸುವರೋ ಕಾಣೆ ಇದಕೇರಿರುವ ರೌಡಿ ಪೊಗರ. ■

ಕಥೆ

ಭೂಲ್ ಭುಲೈಯಾ

● 'ಮನು'
395, ವೀಣೆ ಶಾಮಣ್ಣ ರಸ್ತೆ,
ಫೋರ್ಟ್ ಮೊಹಲ್ಲಾ,
ಮೈಸೂರು- 570 004.

ನಾನು ಸುಲ್ತಾನಪುರಕ್ಕೆ ಪ್ರವಾಸ ಹೊರಡುತ್ತೇನೆ ಎಂದಾಗ, ಕಚೇರಿಯಲ್ಲಿದ್ದ ಸ್ನೇಹಿತರ ಬಳಗವೆಲ್ಲಾ ಸಲಹೆ ಕೊಡಲು ಆರಂಭಿಸಿದರು. ಅದರಲ್ಲೂ ಆನಂದಕುಮಾರ ಬಂದು, 'ನೀನು ಏನಾದರೂ ನೋಡು ಬಿಡು, ಆದರೆ ಭೂಲ್ ಭುಲೈಯಾ ನೋಡದೆ ಬರಬೇಡ' ಎಂದ ಭುಜದ ಮೇಲೆ ಕೈಯಿಡುತ್ತಾ.

'ಭೂಲ್ ಭುಲೈಯಾ' ಎಂಬುದು ಹೆಸರೇ ಹೇಳುವಂತೆ, ನಮ್ಮನ್ನು ಅಲ್ಲಲ್ಲಿ ಸುತ್ತಾಡಿಸಿ, ದಾರಿ ಯಾವುದಯ್ಯಾ ಹೊರಗೆ ಬರುವುದಕ್ಕೆ ಎಂದು ಆಲೋಚಿಸುವಂತೆ ಮಾಡುವ ಕಟ್ಟಡದ ವಿನ್ಯಾಸ. ಅದೊಂದು ರೀತಿಯ ಚಕ್ರವ್ಯೂಹ.

ಈ ಸಲಹೆಯನ್ನು ನನ್ನ ಮನಸ್ಸಿನ ಒಂದು ಮೂಲೆಯಲ್ಲಿ ತುರುಕಿಕೊಂಡೆ. ಹಾಗೂ ಸುಲ್ತಾನಪುರದ ಕೋಟೆ, ಅರಮನೆ, ನವಾಬರ ಅಂತಃಪುರ, ಪಕ್ಕದಲ್ಲಿ ಹರಿಯುವ ನದಿ-ಇವೆಲ್ಲದರ ಬಗ್ಗೆ ಮಾಹಿತಿಯನ್ನು ತಲೆಯಲ್ಲಿ ತುರುಕಿಕೊಂಡೆ. ನನ್ನ ಕೆಲಸದ ಭರಾಟೆಯಲ್ಲಿ ಪದೇ ಪದೇ ಪ್ರವಾಸ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ಒಂದು, ನನಗೆ ರಜೆ ಸಿಗುವುದೇ ಅಪರೂಪ. ಎರಡು, ನಾನು ಓಡಾಡುವ ದಾರಿಯಲ್ಲಿ ಈ ಊರಿರಲಿಲ್ಲ. ಮೂರು, ಸುಲ್ತಾನಪುರದ ರಸ್ತೆ ಕಠಿಣವಾಗಿತ್ತು. ಸಹರ್‌ಪುರ್ ರೈಲ್ವೆ ಸ್ಟೇಷನ್‌ನಲ್ಲಿ ಇಳಿದು ಕಠಿಣವಾದ ಬೆಟ್ಟಗಳ ದಾರಿಯಲ್ಲಿ ನೂರು ಕಿಲೋಮಿಟರ್ ಪ್ರಯಾಣ ಮಾಡಬೇಕಿತ್ತು.

ಆದರೆ ನನಗೆ ಅಲ್ಲೊಂದು ಆಕರ್ಷಣೆ ಯಿತ್ತು. ಇತ್ತು ಎನ್ನುವುದಕ್ಕಿಂತ ಇದ್ದ ಎನ್ನುವುದು ಮೇಲು. ನನ್ನ ಗೆಳೆಯ ಸುರೇಶ. ಸುಮಾರು ಇಪ್ಪತ್ತು ವರ್ಷವೇ ಆಗಿತ್ತು ಅವನನ್ನು ಭೇಟಿ ಮಾಡಿ. ಇಂಜನಿಯರಿಂಗ್ ವಿದ್ಯಾಭ್ಯಾಸ ಮುಗಿಸಿದ ನಂತರ ಅವನು ಸುಲ್ತಾನಪುರಕ್ಕೆ ಕೆಲಸದ ಮೇಲೆ ಹೋಗಿದ್ದವನು, ಅಲ್ಲಿಂದ ಜಾಗ ಬಿಟ್ಟು ಕದಲಿರಲಿಲ್ಲ. ವಿದ್ಯಾಭ್ಯಾಸ ಮಾಡುತ್ತಿದ್ದಾಗ ಇಬ್ಬರೂ ಒಟ್ಟಿಗೆ ಇರುತ್ತಿದ್ದೆವು. ನಮ್ಮನ್ನು ಗೆಳೆಯರೆಲ್ಲ 'ಏಕ್ ಜಾನ್, ದೋ ಮ್ಯಾನ್' ಎಂದು ಕರೆಯುತ್ತಿದ್ದರು. ಅಷ್ಟು ಆತ್ಮೀಯರಾಗಿದ್ದವರನ್ನು ನಮ್ಮಿಬ್ಬರ ಕೆಲಸಗಳು ಅಗಲಿಸಿದ್ದವು. ಆಗಾಗ್ಗೆ ಪತ್ರದ ಮೂಲಕ ಸಂಪರ್ಕ ಉಳಿಸಿಕೊಳ್ಳಲು ಪ್ರಯತ್ನಿಸಿದ್ದರೂ, ಅದು ಅಂತಹ ಯಶಸ್ವಿ ಪ್ರಯತ್ನವಾಗಿರಲಿಲ್ಲ. ಮೊದಮೊದಲು ದೀರ್ಘವಾಗಿರುತ್ತಿದ್ದ ಪತ್ರಗಳು, ಈಗ ನೀನೂ ಕ್ಷೇಮ, ನಾನೂ ಕ್ಷೇಮಕ್ಕೆ ಇಳಿದು ಹೋಗಿದ್ದವು.

ಹಾಗಾಗಿ ಸುರೇಶನನ್ನು ಭೇಟಿಯಾಗುವುದೇ ಈ ಪ್ರವಾಸದ ಪ್ರಮುಖ ಆಕರ್ಷಣೆಯಾಗಿತ್ತು.

★

ಕಠಿಣವಾದ ಬೆಟ್ಟದ ದಾರಿಯಲ್ಲಿ ಓಲಾಡುತ್ತಾ, ತೂರಾಡುತ್ತಾ ಹೊರಟ ಬಸ್ಸಿನಲ್ಲಿ ನಾಲ್ಕು ಘಂಟೆ ಪ್ರಯಾಣದ ನಂತರ ಇಳಿದಾಗ ನನ್ನ ತಲೆ 'ಧಿಂ' ಎನ್ನುತ್ತಿತ್ತು. ಸುಲ್ತಾನಪುರಕ್ಕೆ ಬಸ್ಸು ತಲುಪಿದಾಗ ಸಂಜೆಯಾಗುವುದರಲ್ಲಿತ್ತು. ಬಸ್ಸಿನ ಬಾಗಿಲ ಮೂಲಕ ಇಳಿಯುತ್ತಾ ನನಗಾಗಿ ಕಾದಿರುವ ಸುರೇಶನಿಗಾಗಿ ಹುಡುಕಾಡಿದೆ. ಆದರೆ ನನಗೆ ಸುರೇಶ ಕಾಣಿಸಲಿಲ್ಲ. ನಾನು ಈ ಬಸ್ಸಿನಲ್ಲೆ ಬರುತ್ತೇನೆ ಎಂದು ತಿಳಿಸಿದ್ದೆ. ಯಾಕೆ ಅವನು ಬರಲಿಲ್ಲ? ಅವನಿಗೆ ನನ್ನ ಪತ್ರ ತಲುಪಿತೊ ಇಲ್ಲವೊ? ಪತ್ರ ತಲುಪಿಯೂ ನನ್ನನ್ನು ಕಾಣಲು ಬರದೇ ಇರಲು ಅವನು ನಿರ್ಧರಿಸಿರಬಹುದೇ? ಥೆ, ಎಲ್ಲಾದರೂ ಉಂಟೆ! ನನ್ನಲ್ಲಿರುವಷ್ಟು ಉತ್ಸಾಹ ಈ ಭೇಟಿಯ ಬಗ್ಗೆ ಅವನಿಗೂ ಇರುತ್ತೆ. ನಾವಿಬ್ಬರೂ ಬಾಲ್ಯದಲ್ಲಿ ಆತ್ಮೀಯ ಸ್ನೇಹಿತರಾಗಿರಲಿಲ್ಲವೇ. ಇದನ್ನು ಅವನು ಮರೆತುಬಿಡುತ್ತಾನೆಯೇ?

'ಏನೋ ರಂಗರಾಜ, ಯಾರನ್ನೊ ಹುಡುಕ್ತಿದ್ದೀಯಾ?' ನನ್ನ ಬೆನ್ನ ಮೇಲೆ ಒಂದು ಗುದ್ದಿನ ಜೊತೆ ಹೊರಬಿದ್ದ ಕನ್ನಡದ ಮಾತುಗಳನ್ನು ಕೇಳಿ ಹಿಂತಿರುಗಿ ನೋಡಿದೆ, ನನ್ನೆದುರಿಗೆ ನಿಂತಿದ್ದ ಸುರೇಶ. ಆದರೆ ಅವನು ನನ್ನ ಬಾಲ್ಯದ ಗೆಳೆಯನೇ ಎಂದು ನಂಬದಿರುವಷ್ಟು ಬದಲಾಗಿದ್ದ! ತಲೆ ಕೂದಲೆಲ್ಲ ಉದುರಿ, ಅಲ್ಲೊಂದು ಇಲ್ಲೊಂದು ಮಾತ್ರ ಅವಶೇಷಗಳು ಉಳಿದುಕೊಂಡಿದ್ದವು. ಅವನು ಉತ್ತಮ ಬಟ್ಟೆಗಳನ್ನು ಉಟ್ಟುಕೊಳ್ಳುವ ಪ್ರಯತ್ನವನ್ನು ಮಾಡಿದಂತೆ ಕಾಣಿಸಲಿಲ್ಲ. ಅವನ ಮುಖದ ಮೇಲೆ ಒಂದು ಮೀಸೆ ಕುಳಿತಿತ್ತು. ಆ ಮೀಸೆಗೆ ಯಾವುದೇ ವಿಧವಾದ ಉಪಚಾರ ನಡೆದಂತೆ ಕಾಣಿಸುತ್ತಿರಲಿಲ್ಲ. ಅಸಡ್ಡೆಯಿಂದ ಅದು ಅತ್ತಿತ್ತ ಬೆಳೆದಿತ್ತು. ಮುಖವೂ ಕಾಲಿನಿಂದ



ಸಾಕಷ್ಟು ಹೊಡೆತ ತಿಂದಂತೆ ಕಾಣಿಸುತ್ತಿತ್ತು.

ನಾನು ಅಚ್ಚರಿಯಿಂದ ಅವನ ತೋಳುಗಳನ್ನು ಹಿಡಿದುಕೊಂಡೆ.

'ಸುರೇಶ!' ಉದ್ಗರಿಸಿದೆ. 'ಇದೇನೊ ನಿನ್ನ ರೂಪ. ಇದ್ಯಾಕೆ ಹೀಗಾಗಿದ್ದೀಯಾ?' ಎಂದು ಸ್ವಲ್ಪ ಜೋರಾಗಿಯೆ ಕಿರುಚಿದೆ ಎಂದು ಕಾಣುತ್ತದೆ. ನನ್ನ ಮಾತಿನಿಂದ ಅವನಿಗೆ ಸಂಕೋಚವಾಗಿರಬೇಕು. ಅತ್ತಿತ್ತ ಕಳ್ಳನೋಟದಿಂದ ನೋಡಿದ. ನಂತರ ಮೆಲ್ಲಗೆ,

'ಮೊದಲು ನಡಿ. ನಿನಗಾಗಿ ಕಾರು ತಂದಿದ್ದೀನಿ.... ನೀನು ಬಂದಿದ್ದು ಸಂತೋಷ' ಎಂದು ಸೇರಿಸಲೋ ಬೇಡವೊ ಎಂಬಂತೆ ಸೇರಿಸಿದ. ನನಗ್ಯಾಕೊ ಅವನು ನನ್ನನ್ನು ನೋಡಿ ಸಂತೋಷಪಟ್ಟಂತೆ ಕಾಣಿಸಲಿಲ್ಲ. ನನಗೆ ಅವನು ಹೇಗೊ, ಹಾಗೆ ಅವನಿಗೂ ನಾನು ಅವನ ಅತೀತವಾಗಿರಬೇಕು. ಅತೀತದ ಮಧುರ ಕ್ಷಣಗಳನ್ನು ನೆನಪಿಸಿಕೊಳ್ಳುವುದು ಒಂದು ಸೊಗಸಾದ ಅನುಭವ. ಅದರಲ್ಲೂ ನಮ್ಮಿಬ್ಬರ ವಿದ್ಯಾಭ್ಯಾಸ, ನಮ್ಮಿಬ್ಬರ ಒಡನಾಟ, ಆಗೆಲ್ಲಾ ನಡೆದ ಘಟನೆಗಳು, ಎಲ್ಲವೂ ರೋಮಾಂಚನಕಾರಿಯಾಗಿದ್ದವು.

ಅವನು ತಂದಿದ್ದ ಕಾರಿನಲ್ಲಿ ಇಬ್ಬರೂ ಕುಳಿತೆವು. ಅವನ ಮನೆಯ ಕಡೆ ಹೊರಟೆವು.

'ನಿನ್ನ ಕೆಲಸ ಹೇಗಿದೆಯೊ?' ನಾನು ಕೇಳಿದ್ದೆ.

'ಚೆನ್ನಾಗಿದೆ. ನಿನ್ನದು ಹೇಗೆ?' ಮರು ಪ್ರಶ್ನೆ ಅವನಿಂದ ಬಂತು.

'ನನ್ನ ಕೆಲಸ ಕೇಳ್ತೀಯಾ? ಬೆಳಿಗ್ಗೆ ಆಫೀಸಿಗೆ ಹೋದರೆ ಸಂಜೆಯಾಗುವುದೇ ಗೊತ್ತಾಗುವುದಿಲ್ಲ. ಕೆಲಸದಿಂದ ಬಿಡುವು ಸಿಗುವುದು ಸ್ವಲ್ಪ ಕಷ್ಟವೇ. ಈ ಕಡೆ ಬರುವ ಅವಕಾಶ ಸಿಕ್ಕಿದಾಗ,

ಭೂಲ್ ಭುಲೈಯಾ ನೋಡಿ ಹೊರಗೆ ಬಂದಾಗ ಸುರೇಶ ಕಾಣಿಸಲಿಲ್ಲ. ನನ್ನೆದೆ ಧಸಕ್ಕೆಂದಿತು.



ಇದನ್ನು ಕಳೆದುಕೊಳ್ಳಬಾರದು ಅಂತ ನಿರ್ಧರಿಸಿ ಹೊರಟು ಬಂದೆ. ಅಂದ ಹಾಗೆ ನಿನಗೆಷ್ಟು ಮಕ್ಕಳು. ನಿನಗೆ ಮದುವೆ ಆದ ಮೇಲೆ ನೀನು ಪತ್ರಾನೇ ಬರೀಲಿಲ್ಲ. ನಿನ್ನ ಮಕ್ಕಳು ಏನು ಮಾಡ್ತಿದಾರೆ ಹೇಳಲಿಲ್ಲ'

ಈ ಮಾತು ಕೇಳಿ ಅವನ ಮುಖ ಗಂಭೀರವಾಯಿತು.

'ಇಲ್ಲ.... ಮಕ್ಕಳು ಇಲ್ಲ' ಅವನ ಧ್ವನಿಯಲ್ಲಿ ಏನೋ ನಡುಕ ಕಂಡಿತು.

ಇಂತಹ ಉತ್ತರ ಕೇಳಿದಾಗ ಆದಷ್ಟೂ ಹುಷಾರಿನಿಂದ ಮಾತನಾಡಬೇಕು. 'ಓ ಸಾರಿ' ಎಂದು ಸಣ್ಣದಾಗಿ ಹೇಳಿ, ನಾನು ಮಾತು ಬದಲಾಯಿಸಿದೆ. ಕೆಲಸದ ಬಗ್ಗೆ, ನನ್ನ ಹೆಂಡತಿಯ ಬಗ್ಗೆ, ಮಕ್ಕಳ ಬಗ್ಗೆ ವಿಶದವಾಗಿ ಹೇಳಿದೆ. ಇಪ್ಪತ್ತು ವರ್ಷದ ಅವಧಿ ಬಹಳ ದೊಡ್ಡದಾಗಿರುತ್ತದೆ. ಏನೆಲ್ಲಾ ಮಾತನಾಡುವುದಿರುತ್ತದೆ. ನಮ್ಮ ಜೊತೆ ಓದುತ್ತಿದ್ದ ಸುಶೀಲ ಏನಾದಳು. ಅವಳಿಗೆ ಮದುವೆ ಆಯಿತೆ? ಯಾರು ಮದುವೆ ಮಾಡಿಕೊಂಡರು? ರಮೇಶನೊ, ಚಂದ್ರಕಾಂತನೋ? ಇಬ್ಬರೂ ಅವಳನ್ನು ಪ್ರೀತಿಸುತ್ತಿದ್ದರು..... ಊಹುಂ.... ಇಬ್ಬರೂ ಮದುವೆಯಾಗಲಿಲ್ಲ. ಶ್ರೀಕಾಂತ ಮದುವೆಯಾದ!

ಮನೆ ತಲುಪಿದ ನಂತರ ಇಂತಹ ಮಾತುಗಳನ್ನು ಆಡುತ್ತಾ ಅವನನ್ನು ನನ್ನ ಹತ್ತಿರ ಎಳೆದುಕೊಳ್ಳಲು ಪ್ರಯತ್ನಿಸಿದೆ. ವಿನೋದದ ಮಾತುಗಳಿಂದ ಅವನ ಗಂಭೀರ ಮುಖಭಾವವನ್ನು ಒಡೆಯಲು ಪ್ರಯತ್ನಿಸಿದೆ.

ಒಮ್ಮೆ ಮಾತಿನ ಮಧ್ಯೆ ಅವನು ಜೋರಾಗಿ ನಕ್ಕಿದ್ದ.

ನಮ್ಮ ಸಂಭಾಷಣೆಯ - ಅದರಲ್ಲೂ ನನ್ನ ಪಾತ್ರವೇ ಜಾಸ್ತಿ, ನಾನೇ ಮಾತನಾಡುತ್ತಿದ್ದೆ, ಅವನು ಕೇಳುತ್ತಿದ್ದ - ಪ್ರಭಾವದಿಂದ ಅವನ ಗಾಂಭೀರ್ಯ ಮುರಿಯಿತು ಎಂದುಕೊಂಡೆ.

★

ಅವನ ಮನೆ ನನಗೊಂದು ಸಮಸ್ಯೆಯಾಗಿತ್ತು. ಮನೆಯಲ್ಲಿ ಅವನೊಬ್ಬನೇ ಇದ್ದ. ಅವನ ಹೆಂಡತಿ ಶೀಲಾ ಮನೆಯಲ್ಲಿ ಕಾಣಿಸಲಿಲ್ಲ. ಅವಳ ಫೋಟೋ ಅವನ ಟೇಬಲ್ ಮೇಲೆ ಕುಳಿತಿತ್ತು. ಆಕೆ ನೋಡಲು ಸುಂದರವಾಗಿದ್ದಳು. ಅವಳ ಫೋಟೊ ಕಡೆ ಸುರೇಶ ನೋಡುತ್ತಿದ್ದ ರೀತಿಯನ್ನು ಕಂಡು ಅವಳ ಬಗ್ಗೆ ವಿಚಾರಿಸಲು ಅದೇಕೋ ನನಗೆ ಭಯವೇ ಆಯಿತು. ವಾಸ್ತವವಾಗಿ ಸುರೇಶ ತನ್ನ ಹೆಂಡತಿಯ ಬಗ್ಗೆ ತಾನೇ ಮಾತನಾಡಬೇಕಾಗಿತ್ತು. ಅವನಾದರೂ ಒಂದು ಶಬ್ದವನ್ನೂ ಅವಳ ಬಗ್ಗೆ ನುಡಿದಿರಲಿಲ್ಲ. ಅವಳೇನಾದರೂ ಸತ್ತುಹೋದಳೆ? ಇಲ್ಲ. ಸತ್ತು ಹೋಗಿರಲಿಕ್ಕಿಲ್ಲ. ಸತ್ತಿದ್ದರೆ ಅವಳ ಫೋಟೋವಿನ ಮೇಲೆ ಹೂವಿನ ಹಾರ ಕುಳಿತಿರಬೇಕಾಗಿತ್ತು ಫೋಟೋ ಟೇಬಲ್ ಮೇಲೆ ಕುಳಿತಿರುತ್ತಿರಲಿಲ್ಲ. ಗೋಡೆಯ ಮೇಲೆ ಇರುತ್ತಿತ್ತು. ಅಥವಾ... ಅವಳು ಓಡಿ ಹೋದಳೆ? ಅವಳು ಓಡಿ ಹೋಗಿರುವುದೇ ನಿಜವಾದರೆ, ಅದರ ಬಗ್ಗೆ ಮಾತನಾಡದಿರುವುದೇ ಮೇಲು.

ಶೀಲಾ ನನ್ನ ಮಟ್ಟಿಗೆ ಸಮಸ್ಯೆಯಾಗಿ ಉಳಿದಳು.

★

ರಾತ್ರಿ ಊಟವಾದ ಮೇಲೆ ಮಾತು, ಹಾಗೂ ಹೀಗೂ ತಿರುಗಾಡುತ್ತಾ ನನ್ನ ಪ್ರವಾಸದ ಎರಡನೆ ಭಾಗ - ಅಂದರೆ ಊರನ್ನು ಸುತ್ತಿ ನೋಡುವ ಕಾರ್ಯಕ್ರಮದ ಕಡೆ ತಿರುಗಿತು.

'ಸುರೇಶ, ನೀನು ಎರಡು ದಿವಸ ರಜೆ ತೆಗೆದುಕೊಂಡು ಬಿಡು... ನಡಿ.... ಊರು ಸುತ್ತಿಬರೋಣ' ಎಂದೆ.

'ಅದಕ್ಕೆ ಯಾಕೊ ಎರಡು ದಿನ.... ಒಂದು ದಿನದಲ್ಲಿ ತೋರಿಸ್ತೀನಿ.... ಕೋಟೆ, ಅರಮನೆ, ಉದ್ಯಾನವನ, ನದಿ....'

'ಆದರೆ ನೀನು ಭೂಲ್ ಭುಲೈಯಾವನ್ನೆ ಮರೆತೆಯಲ್ಲ. ಅಲ್ಲಿಗೆ ಹೋಗಿ ಬರೋದಕ್ಕೆ ಒಂದು ದಿನವಾದರೂ ಆಗುತ್ತಂತೆ' ಅವನ ಪಟ್ಟಿಯಲ್ಲಿ ಬಿಟ್ಟು ಹೋದ ಸ್ಥಳದ ನೆನಪು ಮಾಡಿದೆ. ಅದೇಕೊ ಈ ಹೆಸರನ್ನು ಕೇಳಿ ಅವನಲ್ಲಿ ಉತ್ಸಾಹ ಹುಟ್ಟಲಿಲ್ಲ.

'ಅದೇನು ಅಂತಹ ಮಹತ್ವದ ಜಾಗವಲ್ಲ. ನೋಡದೆ ಹೋದರೆ ಆಕಾಶವೇನೂ ತಲೆ ಮೇಲೆ ಕಳಚಿ ಬೀಳೊಲ್ಲ' ಎಂದ ಅವನು ಗಡುಸಾಗಿ. ಅವನ ಮಾತು ಅದೇಕೊ ಕಟುವಾಗಿತ್ತು ಅಂತ ನನಗನ್ನಿಸಿತು. ಬಾಲ್ಯ ಸ್ನೇಹಿತನ ಕೋರಿಕೆಗೆ ಇದು ಸರಿಯಾದ ಉತ್ತರ ಅನ್ನಿಸಲಿಲ್ಲ. ಅವನ ಜೊತೆ ವಾದ ಮಾಡಲಿಲ್ಲ ಇಷ್ಟು ಮಾತ್ರ ಹೇಳಿದೆ.

'ಸುರೇಶ, ನಿನಗೆ ರಜೆ ಸಿಕ್ಕು ನನ್ನ ಜೊತೆ ಬರೋಕಾದರೆ ಸರಿ. ಇಲ್ಲದೆ ಹೋದರೆ

ನಾನೊಬ್ಬನೆ ಹೋಗಿ ಬರ್ತೀನಿ' ಎಂದೆ. ಬಹುಶಃ ನನ್ನ ಮಾತಿನಲ್ಲಿ ಹಠ ಎದ್ದು ಕಾಣುತ್ತಿತ್ತು. ಅದಕ್ಕೆ ಅವನೇನೂ ಹೇಳಲಿಲ್ಲ. ಅವನ ಮುಖ ಮತ್ತಷ್ಟು ಗಂಭೀರವಾಯಿತು.

★

ನಾನು ಒರಟಾಗಿ ಹೇಳಿದ್ದರೂ, ಮಾರನೇ ದಿನ ಬೆಳಿಗ್ಗೆ ನನ್ನ ಜೊತೆ ಬರಲು ಸುರೇಶ ಸಿದ್ಧನಾಗಿದ್ದ. ಈಗ ಅವನಲ್ಲಿ ಸ್ವಲ್ಪ ಹೆಚ್ಚು ಉತ್ಸಾಹ ಕಾಣಿಸುತ್ತಿತ್ತು. ಸುಲ್ತಾನಪುರದ ಕೋಟೆ ಕೊತ್ತಲುಗಳನ್ನು, ಅಲ್ಲಿಯ ರಾಜಮನೆತನಗಳ ವಿಷಯವನ್ನು, ಅರಮನೆಯನ್ನು, ಸುತ್ತಲ ಸುಂದರ ಪ್ರಕೃತಿಯನ್ನು ಯಾವ ಮಾರ್ಗದರ್ಶಿಗಿಂತ ಕಡಿಮೆಯಿಲ್ಲದೆ ವಿವರಿಸಿದ. ಅಂದು ಸಂಜೆ ಸುತ್ತಿ ವಾಪಸ್ಸಾದಾಗ, ಒಂದು ಒಳ್ಳೆಯ ಪ್ರೇಕ್ಷಣಾ ಸ್ಥಳವನ್ನು ನೋಡಿದ ಅನುಭವ ನನಗಾಗಿತ್ತು.

ಅಂದು ರಾತ್ರಿ ಮಲಗುವ ಮೊದಲು ಸುರೇಶ,

'ರಂಗರಾಜ, ನಾಳೆ ನೀನೊಬ್ಬನೆ ಹೋಗಿ ಬಾರೊ. ನಾನು ಬರೋದಿಲ್ಲ....' ಎಂದ. ಅವನ ಗಂಭೀರ ಮುಖಮುದ್ರೆ ವಾಪಸ್ಸಾಗಿತ್ತು. ನಾನೂ ಹೆಚ್ಚು ಒತ್ತಾಯಿಸಲಿಲ್ಲ. ಈ ದಿನ ನನ್ನ ಜೊತೆ ನಗುತ್ತಾ ಓಡಾಡಿದನಲ್ಲ ಅಷ್ಟೇ ಸಾಕು ಅನ್ನಿಸಿತು.

ಆದರೆ ಮಾರನೇ ದಿವಸ ಬೆಳಿಗ್ಗೆ ಭೂಲ್‌ಭುಲೈಯಾಗೆ ಹೋಗುವ ರಾಜ್ಯಸಾರಿಗೆ ಸಂಸ್ಥೆಯ ವಿಶೇಷ ಬಸ್ಸನ್ನು ಹತ್ತಲು ನಾನು ಹೊರಟಾಗ, ಅವನೂ ನನ್ನ ಜೊತೆ ಬಂದ. ನೀನು ಬರೊಲ್ಲ ಅಂತ ಹೇಳಿದ್ದೆಯಲ್ಲೊ ಎಂದು ಹೇಳಲು ನಾಲಿಗೆ ಮಾತ್ರ ಮುಂದಾಗಲಿಲ್ಲ. ಅವನ ಮುಖ ಎಂದಿಗಿಂತ ಗಂಭೀರವಾಗಿತ್ತು.

ಬಸ್ಸಿನಲ್ಲಿ ನಾನು ಕಿಟಕಿಯ ಬಳಿ ಕುಳಿತೆ. ಅವನು ನನ್ನ ಪಕ್ಕ ಕುಳಿತ. ಅವನು ಇಡೀ ಪ್ರಯಾಣದ ವೇಳೆ ಒಂದು ಮಾತೂ ನನ್ನ ಜೊತೆ ಆಡಲಿಲ್ಲ. ಸುರೇಶ ನನಗೆ ಈಗ ಒಂದು ಸಮಸ್ಯೆಯಾಗಿ ಕಾಣಿಸುತ್ತಿದ್ದ. ನಾನು ಅವನನ್ನು ಬಲವಂತವಾಗಿ ಮಾತನಾಡಿಸುವ ಬದಲು ಹೊರಗಿನ ಪ್ರಕೃತಿಯನ್ನು ಸವಿಯುತ್ತಾ ಕುಳಿತುಕೊಳ್ಳುವುದೇ ಸರಿ ಎಂದು ಭಾವಿಸಿದೆ. ಬಸ್ಸು ಕಡಿದಾದ ತಿರುವುಗಳಲ್ಲಿ, ಬೆಟ್ಟದ ಮೇಲೆ ನಿಧಾನವಾಗಿ ಧಾವಿಸಿತ್ತು.

ಬಸ್ಸಿನಲ್ಲಿ ಒಬ್ಬ ಗೈಡ್ ಇದ್ದ. ಅವನು ಸದ್ಯಕ್ಕೆ ಮೌನವ್ರತಧಾರಿಯಾಗಿದ್ದ. ಭೂಲ್ ಭುಲೈಯಾಕ್ಕೆ ದೂರ ಎಂಭತ್ತು ಕಿಲೊಮೀಟರ್ ಎಂದು ಆರಂಭದಲ್ಲಿ ಅವನು ಹೇಳಿದ್ದ. ಈ ದೂರವನ್ನು ಬಸ್ಸು ಮೂರು-ನಾಲ್ಕು ಘಂಟೆಗಳಲ್ಲಿ ಕ್ರಮಿಸುತ್ತದೆ ಎಂದೂ ಹೇಳಿದ್ದ.

ಅಷ್ಟು ದೂರದಲ್ಲಿ ಭೂಲ್ ಭುಲೈಯಾದ ಕಟ್ಟಡ ಕಾಣುತ್ತಿದ್ದಂತೆ ನನಗೆ ರೋಮಾಂಚನವಾಯಿತು. ಆ ಬೆಟ್ಟಗಳ ಸಾಲಿನಲ್ಲಿ ಮತ್ತೊಂದು ಚಿಕ್ಕ ಬೆಟ್ಟದಂತೆ ಅದು ಎದ್ದು ನಿಂತಿತ್ತು. ಕಾಲ್ಪನಿಕ ಕಥೆಗಳಲ್ಲಿ ಬರುವ ಮಾಂತ್ರಿಕರ, ಮಾಟಗಾತಿಯರ ಇಂದ್ರಜಾಲದ ಮನೆಯಂತೆ ಬೆಟ್ಟದ ಮೇಲೆ ಒಂದು ದೊಡ್ಡ ಕಟ್ಟಡ ಎದ್ದು ನಿಂತಿತ್ತು. ಅರಮನೆ ಎಂದರೆ ಸ್ವಲ್ಪ ದೊಡ್ಡದು, ಮಹಲು ಎಂದರೆ ಸ್ವಲ್ಪ ಚಿಕ್ಕದು - ಇವೆರಡರ ಮಧ್ಯೆ ಇದ್ದ ವಿಶಾಲವಾದ ಕಟ್ಟಡದ ವಾಸ್ತು ವಿಚಿತ್ರವಾಗಿತ್ತು. ಅದು ಮೂರು ಮಹಡಿ ಕಟ್ಟಡವಾಗಿತ್ತು. ಅಲ್ಲಿಗೆ ಹೋಗಲು ಬಸ್ಸು ತನ್ನೆಲ್ಲ ಬಲವನ್ನು ಬಿಡುತ್ತಾ 'ಗುರ್, ಗುರ್' ಎಂದು ಸದ್ದು ಮಾಡುತ್ತಾ ಮೇಲಕ್ಕೆ ಹತ್ತುತ್ತಿತ್ತು. ಮೇಲಕ್ಕೆ ಹತ್ತುತ್ತಾ ಕಟ್ಟಡದ ಹೊರಾವರಣದವರೆಗೆ ಬಂದಿತು.


ಬಸ್ಸಿನಿಂದಿಳಿಯುತ್ತಿದ್ದಂತೆ ಮಾರ್ಗದರ್ಶಿ ಎಲ್ಲರನ್ನೂ ಒಟ್ಟು ಸೇರಿಸಿ ಒಂದು ಪುಟ್ಟ ಭಾಷಣ ಮಾಡಿದ.

'ಮಹಿಳೆಯರೆ ಮತ್ತು ಮಹನೀಯರೆ, ನೀವು ಒಂದು ಅಪರೂಪದ ಸ್ಥಳಕ್ಕೆ ಬಂದಿದ್ದೀರಿ. ಇಂಥಹ ಭೂಲ್ ಭುಲೈಯಾವನ್ನು ನೀವು ಪ್ರಪಂಚದಲ್ಲಿ ಎಲ್ಲೂ ಕಾಣಲಾರಿರಿ. ಇದನ್ನು ಕ್ರಿ.ಶ. 1728ರಲ್ಲಿ ಸುಲ್ತಾನ್ ಅಹಮ್ಮದನು ತನ್ನ ವಿನೋದಕ್ಕಾಗಿ ಕಟ್ಟಿಸಿದ. ಆವಾಗ ಇದರ ಸುತ್ತ ಜನ ವಾಸಿಸುತ್ತಿದ್ದರು. ಈ ಸ್ಥಳದಲ್ಲಿ ಈಗ ವ್ಯಾಪಾರ, ವ್ಯವಸಾಯಕ್ಕೆ ಅವಕಾಶವಿಲ್ಲದೆ ಈ ಜನಸ್ಥಾನ ನಾಶವಾಯಿತು. ಈಗ ಭೂಲ್ ಭುಲೈಯಾದ ಕಟ್ಟಡ ಮಾತ್ರ ಉಳಿದುಕೊಂಡಿದೆ. ಇದರ ವಾಸ್ತು ವಿನ್ಯಾಸ ಅತ್ಯಪೂರ್ವವಾದುದು. ಕೇವಲ ಕೆಲವೇ ವರ್ಷಗಳ ಹಿಂದೆಯಷ್ಟೆ ಪ್ರಾಚ್ಯ ಶಾಸ್ತ್ರ ವಿಭಾಗದವರು ಇದರ ಚಕ್ರವ್ಯೂಹವನ್ನು ಬಿಡಿಸುವಲ್ಲಿ ಯಶಸ್ವಿಯಾದರು. ಅದಕ್ಕೆ ಮುನ್ನ ಇದು ಹೀಗೆ ಎಂದು ತಿಳಿದವರು ಕಡಿಮೆ. ಹಾಗಾಗಿ ಕೆಲವು ವರ್ಷಗಳ ಹಿಂದೆ ಇದರೊಳಗೆ ಹೋದವರು, ದಾರಿ ತಪ್ಪಿ ಅನೇಕರು ಕಳೆದುಹೋದರು. ಅವರು ಮತ್ತೆ ವಾಪಸ್ಸು ಬರಲೇ ಇಲ್ಲ.

'ಹಾಗಾಗಿ ಮಹಿಳೆಯರೆ ಮತ್ತು ಮಹನೀಯರೆ, ನಾವು ಹೇಳುವುದೇನೆಂದರೆ ದಯವಿಟ್ಟು ಎಲ್ಲರೂ ಒಟ್ಟಿಗೆ ನನ್ನ ಹಿಂದೆ ಬನ್ನಿ. ಮರೆತಾದರೂ ನೀವು ಅತ್ತಿತ್ತ ತಿರುಗಾಡಲು ಹೋಗಬೇಡಿ. ನನಗೂ ಈ ಕಟ್ಟಡದ ಪೂರ್ಣವಿನ್ಯಾಸ ಗೊತ್ತಿಲ್ಲ. ನಿಮ್ಮನ್ನು ನಾನು ಒಂದು ಗೊತ್ತಾದ ದಾರಿಯಲ್ಲಿ ಕರೆದುಕೊಂಡು ಹೋಗುತ್ತೇನೆ. ನೀವೇನಾದರೂ ಅಪ್ಪಿತಪ್ಪಿ ಇದರಲ್ಲಿ ಕಳೆದು ಹೋದರೆ, ನಿಮ್ಮನ್ನು ಕಂಡು ಹಿಡಿಯುವ ಚೈತನ್ಯ ನನಗಿಲ್ಲ. ಪ್ರಾಚ್ಯಶಾಸ್ತ್ರ ವಿಭಾಗದವರು ಬಂದು ನಿಮ್ಮನ್ನು ಕಂಡು ಹಿಡಿಯುವವರೆಗೆ ನೀವು ಅಲೆಯುತ್ತ ಇರಬೇಕಾಗುತ್ತದೆ' ಎಂದು ಎಲ್ಲರ ಮನದಲ್ಲೂ ಭಯ ಬಿತ್ತಿದ. ಈ ಮಾತುಗಳನ್ನು ಕೇಳಿದ ಎಲ್ಲರೂ ಗಂಭೀರವಾಗಿ ಕುರಿಗಳಂತೆ ಅವನನ್ನು ಹಿಂಬಾಲಿಸಿದರು.

ಮುಂದೆ ನಡೆಯುತ್ತಾ ಹೋದ ಮಾರ್ಗದರ್ಶಿ ಜೋರಾದ ದನಿಯಲ್ಲಿ ಕಟ್ಟಡದ ವಿನ್ಯಾಸ, ವಿನ್ಯಾಸಕಾರನ ಹೆಸರು, ಏತಕ್ಕೆ ಇದು ಬಹಳ ಕ್ಲಿಷ್ಟಕರವಾದ ವಾಸ್ತು ಎಂದೆಲ್ಲ ವಿವರಿಸುತ್ತಾ ಹೊರಟ. ನಾನು ಕತ್ತೆತ್ತಿ ನೋಡುತ್ತಾ ಕಟ್ಟಡದ ವಾಸ್ತುವನ್ನು, ಅದರ ವಿನ್ಯಾಸವನ್ನು ಆಸ್ವಾದಿಸುತ್ತಾ ಹೊರಟೆ. ಮೊಗಲರ ಪ್ರಭಾವ ಈ ಕಟ್ಟಡದ ಮೇಲೆ ಸಾಕಷ್ಟಾಗಿತ್ತು. ಸುಲ್ತಾನ್ ಅಹಮ್ಮದನಿಗೆ ಬಹುಶಃ ಪಾಶ್ಚಾತ್ಯ ಶೈಲಿಯ ತಿಳುವಳಿಕೆಯು ಇದ್ದಿರಬೇಕು. ಹಾಗಾಗಿ ಅಲ್ಲಲ್ಲಿ ಗ್ರೀಕ್-ರೋಮನ್ ಶೈಲಿಯನ್ನು ಅಳವಡಿಸಲು ನೋಡಿದ್ದ. ಕಟ್ಟಡದ ಮೇಲೆ ಅಂದರೆ ಹೊರಾವರಣದಲ್ಲಿ, ಶಿಖರಗಳಲ್ಲಿ ಈ ಪ್ರಭಾವ ಎದ್ದು ಕಾಣಿಸುತ್ತಿತ್ತು. ಕಟ್ಟಡದ ಒಳಗಡೆ ಯಥೇಚ್ಛವಾಗಿ ಕಮಾನುಗಳನ್ನು ಉಪಯೋಗಿಸಿದ್ದ. ಒಂದು ಕಡೆಯಂತೂ ಒಂದು ಕೇಂದ್ರ ಬಿಂದುವಿನಿಂದ ಹೊರಟ ಎಂಟು ಕಮಾನುಗಳು ಎಂಟು ದಿಕ್ಕಿಗೆ ಮುಖ ಮಾಡಿ ನಿಂತಿದ್ದವು. ಅವು ನೋಡಲು ಒಂದೇ ರೀತಿ ಕಾಣಿಸುತ್ತಿದ್ದವು. ಗೈಡ್ ಹೇಳುತ್ತಿದ್ದ. ಒಂದರ ಮೂಲಕ ಹೋದರೆ ಅದು ಗುಪ್ತದ್ವಾರಕ್ಕೆ ಕರೆದುಕೊಂಡು ಹೋಗುತ್ತಿತ್ತು, ಇನ್ನೊಂದರ ಮೂಲಕ ಹೋದರೆ ನೆಲಮಾಳಿಗೆಗೆ ಹೋಗುತ್ತಿತ್ತು, ಮತ್ತೊಂದರ ಮೂಲಕ, ಹೋದರೆ ಸುಲ್ತಾನನ ಅಂತಃಪುರಕ್ಕೆ ಹೋಗುತ್ತಿತ್ತು, ಮಗದೊಂದರ ಮೂಲಕ ಹೋದಾಗ ಕುದುರೆ ಲಾಯ ಸಿಗುತ್ತಿತ್ತು. ಇನ್ನು ಕೆಲವು ಕಡೆ ಅದೆಷ್ಟು ಸಂದೇಹ ಬರುತ್ತಿತ್ತೆಂದರೆ, ಈ ಜಾಗದಲ್ಲಿ ನಾವು ಈಗಾಗಲೇ ಬಂದು ಹೋದವಲ್ಲಾ ಎನ್ನಿಸಿ ಬಿಡುತ್ತಿತ್ತು.

ಸುಮಾರು ಎರಡು-ಮೂರು ಘಂಟೆಗಳವರೆಗೆ ಗೈಡ್ ನಮ್ಮನ್ನು ಈ ವಾಸ್ತುವಿನೊಳಗೆ ಸುತ್ತಿಸಿದ. ನಾನು ಕಟ್ಟಡದೊಳಗೆ ಹೊರಡುವಾಗ ನನ್ನ ಪಕ್ಕದಲ್ಲಿದ್ದ ಸುರೇಶನ ಕಡೆ ಒಮ್ಮೆ ನೋಡಿದ್ದೆ. ಅವನ ಮುಖ ಬಿಳಿಚಿಕೊಂಡಿತ್ತು. ನನ್ನ ಉತ್ಸಾಹದಲ್ಲಿ ನಾನು ಅವನನ್ನು ಯಾಕೆ ಹೀಗೆ ಎಂದು ಪ್ರಶ್ನಿಸಲಿಲ್ಲ. ಗೈಡ್‌ನನ್ನು ಹಿಂಬಾಲಿಸುತ್ತಾ ಮುಂದೆ ಹೋದಂತೆ ಸುರೇಶನ ಮಾತು ಮರೆತು ಹೋಯಿತು. ಸುತ್ತಾಡುವಾಗ ಆಗೊಮ್ಮೆ



ತಾಳಿ

ಪುರೋಹಿತರೆಂದರು
'ಮುಹೂರ್ತ ಮೀರುತಿದೆ
ಕಟ್ಟಿ ತಾಳಿ'
ಅಂದನು ವರನಪ್ಪ
'ವ್ಯವಹಾರವಿನ್ನೂ ಮುಗಿದಿಲ್ಲ
ಸ್ವಲ್ಪತಾಳಿ!'

-ಮಂಜುನಾಥ ಬೈಲೂರು ಕೆ.ಎಂ.

ಈಗೊಮ್ಮೆ ಕಣ್ಣು ಅವನನ್ನು ಹುಡುಕಿತು. ಅವನು ಕಣ್ಣಿಗೆ ಬಿದ್ದಿರಲಿಲ್ಲ. ನಾನು ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಸುರೇಶ ಈ ಊರಿನವನೆ. ಇಲ್ಲಿಯ ಪರಿಚಯ ಅವನಿಗಿರುತ್ತೆ. ಇಲ್ಲಿಗೆ ಎಷ್ಟು ಬಾರಿ ಬಂದಿದ್ದಾನೊ ಏನೊ. ನಾನು ಚಿಂತಿಸಬೇಕಾದ್ದಿಲ್ಲ. ಇಲ್ಲಿಯ ಪರಿಚಯ ಅವನಿಗಿರುತ್ತೆ. ನಾನು ಮಾತ್ರ ಮಾರ್ಗದರ್ಶಿಯನ್ನು ಜಿಗಣೆಯಂತೆ ಅಂಟಿಕೊಂಡಿದ್ದೆ.

ಸುತ್ತಾಡಿ ಮತ್ತೆ ಮೊದಲು ಹೊರಟ ಜಾಗಕ್ಕೆ ಬಂದಾಗ ನನ್ನ ಕಣ್ಣು ಅವನಿಗಾಗಿ ತಡಕಾಡಿತು. ಅವನು ಕಾಣಿಸಲಿಲ್ಲ. ನಾನು ದಿಗಿಲುಬಿದ್ದು ಬಂದಿದ್ದ ಪ್ರತಿಯೊಬ್ಬರನ್ನೂ ನೋಡುತ್ತಾ ನಡೆದೆ. ಆ ದಿನ ನಮ್ಮ ಬಸ್ಸಿನ ಜೊತೆ ಇನ್ನೊಂದು ಬಸ್ಸು ಬಂದಿತ್ತು. ಅದರಲ್ಲೂ ಸುಮಾರು ಐವತ್ತು ಜನ ಬಂದಿದ್ದರು. ಸೇರಿದ್ದ ನೂರೂ ಜನರ ಮುಖವನ್ನು ನೋಡುತ್ತಾ ನಡೆದೆ. ಸುರೇಶ ಕಾಣಿಸಲಿಲ್ಲ!

ನನ್ನ ಎದೆ ಈಗ ಪಟಪಟನೆ ಹೊಡೆದುಕೊಳ್ಳತೊಡಗಿತು. ಸುರೇಶ ಮೊದಲಿನಿಂದ ಇಲ್ಲಿಗೆ ಬರುವುದರ ವಿರುದ್ಧವಿದ್ದ. ನಾನು ಹಠದಿಂದ ನಾನೊಬ್ಬನೇ ಹೋಗಿ ಬರುತ್ತೇನೆ ಎಂದು ಹೇಳಿದ್ದಕ್ಕೆ ವಿಧಿಯಿಲ್ಲದೆ ನನ್ನ ಜೊತೆ ಬಂದಿದ್ದ. ಛೇ ನಾನೆಂತಹ ಕೆಲಸ ಮಾಡಿದ್ದೆ! ಅವನು ಇಲ್ಲಿಗೆ ಬಂದಿಳಿದಾಗ ಅವನ ಮುಖ ಬಿಳಿಚಿಹೋಗಿತ್ತು. ಅಂದರೆ ಈ ಜಾಗ ಅವನಿಗೆ ಭಯ ಹುಟ್ಟಿಸುತ್ತಿತ್ತು. ಏಕಾದರೂ ನಾನು ಅವನನ್ನು ಕರೆತಂದೆನೊ ತಪ್ಪಾಯಿತು ಎಂದುಕೊಂಡು ಹಲುಬಿದೆ.

ಕೇವಲ ದುಃಖ ಪಡುವುದರಿಂದ ಏನಾಗುತ್ತದೆ. ನಾನು ನಮ್ಮ ಬಸ್ಸಿನ ಗೈಡ್‌ನನ್ನು ಕಂಡು ಮಾತನಾಡಿದೆ. ಅವನಾಗಲೇ ಕೂಗುತ್ತಿದ್ದ. 'ನೀವೆಲ್ಲಾ ಹೋಗಿ ಆ ಹೊಟೇಲಿನಲ್ಲಿ ಬೇಗ ಊಟ ಮುಗಿಸಿ ಬನ್ನಿ. ನಾವು ಹಿಂತಿರುಗಿ ಹೊರಡಬೇಕು. ನಾಲ್ಕು ಘಂಟೆ ಪ್ರಯಾಣ. ಕತ್ತಲಾದರೆ ಅಪಾಯ ಜಾಸ್ತಿ' ಎಂದು ಹೇಳುತ್ತಿದ್ದ. ನಾನು ಗಡಿಯಾರ ನೋಡಿಕೊಂಡೆ. ಎರಡೂವರೆ ತೋರಿಸುತ್ತಿತ್ತು. ಮೂರು ಗಂಟೆಗೆ ಬಿಡಬೇಕು ಎಂದು ಅವನು ಹೇಳುತ್ತಿದ್ದ.

'ನೋಡಿ, ನನ್ನ ಜೊತೆ ನನ್ನ ಸ್ನೇಹಿತ ಬಂದಿದ್ದ. ಅವನು ಕಾಣಿಸುತ್ತಿಲ್ಲ. ಪ್ಲೀಸ್.... ಸಹಾಯ ಮಾಡಿ' ಎಂದೆ.

ಅವನು ನನ್ನ ಕಡೆ ದುರುಗುಟ್ಟಿ ನೋಡಿದ.

'ನಾನು ಆಗಲೇ ಹೇಳಿದ್ದೆನಲ್ಲಾ ಸಾರ್. ಹೀಗೆಲ್ಲಾ ಒಂಟಿಯಾಗಿ ಹೋಗಬೇಡಿ ಅಂತ... ಯಾರು ನಿಮ್ಮ ಸ್ನೇಹಿತರು? ಅವರ ಹೆಸರೇನು?'

'ಅವನು ಸುಲ್ತಾನಪುರದಲ್ಲಿ ಎಗ್ಸಿಕ್ಯುಟಿವ್ ಎಂಜಿನಿಯರ್ ಆಗಿದ್ದಾನೆ.... ಸುರೇಶ್ ಅಂತ ಹೆಸರು....'

ಈ ಹೆಸರು ಕೇಳಿದವನೆ ಅವನ ತುಟಿಯ ಮೇಲೆ ತೆಳುವಾಗಿ ನಗುಹರಡಿತು.

'ಎಂಜಿನಿಯರ್ ಸುರೇಶ್ ಸಾರಾ?



ನೀವೇನೂ ಯೋಚನೆ ಮಾಡಬೇಡಿ. ನೀವು ಊಟ ಮಾಡಿ ಬನ್ನಿ' ಎಂದವನೇ ನನ್ನ ಮಾತಿಗೆ ಕಾಯದೇ ಹೊರಟು ಹೋದ.

ನಾನು ಊಟ ಮಾಡಲು ಹೋದೆ. ಆದರೆ ಒಂದು ತುತ್ತೂ ಗಂಟಲಿನಲ್ಲಿ ಇಳಿಯಲಿಲ್ಲ.



'ಹೇಗಿದ್ರೂ ಮಾವನ ಮನೆಗೆ ಹೋಗಿ ನಾನೇ ತಿಂಡಿ ತಯಾರಿಸಬೇಕಲ್ಲ. ಅದಕ್ಕೇ ಪೇಟೆಯಿಂದ್ಲೇ ಎಲ್ಲ ಹೊತ್ಕೊಂಡು ಬಂದೆ'

ಇದೇನಾಯಿತು? ಅವನೆಲ್ಲಿ ಹೋದ? ಗೈಡ್ ಹೇಳಿದ ಮಾತಿನ ಅರ್ಥವೇನು? ಅವನಿಗೆ ಸುರೇಶನ ಪರಿಚಯವಿದೆಯೇ? ಎಂದೆಲ್ಲಾ ಹುಚ್ಚೆದ್ದ ಮನಸ್ಸು ಪ್ರಶ್ನೆಗಳನ್ನು ಕೇಳುತ್ತಿತ್ತು.

ಗಾಡಿ ಹೊರಡುವ ಸಮಯವಾದರೂ ಸುರೇಶನ ಸುಳಿವಿಲ್ಲ. ನಾನು ಭಯದಿಂದ ಗೈಡ್‌ನ ಬಳಿ ಹೋಗಿ,

'ನೋಡಿ, ಸುರೇಶ್ ಇನ್ನೂ ಬರಲಿಲ್ಲ. ಪ್ಲೀಸ್.... ಒಂದು ಬಾರಿ...' ಎನ್ನುವುದಕ್ಕಿಲ್ಲ ಆತ ಬಸ್ಸಿಂದ ಕೆಳಗಿಳಿದು, ನನ್ನ ಕೈ ಹಿಡಿದುಕೊಂಡು ಎಳೆದುಕೊಂಡೇ ಆ ಕಟ್ಟಡದ ಒಳಗೆ ಮತ್ತೆಹೋದ. ಸುಮಾರು ನೂರು ಅಡಿ ನಡೆದವನೆ ಒಂದು ಗೊತ್ತಾದ ಜಾಗದಲ್ಲಿ ಬಂದು ನಿಂತ. ನನ್ನ ಕಡೆ ನೋಡುತ್ತಾ,

'ಹೂ.... ಈಗ ಗಮನವಿಟ್ಟು ಕೇಳಿ' ಎಂದ.

ನಾನು ಗಮನವಿಟ್ಟು ಕೇಳಿದೆ. ಎಲ್ಲಿಂದಲೋ, ತುಂಬಾ ದೂರದಿಂದ ದನಿ ಕೇಳಿ ಬರುತ್ತಿತ್ತು.

ಅಳುವ ಧ್ವನಿ! ಬಿಕ್ಕಿ ಬಿಕ್ಕಿ ಅಳುವ ಧ್ವನಿ! ಅದರೊಟ್ಟಿಗೆ ಗದ್ಗದ ಸ್ವರ ಕೇಳಿಸುತ್ತಿತ್ತು.

'ಶೀಲಾ.... ಶೀಲಾ....'

ನಾನು ಗರಬಡಿದವನಂತೆ ಅಲ್ಲೇ ನಿಂತೆ! ಗೈಡ್ ಹೇಳುತ್ತಿದ್ದ ಮಾತುಗಳು ಕಿವಿಯ ಮೇಲೆ ಬೀಳುತ್ತಿದ್ದವು.

'ಎಷ್ಟೋ ವರ್ಷಗಳಾಯಿತು. ಪ್ರಾಚ್ಯವಸ್ತು ಇಲಾಖೆ ಇದನ್ನಿನ್ನೂ ಮ್ಯಾಪ್ ಮಾಡಿರಲಿಲ್ಲ. ಅವರ ಹೆಂಡತಿ ಶೀಲಾ ಭೂಲ್‌ಭುಲೈಯಾ ಒಳಗೆ ಕಳೆದು ಹೋದರು. ಅವರೂ ಸಿಕ್ಕಿರಲಿಲ್ಲ. ಅವರ ದೇಹವೂ ಸಿಕ್ಕಿರಲಿಲ್ಲ. ಹಾಗಾಗಿ ಇಲ್ಲಿಗೆ ಬಂದಾಗಲೆಲ್ಲಾ ಸುರೇಶ್ ಸಾಹೇಬರು ಹೀಗೆ ಒಳಗೆ ಹೋಗಿ ಅಳ್ತಾ ಕೂತ್ಕೊತಾರೆ. ಮಾರನೇ ದಿನ ಸುಲ್ತಾನಪುರಕ್ಕೆ ವಾಪಸ್ಸು ಬರ್ತಾರೆ. ಅವರು ಇಡೀ ರಾತ್ರಿ ಇಲ್ಲಿ ಕಳೀತಾರೆ... ನೀವೇನೂ ಯೋಚನೆ ಮಾಡಬೇಡಿ.... ಬನ್ನಿ ಕೂತ್ಕೊಳ್ಳಿ... ಬಸ್ಸು ಹೊರಡುವ ಸಮಯವಾಯಿತು' ಎನ್ನುತ್ತಾ ಬಸ್ಸಿನ ಕಡೆ ನಡೆದ.

ನಾನು ಐದು ನಿಮಿಷ ಅಲ್ಲೇ ನಿಂತಿದ್ದೆ. ಸುರೇಶನ ಕರುಣಾರ್ದ್ರವಾದ ದನಿ ನನ್ನ ಮನಸ್ಸನ್ನು ಛಿದ್ರಗೊಳಿಸುತ್ತಿತ್ತು. ನನ್ನ ಕಣ್ಣಿಗೆ ಅರಿವಾಗದೆ ಕಣ್ಣೀರು ಹರಿಯುತ್ತಿತ್ತು.

ಗೈಡ್ ಜೋರಾಗಿ ಕೂಗಿದಾಗ ಹೋಗಿ ಬಸ್ಸಿನಲ್ಲಿ ಕುಳಿತೆ.

'ಸಾರ್, ಈ ಜೀವನವೇ ಒಂದು ಭೂಲ್ ಭುಲೈಯಾ. ನಮ್ಮಲ್ಲಿ ಅನೇಕರು ಅದರಲ್ಲಿ ಕಳೆದು ಹೋಗ್ತೀವಿ.... ಅಲ್ಲಿಂದ ಹೊರಬಂದು ಧೈರ್ಯವಾಗಿ ಜೀವನವನ್ನು ಎದುರಿಸುವವರು ಎಷ್ಟು ಜನವೋ ಗೊತ್ತಿಲ್ಲ ಸಾರ್' ಎಂದು ಗೈಡ್ ನನ್ನ ಕಡೆ ನೋಡುತ್ತಾ ತತ್ವಜ್ಞಾನಿಯಂತೆ ನುಡಿದ.

ಬಸ್ಸು ಹೊರಟು ಎತ್ತರದ ಜಾಗದಿಂದ ಕೆಳಗಿಳಿಯತೊಡಗಿತು.

ಬಸ್ಸು ಅಷ್ಟು ದೂರ ಹೋದ ಮೇಲೂ ನನ್ನ ಕಿವಿಗೆ ಆ ವಾಸ್ತುವಿನಿಂದ ಹೊರಟ ಕೂಗು ಅಪ್ಪಳಿಸುತ್ತಿತ್ತು.

'.... ಶೀಲಾ.... ಶೀಲಾ....' ■

• ಬಿ.ಆರ್.ಲಕ್ಷ್ಮಣರಾವ್

ಸಾಲದೇ?



ನಿನ್ನ ಕಿರುನಗೆಯೊಂದು ಸಾಲದೇ, ಓ ನಲ್ಲೆ,
ಈ ಬಾಳು ಬೆಳಕಾಗಲು?
ನಿನ್ನ ಬಿರು ನುಡಿಯೊಂದು ಸಾಲದೇ ಕ್ಷಣದಲ್ಲೆ
ಆವರಿಸಲು ಕತ್ತಲು?

ನಿನ್ನ ನಿಟ್ಟುಸಿರೊಂದು ಸಾಲದೇ ಬಾಳಲ್ಲಿ
ಚಂಡ ಮಾರುತವೇಳಲು?
ನಿನ್ನ ಕಣ್ಣಿನ ಒಂದು ಕಿರು ಸನ್ನೆ ಸಾಲದೇ
ಜಗವನ್ನೆ ನಾ ಆಳಲು?

ಹುಬ್ಬುಗಳ ನೀನು ಗಂಟಿಕ್ಕಿದರೆ ಸಾಲದೇ
ಕಾರ್ಮೋಡಗಳು ಕೂಡಲು?
ಬರ ಸೆಳೆದು ನೀನು ಬಿಗಿದಪ್ಪಿದರೆ ಸಾಲದೇ
ಧೋ ಎಂದು ಮಳೆ ಸುರಿಯಲು?

ನಿನ್ನ ಕಂಗಳ ಒಂದು ಉರಿ ನೋಟ ಸಾಲದೇ
ಧಗಧಗಿಸಲು ಜೀವನ?
ನಿನ್ನ ತುಟಿಗಳ ಒಂದು ಸವಿ ಮುತ್ತು ಸಾಲದೇ
ಹೊಮ್ಮಿಸಲು ಹೊಸ ಚೇತನ?

ನಮ್ಮ ಇವನು

ಹಾಸ್ಯ

ನಮ್ಮ ಇವನು ಎಂಥವನೆಂದು ಗೊತ್ತಿದ್ದರೂ, ಅವನು ಅದನ್ನು ಮಾಡುತ್ತಲೇ ಇದ್ದಾನೆ.

• ಎಂ.ಕೆ.ಗೋಪಿನಾಥ್
ಟಿ 127, 4ನೇ ಬ್ಲಾಕ್, ಜಯನಗರ, ಬೆಂಗಳೂರು- 560 041.



ಹೊಟ್ಟೆಪಾಡಿಗಾಗಿ ಕೆಲವರು ನಾನಾ ರೀತಿಯ ವೇಷ ಹಾಕುತ್ತಾರೆ ಎಂಬ ನಾಣ್ಣುಡಿಯನ್ನು ಜನ ಆಗಾಗ ಪ್ರಸ್ತಾವಿಸುತ್ತಿರುತ್ತಾರೆ. ಆದರೆ ವೇಷ ಹಾಕುವವರು ಮಾಡುವುದೆಲ್ಲಾ ಹೊಟ್ಟೆಪಾಡಿಗಾಗಿಯೇ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ.

ಕೆಲವರಿರುತ್ತಾರೆ. ಜನ ತಮ್ಮ ಬಗೆಗೆ ಏನೆಂದುಕೊಂಡಾರು ಅಥವಾ ಎಂತಹ ಅಭಿಪ್ರಾಯ ಇರಿಸಿಕೊಂಡಿರುತ್ತಾರೆ ಎನ್ನುವುದರ ಪರಿವೆಯೇ ಇವರಿಗಿರುವುದಿಲ್ಲ. ಇಷ್ಟರಮೇಲೂ ಯಾರಾದರೂ ಇವರ ಅವಿವೇಕವನ್ನು ಗುರುತಿಸಿ 'ಹೀಗಲ್ಲ, ಹೀಗೆ' ಎಂದರು ಎನ್ನೋಣ. ಆಗ ಇವರು 'ಎಕ್ಕಡದಲ್ಲಿ ಹೊಡೆದರೂ ಬಸವನ ಚಕ್ಕಳ ತಾನೆ ಎಂದುಕೊಂಡು ಬಿಡುತ್ತಾರೆ. ಜಗತ್ತು ಕುರುಡು, ಅದಕ್ಕೆ ಕಣ್ಣಿಲ್ಲ ಎಂಬುದು ಇಂತಹವರ ಅಚಲ ನಂಬಿಕೆ.

ಈ ಬಗೆಯ ಜನಕ್ಕೆ ಸಾಧಾರಣವಾಗಿ 'ಹೊಟ್ಟೆಪಾಡಿನ' ಕಷ್ಟ ಇರುವುದಿಲ್ಲ. ಹೀಗೆ ನಮ್ಮ ಪೈಕಿ ಒಬ್ಬರು ಹೊಟ್ಟೆಪಾಡಿಗೆ ಬೇರೆ ಏನೋ ನೌಕರಿ ಮಾಡುತ್ತಿದ್ದರೂ ನಮ್ಮಂತಹ ಬಡಪಾಯಿಗಳನ್ನು ಕಂಡಾಗ, 'ನಾನು ಜರ್ನಲಿಸ್ಟ್ ಕಣಯ್ಯ' ಎಂದು ಅಬ್ಬರಿಸುತ್ತಾರೆ. 'ಓಹೋ ನೀವು ಪೇಪರಿನವರೆ? ಹಾಗಾದರೆ ನಿಮ್ಮ ಹತ್ತಿರ ಸ್ವಲ್ಪ ಹುಷಾರಾಗಿರಬೇಕಪ್ಪ ಎಂದಾಗ ಹೆಮ್ಮೆಯಿಂದ ಬೀಗುತ್ತಾರೆ. ರೆವೆನ್ಯೂ ಇನ್ಸ್‌ಪೆಕ್ಟರ್ ಒಬ್ಬರು ನನ್ನಿಂದ ಹಣ ಪಡೆದು ಕೆಲಸ ಮಾಡಿಕೊಡದೆ ಹೋದರು ಎಂಬ ಸಂಗತಿಯನ್ನು ನಾನಿವರ ಗಮನಕ್ಕೆ ತಂದು, 'ಇದನ್ನ ಸ್ವಲ್ಪ ವಿಚಾರಿಸ್ತೀರಾ?' ಎಂದು ಕೇಳಿದೆ. ನಮ್ಮ ಜರ್ನಲಿಸ್ಟು ಮೂಗರಳಿಸಿಕೊಂಡು, 'ಯಾರು ಆ ಆಯೋಗ್ಯ? ಅವನ ಹೆಸರು ಕೊಡು. ಪೇಪರಿನಲ್ಲಿ ಅವನ ಹೆಸರು ಬರೋ ಹಾಗೆ ಮಾಡಿ ಅವನ ಮಾನ ಮೂರು ಕಾಸಿಗೆ ಮಾರಾಟ ಆಗೋಹಾಗೆ ಮಾಡಿಬಿಡ್ತೇನೆ; ಗಂಟುಮೂಟೆ ಕಟ್ಟಿಕೊಂಡು ಊರುಬಿಟ್ಟು ಓಡಿಹೋಗೋ ಹಾಗೆ ಮಾಡದಿದ್ರೆ ಕೇಳು' ಎಂದು ಗುಡುಗಿದರು. ನಾನು ಬೆರಗಾಗಿ ಅವರು ಕೇಳಿದ ವಿವರಗಳನ್ನೆಲ್ಲಾ ಒದಗಿಸಿದೆ. ಮುಂದೇನಾಯಿತು ಎಂಬುದನ್ನು ಊಹಿಸಿಕೊಳ್ಳೋದು ತುಂಬ ಸುಲಭ. ನಾನು ಅವರಿಗೆ ದೂರು ಕೊಟ್ಟಾಲಾಗಾಯ್ತು ಆ ಜರ್ನಲಿಸ್ಟಿನ ದರ್ಶನ ಭಾಗ್ಯವೇ ನನಗೆ ಸಿಗುತ್ತಿಲ್ಲ! ಹಾಗೂ ಅಲ್ಲೊಮ್ಮೆ ಇಲ್ಲೊಮ್ಮೆ ಕಣ್ಣಿಗೆ ಬಿದ್ದಾಗ 'ಬಂದೆ, ತಾಳಿ' ಎನ್ನುವ ಹಾಗೆ ದೂರದಿಂದಲೇ ಕೈತೋರಿಸಿ ಮಾಯವಾಗುತ್ತಾರೆ. ಗಂಟುಮೂಟೆ ಕಟ್ಟಿಕೊಂಡು (ಬಹುಶಃ ಹೆಂಡತಿ ಮಕ್ಕಳೊಡನೆ) ಮೂರು ದಿನದಲ್ಲಿ ಊರು ಬಿಡಬೇಕಿದ್ದ ಆ ರೆವೆನ್ಯೂ ಇನ್ಸ್‌ಪೆಕ್ಟರು ಹಾಯಾಗಿ ಮಾರುತಿ ಕಾರ್‌ನಲ್ಲಿ ಓಡಾಡಿಕೊಂಡಿದ್ದಾರೆ!

ಹೀಗೇ ಇನ್ನೊಬ್ಬರು ಎಂತಹದೋ ಅಯ್ಯ ಎಂದು ಅವರ

ಹೆಸರು. ರೌಡಿಗಳ ಹಾಗೆ ಮಾತನಾಡುವುದು ಇವರಿಗೆ ತುಂಬ ಇಷ್ಟ. 'ಹೊಡಿ, ಬಡಿ, ಕಡಿ' ಎಂಬ ಮೂರು ಶಬ್ದಗಳು ಸದಾ ಇವರ ನಾಲಿಗೆಯ ಮೇಲೆ ನಲಿದಾಡುತ್ತಿರುತ್ತವೆ. ನನಗೆ ವಿನಾಕಾರಣ ತೊಂದರೆ ಕೊಡುತ್ತಿದ್ದ ವ್ಯಕ್ತಿಯೊಬ್ಬನ ವಿಚಾರವನ್ನು ನಾನು ಈವಯ್ಯನ ಗಮನಕ್ಕೆ ತಂದು, 'ಸ್ವಲ್ಪ ಸಹಾಯ ಮಾಡ್ತಿರಾ?' ಎಂದು ಕೇಳಿದೆ.

'ಇದು ನನ್ನತನಕ ಬರಬೇಕಾದ ವಿಚಾರವೇ ಅಲ್ಲ. ನನ್ನ ಗುಂಪಿನ ಹುಡುಗರೇ ಈ ಕೆಲಸ ಮಾಡ್ತಾರೆ. ಆ ಮನುಷ್ಯ ನಿನ್ನ ತಂಟೆಗೆ ಬರದಂತೆ ಅವನ ಸೊಂಟ ಮುರಿದು ಮೂಲೇಲಿ ಕೂಡಿಸಿದರಾಯಿತಲ್ಲ' ಎಂದೆಲ್ಲಾ ಅಭಿನಯಸಮೇತ ಹೂಂಕರಿಸಿದರು. ಮುಂದೆ? ಏನೂ ಇಲ್ಲ. ನನಗೆ ತೊಂದರೆ ಕೊಡುತ್ತಿದ್ದವನು ಚೆನ್ನಾಗಿಯೇ ಇದ್ದಾನೆ.

ಆ ನಮ್ಮ ಜರ್ನಲಿಸ್ಟ್ ಫ್ರೆಂಡು ಯಾರನ್ನೇ ಆಗಲಿ ಜೈಲಿಗೆ ಹಾಕಿಸಿದ್ದಿಲ್ಲ; ಈ ನಮ್ಮ ರೌಡಿ ಯಾರ ಸೊಂಟವನ್ನೂ ಮುರಿದದ್ದು ಕಂಡುಬಂದಿಲ್ಲ.

ಇಂತಹ ನಮ್ಮ ಫ್ರೆಂಡುಗಳಿಂದ ಸಮಾಜಕ್ಕೆ ನಿಜವಾಗಿ ಏನೂ ಹಾನಿಯಿಲ್ಲ. ಪೇಪರುಗಳಲ್ಲಿ ಬರುತ್ತದಲ್ಲ 'ಸಮಾಜ ಕಂಟಕರು' ಅಂತ, ಆ ಪೈಕಿ ಇವರಲ್ಲ. ಆದರೆ ಇಂತಹವರದೇ ಇನ್ನೊಂದು ಪಟ್ಟಿಯನ್ನು ತಯಾರಿಸಬಹುದು. ಅಷ್ಟಿದೆ ಇವರ ಸಂಖ್ಯೆ.ಅಂತಹದೊಂದು ಪಟ್ಟಿ ತಯಾರಿಸಿದರೆ ಅದಕ್ಕೆ 'ದೊಡ್ಡಸ್ತಿಕೆಯ ಹುಚ್ಚು ಹಿಡಿದವರ ಯಾದಿ' ಎಂದು ಹೆಸರು ಕೊಡಬಹುದು.

ಈ ದೊಡ್ಡಸ್ತಿಕೆಯ ಹುಚ್ಚು ಹಿಡಿದವರ ಒಂದು ಲಕ್ಷಣವೆಂದರೆ ತಾವು ಏನೆಲ್ಲವೋ ಅದಾಗಿ ತಮ್ಮನ್ನು ತೋರಿಸಿಕೊಳ್ಳುವುದು. ನೆಟ್ಟಗೆ ನಾಲ್ಕು ಸಾಲು ಬರೆಯಲು ಬಾರದ ವ್ಯಕ್ತಿಗೆ ಜರ್ನಲಿಸ್ಟ್ ಎನಿಸಿಕೊಳ್ಳುವಾಸೆ; ಸ್ವಲ್ಪ ಜೋರಾಗಿ ಗದರಿದರೆ ನಿಮ್ಮಿಂದ ಆರು ಗಾವುದ ದೂರದಲ್ಲಿ ನಿಲ್ಲುವ ಪುಕ್ಕಲನಿಗೆ 'ರೌಡಿ' ಎನ್ನಿಸಿಕೊಳ್ಳಬೇಕೆಂಬ ಚಪಲ!

ಇಂತಹ ನಾಟಕದ ಮನುಷ್ಯರ ಪಟ್ಟಿಯಲ್ಲಿ ಮೊದಲನೆಯ ಹೆಸರಾಗಿ ಬರಬೇಕಾದ್ದು ನಮ್ಮ ಇವನದು. ತನ್ನನ್ನು ಯಾರು ಯಾರಿಗೋ ಹೋಲಿಸಿಕೊಂಡು ತಿರುಗಾಡುವ ಇವನು ಫ್ಯಾಕ್ಟರಿಯೊಂದರಲ್ಲಿ ಕೆಲಸದಲ್ಲಿದ್ದಾನೆ.

ನೀವು ಅವನನ್ನು ಖಂಡಿತವಾಗಿಯೂ ನೋಡಿಯೇ ಇರುತ್ತೀರಿ. ಅವನು ನಿಮ್ಮೊಡನೆ ಗಂಟೆಗಟ್ಟಲೆ ಮಾತನಾಡಿದ್ದರೂ ಆಶ್ಚರ್ಯವಿಲ್ಲ. ಇವನಿರದ ತಾವಿಲ್ಲ ಸರ್ವಾಂತರ್ಯಾಮಿ ಇವನಾದ್ದರಿಂದ ಎಲ್ಲೆಲ್ಲೂ ಓಡಾಡುತ್ತಿರುತ್ತಾನೆ. 'ಯಾಕೆ ಇಷ್ಟೆಲ್ಲ ಸುತ್ತಿ ಬಳಸಿ ಮಾತಾಡ್ತೀರಿ? ನೇರವಾಗಿ ಅವನ ಹೆಸರೇ ಹೇಳಿಬಿಡಬಾರದೆ? ಎಂಬುದು ತಾನೆ ನಿಮ್ಮ ಗಂಟುಹುಬ್ಬಿನ ಪ್ರಶ್ನೆ.

ಅವನು ನನಗೆ ಹೇಳಿರುವಂತೆ ಅವನ ಹೆಸರು ಕುಮಾರವ್ಯಾಸ. ನಿಮ್ಮೊಂದಿಗೆ ತನ್ನ ಹೆಸರನ್ನು ಪುಟ್ಟಣ್ಣ ಕಣಗಾಲ್ ಎಂದು ಹೇಳಿಕೊಂಡಿದ್ದಾನು. ಕೆಲವರ ಬಳಿ ತನ್ನ ಹೆಸರನ್ನು ಅಮಿತಾಭ್ ಬಚ್ಚನ್ ಎಂದು ಕೂಡ ಹೇಳಿಕೊಂಡಿರಲಿಕ್ಕೆ ಸಾಕು. ನನಗೆ ತಿಳಿದಂತೆ ಅವನಿಗೆ ಹತ್ತಕ್ಕೂ ಹೆಚ್ಚು ಹೆಸರುಗಳಿವೆ. ಒಬ್ಬೊಬ್ಬರಿಗೆ ಒಂದೊಂದು ಹೆಸರಿನಿಂದ ಪರಿಚಿತನಾದ ಈ ಅಪರಿಚಿತ ವ್ಯಕ್ತಿಯ ಹೆಸರನ್ನು ಏನೆಂದು ಹೇಳಲಿ?

ಆಸಾಮಿ ಕೆಡುಕನಲ್ಲ; ಕಪಟಿಯೂ ಅಲ್ಲ. ಆದರೆ ತಾನೊಬ್ಬ ದೊಡ್ಡ ಬರಹಗಾರ ಎಂದು ತೋರಿಸಿಕೊಳ್ಳಬೇಕೆಂಬುದು ಇವನಿಗೆ ಹತ್ತಿಕೊಂಡಿರುವ ಹುಚ್ಚು. ಒಂದು ಸಲ ಈ ವ್ಯಕ್ತಿ ಎಲ್ಲೋ ಹೋಗುತ್ತಿದ್ದ ನನ್ನ ಬೆನ್ನು ಹತ್ತಿ, ಹಿಂದಿನಿಂದ 'ಸಾರ್, ಸಾರ್' ಎಂದ. ಕುಶಲೋಪರಿ ಎಲ್ಲ ಮುಗಿದಮೇಲೆ, 'ಚಿತ್ರದುರ್ಗದ ಇತಿಹಾಸದ ಮೇಲೆ ನಾನೊಂದು ನಾಟಕ ಬರ್ದಿದೀನಿ ಸಾರ್' ಎಂದ.

'ಸಂತೋಷ' ನಿಮ್ಮ ನಾಟಕ ಬೇಗ ಪ್ರಕಟವಾಗಿ ನಿಮಗೆ ಕೀರ್ತಿ ಬರಲಿ. ನಾಲ್ಕಾರು ರಂಗ ಭೂಮಿ ತಂಡದವರು ನಿಮ್ಮ ನಾಟಕವನ್ನು ಆಡಲಿ' ಎಂದು ನಾನು ಜಾರಿಕೊಳ್ಳಲು ನೋಡುತ್ತಿದ್ದ ಹಾಗೆಯೇ ಕುಮಾರವ್ಯಾಸನು,

'ಸಾರ್, ನಾನು ಬರೆದಿರುವ ನಾಟಕವನ್ನು ನೀವು ಓದಿ, ನಿಮ್ಮ ಅಭಿಪ್ರಾಯ ತಿಳಿಸಬೇಕು' ಎಂದು ಗಂಟುಬಿದ್ದ. ಅಷ್ಟಕ್ಕೇ ನಿಲ್ಲಿಸದೆ, ತನ್ನ ಹೆಗಲ ಚೀಲದಲ್ಲಿದ್ದ ಸ್ಟೂಡೆಂಟ್ ನೋಟ್ ಪುಸ್ತಕವನ್ನು ನನಗೆ ದಾಟಿಸುತ್ತಾ,

'ನಾಟಕ ಇದರಲ್ಲಿದೆ ಸಾರ್' ಎಂದ.

ಕುಮಾರವ್ಯಾಸ ಬರೆದಿದ್ದ ನಾಟಕವನ್ನು ಓದಿ ನಾನು ನಿಜವಾಗಿಯೂ ಮೂಕವಿಸ್ಮಿತನಾಗಿಬಿಟ್ಟೆ. ಸೊಗಸಾದ ಶೈಲಿ, ಶುದ್ಧ ಕನ್ನಡ, ವಸ್ತುವಿನ ಮೇಲಿನ ಹಿಡಿತ ಮುಂತಾದ ಎಲ್ಲ ವಿವರಗಳಲ್ಲೂ ನಾಟಕ ನಿಜಕ್ಕೂ ಪ್ರಬುದ್ಧವಾದದ್ದೇ ಆಗಿತ್ತು. 'ಪರವಾಗಿಲ್ಲ ಈ ಕುಮಾರವ್ಯಾಸ. ವಯಸ್ಸಿಗೆ ಮೀರಿದ ಪ್ರತಿಭೆ ಇವನದು. ಇಂತಹ ಒಳ್ಳೆಯ ನಾಟಕವೊಂದನ್ನು ಬರೆದೂ ಈತ ಅಪ್ರಸಿದ್ಧನಾಗಿಯೇ ಉಳಿದಿದ್ದಾನಲ್ಲ' ಎಂದುಕೊಂಡೆ. ಒಂದೆರಡು ದಿನಗಳಲ್ಲೇ ಕುಮಾರವ್ಯಾಸ ಸಿಕ್ಕಾಗ ಅವನ ಸ್ಟೂಡೆಂಟ್ ನೋಟ್ ಬುಕ್ಕನ್ನು ಹಿಂದಿರುಗಿಸುತ್ತಾ,

'ನಾಟಕ ನಿಜವಾಗಿಯೂ ರಸವತ್ತಾಗಿದೆ. ಇದನ್ನು ಪ್ರಕಟಿಸದೆ ಹಾಗೇ ಏಕೆ ಇಟ್ಟಿದ್ದೀರಿ?' ಎಂದು ಪ್ರಾಮಾಣಿಕವಾಗಿಯೇ ಹೊಗಳಿದೆ. ಕುಮಾರವ್ಯಾಸ ಭುಜ ಕುಣಿಸುತ್ತಾ,

'ಇಂತಹ ನಾಟಕಗಳು ನನ್ನ ಬಳಿ ಇನ್ನೂ ಹತ್ತಾರಿವೆ ಸಾರ್. ಆದರೆ ನನ್ನಂತಹ ಯುವ ಪ್ರತಿಭೆಗಳನ್ನು ಗುರುತಿಸೋ ಪತ್ರಿಕಾ ಸಂಪಾದಕನಾಗಲಿ, ಪುಸ್ತಕ ಪ್ರಕಾಶಕನಾಗಲಿ ಎಲ್ಲಿದ್ದಾನೆ, ಸಾರ್? ನಮ್ಮಂಥವರು ಹೀಗೇ ಪ್ರೋತ್ಸಾಹವಿಲ್ಲದೆ ಬೀದಿ ಅಲೆಯುತ್ತಾ ಇರಬೇಕು' ಎಂದ, ಜೋಲುಮುಖ ಮಾಡಿಕೊಂಡು.

ಇದಾದ ಐದಾರು ದಿನಗಳ ತರುವಾಯ ಒಂದು ದಿನ ಲೈಬ್ರರಿಯಲ್ಲಿ ಪುಸ್ತಕಗಳನ್ನು ತಿರುವಿಹಾಕುತ್ತಿದ್ದಾಗ, ನನಗೆ ತುಂಬ ಪ್ರಿಯವಾದ ಲೇಖಕ ದಿವಂಗತ ತ.ರಾ.ಸು ಅವರ ನಾಟಕ ಕೃತಿಯೊಂದು ಕಣ್ಣಿಗೆ ಬಿತ್ತು. ಒಂದೆರಡು ಪುಟಗಳನ್ನು ಓದುವಷ್ಟರಲ್ಲಿಯೇ ಈ ಚಾರಿತ್ರಿಕ ನಾಟಕವನ್ನು ಈಗ ಸ್ವಲ್ಪವೇ ದಿವಸಗಳ ಹಿಂದೆ ಓದಿದಂತಿದೆಯಲ್ಲ ಎನಿಸತೊಡಗಿ ತಲೆ ತುರಿಸಿಕೊಂಡಾಗ ಎಲ್ಲ ಸ್ಪಷ್ಟವಾಯಿತು. ಕುಮಾರ ವ್ಯಾಸ ಕೊಟ್ಟಿದ್ದ ನೋಟ್ ಬುಕ್‌ನಲ್ಲಿದ್ದುದು ಈ ನಾಟಕವೇ! 'ಎಲಾ ಕೃತಿಚೋರ ಕುಮಾರವ್ಯಾಸ, ನಿನಗೆ ಸರಿಯಾದ್ದನ್ನು ಮಾಡುತ್ತೇನೆ. ಇರು' ಎಂದುಕೊಂಡು, ತುಂಬ ಪ್ರಯಾಸಪಟ್ಟು ಹಿಡಿದೆ. ಆ ವ್ಯಾಸನನ್ನು ಅವನ ಮುಖಕ್ಕೆ ರಾಚುವಂತೆ,


'ಏನ್ರೀ ಇದು? ತ.ರಾ.ಸು ಬರೆದ ನಾಟಕಕ್ಕೂ, ನೀವು ಬರೆದಿರುವ ನಾಟಕಕ್ಕೂ ಒಂದು ಅಕ್ಷರ ಕೂಡ ವ್ಯತ್ಯಾಸ ಕಾಣ್ತಾ ಇಲ್ವಲ್ರೀ. ಯಾವುದು ಅಸಲಿ, ಯಾವುದು ನಕಲಿ? ಏನೋ ಒಂದೂ ಅರ್ಥ ಆಗಿಲ್ಲ' ಎಂದು ದಬಾಯಿಸಿದೆ.

'ಹೌದೆ? ಇದು ಕೃತಿಚೌರ್ಯ ಸಾರ್, ಕೃತಿಚೌರ್ಯ. ಆ ತ.ರಾ.ಸು. ಎಂತಹ ಘಾಟಿ ಇದಾರೆ ನೋಡಿದಿರಾ? ನಾನು ಬರೆದ ನಾಟಕವನ್ನು ತಮ್ಮದು ಅಂತ ಹೇಳಿಕೊಂಡು ಅಚ್ಚು ಮಾಡಿಸಿಬಿಟ್ಟಿದ್ದಾರಲ್ಲ. ನಾನು ಇಷ್ಟಕ್ಕೇ ಬಿಡೊಲ್ಲ. ಆ ತ.ರಾ.ಸು ಅವರ ಮೇಲೆ ಖಟ್ಲೆ ಜಾರಿ ಮಾಡುತ್ತೇನೆ' ಎಂದು ಜಾರಿಕೊಂಡ.

ಲಕ್ಷ ಜನರಲ್ಲಿ ಒಬ್ಬನು ಎನ್ನಬಹುದಾದಂತಹ ಅಪೂರ್ವ ವ್ಯಕ್ತಿ ಈ ಕುಮಾರವ್ಯಾಸ. ತಾನೊಬ್ಬ ದೊಡ್ಡ ಮನುಷ್ಯ, ಎಲ್ಲರೂ ತನ್ನನ್ನು ಗೌರವದಿಂದ ಸಾಹಿತಿ ಎಂಬ ಗೌರವದಿಂದ-ಕಾಣಬೇಕು ಎಂಬುದು ಕುಮಾರವ್ಯಾಸನ ಅಪೇಕ್ಷೆ. ಅವನ ಅಪೇಕ್ಷೆ ಒಂದು ದೃಷ್ಟಿಯಲ್ಲಿ ಸರಿಯಾದದ್ದೇ. ಆದರೆ ಗೌರವ ಸಂಪಾದಿಸಲು ಕುಮಾರವ್ಯಾಸ ಹಿಡಿಯುವ ಮಾರ್ಗಗಳು ಮಾತ್ರ ಸರ್ವಜ್ಞ ಕವಿ ಹೇಳುವಂತೆ 'ಕಳ ಹೋಗಿ ಕೆಮ್ಮಿದಂತಕು'-ಕಳ್ಳತನ ಮಾಡಲು ಹೋಗಿ ಕೆಮ್ಮುತ್ತಾ ಕೂತ ಹಾಗಾಗುತ್ತದೆ!

ಇಷ್ಟಾಯಿತಲ್ಲ. ಕುಮಾರವ್ಯಾಸನಂತಹವರು ಲೋಕದಲ್ಲಿರಬೇಕು. ಹಾಗಲ್ಲದಿದ್ದರೆ ಶುದ್ಧ ಮನರಂಜನೆ ಬಂದೀತೆಲ್ಲಿಂದ?

ಶಾಶ್ವತ




ರಾಜಕಾರಣಿಗಳ
ಕೈ ಅಮೃತ ಹಸ್ತ.
ಏಕೆಂದರೆ
ಅವರಿಡುವ ಅಡಿಗಲ್ಲು
ಎಂದೆಂದೂ ಶಾಶ್ವತ.

– ಅನಾರ್ಕಲಿ ಸಲೀಂ ಚಿಣ್ಯ

ಮಾಸ್ತಿ ಕಥಾಲೋಕ

• ಪ್ರೊ. ಎಲ್.ಎಸ್.ಶೇಷಗಿರಿರಾವ್
'ಜ್ಯೋತಿ', 267, 9ನೇ 'ಎ' ಮೇನ್,
ಜಯನಗರ 3ನೇ ಬ್ಲಾಕ್, ಬೆಂಗಳೂರು-560 011.

ಫೋಟೋ : ವಿ. ಗೋಪಾಲ್



ಮಾಸ್ತಿ ಕಥಾಲೋಕ ಒಂದು ಅದ್ಭುತ ಮಾನವೀಯ ಪ್ರಪಂಚ. ಇಲ್ಲಿ ಸಮಾಜದ ಎಲ್ಲ ಸ್ತರದವರೂ ಸಿಗುತ್ತಾರೆ. ಮಾಸ್ತಿ ಅವರ ಕಥೆಗಳನ್ನು ಬೇರೆ ಬೇರೆ ದೃಷ್ಟಿಗಳಿಂದ ಅಧ್ಯಯನ ಮಾಡಲಾಗಿದೆ. ಇವೆಲ್ಲ ಈಗಾಗಲೇ ಕನ್ನಡಿಗರ ಮುಂದಿದೆ. ಹಿರಿಯ ಲೇಖಕ -ವಿಮರ್ಶಕ ಪ್ರೊ.ಎಲ್.ಎಸ್.ಶೇಷಗಿರಿರಾವ್ ಅವರು ಮಾಸ್ತಿ ಕಥಾಲೋಕದ ಸೂಕ್ಷ್ಮ ಸೊಗಸನ್ನು ಇಲ್ಲಿ ಮತ್ತೊಮ್ಮೆ ನೋಡಿದ್ದಾರೆ.

ಸುಮಾರು 75 ವರ್ಷಗಳ ಅವಧಿಯಲ್ಲಿ ಮಾಸ್ತಿಯವರು ಹತ್ತಿರ ಹತ್ತಿರ ಒಂದು ನೂರು ಸಣ್ಣ ಕಥೆಗಳನ್ನು ಬರೆದರು. 90 ದಾಟಿದ ನಂತರವೂ ಅವರು ಒಳ್ಳೆಯ ಕಥೆಗಳನ್ನು ಬರೆದರು. ಅವರ ಕಥೆಗಳನ್ನು ಕುರಿತು ಮಾತನಾಡುವಾಗ ನೆನಪಿಡಬೇಕಾದ ಒಂದು ಅಂಶ ಎಂದರೆ, ಅವರ ಇಡೀ ಕಥಾ ಸಾಹಿತ್ಯ ಒಂದೇ ಬಗೆಯದು, ಬಣ್ಣ ಮಾತ್ರ ಬದಲಾಯಿಸಿ ಒಂದೇ ಚಿತ್ರವನ್ನು ಅಚ್ಚು ಮಾಡಿ ಕೊಡುವಂತೆ ಅವರ ಪ್ರತಿಭೆ ಒಂದೇ ಅನುಭವಕ್ಕೆ ಬೇರೆ ಬೇರೆ ಮಾತುಗಳನ್ನು ತೊಡಿಸಿತ್ತು ಎಂದು ಭಾವಿಸಬಾರದು. ಅವರ ವಸ್ತು ವಿಸ್ತಾರವಾಯಿತು, ಕಥೆಗಳಲ್ಲಿ ಚಿಂತನೆ ಗಹನವಾಗುತ್ತ ಹೋಯಿತು ಎಂಬುದು. ಒಂದೇ ವಸ್ತುವನ್ನು ಅವರು ತಮ್ಮ ಬದುಕಿನ ಬೇರೆ ಬೇರೆ ಘಟ್ಟಗಳಲ್ಲಿ ಆರಿಸಿಕೊಂಡಾಗಲೂ ಅದನ್ನು ಬಳಸಿಕೊಂಡ ರೀತಿ, ಅದರಲ್ಲಿ ತುಂಬಿದ ಚಿಂತನೆ ಬೇರೆಯಾಯಿತು. ಉದಾಹರಣೆಗೆ, ಗಂಡು - ಹೆಣ್ಣಿನ ಸಂಬಂಧ. ಅವರ ಮೊದಲನೆಯ ಕಥಾಸಂಗ್ರಹದಲ್ಲಿಯ 'ಒಂದು ಹಳೆಯ ಕತೆ' ಮತ್ತು 'ರಂಗಸ್ವಾಮಿಯ ಅವಿವೇಕ' ಕಥೆಗಳ ವಸ್ತು ಇದು. ಬೇರೆ ಬೇರೆ ಘಟ್ಟಗಳಲ್ಲಿ ಬರೆದ 'ವೆಂಕಟಸ್ವಾಮಿಯ ಪ್ರಣಯ', 'ಆಚಾರ್ಯರ ಪತ್ನಿ', 'ಗೌತಮಿ ಹೇಳಿದ ಕತೆ'. 'ವೆಂಕಲಿಗನ ಹೆಂಡತಿ', 'ಸೋರಲೀ ಪ್ರಸಂಗ'.... ಇಂಥ ಎಷ್ಟೋ ಕಥೆಗಳ ವಸ್ತು. 'ವಿಚಿತ್ರ ಪ್ರೇಮ' ದಂಥ ಬೆರಗುಗೊಳಿಸುವ (ಒಂದು ಹೆಣ್ಣು ಮೂವರನ್ನು ಪ್ರೀತಿಸಿದ) ಕಥೆ, ಅಣ್ಣ ತಂಗಿಯರ ನಿಷಿದ್ಧ ಪ್ರೀತಿಯ ಕಥೆ ಇವನ್ನು ಬರೆದರು. ಕಾಲ ಕಳೆದಂತೆ ಹೆಣ್ಣು ಗಂಡಿನ ಸೆಳೆತದ ಸಂಕೀರ್ಣತೆಯನ್ನು ಕಾಣುತ್ತ ಹೋದರು. 'ಅಜಾತಪಂತ ಅಯ್ಯಂಗಾರು' ಕಥೆಯಲ್ಲಿ ಜಾತಿಮತಗಳ ವ್ಯತ್ಯಾಸವನ್ನು ಮೀರಿ ಇದು ತರಬಹುದಾದ ನೆಮ್ಮದಿ. ಇಂಥ ವಿವೇಕದ ಸಂಬಂಧದ ಹದ ಘನತೆ ಇವನ್ನು ಚಿತ್ರಿಸಿದರು.

ಮಾಸ್ತಿಯವರ ಕಥೆಗಳನ್ನು ಬೇರೆ ಬೇರೆ ದೃಷ್ಟಿಗಳಿಂದ ಅಧ್ಯಯನ ಮಾಡಬಹುದು. ಈಚೆಗಿನ ವರ್ಷಗಳಲ್ಲಿ ಅವರ ಕಥೆಗಳಲ್ಲಿನ ವಸಾಹತುಶಾಹಿ ಅನುಭವವನ್ನು ಕೆಲವರು ವಿಶ್ಲೇಷಣೆ ಮಾಡಿದ್ದಾರೆ. ಅವರ ವೃತ್ತಾಂತ ತಂತ್ರವನ್ನು ಅಭ್ಯಾಸ ಮಾಡಿದ್ದಾರೆ. ಅವರು ಪೌರಾಣಿಕ ಸಾಮಗ್ರಿಯನ್ನು ಹೇಗೆ ಬಳಸಿಕೊಳ್ಳುತ್ತಾರೆ ಎಂದು ಅಧ್ಯಯನ ಮಾಡಿದ್ದಾರೆ. ಅವರ ಕಥೆಗಳು ನಮ್ಮ ಬದುಕಿಗೆ ಕೊಡುವ ಕೊಡುಗೆ ಏನು ಎನ್ನುವ ಪ್ರಶ್ನೆಯನ್ನು ಕೇಳಿಕೊಂಡು ಉತ್ತರಿಸಲು ಈ ಹ್ರಸ್ವವಾದ ಲೇಖನದಲ್ಲಿ ಪ್ರಯತ್ನಿಸುತ್ತೇನೆ.


ಮಾಸ್ತಿಯವರ ಜೀವನ ದರ್ಶನ ಬಹುಮುಖವಾದದ್ದು, ವಿಶಾಲ ವ್ಯಾಪ್ತಿಯದು. ಇದರಲ್ಲಿ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ನಿರೂಪಿಸುತ್ತಿದ್ದೇನೆ.

ಮಾಸ್ತಿಯವರ ಕಥೆಗಳಲ್ಲಿ ಬಹು ಬೇಗನೆ ಬದುಕಿನ ನೋವಿಗೆ ಸ್ಥಾನ ದೊರೆಯಿತು. ಅವರ ಸಾಹಿತ್ಯದ ಅಧ್ಯಯನದಲ್ಲಿ ಒಂದು ಕುತೂಹಲಕರ ಅಂಶ ಎಂದರೆ ವ್ಯಕ್ತಿ ಮಾಸ್ತಿಯವರಿಗೂ ಸೃಜನಶೀಲ ಸಾಹಿತಿ 'ಶ್ರೀನಿವಾಸ'ರಿಗೂ ಇದ್ದ ದೂರ. ಮಾಸ್ತಿಯವರೊಂದಿಗೆ ಮಾತನಾಡುವಾಗ ಅವರದೊಂದು ಸೂತ್ರ ರಕ್ತಗತವಾಗಿ ಹೋಗಿತ್ತು -ಬದುಕು ದೇವರು ನಡೆಸಿದಂತೆ ಸಾಗುತ್ತದೆ; ನಾವೆಲ್ಲ ಅವನ ಕೈಯಲ್ಲಿದ್ದೇವೆ. ಆದರೆ ಅವರ ಸಾಹಿತ್ಯದಲ್ಲಿ ಬದುಕಿನ ಕಷ್ಟ ಸುಖಗಳು, ಮನುಷ್ಯ ಸ್ವಭಾವದ ವೈರುಧ್ಯಗಳು, ವೈಚಿತ್ರ್ಯಗಳು ಎಲ್ಲವನ್ನು ಗುರುತಿಸಿದರು. ಅವರ ಮೊದಲನೆಯ ಸಂಕಲನ, ಕೆಲವು ಸಣ್ಣ ಕತೆಗಳು, 1920ರಲ್ಲಿ ಪ್ರಕಟವಾಯಿತು. ಅದರಲ್ಲಿ 'ನಮ್ಮ ಮೇಷ್ಟರು' ಎನ್ನುವ ಕಥೆ ಇದೆ. ಬಡ ಶಾಲೆಯ ಸಜ್ಜನ ಉಪಾಧ್ಯಾಯನ ಬವಣೆ ಕಥೆಯಲ್ಲಿ ಕರುಳು ಹಿಂಡುತ್ತದೆ. ಕಥೆಯಲ್ಲಿ ಈ ನಿರೂಪಣೆಯೊಂದಿಗೆ ಯಮಳ ನದಿಯಾಗಿ ಹರಿಯುವ ಹಾಸ್ಯ, ಶುದ್ಧ ನಿರ್ಮಲ ಹಾಸ್ಯ ಇಲ್ಲದಿದ್ದರೆ ಈ ನೋವನ್ನು ತಡೆದುಕೊಳ್ಳುವುದೇ ಕಷ್ಟವಾಗುತ್ತಿತ್ತು. ಇಲ್ಲಿ ಕಥೆಯನ್ನು ಹೇಳುವವಳು ಪ್ರೌಢೆ; ತಾನು ಚಿಕ್ಕ ಹುಡುಗಿಯಾಗಿದ್ದಾಗ ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ಶಾಲೆಯಲ್ಲಿ ನಡೆದ ಸಂಗತಿಯನ್ನು ಜ್ಞಾಪಿಸಿಕೊಂಡು ಹೇಳುತ್ತಿದ್ದಾಳೆ. ಕಥೆಯ ಬಹುಭಾಗ ಮುಗಿದ ಮೇಲೆ ಬಹು ಹಿಂದೆ ನಡೆದ ಘಟನೆಯಾದ ಇತ್ತೀಚೆಗೆ ನಡೆದ ಸಂಗತಿಗೆ ಬರುತ್ತದೆ, ದೃಷ್ಟಿಕೋನ, 'ಪರ್ಸ್ಪೆಕ್ಟಿವ್' ಥಟ್ಟನೆ ಬದಲಾಗುತ್ತದೆ. ಈ ಬಡಪಾಯಿ ಮೇಷ್ಟರು ಬಡತನದ ಹಂತವನ್ನು ತಡೆದುಕೊಂಡದ್ದು ಹೇಗೆ? ಕಥೆಯ ಮೊದಲ ಭಾಗದಲ್ಲಿ ಕಂಡಂತೆ ಅವರ ಹೆಂಡತಿಯೂ ದಿಟ್ಟ ಹೆಂಗಸು, ನಾಲಿಗೆಗೂ ದಿಟ್ಟತನವೇ. ಆದರೆ ಕಟ್ಟಕಡೆಯ ಭಾಗದಲ್ಲಿ ನಾವು ಕಾಣುತ್ತೇವೆ ಈ

ಹೆಂಗಸಿನ ಹೃದಯದಲ್ಲಿದ್ದ ಪ್ರೀತಿಯನ್ನು. ಯಾವ ಪೌರಾಣಿಕ ಸತಿ ಪತಿವ್ರತೆಯರ ಪತಿಪ್ರೇಮಕ್ಕೆ ಕಡಿಮೆ ಇಲ್ಲದ ಪ್ರೀತಿಯನ್ನು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎನ್ನುವ ಭಗವದ್ಭಕ್ತರು ಬದುಕಿನ ವಿಷಯ ಏನೇ ಭಾವಿಸಿರಲಿ, ಕಥೆಗಾರ ಮಾಸ್ತಿ, ಕಥೆಗಾರ 'ಶ್ರೀನಿವಾಸ'ರು ಬದುಕನ್ನು ಸಹ್ಯ ಮಾಡುವ ಶಕ್ತಿಗಳಲ್ಲಿ ಒಂದನ್ನು ಪ್ರೀತಿಯಲ್ಲಿ ಕಾಣುತ್ತಾರೆ. ಬದುಕು ಮೇಲೆ ಸುಡುವ ಬಿಸಿಲು, ಕೆಳಗೆ ಸುಡುವ ಮರುಳು ಇವುಗಳ ನಡುವಣ ಪ್ರಯಾಣವಾದಾಗ ಮನುಷ್ಯ - ಮನುಷ್ಯರ ನಡುವಣ ಪ್ರೀತಿಯೇ ವೃಗ ನೆರಳು, ನಾಲಿಗೆಗೆ ನೀರು.

'ಶ್ರೀನಿವಾಸ'ರಿಗೆ ಬದುಕು ಎಷ್ಟು ಜಟಿಲ ಎನ್ನುವುದರ ಅರಿವಿತ್ತು. ಇದು ನಮಗೆ ಅನುಭವಕ್ಕೆ ಬರುವುದು ಅವರ ಕಥೆಗಳಿಗಿಂತ ಕಾದಂಬರಿಗಳಲ್ಲಿ ಹೆಚ್ಚು. ಆದರೆ 'ಟಾಲ್‌ಸ್ಟಾಯ್ ಮಹರ್ಷಿಯ ಭೂರ್ಜ ವೃಕ್ಷಗಳಂತಹ ಕಥೆಗಳಲ್ಲಿ ಈ ಜಟಿಲತೆ ಹೆಪ್ಪುಗಟ್ಟುತ್ತದೆ. ಕಥೆಯ ಕೇಂದ್ರ ವ್ಯಕ್ತಿ ಜಗತ್ತಿನ ಅತ್ಯಂತ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬ, 'ಮಹರ್ಷಿ' ಎನ್ನುವ ಮಾತಿಗೆ ಅರ್ಹ. ಬಡವರನ್ನು ಕಂಡರೆ ಹೃದಯ ಕರಗುತ್ತದೆ. ತನ್ನದು ಎಂದು ಆತನಿಗೆ ಏನೂ ಬೇಡ. ಹೆಂಡತಿ ಕೆಟ್ಟವಳಲ್ಲ. ಗಂಡನಲ್ಲಿ ಪ್ರೀತಿ ಇರುವ ಹೆಣ್ಣು ಕೆಟ್ಟವಳಲ್ಲ ಸಂಸಾರ ಚೆನ್ನಾಗಿ ಬಾಳಲಿ ಎಂದು ಬಯಸುವವಳು. ಅವಳ ವಯಸ್ಸಿಗೆ ಅನುಗುಣವಾದ, ಆದರೆ ದುಷ್ಟವಲ್ಲದ ಚಪಲಗಳಿದ್ದಿರಬಹುದು. ಆದರೆ ಶ್ರೀಮಂತಿಕೆ, ಗೌರವ ಇದ್ದ ಆ ಕುಟುಂಬ, ಮಹರ್ಷಿಯೇ ಯಜಮಾನನಾದ ಕುಟುಂಬ, ಬಡತನದ ಕಾಟ ಇಲ್ಲದ ಕುಟುಂಬ, ನೆಮ್ಮದಿಯಾಗಿಯೇ ಇರಬೇಕು. ಆದರೆ ಆ ಕುಟುಂಬದಲ್ಲಿ ನೆಮ್ಮದಿಯೇ ಇಲ್ಲ. ಕೊನೆಗೆ ಮಹರ್ಷಿಯ ಸಾವು ಮನೆಯಿಂದ ದೂರ ಒಂದು ರೈಲ್ವೆ ನಿಲ್ದಾಣದಲ್ಲಿ. ದುಷ್ಟರಲ್ಲದ ದುರಂತ ಇಲ್ಲಿ. ಕಥೆಯಾದರೂ ಪ್ರಶ್ನೆಗಳ ಸರಣಿಯಿಂದಲೇ ಮುಗಿಯುತ್ತದೆ.



ಇಂಥ ಬದುಕಿನಲ್ಲಿ ಮನುಷ್ಯ ಬದುಕಬೇಕು ಹೇಗೆ? ನೇರ ನಡೆ, ನೇರ ನುಡಿ, ಹೃದಯವಂತಿಕೆ ಇವುಗಳೊಡನೆ ಇವುಗಳಾಚೆಯ ಜಿಜ್ಞಾಸೆಯೂ ಹಲವು ಕಥೆಗಳಲ್ಲಿದೆ - 'ರಾಜ ಋಷಿಯ ಕಳಂಕ', 'ಮಂತ್ರೋದಯ', 'ಶ್ರೀ ಕೃಷ್ಣನ ಅಂತಿಮ ದರ್ಶನ' ಇಂಥ ಕಥೆಗಳಲ್ಲಿ. ಆದರೆ ಜನ ಸಾಮಾನ್ಯರೇ ಕೇಂದ್ರವಾಗಿರುವ ಕಥೆಗಳಲ್ಲಿ ತೇಲಿ ಬರುವ ಚಿಂತನೆ ಇದು. ಬುದ್ಧಿವಂತಿಕೆ ಸುಖವನ್ನು ತರುವುದಿಲ್ಲ. ಒಳ್ಳೆಯವನಾದರೂ ಸುಖಕ್ಕೆ ಆಶ್ವಾಸನೆ ಅಲ್ಲ. ತಿಳಿವಳಿಕೆ ಸಾಲದವರು, ದುಷ್ಟರು ಎಲ್ಲ ಒಳ್ಳೆಯವರ ಬದುಕಿಗೂ ಹುಳಿ ಹಿಂಡುತ್ತಾರೆ 'ಚನ್ನಮ್ಮ, ಚಿಕ್ಕವ್ವ, ವೆಂಕಲಿಗನ ಹೆಂಡತಿ, 'ಬೈಚೇಗೌಡ' ಮೊದಲಾದ ಕಥೆಗಳಲ್ಲಿ ಕಾಣುವಂತೆ ಆದರೆ ಶುದ್ಧ ಜೀವನ ನಡೆಸಿದವರ ಪಾಲಿಗೆ ಆ ಸಮಾಧಾನವಾದರೂ ಉಂಟು. 'ಚಟ್ಟೇಕಾರ ತಾಯಿ' ಮಾಸ್ತಿಯವರ ಸೊಗಸಾದ ಕಥೆಗಳಲ್ಲಿ ಒಂದು. ಈ ಚಟ್ಟೇಕಾರ ತಾಯಿ ಭಾರತದಲ್ಲಿ ಅಷ್ಟೇನೂ ಗೌರವವನ್ನು ಪಡೆಯದ ಸಮೂಹಕ್ಕೆ ಸೇರಿದವಳು. ಅಂಥ ವಿದ್ಯಾವಂತೆಯೂ ಅಲ್ಲ. ಗಂಡ ಕುಡುಕನಾದ. ಕಷ್ಟದಿಂದ ಬೆಳೆಸಿದ ಮಕ್ಕಳಲ್ಲಿ ಹಿರಿಯವನು, 'ತನ್ನ ಹೆಂಡತಿಯನ್ನು ವಹಿಸಿಟ್ಟುಕೊಂಡು, 'ನೀನು ಸುಮ್ಮನಿರಮ್ಮ, ನೀ ಒಬ್ಬ ಮುದುಕಿ' ಎಂದ. ಮಕ್ಕಳೂ ಅವರ ಜೊತೆಯವರೂ ಕೆಲಸ ಮಾಡುತ್ತಿದ್ದ ಕಡೆ ಸೂಪರಿಂಟೆಂಡೆಂಟ್‌ನ ಅವಿವೇಕದಿಂದ ಮುಷ್ಕರವಾಗಿ ವಿರಸವಾಯಿತು. ಇಂಥ ಎಲ್ಲ ಸಂದರ್ಭಗಳಲ್ಲಿ ಹೆಚ್ಚು ವಿದ್ಯೆ ಇಲ್ಲದ ಆ ಹೆಂಗಸು ದಿಟ್ಟತನದಿಂದ ವಿವೇಕದ ದಾರಿ ತೋರುತ್ತಾಳೆ. ಗಂಡ ತೀರಿಕೊಂಡಾಗ, ಇನ್ನು ನೋಡಲು ಲಕ್ಷಣವಾಗಿದ್ದ ಈಕೆಗೆ ಒಬ್ಬಾತ ನೀತಿಯಲ್ಲದ ದಾರಿಯನ್ನು ಹಿಡಿಯಬಹುದು ಎಂದು ಸೂಚ್ಯವಾಗಿ ಹೇಳುತ್ತಾನೆ. ಈಕೆ ಸ್ಪಷ್ಟವಾಗಿ ಹೇಳುತ್ತಾಳೆ ; 'ಇಂಥ ಮಾತನ್ನು ಮುಚ್ಚಿ ಹೇಳಿ ಪ್ರಯೋಜನವಿಲ್ಲ. ಬಿಚ್ಚಿ ಹೇಳಬೇಕು. ಬಿಚ್ಚಿ ಹೇಳಲು ಹಿಂತೆಗೆಯುವವರು ಇಂಥ ಮಾತನ್ನು ಎತ್ತಬಾರದು... ನಾನು ನಿಮ್ಮ ಸಹೋದರಿ ಎಂದು ಎಣಿಸಿ ನನಗೆ ಏನು ಹೇಳಬಹುದು ಅಂಥ ಮಾತನ್ನು ಹೇಳಿ, ನಾನು ಸಹ ನಿಮಗೆ ಸಹೋದರಿಯಾಗಿದ್ದರೆ ಏನು ಹೇಳಬಹುದಿತ್ತೋ ಆ ಮಾತನ್ನು ಹೇಳುತ್ತೇನೆ, ಎನ್ನುತ್ತಾಳೆ. 'ನೀನು ಮುದುಕಿ' ಎಂದ ಮಗನಿಗೆ ತನ್ನ ಸ್ತನಗಳನ್ನು ತೋರಿಸಿ, 'ಮುದುಕಿ ಏಕೆ? ಈ ಎದೆ ಹೀಗೆ ಜೋತು ಬಿದ್ದಿದೆ, ಏಕೆ ಕಾಣೆಯ? ನೀನು ನಿನ್ನ ಕೂಡ ಹುಟ್ಟಿದ ಮಕ್ಕಳು ಈ ಎದೆ ಹಾಲಿನಿಂದ ಬೆಳೆದಿರಿ. ಇದು ಜೋತು ಬಿದ್ದಿದೆ. ಇದಕ್ಕಾಗಿ ನೀನು ನನಗೆ ಮರ್ಯಾದೆ ತೋರುತ್ತೀಯೋ, ಇದು ಒಂದು ಅಪರಾಧ ಅಂತ ಅವಮಾನ ಮಾಡುತ್ತೀಯೋ?' ಎಂದು ಹೇಳುತ್ತಾಳೆ. ಇಂಥ ದಿಟ್ಟತನ, ನೇರ ನಡೆ, ನೇರ ನುಡಿ ಇವಳನ್ನು ಮರೆಯಲಾಗದ ಸೃಷ್ಟಿಯನ್ನಾಗಿ ಮಾಡುತ್ತವೆ.

ಕೆಲವು ಕಥೆಗಳಲ್ಲಿ ಇನ್ನೂ ಗಹನವಾದ ಚಿಂತನೆ ಇದೆ ಎಂದೆ. ಇಂಥ ಒಂದು ಕಥೆಯನ್ನು ಪ್ರಸ್ತಾಪಿಸುತ್ತೇನೆ. ಇದು 'ಶ್ರೀ ಕೃಷ್ಣನ ಅಂತಿಮ ಸಂದರ್ಶನ'. ಇಲ್ಲಿ ಒಂದು ಮಹಾನ್ ಬದುಕು ಸಮನಿಲ್ಲದ ಬದುಕು ಎನ್ನಬಹುದೇನೋ ವಿಷಣ್ಣ ವಾತಾವರಣದಲ್ಲಿ ಸಮಾಪ್ತವಾಗುತ್ತದೆ. ಜಗದ್ಗುರುವೆನಿಸಿದ ಕೃಷ್ಣನ ವೃದ್ಧಾಪ್ಯದಲ್ಲಿ ಅವನ ಕಣ್ಣೆದುರಿಗೇ ಅವನ ಮಕ್ಕಳು, ಮೊಮ್ಮಕ್ಕಳು, ಆಪ್ತರು ಎಲ್ಲ ಕುಡಿದು ಜಗಳವಾಡಿ ಸತ್ತಿದ್ದಾರೆ. ಈಗ ಕೃಷ್ಣನು ಈ ಜಗತ್ತನ್ನು ಬಿಡುವುದರಲ್ಲಿದ್ದಾನೆ. ಅರ್ಜುನ ಅವನನ್ನು ಕಾಣಲು ದ್ವಾರಕೆಗೆ ಬರುತ್ತಾನೆ. ಅವರಿಬ್ಬರ ಮಾತುಕತೆ 'ಶ್ರೀನಿವಾಸರು' ಕಲ್ಪಿಸಿಕೊಂಡಂತೆ ಕಥೆಯ ಬಹು ಭಾಗವನ್ನು ತೆಗೆದುಕೊಳ್ಳುತ್ತದೆ. ಇದು ಬಹು ಕುತೂಹಲಕರವಾದ ಸಂಭಾಷಣೆ. ಹಲವು ವಿಷಯಗಳು ಇದರ ಕಕ್ಷೆಯೊಳಕ್ಕೆ ಬರುತ್ತವೆ. ಕೃಷ್ಣನಿದ್ದೂ ಅವನ ಸಂಸಾರ ಏಕೆ ಹೀಗಾಯಿತು? ಕೃಷ್ಣ ಅವತಾರ ಪುರುಷನೇ? (ಅಲ್ಲ, ಆದರೆ ಆತನದು ಭವ್ಯ ವ್ಯಕ್ತಿತ್ವ ಎನ್ನುವುದು ಮಾಸ್ತಿಯವರ ನಿಲುವು) ಅರ್ಜುನ ಪ್ರಶ್ನಿಸುತ್ತಾನೆ. 'ಒಂದೊಂದು ಜೀವನದ ಜೀವ ತನ್ನ ದಾರಿಯನ್ನು ಹೇಗೆ ಕಾಣಬೇಕು?' ಕೃಷ್ಣ ಹೇಳುತ್ತಾನೆ. ಅದು ಪ್ರಶ್ನೆಯೇ ಅಲ್ಲ. ನೀ ಆಗಲಿ, ನಾ ಆಗಲಿ, ಯಾರೇ ಆಗಲಿ ಯಾವುದೇ ಹೊತ್ತಿನಲ್ಲಿ ಯಾವುದೇ ಸ್ಥಳದಲ್ಲಿ ಯಾವುದೇ ಸನ್ನಿವೇಶದಲ್ಲಿ ನಿಂತಿದ್ದೇವೆ. ಆಗ ಅಲ್ಲಿ ನನಗೆ ಸರಿ ಎಂದು ಕಂಡಂತೆ ನಡೆಯಬೇಕು. ಬಹು ವೇಳೆ ಇದು ಸ್ಪಷ್ಟವಾಗಿರುತ್ತದೆ. ಅಷ್ಟು ಸ್ಪಷ್ಟವಲ್ಲ ಅನ್ನೋ ವೇಳೆ ಕೆಲವು ಉಂಟು. ಆಗ ಸ್ವಲ್ಪ ಯೋಚನೆ ಮಾಡಿದರೆ ತಿಳಿಯುತ್ತದೆ. ಇನ್ನಷ್ಟು ಯೋಚನೆ ಮಾಡಿದ ಮನುಷ್ಯ ದಾರಿ ತಪ್ಪುತ್ತಾನೆ. ಸಮುದಾಯದ ಸುಖ ಯಾವುದು ಅಂತ ಯೋಚನೆ ಮಾಡಿದ, ಸರಿಯಾಗಿ ನಡೆಯುತ್ತಾನೆ. ಆ ಸಮುದಾಯ ಎಷ್ಟು ದೊಡ್ಡದಾದರೆ ಆ ನಡತೆ ಅಷ್ಟು ಒಳ್ಳೆಯದಾಗುತ್ತದೆ. ತನ್ನ ಗುರಿ ಲೋಕದ ಸುಖ ಎಂದುಕೊಂಡವನು ಲೋಕದ ಸುಖವನ್ನೇ ಬಯಸುತ್ತಾನೆ. ಅದಕ್ಕಾಗಿ ದುಡಿಯುತ್ತಾನೆ. ಅದಕ್ಕಾಗಿ ತನ್ನ ಪ್ರಾಣವನ್ನು ಬೇಕಾದರೂ ಒಪ್ಪಿಸಿಬಿಡುತ್ತಾನೆ. ಈ ಸ್ಥಿತಿಯನ್ನು ಮುಟ್ಟುವುದು ಮನುಷ್ಯ ಪ್ರಾಣಿಯ ಅಪೇಕ್ಷೆ ಆಗಬೇಕು'.

'ಶ್ರೀನಿವಾಸ'ರ 'ಯಶೋಧರಾ' ನಾಟಕದಲ್ಲಿ ಭಗವಾನ್ ಬುದ್ಧ ಈ ಮಾತನ್ನು ಹೇಳುತ್ತಾನೆ.

ನಾನು ಅಲ್ಪನು ಎಂದ ಮಾನವನು
ಲೋಕಗಳ ಕಲ್ಯಾಣ ದಾಸನಾಗುವನು
ಆಗ ಅಲ್ಪನು ಎಂದು ಹಳಿಯುವುದಕು ಕೂಡ
ತಾನು ತನ್ನವನಲ್ಲವೆಂದವನು ಅರಿಯುವನು
ತಾನೆಂಬುದುಂಟು ವಿಶ್ವದ ಒಡತಿಯಾಗಿ,
ತನ್ನೊಡತಿಯಾಗಿ ಅಲ್ಲ.

ಮಾತುಗಳು ಬಹು ಸರಳ. ಚಿಂತನೆ ದೊಡ್ಡದು.

ಶ್ರೀನಿವಾಸರ ಚಿಂತನೆ ನೇರ ಚಿಂತನೆಯಾಗಿ, ಉಪದೇಶವಾಗಿ ಬರುವುದಿಲ್ಲ ಎಂದೇ ಅದು ಸಾಹಿತ್ಯಕೃತಿಯ ತಿರುಳಾಗುತ್ತದೆ. ಕೃಷ್ಣ, ಬುದ್ಧರಂತಹ ಹಿಮಾಲಯ ಸದೃಶರಿರಬಹುದು, ಚಟ್ಟೇಕಾರ ತಾಯಿಯಂತಹ ಸಾಮಾನ್ಯ ಹೆಂಗಸಿರಬಹುದು. ಆದರೆ ಇವರಾಡುವ ಮಾತು ಆಯಾ ಕೃತಿಯ ಚೌಕಟ್ಟಿನಲ್ಲಿ ಶ್ರೀನಿವಾಸರು ಚಿತ್ರಿಸಿದ ಅವರ ಅನುಭವದಿಂದ, ಸಹತೆಯಿಂದ ಮೂಡಿ ಬರುತ್ತದೆ, ಕುಡಿಯುವ ಹಾಲಿನಿಂದ ಕೆನೆ ಮೂಡಿ ಬರುವಷ್ಟು ಸಹಜವಾಗಿ.

• ಎಚ್.ಎಸ್. ವೆಂಕಟೇಶ ಮೂರ್ತಿ

ಸಂಪಾತಿ




ಮಹೇಂದ್ರಾಚಲದ ತಪ್ಪಲಲ್ಲಿ
ಗರಿಸುಟ್ಟು ಬಿದ್ದ
ಜರ್ಝರಿತ ವೃದ್ಧ
ಸಂಪಾತಿ.

ಮಾಗಿ ಚಳಿಗೆ ಮುದುಡಿ
ಈ ಸನಾತನ ವೃದ್ಧ
ಗದಗುಟ್ಟಿ
ನಡುಗುತ್ತಿದ್ದಾನೆ.

ಕಣ್ಣಲ್ಲಿ ನೀರು
ಕಾಲಲ್ಲಿಲ್ಲ ತೆಗವು
ಭುಜದಲ್ಲಿಲ್ಲ ಬಲ

ಕೂತಿದ್ದಾನೆ
ಹೊಸ ಗರಿಗೆ ಕಾಯುತ್ತ
ತನ್ನನ್ನು
ಮಹೇಂದ್ರಾಚಲದ ಶಿಖರಕ್ಕೆತ್ತಬಲ್ಲ
ಭರಂದು ಗಾಳಿಗೆ ಕಾಯುತ್ತ
ಕೊಕ್ಕು ಕಚ್ಚಿ

ಸಂಪಾತಿ
ಆಕಾಶಚುಂಬಿ ಬಂಗಲೆಯ ಪಕ್ಕ
ಕುಸಿದುಬಿದ್ದಿರುವ
ಛಿದ್ರ
ಜೋಪಡಿ



ಕಥೆ

ಅನ್ವೇಷಣ

ಬೆಂಗಳೂರಿನಲ್ಲಿ ಖಾಯಂ ಉದ್ಯೋಗವೊಂದನ್ನು ದೊರಕಿಸಿಕೊಂಡು ತಾಯ್ನೆಲದಲ್ಲೇ ನೆಲೆಸುವ ಯೋಜನೆಯಿಂದ ಸ್ವದೇಶಕ್ಕೆ ಬಂದಿಳಿದಾಗ ಎದೆತುಂಬಾ ಉತ್ಸಾಹ, ಮೈತುಂಬಾ ನವಿರು, ಮನತುಂಬಾ ನಲಿವು. ನಾಲ್ಕರ ಪೋರ ಭಾರತಕ್ಕೆ ಹೊಸಬ. ಇಲ್ಲಿಯ ಮಣ್ಣು, ಇಲ್ಲಿಯ ಹವೆ, ಇಲ್ಲಿಯ ನೀರಿನಲ್ಲಿ ಅವನು ನಮ್ಮದೇ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆಯಲಿ ಎನ್ನುವ ತೀರ್ಮಾನಕ್ಕೆ ನಾವು ಗಂಡಹೆಂಡಿರು ಬಂದದ್ದು ಆಕಸ್ಮಿಕವಾಗಿಯೇನಲ್ಲ. ಮೊದಲಿನಿಂದಲೂ ಈ ಯೋಜನೆ ಇತ್ತು. ಕಳೆದ ಆರುವರ್ಷಗಳಲ್ಲಿ ವಿಶ್ವ ತಕ್ಕಷ್ಟು ಸಂಪಾದನೆ ಮಾಡಿದ್ದ. ಕೂತು ಉಂಡರೂ ಯಾವ ಅಂಕೆಯಿಲ್ಲದೆ ಶ್ರೀಮಂತ ಬದುಕನ್ನು ಬದುಕಬಹುದಾದಷ್ಟು ಸಂಪತ್ತು ಒಗ್ಗೂಡಿತ್ತು. ಒಂದೆರಡು ತಿಂಗಳು ಸುಧಾರಿಸಿಕೊಂಡು, ಆಪ್ತೇಷ್ಟರ ಮನೆಗಳಿಗೆ ಭೇಟಿಕೊಟ್ಟು ಮುಗಿಸಿ, ಆಮೇಲೆ ಸೂಕ್ತ ಕೆಲಸವೊಂದರ ಬೇಟೆ ಎನ್ನುವುದು ವಿಶ್ವನ ಯೋಜನೆ. ಅವನ ಓದಿಗೆ, ಅವನ ಅನುಭವಕ್ಕೆ, ಕಂಪೆನಿಗಳು ಕರೆದು ಕೆಲಸ ಕೊಡುವುದರ ಬಗ್ಗೆ ಅವನಿಗೆ ಸಂಶಯವೇನಿರಲಿಲ್ಲ. ವರ್ಷದ ಹಿಂದಿನಿಂದ ಪೂರ್ವಭಾವಿ ತಯಾರಿ ನಡೆದಿತ್ತು. ವಿಶ್ವ ತಮ್ಮನ ಮೂಲಕ ಬೆಂಗಳೂರಿನಲ್ಲಿ ಸೈಟ್ ಖರೀದಿಸಿದ್ದ. ಮನೆಯ ನಿರ್ಮಾಣವೂ ಆರಂಭವಾಗಿ ಮುಗಿಯುವ ಹಂತದಲ್ಲಿತ್ತು. ವಿಶ್ವನ ತಂದೆ ಕಟ್ಟಡ ನಿರ್ಮಾಣದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. 'ಅಪೂರ್ವ'ನಿಗೆಂದು ಪ್ರತಿಷ್ಠಿತ ಶಾಲೆಯೊಂದರಲ್ಲಿ ಸೀಟು ಕಾದಿರಿಸಲ್ಪಟ್ಟಿತ್ತು. ಭವಿಷ್ಯದ ಬಗೆಗೆ ಯಾವುದೇ ಕಾತರ, ಕಳವಳಗಳಿಲ್ಲದೆ ಎಲ್ಲಾ ಯೋಜನೆಯ ಪ್ರಕಾರ ನಡೆದಿತ್ತು. ನಮ್ಮ ಕನಸಿನ ಅರಮನೆ ಪೂರ್ಣಗೊಳ್ಳುವವರೆಗೆ ತಮ್ಮ ಮನೆಯಲ್ಲೇ ವಾಸ್ತವ್ಯ ಹೂಡಬೇಕೆಂದು ಮೈದುನನ ಆಗ್ರಹ. ತಮ್ಮನ ಮನೆಯಲ್ಲಿರುವುದು ವಿಶ್ವನಿಗೂ ಅಪ್ರಿಯವೇನಿಲ್ಲ. ಇಷ್ಟಕ್ಕೂ ಮನೆಯಲ್ಲೇ ಎಲ್ಲಿರುತ್ತೇವೆ ನಾವು? ಆ ಊರು, ಈ ಊರು, ಆ ನೆಂಟರು, ಈ ನೆಂಟರು, ತಿರುಗಾಟದಲ್ಲಿ ಕಾಲ ಕಳೆಯುವುದರೊಳಗೆ ನಮ್ಮದೇ ಮನೆ ಮುಗಿದೇ ಹೋಗಿರುತ್ತದೆ. ಅತ್ತೆ ತೀರಿಕೊಂಡ ಮೇಲೆ ಹಳ್ಳಿಯ ಮನೆಯಿಂದ ಮಾವನನ್ನು ಮೈದುನ ಪೇಟೆಗೆ ಕರೆಸಿಕೊಂಡಿದ್ದ. ವಿಶ್ವನಿಗೆ ಬಹಳ ಪ್ರೀತ್ಯಾಸ್ಪದವಾಗಿದ್ದ ಅವನ ಹಳ್ಳಿಮನೆ ಈಗಿಲ್ಲ. ಜಮೀನು, ಮನೆ ಎಲ್ಲಾ ಮಾರಾಟವಾಗಿ ಹೋಗಿವೆ. ವಿಶ್ವನಿಗೆ ನೋವಾಗಿದ್ದು ನಿಜ. ಆದರೆ ಅನಿವಾರ್ಯ.

★

ಅಯ್ಯಬ್ಬಾ, ಎಷ್ಟೊಂದು ಜನ, ನಮ್ಮ ನೆಂಟರ ಸಂತೆ ಎಲ್ಲಾ ಬೆಂಗಳೂರು ಪಟ್ಟಣವನ್ನೇ ಸೇರಿಕೊಂಡಿದೆಯೇನೋ ಅನ್ನುವಂತೆ. ಸದಾ ಹೊಡೆದುಕೊಳ್ಳುವ ಫೋನು. 'ವಿಶೂ.... ನಿನಗೇ....' ಹೆಚ್ಚಿನ ಎಲ್ಲಾ ಕರೆಗಳೂ ವಿಶ್ವನಿಗೆ ಅಥವಾ ನನಗೆ. ಲೋಕಾಭಿರಾಮದ ಮಾತುಕತೆ. ಮನೆಗೆ ಆಹ್ವಾನ. ಊಟಕ್ಕೆ ಕರೆಯುವವರು, ತಿಂಡಿಗೆ ಕರೆಯುವವರು. 'ಇನ್ನು ಇಲ್ಲೇ ಇರುತ್ತೀವಲ್ಲ, ಬರುತ್ತೇವೆ ನಿಧಾನಕ್ಕೆ....' ಎಷ್ಟು ದುಡಿದು ತಂದೆ?' 'ಏನೇನು ತಂದಿದ್ದಿ?' 'ಅಷ್ಟೊಳ್ಳೇ ಕೆಲಸ ಬಿಟ್ಟು ಇಲ್ಲಿರುವ ನಿರ್ಧಾರ ಮಾಡಿದ್ಯಾಕೆ? ಏನಿದೆ ಇಲ್ಲಿ?' ಬೇಡದ ಕುತೂಹಲ, ವಿಚಾರಣೆ. ಮೈದುನನ ಹೆಂಡತಿಗೆ ಖಂಡಿತಕ್ಕೂ ರಗಳೆ ಆಗುತ್ತಿರಬಹುದು. ಟೀ, ಬಿಸ್ಕತ್ತು, ಸಪ್ಪೈ ಮಾಡಿ ಮಾಡಿ ರೇಜಿಗೆ ಹತ್ತಿರಬಹುದು.

'ರೀ, ಎರಡು ಲೀಟರ್ ಹಾಲು ತಂದ್ಬಿಡಿ....'

'ಬೆಳಿಗ್ಗೆ ತಂದಿದ್ದು ಅಷ್ಟು ಬೇಗ ಖರ್ಚಾಯ್ತಾ?' ಬಾಯಿತಪ್ಪಿ ಕೇಳಿದರೂ ತಟ್ಟನೆ ನಾಲಿಗೆ ಕಚ್ಚಿಕೊಳ್ಳುವ ಮೈದುನ ನಮಗೆ ಯಾವ ರೀತಿಯಲ್ಲೂ ಇರಿಸುಮುರಿಸು ಆಗಬಾರದೆಂಬ ಪ್ರಜ್ಞಾಪೂರ್ವಕ ನಡವಳಿಕೆ. ಎಲ್ಲೋ ಕಳೆದುಹೋದಂತಿದ್ದ ನಮಗೆ ನೆಲೆ ತಲುಪಿದ ಬೆಚ್ಚನೆಯ ಭಾವ, ಹಿತ. ಈ ಮರ್ಯಾದೆ ಎಲ್ಲಾ ನಮಗಲ್ಲ, ವಿಶೂ ದುಡಿದು ಗುಡ್ಡೆ ಹಾಕಿದ ಡಾಲರ್‌ಗಳಿಗೆ ಎಂಬುದು ನಮ್ಮಿಬ್ಬರಿಗೂ ಗೊತ್ತು. ಬರುವಾಗ ನಾವು ಬರಿಗೈಲೂ ಬಂದಿಲ್ಲ. ಎಲ್ಲರನ್ನೂ ನೆನಪಿಟ್ಟುಕೊಂಡು ಉಡುಗೊರೆ ತಂದು, ಫಾರಿನ್‌ನಿಂದ ತಂದದ್ದು ಅಂದರೆ ಅದರ ಬೆಲೆಯೇ ಬೇರೆ. ಮೇಕಪ್ ಬಾಕ್ಸುಗಳು, ವಾಚುಗಳು, ಕಾರ್ಡ್‌ಲೆಸ್ ಸೆಟ್‌ಗಳು, ಕ್ಯಾಮೆರಾಗಳು, ಸೆಂಟ್ ಬಾಟಲ್‌ಗಳು, ಥರಥರದ ಉಡುಗೆತೊಡುಗೆಗಳು, ಕೃತಕ ಆಭರಣಗಳು, ಸ್ವೀಕರಿಸಿದವರಿಗೆ ಧನ್ಯತೆಯ ಭಾವ, ಕೃತಜ್ಞತೆ. ಕೊಟ್ಟವರಿಗೆ ತೃಪ್ತಿ.

ನಾಲ್ಕುದಿನ ಅನ್ನುವಷ್ಟರಲ್ಲಿ ತೌರೂರು ಎಳೆಯತೊಡಗಿತು. ಅಣ್ಣ ದಿನಾ ಫೋನ್ ಮಾಡಿ ಕೇಳುತ್ತಿದ್ದ, 'ಯಾವಾಗ ಬರ್ತೀರಿ?' ನಾವು ಬಂದ ದಿನ ಸ್ವಾಗತಿಸಲು ಏರ್‌ಪೋರ್ಟಿಗೆ ಅವನು ಬಂದಿದ್ದ. ಆದರೆ ಅಮ್ಮ ಬಂದಿರಲಿಲ್ಲ. ವಯಸ್ಸು, ಬಸ್‌ಪ್ರಯಾಣ ಅವಳ ಕೈಲಿ ಸಾಧ್ಯವಿಲ್ಲ.

'ನಮ್ಮೂರಿಗೆ ಯಾವಾಗ ಹೋಗೋಣ ವಿಶೂ? ಅಮ್ಮ ಪುಟ್ಟ ಮೊಮ್ಮಗನ್ನ ನೋಡಿಯೇ ಇಲ್ವಲ್ಲ?' ಹಾರುವ ಹಕ್ಕಿಯಂತೆ ಸ್ವತಂತ್ರನಾಗಿದ್ದ ವಿಶೂ ಯಾವ ನಿಮಿಷ ಹೊರಡಲೂ ರೆಡಿ. ಅಲ್ಲಿಗೆ ಹೋದವರು ಸುತ್ತಮುತ್ತ ಇರುವ ಎಲ್ಲಾ ಬಂಧುಗಳನ್ನೂ ನೋಡಿಕೊಂಡು ಬರುವ ತೀರ್ಮಾನ ನನ್ನದೂ ಆಗಿತ್ತು. ಸ್ವಂತ ವಾಹನ ಇಲ್ಲದಿದ್ದರೆ ನೆನೆಸಿಕೊಂಡಾಗ ನೆನೆಸಿಕೊಂಡಲ್ಲಿಗೆ ಹೋಗುವುದೇ ತಾಪತ್ರಯ.

★

ಐದು ವರ್ಷಗಳ ನಂತರ ಮಗಳನ್ನು ನೋಡಿ ಅಮ್ಮನಿಗೆ ಮಾತೇ ಹೊರಡದೆ ಗಂಟಲು ಉಬ್ಬುಬ್ಬಿ ಕಣ್ಣೀರು. ನನ್ನ ಸ್ಥಿತಿಯೂ ಹೊರತಲ್ಲ. ವಿಶೂ ಗಮನಿಸಿದರೆ ಚೇಷ್ಟೆ ಮಾಡುತ್ತಾನೆ. 'ಅಷ್ಟು ಸುಲಭವಾಗಿ ಹೇಗೆ ಅಳು ಬಂದುಬಿಡುತ್ತದೆ' ಎಂದು ಅವನಿಗೆ ಆಶ್ಚರ್ಯ. ಅವನೊಡನೆ ಮದುವೆಯಾಗಿ ವಿದೇಶಕ್ಕೆ ಹೋದ ಹೊಸದರಲ್ಲಿ ನನ್ನ ಅಳುಬುರುಕುತನ ಅವನನ್ನು ಹೆದರಿಸಿಬಿಟ್ಟಿತ್ತು. ಅಲ್ಲಿಗೆ ಹೊಂದಿಕೊಳ್ಳಲು ನನಗೆ ತಿಂಗಳುಗಟ್ಟಲೆ ಬೇಕಾಗಿತ್ತು. ತೌರೂರಿಗೆ ಬಂದಿದ್ದೇ ಕಿವಿಯಲ್ಲಿ ಗಾಳಿಹೊಕ್ಕ ಎಳೆಗರುವಿನಂತೆ ನನಗೆ ಉನ್ಮಾದ. ಸುಖದ ಉಕ್ಕು ಸೊಕ್ಕು. 'ಅತ್ತಿಗೇ, ಕಾಫಿ, ಬೆಲ್ಲದ ಕಾಫಿ' ಎನ್ನುತ್ತಾ ಒಲೆಯೆದುರಿನ ನನ್ನ ಹಳೆಯ ಸ್ವಸ್ಥಾನದಲ್ಲಿ ಕುಕ್ಕುರುಗಾಲಲ್ಲಿ ಕೂತಾಗ ಅವಳಿಗೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಷ್ಟು ಅಚ್ಚರಿ. 'ನೀನು ಬದಲಾಗಿಯೇ ಇಲ್ಲ' ಎಂದು ಹತ್ತುಸಲ ಹೇಳಿದ್ದೇ ಹೇಳಿದಳು. ಅಮೇರಿಕಾದಲ್ಲಿದ್ದು



● ವಸುಮತಿ ಉಡುಪ

'ಗೌರಿ', 4ನೇ ಕ್ರಾಸ್, 'ಎ' ಬ್ಲಾಕ್,
ಗಾಂಧಿನಗರ ಬಡಾವಣೆ,
ಶಿವಮೊಗ್ಗ- 577 201.

'ನಮ್ಮ ಮಾತುಗಳು ತಡವರಿಸುತ್ತಿವೆ. ಎಲ್ಲೋ ಏನೋ ಅಡ್ಡನಿಂತಿದೆ. ಸಲೀಸಾದ ಸಂವಹನ ಸಾಧ್ಯವಾಗದಂತೆ ತಡೆಯುತ್ತಿದೆ'.

ಬಂದವಳು ಅಂದರೆ ಬಾಬ್ ಕೂದಲು, ಪ್ಯಾಂಟು, ಬೋಳು ಹಣೆ, ಬರಿಗೈ, ಇಂಗ್ಲೀಷಲ್ಲೇ ಮಾತು, ಎಂದು ಅವಳು ಏನೇನೋ ಲೆಕ್ಕ ಹಾಕಿಕೊಂಡಿದ್ದಳಂತೆ. 'ಅಲ್ಲಿ ಹಾಗೇ ಇರುತ್ತಿದ್ದೆ' ಅಂದರೆ, 'ಸುಳ್ಳೇ....' ಎಂದಳೇ ಹೊರತು ಅವಳಿಗೆ ನಂಬಿಕೆ ಬರಲಿಲ್ಲ. ಅಪೂರ್ವನಿಗೂ ಕನ್ನಡ ಬರುತ್ತದೆ ಎನ್ನುವುದು ಅಮ್ಮ ಹಿಗ್ಗು. ಸ್ವತಃ ಮಾಡಿಕೊಂಡ ಬಾಣಂತನಕ್ಕೆ ಫೋನಿನಿಂದಲೇ ಸಲಹೆ ಸೂಚನೆ ಕೊಟ್ಟವಳು ಅಮ್ಮ. 'ಬಾ....' ಎನ್ನುವ ಒತ್ತಾಯಕ್ಕೆ ಜನ್ಮದಲ್ಲೆ ಹಳ್ಳಿ ಬಿಟ್ಟು ಪೇಟೆ ನೋಡದವಳಿಗೆ ಅಮೆರಿಕಾ ಅಂದರೆ ಇನ್ನೊಂದೇ ಲೋಕ ಎನ್ನುವಷ್ಟು ದಿಗಿಲು. ವಿಮಾನ ಹತ್ತುವ ಒಂದು ಸಂದರ್ಭ ಅವಳ ಕಲ್ಪನೆಯಲ್ಲೂ ಇಣುಕಿದ್ದಿಲ್ಲ. ಈಗಲೂ ಆಕಾಶದಲ್ಲೊಂದು ವಿಮಾನ ಭೋರ್ಗುಟ್ಟಿ ಹಾರಿಹೋದರೆ ಹೊರಗೆ ಧಾವಿಸಿ ಹೋಗಿ ಹಣೆಗೊಂಡು ಕೈ ಅಡ್ಡ ಹಿಡಿದು ಕತ್ತೆತ್ತಿ ನೋಡಿ ರೋಮಾಂಚನಗೊಳ್ಳುವಷ್ಟು ಮುಗ್ಧತೆ ಉಳಿಸಿಕೊಂಡಿರುವ ನನ್ನಮ್ಮ





ಅಷ್ಟೆತ್ತರದಲ್ಲಿ ಹಾರುವ ಆ ವಿಮಾನದೊಳಗೆ ಹುಲುಮನುಜಳಾದ ತನ್ನನ್ನು ಕಲ್ಪಿಸಿಕೊಳ್ಳುವುದೆಂದರೆ ಅದೊಂದು ಅಸಾಧ್ಯದ, ಅತಿಮಾನುಷ ಸನ್ನಿವೇಶ ಎನ್ನುವಂತೆ ನನ್ನ ಕರೆಯನ್ನು ನಿರಾಕರಿಸಿಬಿಟ್ಟಿದ್ದಳು. ಅವಳ ಗೊಂದಲ ನನಗೆ ಅರ್ಥವಾಗಿತ್ತು. ನನ್ನಮ್ಮ ನನಗೆ ಹೊಸಬಳೇನಲ್ಲವಲ್ಲ. ವಿಶೂಗೆ ಸ್ವಲ್ಪ ಅಸಮಾಧಾನ. ತನ್ನ ತಾಯಿ ಬದುಕಿದ್ದಿದ್ದರೆ ಖುಷಿಖುಷಿಯಾಗಿ ಓಡೋಡಿ ಬರುತ್ತಿದ್ದಳು ಎನ್ನುವ ವಿಷಾದ. ನಾನು ಮತ್ತು ವಿಶು ಎಂಬ ಇಬ್ಬರು ಅನನುಭವಿ ಅಪ್ಪ, ಅಮ್ಮನ ನಡುವೆ ಅಪೂರ್ವ ಬೆಳೆದು ದೊಡ್ಡವನಾಗಿದ್ದೇ ಒಂದು ಪವಾಡ. ಮುಟ್ಟಿದರೆ ತಗ್ಗುಬಿದ್ದು ಒಳಗೇ ಹೋಗಿಬಿಡುತ್ತದೆ ಎನ್ನುವಷ್ಟು ಮೆದುವಾದ ನೆತ್ತಿಗೆ ಎಣ್ಣೆ ಹಚ್ಚುವಾಗ, ಎರೆದು ಬಟ್ಟೆ ತೊಡಿಸುವಾಗ, ಎತ್ತಿ ಹಾಲೂಡಿಸುವಾಗ, ಎಲ್ಲಿ ಯಾವ ಅಚಾತುರ್ಯ ನಡೆದು ಮಗುವಿಗೆ ಘಾಸಿಯಾಗುತ್ತದೆಯೋ ಎನ್ನುವ ಕಟ್ಟೆಚ್ಚರಿಕೆ, ಕಳವಳ. ಮಗು ಬಿಡದೆ ಅತ್ತರೆ ಚಿಂತೆ. ಬಿಕ್ಕಳಿಸಿದರೆ ಭಯ. ಸಣ್ಣಪುಟ್ಟದಕ್ಕೆಲ್ಲಾ ಅಮ್ಮನಿಗೆ ಫೋನು. ಅವಳಿಂದ ಸಮಾಧಾನ. ತನ್ನ ಕರ್ತವ್ಯವನ್ನು ಪಾಲಿಸಲಿಲ್ಲವೆನ್ನುವ ಪಾಪಪ್ರಜ್ಞೆಯ ಅಮ್ಮ ಮುದ್ದಾಗಿ ಬೆಳೆದಿದ್ದ ಅಪೂರ್ವನನ್ನು ನೋಡಿ ಸಹಜವಾಗಿ ಸಡಗರಿಸಿದಳು.

'ತಲೆ ಮಾತ್ರ ಸೌತೆಕಾಯಿ ಮಾಡಿಟ್ಟುಬಿಟ್ಟಿ, ಎಳೆಮಗೂನ ಸರಿಯಾಗಿ ಮಲಗಿಸಿ ಹಿಂದಲೆ ಚಟ್ಟಸಲಿಲ್ಲ. ಇರ್‍ಲಿಬಿಡು, ಹುಡುಗ ತಾನೇ?' ಎಂದು ಸಣ್ಣದೊಂದು ಊನ ಹುಡುಕಿ ಅದಕ್ಕೆ ತಾನೇ ಸಮಾಧಾನವನ್ನೂ ಕೊಟ್ಟುಕೊಂಡಳು. 'ವಿಶೂ....' ಎಂದು ಏಕವಚನದಲ್ಲಿ ತಾನು ಗಂಡನನ್ನು ಕರೆಯುವುದು ಮನೆಯವರಿಗೆ ಕಚಗುಳಿ, ಹೊಸ ಪರಿ. ಅಮ್ಮ ಗುಟ್ಟಾಗಿ ಹೇಳಿದಳು.

'ಗಂಡನನ್ನು ಏಕವಚನದಲ್ಲಿ ಯಾರಾದ್ರೂ ಕರೀತಾರೇನೇ? ಅವನ ಆಯುಷ್ಯಕ್ಕೆ ಒಳ್ಳೇದಲ್ಲ...'. 'ಅವನೇ ಹಾಗೆ ಕರಿ ಅಂತ ಹೇಳಿದ್ದು' ಎಂದಾಗ ಒಂದು ದಿನ ಕೂಡಾ ಅಪ್ಪನೆದುರು ನಿಂತು ಗಟ್ಟಿಸಿ ಮಾತಾಡದಿದ್ದ ಅಮ್ಮನಿಗೆ, 'ಹೀಗೂ ಉಂಟೇ....' ಎನ್ನುವ ಆಶ್ಚರ್ಯ. ದೀರ್ಘ ಕಾಲದ ನಂತರದ ಭೇಟಿಯ ಉದ್ವಿಗ್ನತೆ, ಹೊಸ ಬಿಸಿ, ಸಂಜೆಯ ಹೊತ್ತಿಗೆ ಸ್ವಲ್ಪ ತಣ್ಣಗಾಗಿ, ಮುಂಚೀಕಡೆಯ ಜಗುಲಿಯಲ್ಲಿ ಚಕ್ಕುಲಿ ಕುರುಕುತ್ತಾ, ಹರಟುತ್ತಾ ಕೂತಿದ್ದಾಗಲೇ ಅಮ್ಮ ಹೇಳಿದ್ದು,

'ಬೇಸಿಗೆ ರಜಾ ಅಲ್ವಾ? ಉಮಾ ಬಂದಿದಾಳೆ, ಎರಡು ಮಕ್ಕಳ ಜೊತೆ....'

★

ಉಮಾ ಬಾಲ್ಯದ ಗೆಳತಿ. ಸವಿನೆನಪು ಎಷ್ಟರವರೆಗೆ ಹಿಂದೆ ಹೋಗಲು ಸಾಧ್ಯವೋ ಆ ಕಾಲದಿಂದಲೂ ನಾವಿಬ್ಬರೂ ಒಡನಾಡಿದವರು. ತೋಟದಾಚೆ ಅವಳ ಮನೆ. ಈಚೆ ನಮ್ಮ ಮನೆ. ಒಟ್ಟಿಗೆ ಸ್ಕೂಲಿಗೆ ಹೋಗಿ, ಒಟ್ಟಿಗೆ ಅಕ್ಷರ ತಿದ್ದಿ, ಒಟ್ಟಿಗೆ ಪದ್ಯ ಉರು ಹಚ್ಚಿ, ರಜ ಬಂದಿತೆಂದರೆ ಒಂದೋ ಅವಳು ನಮ್ಮ ಮನೆಗೆ ಅಥವಾ ನಾನು ಅವಳ ಮನೆಗೆ. ಅವರ ಮನೆಯ ಅಂಗಳದ ತುದಿಯ ಮಾವಿನಮರದ ಕೆಳಗೆ ಮಣ್ಣು ಕಲೆಸಿ ಒಲೆ ಹಾಕಿ, ಹುಲ್ಲುಕಡ್ಡಿಯ ಸೌದೆ ಒಟ್ಟಿ, ಕರಟದಲ್ಲಿ ನೀರು ಹಿಡಿದು ಕಾಸಿ, ಉರುಟು ಕಲ್ಲಿನಿಂದ ಸೊಪ್ಪುಸೌದೆಗಳನ್ನು ಜಜ್ಜಿ ಜಜ್ಜಿ ಚಟ್ನಿ ಮಾಡಿ ಏನೆಲ್ಲಾ, ಎಷ್ಟೆಲ್ಲಾ ಆಟಗಳು. ದಿನಪೂರ್ತಿ ಆಡಿದರೂ ತಣಿಯದ, ದಣಿಯದ, ಆಟಗಳು. ಇಬ್ಬರ ಸೌಮ್ಯ ಸ್ವಭಾವಕ್ಕೂ ಬಲು ಚೆನ್ನಾಗಿ ಹೊಂದಿಕೆಯಾಗಿ ಒಂದು ದಿನ ಜಗಳ ಕಾದಿದ್ದಿಲ್ಲ. ಚಾಳಿ ಬಿಟ್ಟಿದ್ದಿಲ್ಲ. ಎಲ್ಲರಲ್ಲೂ ಸಹಮತ. ಪೇರಲೇಹಣ್ಣು, ಮಾವಿನಕಾಯಿಗಳನ್ನು ಲಂಗದಲ್ಲಿ ಸುತ್ತಿ ಕಚ್ಚಿ ಕಾಗೆ ಎಂಜಲಿನ ಪಾಲು ಮಾಡಿಕೊಂಡು ತಿಂದವರು. ಊರಲ್ಲಿ ಯಾರ ಮನೆಯ ಸಂತರ್ಪಣೆಗೆ ಹೋಗಬೇಕಾದರೂ ಒಟ್ಟೊಟ್ಟಿಗೆ ಹೋಗುತ್ತಿದ್ದವರು, ಜೋಡಿಯಾಗಿಯೇ ಊಟಕ್ಕೆ ಕೂರುತ್ತಿದ್ದವರು, ಉಮಾ ಮತ್ತು ಮಮತಾ ಎಂದರೆ ಅಕ್ಕ, ತಂಗಿಯರಿಗೂ ಮಿಗಿಲು. ಗೊಂಬೆಯಾಟ, ಮಣ್ಣಾಟ ಆಡುವ ವಯಸ್ಸು ಮುಗಿದು, ಹೈಸ್ಕೂಲಿಗೆ ಹೋಗ ತೊಡಗಿ, ಬಂಧ ಬಿಗಿಯಾಯಿತೇ ಹೊರತು ಸಡಿಲಗೊಳ್ಳಲಿಲ್ಲ. ಗುಸು ಗುಸು ಮಾತಾಡುತ್ತಾ ಹಂಚಿಕೊಳ್ಳಲು ಹೊಸ ಹೊಸ ಗುಟ್ಟುಗಳು. ಮೊದಲು ದೊಡ್ಡವಳಾದದ್ದು ಉಮಾ. ಮಾಮೂಲಿನಂತೆ ಸ್ಕೂಲಿಗೆ ಕರೆಯಲು ಹೋದರೆ ಆಕಾಶ ಕಳಚಿ ತಲೆಯ ಮೇಲೆ ಬಿದ್ದವಳಂತೆ 'ಗೋಲೋ' ಎಂದು ಅತ್ತುಬಿಟ್ಟಿದ್ದಳು. ಸಂಪ್ರದಾಯಸ್ಥರ ಮನೆ. ಮೂರು ದಿನ ಅಂತವರಿಗಾಗಿಯೇ ಮೀಸಲಿಟ್ಟ ಮೂಲೆ. ಪಕ್ಕದಲ್ಲೊಂದು ತಂಬಿಗೆ, ಲೋಟ. ಹಾಸಲು, ಹೊದೆಯಲು, ಹರಕಲು ಕಂಬಳಿ, ಸೀರೆ. ಮೊದಲ ಆ ಮೂರುದಿನ ಅವಳು ರಜಾ ಹಾಕಿದ್ದಳು. 'ಮೂರುದಿನ, ಗೊತ್ತಾಯ್ತಲ್ಲಾ....' ಸಹಪಾಠಿಗಳು ಕಣ್ಣುಮಿಟುಕಿಸಿಕೊಂಡು ನಕ್ಕಿದ್ದರು. 'ನಿನಗೂ ಇನ್ನು ಹೆಚ್ಚು ದಿನ ಇಲ್ಲ. ಸ್ಕೂಲಿಗೆ ಹೋದಾಗ ಏನೂ ಆಗ್ದಿದ್ರೆ ಸಾಕು....' ಅಮ್ಮ ಅದ್ಯಾವ ಗಳಿಗೆಯಲ್ಲಿ ಹೇಳಿದ್ದಳೋ, ಅದೊಂದು ದಿನ ಪ್ರಾರ್ಥನೆಗೆ ಹಿಂದೆ ನಿಂತಿದ್ದ ಹುಡುಗಿ ಕಿವಿಯಲ್ಲಿ ಗುಟ್ಟಾಗಿ ಹೇಳಿದ್ದಳು, 'ಮನೆಗೆ ಹೋಗೇ ಪೆದ್ದಿ, ದೊಡ್ಡೋಳಾಗಿದ್ದಿ'

ಎಲ್ಲರಿಗೂ ಗೊತ್ತಾಗಿಬಿಟ್ಟಿತೇನೋ ಎನ್ನುವ ಅವಮಾನ, ಅಳು. ಉಮಾ ಹಿರಿಯಕ್ಕನಂತೆ ಸಂತೈಕೆಯ ಮಾತಾಡಿ, ಮನೆಯವರೆಗೂ ನನ್ನ ಜೊತೆಗೆ ಬಂದು, ಅವತ್ತು ತಾನೂ ಸ್ಕೂಲಿಗೆ ಚಕ್ಕರ ಹಾಕಿದ್ದಳು. ಇದ್ದೂರಿನಲ್ಲಿ ಸ್ಕೂಲ್ ಫೈನಲ್ ಮುಗಿಸಿ ಮುಂದೆ ಪೇಟೆಯ ಕಾಲೇಜಿಗೆ ಸೇರಿಕೊಳ್ಳುವಾಗ ಇಬ್ಬರೂ ಒಟ್ಟೊಟ್ಟಿಗೆ ಹೋಗಿ ಬರಬಹುದೆನ್ನುವ ಕಾರಣದಿಂದ ಇಬ್ಬರ ಮನೆಯಲ್ಲೂ ಅನುಮತಿ ದೊರೆತ್ತಿತ್ತು. ಜೊತೆಗೆ ಬಾಡಿಗಾರ್ಡಿನ ಹಾಗೆ ಸಣ್ಣಣ್ಣ ಇದ್ದ. ಉಮಾ ಮತ್ತು ನಾನು ಜೊತೆಯಾಗಿ ಹಂಚಿಕೊಂಡ ಅನುಭವಗಳು ಒಂದಲ್ಲ, ನೂರಲ್ಲ, ಸಾವಿರ. ತಾಲ್ಲೂಕು ಕೇಂದ್ರಕ್ಕೆ ದಿನವೂ ಬಸ್ಸಿನ ಪ್ರಯಾಣ. ಅದರ ಸುಖದುಃಖಗಳು, ಮೋಜು ಮುಜುಗರಗಳು, ಜೊತೆಯಲ್ಲಿ ಓಡುತ್ತಿದ್ದ ಕೆಲವರ ಕಚಕುಳಿ ಕೊಡುವ ಪ್ರಣಯ ಪ್ರಸಂಗಗಳು. ಸಣ್ಣಣ್ಣನಿಗೆ ಉಮಾ ಎಂದರೆ ಏನೋ ಮೃದುಭಾವನೆ ಎನ್ನುವ ಅನುಮಾನ. ನಮ್ಮ ಬಿಡುವಿನ ವೇಳೆ ಕಾದು ಕ್ಯಾಂಟೀನಿಗೆ ಕರೆದೊಯ್ದು ಮಸಾಲೆ ದೋಸೆ ತಿನ್ನಿಸುತ್ತಿದ್ದ. ಬಸ್ಸಿನಲ್ಲಿ ಮುನ್ನುಗ್ಗಿ ಸ್ಥಳ ಕಾದಿರಿಸಿ ಇಬ್ಬರಿಗೂ ಕೂರಲು ಜಾಗ ಹಿಡಿದಿಟ್ಟು ತಾನು ಕಂಬಿ ಹಿಡಿದು ನೇತಾಡುತ್ತಾ ಪ್ರಯಾಣಿಸುತ್ತಿದ್ದ. ನನ್ನ ಕಣ್ಣುತಪ್ಪಿಸಿ ಅವರಿಬ್ಬರೂ ಆಗೀಗ ದೃಷ್ಟಿ ವಿನಿಮಯ ಮಾಡಿಕೊಳ್ಳುತ್ತಿದ್ದರೆಂದು, ಪುಸ್ತಕಗಳನ್ನು ಕೊಡುವ, ತೆಗೆದುಕೊಳ್ಳುವ ನೆಪದಲ್ಲಿ ಸ್ಪರ್ಶಸುಖ ಅನುಭವಿಸುತ್ತಿದ್ದರೆಂದು, ನನಗೊಂದು ಸಂಶಯ ಇತ್ತು. ಬಹುಶಃ ಉಮನೊಡನೆ ನಾನು ಕೇಳದ ಅಂತರಂಗದ ಮಾತು ಇದೊಂದೇ ಆಗಿದ್ದಿರಬಹುದೇನೋ. ಏನೋ ಆಗಬಹುದೆಂದು, ಆಗುತ್ತದೆಯೆಂದು, ನಾನು ಕಾದಿದ್ದೇ ಬಂತು. ಏನೂ ಆಗಲಿಲ್ಲ. ಬಿ.ಎ ಮುಗಿಯುತ್ತಿದ್ದಂತೆ ಉಮಾ ಮದುವೆಯಾಗಿ ಗೃಹಿಣಿಯಾದಳು. ಬ್ಯಾಂಕಿನ ಕೆಲಸದಲ್ಲಿದ್ದ ಹುಡುಗ ನೋಡಲು ತಕ್ಕಮಟ್ಟಿಗಿದ್ದ. ಇನ್ನು ಉಮಾ ದೂರವಾಗುತ್ತಾಳೆಂಬ ಭಾವನೆಯಿಂದ ಮನಸ್ಸು ಮಿಡಿಯುತ್ತಿದ್ದರೂ ಮದುವೆಮನೆಯಲ್ಲಿ ಅವಳ ತಂಗಿಯಂತೆ ಸಂಭ್ರಮಿಸಿ ಓಡಾಡಿದ್ದೆ. ಮನೆಮಗಳಂತೆ ನನಗೂ ಸೀರೆಯ ಉಡುಗೊರೆ. 'ಹೋಗ್ಬರ್‍ತೀನಿ, ಮರೀಬೇಡ....' ಕಟ್ಟಿದ ಗಂಟಲಲ್ಲಿ ಉಸುರಿ ನನ್ನೆರಡೂ ಕೈಗಳನ್ನು ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದು ಅಮುಕಿದ ಅವಳ ಕೈಯ ಬಿಸುಪು ಇನ್ನೂ ಮುಂಗೈಯ ಮೇಲೆ ಬೆಚ್ಚಗೆ ಉಳಿದುಕೊಂಡಿದೆಯೆನ್ನುವ ಭ್ರಮೆ. ಊರಿಡೀ ಮದುವೆ ಮನೆಗೆ ಮಗುಚಿದ್ದರೂ ಸಣ್ಣಣ್ಣ ಬರದೆ ಅವತ್ತು ಉಪವಾಸ ಮಲಗಿದ್ದ. 'ಯಾಕೋ?' ಅಂದರೆ, ಹುಷಾರಿಲ್ಲ,

ಮೀಸಲಾತಿ



ನನ್ನಾಕೆಗೀಗ
ಮನೆಗೆಲಸದಲ್ಲೂ
ಭಾರೀ ರಿಯಾಯಿತಿ;
ಕಾರಣ ನಮ್ಮ
ಮನೇಲಿ ಜಾರಿಯಲ್ಲಿದೆ
ಮಹಿಳಾ ಮೀಸಲಾತಿ!

-ಮಂಜುನಾಥ.ಬೈಲೂರು ಕೆ.ಎಂ.

ತಲೆನೋವು' ಅಂದಿದ್ದ. ಮೊಗ್ಗಾಗಿ ಮೂಡಿದ್ದೆಲ್ಲವೂ ಹೂವಾಗಿ ಅರಳಿ, ಕಾಯಾಗಿ ಗಟ್ಟಿಕಟ್ಟಿ, ಹಣ್ಣಾಗಿ ಮಾಗುವುದಿಲ್ಲ ಎನ್ನುವಂತಾದ್ದೇನೋ ಕವಿತ್ವ ನನ್ನೊಳಗೆ ಸ್ಫುರಿಸಿತ್ತು. ನಾಲ್ಕೆಂಟು ದಿನ. ಮತ್ತೆಲ್ಲಾ ಮಾಮೂಲು. ಈ ಅಮ್ಮಂದಿರು ಅಂದರೆ ಅದೇನು ಅವಸರದವರೋ? ಉಮನಿಗೆ ಮದುವೆಯಾಗಿದ್ದೇ ಆಗಿದ್ದು, ಅಮ್ಮನಿಗೆ ನನ್ನ ಮದುವೆಯ ಗಿರ. ಆಮೇಲೂ ಎರಡು ವರ್ಷ ಕಳೆದು, ಉಮಾ ಚೊಚ್ಚಲ ಮಗಳನ್ನು ಹೆತ್ತು, ನಾನು ದಿನಕ್ಕೆರಡು ಸಲ ತೋಟದ ಅಡಿಕೆದಬ್ಬೆಯ ಸಾರ ದಾಟಿ ಅವರ ಮನೆಗೆ ಓಡಾಡತೊಡಗಿ, 'ಪುಟ್ಟ ಮಕ್ಕಳು ಅಂದರೆ ಅದೆಷ್ಟು ಚೆಂದ, ಅದೆಷ್ಟು ಮೆತ್ತಮೆತ್ತಗೆ ವೆಲ್ವೆಟ್ಟಿನಂತೆ, ಸ್ಪಂಜಿನ ಗೊಂಬೆಗಳಂತೆ....' ಎಂದೆಲ್ಲಾ ವರ್ಣಿಸತೊಡಗಿದರೆ ಅಮ್ಮನಿಗೆ ಪಿತ್ತ ಕೆರಳುತ್ತಿತ್ತು. 'ನಿನಗೆ ಯಾವಾಗ ಗುರುಬಲ ಬರುತ್ತೋ, ಅವಳು ಆಗಲೇ ಒಂದು ಹಡೆದಾಯ್ತು' ಎನ್ನುವ ಸಂಕಟ. ಕ್ಯಾಲಿಫೋರ್ನಿಯಾದಲ್ಲಿ ಇಂಜಿನಿಯರ್ ಆಗಿದ್ದ ವಿಶೂ ಒಂದು ತಿಂಗಳ ರಜಾದಲ್ಲಿ ಮದುವೆ ಮಾಡಿಕೊಂಡೇ ಹೋಗಲೆಂದು ಸ್ವದೇಶಕ್ಕೆ ಬಂದಿದ್ದು, ಆಯ್ದಿಟ್ಟಿದ್ದ ನಾಲ್ವರಲ್ಲಿ ನನ್ನನ್ನು ಒಪ್ಪಿದ್ದು, ಗಡಿಬಿಡಿಯಲ್ಲೇ ಸರಳ ಮದುವೆ ಮಾಡಿಕೊಂಡು ಕರೆದೊಯ್ದಿದ್ದು, ಇವೆಲ್ಲಾ ಹಳೆಯ ಕತೆ. ಇನ್ನೂ ಬಾಣಂತನ ಮುಗಿಯದಿದ್ದ ಉಮಾ ಮನೆಯಲ್ಲೇ ನಡೆದ ಮದುವೆಗೆ ಬಂದು ಹೋಗಿದ್ದಳು. ಆಗ ನೋಡಿದ್ದೇ ಕೊನೆಯ ಬಾರಿ. ಆ ಸಮಯದಲ್ಲಿ ನನಗೆ ನನ್ನದೇ ತಾಕಲಾಟಗಳು, ಗೊಂದಲಗಳು. 'ಕಣ್ಣು ಕಾಣದ ಊರಲ್ಲಿರೋನಿಗೆ ಯಾವ ಧೈರ್ಯದ ಮೇಲೆ ಹೆಣ್ಣು ಕೊಡ್ತಾರಪ್ಪ?' ಎನ್ನುವಲ್ಲಿಂದ ತೊಡಗಿ ಇಲ್ಲಿನವರನ್ನು ಮದುವೆಯಾಗಿ ಕರೆದುಕೊಂಡು ಹೋಗಿ ನಾನಾಥರದಲ್ಲಿ ಗೋಳಾಡಿಸಿದವರ ಕತೆಗಳನ್ನು ಒಬ್ಬೊಬ್ಬರು ಒಂದೊಂದು ಎನ್ನುವಂತ ಸರದಿಯಲ್ಲಿ ಹೇಳಿ ಅಮ್ಮನ ಕೈಕಾಲುಗೆಡಿಸಿದ್ದರು. ಅವಸರ ಮಾಡಿ ತಂದೆಯಿಲ್ಲದ ತಬ್ಬಲಿ ಹುಡುಗಿಗೆ ಅಣ್ಣ ಬಾವಿಗೆ ತಳ್ಳುತ್ತಿದ್ದಾನೇನೋ ಎಂದು ಸಂಶಯ. ರೋಚಕ ಕತೆಯೊಂದನ್ನು ನಿರೀಕ್ಷಿಸಿದವರಿಗೆ ಆಶಾಭಂಗವಾದಂತೆ ಎಲ್ಲಾ ಸುಖಾಂತ. ವಿಶೂ ಒಳ್ಳೆಯವನು. ನನಗಿಂತಾ ಒಳ್ಳೆಯವನು. ಚಿನ್ನ.

★

ಅವಳಲ್ಲಿ ಏನೆಲ್ಲಾ ಹೇಳಿಕೊಳ್ಳುವುದಿತ್ತು, ಕಳೆದ ಐದುವರ್ಷಗಳ ತುಂಬಿ ತುಳುಕುವ ಅನುಭವ. ಏನೆಲ್ಲಾ ಕೇಳುವುದಿತ್ತು, ಅವಳ ಬದುಕಿನ ಎಲ್ಲಾ ವಿವರ. ಇನ್ನು ವರ್ಷಕ್ಕೆರಡು ಸಲವಾದರೂ ಭೇಟಿಯಾಗಲು ಅಡ್ಡಿಯಿಲ್ಲ. ಉಮಾ ಊರಿಗೆ ಬರುವಾಗ ಮಾತಾಡಿಕೊಂಡು ನಾನೂ ಬಂದು, ನಮ್ಮ ಜಾಗದಲ್ಲೀಗ ಮಣ್ಣಾಟವಾಡುವ, ಸೊಪ್ಪು ಸದೆ ಕಿತ್ತುತಂದು ಅಡಿಗೆ ಮಾಡುವ ನಮ್ಮ ಮಕ್ಕಳು. ಅದೇ ಮಾವಿನ ಮರದ ಕೆಳಗೆ ಒಲೆಹೂಡಿ, ತುಂಡು



ಪೊರಕೆಯಿಂದ ಕಸಗುಡಿಸಿ, ಬಾಲ್ಯದ ಸುಖ ಅನುಭವಿಸುವ ಪುಟಾಣಿಗಳು. ಕಾಲ ವ್ಯಕ್ತಿಗಳನ್ನಷ್ಟೆ ಬದಲಾಯಿಸುತ್ತಾನೆಯೇ ಹೊರತು ಘಟನೆಗಳನ್ನಲ್ಲವೇನೋ? ಎಷ್ಟು ಜನ ಸಂಪರ್ಕಕ್ಕೆ ಬಂದರೂ, ಸನಿಹದವರು ಅನಿಸಿಕೊಂಡರೂ, ಅವರೊಡನೆ ವ್ಯವಹರಿಸುವಾಗ ಒಂದು ಅಂತರ ಇದ್ದೇ ಇರುತ್ತದೆ. ಕೆಲವೊಮ್ಮೆ ಕೃತಕತೆ ಕೂಡಾ. ಆದರೆ ಬಾಲ್ಯದ ಒಡನಾಡಿಗಳೆಂದರೆ ಅದರ ಪರಿಯೇ ಬೇರೆ. ಶಿಷ್ಟಾಚಾರದ ಮುಖವಾಡ ಇಲ್ಲ. ನಾಟಕೀಯತೆ ಇಲ್ಲ. ಮುಕ್ತವಾಗಿ, ಸಲೀಸಾಗಿ, ಅನಿಸಿದ್ದಕ್ಕೂ ಆಡುವುದಕ್ಕೂ ನಡುವೆ ಯಾವುದೇ ಅಡೆತಡೆ ಇಲ್ಲದೆ, ನಿರಾಳವಾಗಿ ಬೆರೆಯಬಹುದು. ನವಿಲುಗರಿಯನ್ನು ಹಗುರವಾಗಿ ಕೆನ್ನೆಗಳ ಮೇಲಾಡಿಸಿಕೊಂಡಂತೆ ಮಧುರಾನುಭೂತಿಯ ಪುಲಕದಿಂದ ಬೆಳಿಬೆಳಿಗ್ಗೆಯೇ ಮಗನೊಡನೆ ಹೊರಟು ನಿಂತವಳನ್ನು ವಿಶೂ ಛೇಡಿಸಿದ, 'ನನ್ನನ್ನ ಕರೆಯೋಲ್ವಾ?'

ಭುಜದಿಂದ ನೇತಾಡುವ ಹೊಸ ವ್ಯಾನಿಟಿಬ್ಯಾಗ್‌ನಲ್ಲಿ ವಿದೇಶದ ಹಲವು ಬಗೆಯ ಚಾಕೂಲೇಟುಗಳಿದ್ದುವು. ಉಮನ ಮಕ್ಕಳಿಗಾಗಿ ಗೊಂಬೆಗಳಿದ್ದವು. ಉಮನಿಗೊಂದು ಕೈಗಡಿಯಾರ. ವ್ಯಾನಿಟಿಬ್ಯಾಗೂ ಅವಳಿಗೇ. ಹಳ್ಳದ ಮೇಲಿನ ಸಾರ ದಾಟುವಾಗ ಅಪೂರ್ವ ಹೆದರಿಕೊಂಡ. ಸಾರ ಅಲುಗುತ್ತಿದೆ. ಅಡಿಕೆ ದಬ್ಬೆ ಲಡ್ಡಾಗಿದೆಯೇನೋ ಎಂದು ನನಗೂ ಸಂಶಯ. ಚಪ್ಪಲಿ ತೆಗೆದು ಎಡಗೈಲಿ ಹಿಡಿದು, ಅಪೂರ್ವನನ್ನು ಬಗಲಲ್ಲೇರಿಸಿಕೊಂಡು ನಿಧಾನಕ್ಕೆ ಸಾರ ದಾಟಿ, ಮನೆ ಅಷ್ಟು ದೂರದಲ್ಲಿ ಕಾಣುತ್ತಿರುವಂತೆಯೇ ನಾಯಿ ಬೊಗಳಿ ಸುದ್ದಿ ತಲುಪಿಸಿಬಿಟ್ಟಿತು. ಅಂಗಳದಲ್ಲಿ ಆಡುತ್ತಿದ್ದ ಹೆಣ್ಣು ಮಕ್ಕಳಿಬ್ಬರು ಒಳಗೆ ಓಡಿದರು. ಉಮಾ ಓಡೋಡಿ ಬಂದು ಕೈ ಹಿಡಿದು ಕರೆದೊಯ್ಯುತ್ತಾಳೆ ಎನ್ನುವ ನಿರೀಕ್ಷೆಯಿಂದ ನನ್ನ ಹೃದಯ ಧಡಪಡಿಸಿತು. ನಾ ಬಂದ ಸುದ್ದಿ ಗೊತ್ತಿರದಿದ್ದೀತೇ? ಗೊತ್ತಾಗಿಯೇ ಆಗಿರುತ್ತದೆ. ಇಲ್ಲ, ಮೆಟ್ಟಿಲು ಹತ್ತಿ ಜಗುಲಿಗೆ ಹೋದರೂ ಉಮಾ ಪತ್ತೆಯಿಲ್ಲ. ಬದಲಿಗೆ ಒಳಗಿನಿಂದ ಬಂದದ್ದು ಅವಳ ಅಮ್ಮ. 'ಬಾ, ಬಾ, ಯಾವಾಗ ಬಂದಿ?' ಎನ್ನುವ ಸ್ವಾಗತವೇನೋ ಸಿಕ್ಕಿತು. ಉಮಾ ಎಲ್ಲಿ?

'ಎಲ್ಲಿ ಉಮಾ?' ಉತ್ಸುಕ ದನಿಯಲ್ಲಿ ಕೇಳಿದೆ.

'ತಿಂಡಿ ತಿಂತಿದಾಳೆ, ಬರ್ತಾಳೆ, ಕೂತ್ಕೋ....'

ಐದು ನಿಮಿಷಗಳ ನಂತರ ಬಂದಳು ಉಮಾ. ನಕ್ಕಳು ಉಮಾ. ಮಾತಾಡಿಸಿದಳು ಉಮಾ. ನಾನು ತಂದಿದ್ದನ್ನು ಅವಳಿಗೆ ಒತ್ತಾಯಪೂರ್ವಕವಾಗಿ ಕೊಡಬೇಕಾಯ್ತು. ಅದನ್ನೆಲ್ಲಾ ಅವಳು ಸ್ವಲ್ಪ ಮಟ್ಟಿನ ಒಲ್ಲದ ಮನೋಸ್ಥಿತಿಯಿಂದಲೇ ಸ್ವೀಕರಿಸಿದಳು. ತಿಂಡಿ ಆಯ್ತು, ಕಾಫಿ ಆಯ್ತು. ಅದ್ಯಾಕೋ ಉಮನ ಮಕ್ಕಳು ಅಪೂರ್ವನ ಜೊತೆ ಹೊಂದಿಕೊಳ್ಳಲೇ ಇಲ್ಲ. ಒಳಗೇ ಅಡಗಿಕೊಂಡವು. ಕದ್ದು ಕದ್ದು ನೋಡಿದವು. ನಮ್ಮ ಮಾತುಗಳೂ ತಡವರಿಸುತ್ತಿವೆ. ಎಲ್ಲೋ ಏನೋ ಅಡ್ಡ ನಿಂತಿದೆ. ಸಲೀಸಾದ ಸಂವಹನ ಸಾಧ್ಯವಾಗದಂತೆ ತಡೆಯುತ್ತಿದೆ. ಔಪಚಾರಿಕ ಎಲ್ಲೆಯನ್ನು ಮೀರಿ ನಿರಾಳವಾಗಿ ಸಂಭಾಷಿಸಲು ಉಮಾ ಉತ್ಸುಕಳಾಗಿದ್ದಂತಿಲ್ಲ. ಅವಳ ನಿರ್ಲಿಪ್ತ ನನ್ನ ಉತ್ಸಾಹವನ್ನು ಅಣಕವಾಡುವಂತಿದೆ. ಒಂದು ಘಂಟೆ ಎನ್ನುವುದರಲ್ಲಿ ಮಾತುಗಳೆಲ್ಲಾ ಮುಗಿದೇಹೋದುವೇನೋ ಎನ್ನುವಂತೆ ಹುಡುಕಿ, ತಡಕಿ ಮಾತಾಡಬೇಕಾದ ಪರಿಸ್ಥಿತಿ. ಅಪೂರ್ವನಿಗೆ ಬೇಜಾರು. ಹೋಗೋಣವೆಂದು ಅವನು ಕಾಡಿಸುತ್ತಿದ್ದಾನೆ.

'ಬರಲಾ ಇನ್ನು?'

ಅರಿಶಿನ, ಕುಂಕುಮ, ಕುಪ್ಪುಸದ ಖಣ. ಅಪೂರ್ವನ ಕೈಗೆ ನೂರು ರೂಪಾಯಿಯ ನೋಟು. ಸತ್ಕಾರದಲ್ಲಿ ಯಾವ ಕೊರತೆಯೂ ಇಲ್ಲ. ಆದರೂ ಮಾತಿಗೆ ದಕ್ಕದ, ಮನಸ್ಸಿಗೆ ಗೀರಿದ, ಯಾವುದೋ ವ್ಯಥೆ, ಮೈತ್ರಿಯ ಒರತೆ ಬತ್ತಿಹೋದಂತೆ ಎಲ್ಲಾ ಒಣಒಣ, ಭಣಭಣ. ಯಾಕೆ ಹೀಗೆ? ದೀರ್ಘಾವಧಿಯವರೆಗೆ ಭೇಟಿಯಾಗದಿದ್ದುದರಿಂದ ಉಂಟಾದ ತಾತ್ಕಾಲಿಕ ತಡವರಿಕೆಯೋ, ಅಥವಾ.... ಅಥವಾ.... ಸಮಾನರಾಗಿದ್ದವರ, ಸಮವಯಸ್ಕರಾಗಿದ್ದವರ ನಡುವೆ ಆರ್ಥಿಕ ಅಂತರ ಉಂಟುಮಾಡಿದ ಹಲವು ಭಾವನೆಗಳ ಪ್ರತಿಕ್ರಿಯಾರೂಪವಾದ ಧೋರಣೆಯೋ? ಆಸ್ತಿ, ಅಂತಸ್ತುಗಳ ಪ್ರಶ್ನೆ ಗೆಳೆತನದ ಮಧ್ಯೆ ಬರಬೇಕಾದರೂ ಯಾಕೆ? ಬರುತ್ತದೆಯೇ? ಬಂದೇ ಬಿಟ್ಟಿದೆಯೇ?

ಅಂಗಳದ ತುದಿಯ ಮಾವಿನಮರದ ಹತ್ತಿರ ಬಂದಾಗ ಅಪೂರ್ವ ಕೇಳಿದ, 'ನೀನು, ಆಂಟಿ, ಇಲ್ಲೇನಾ ಆಟ ಆಡ್ತಿದ್ದದ್ದು?' ಕತೆಯಂತೆ ಹಳೆಯದನ್ನೆಲ್ಲಾ ಕೇಳಿಸಿಕೊಂಡು ನೆನಪಿರಿಸಿಕೊಂಡಿದ್ದ ಅಪೂರ್ವನ ಪ್ರಶ್ನೆ ಚುಚ್ಚಿದಂತಾಯ್ತು. ತಿರುಗಿ ನೋಡಿದರೆ ಉಮಾ ಅದಾಗಲೇ ಒಳಗೆ ಹೊರಟು ಹೋಗಿದ್ದಳು. ■

ತೀರ್ಮಾನ



ಮದುವೆಗೆ ಮುಂಚೆ
ನಮ್ಮ ತೀರ್ಮಾನ
'ನಮಗಿಬ್ಬರೇ ಮಕ್ಕಳು'
ಆಪರೇಶನ್‌ಗೆ ಹೆದರಿ
ನಮಗೀಗ ಬರೇ ಮಕ್ಕಳು!

-ಹೊ.ಹ.ಶ್ರೀಧರ
ದೇಮ್ಲಾಪುರ.

● ಅಂಶುಮಾಲಿ

ಕವನ ಪ್ರತಿಭಾನ

ಏನು ಬರೆಯಲಿ ಕವನ ನನ್ನೊಳಿರದಿರೆ ಮನನ
ಅನಿವಾರ್ಯ ಸಂವರಣ ನನ್ನ ಮೌನ
ಏನು ಒಳಗಿನ ಧ್ಯಾನ ಏನು ಹೊರಗಿನ ಸ್ಥಾನ
ಎಲ್ಲಿ ಪ್ರಕೃತಿಯ ಒಲವು ನಲಿವು ತನನ?

ನಾನು ಮಾಡುವ ಮಾಟ ನಾನು ಹೂಡುವ ಹೂಟ
ನನ್ನನೇ ತಿನ್ನುತಿದೆ ಏನೊ ಅನ್ನುತಿದೆ
ನಾನು ಯಾವುದರೊಳಗೆ ಹೇಗೆ ಬರುವುದು ಹೊರಗೆ
ನನ್ನನ್ನೇ ನಾನೆತ್ತಿ ಇರಿಸುವುದು ಹೇಗೆ?


ಇಲ್ಲಿ ಏನೂ ಇಲ್ಲ ಅಲ್ಲಿ ಏನೂ ಇಲ್ಲ
ಎನುವ ಆಕಾಶದಲಿ ಮುಗಿಲು ತಾನೆ?
ಯಾವ ಆಕಾರದಲಿ ಬಂದೇನು? ಫಲವಿಲ್ಲ
ದಿಗಿಲು! ನಾ ನನ್ನನೇ ಮರೆತಿರುವೆನೆ?

2

ನಾನು ಎನ್ನುವುದೇನು ನೀನು ಎನ್ನುವುದೇನು
ಅರಿತುಕೊಳಬಹುದೆ ನಾ ಧ್ಯಾನದಲಿ ಮೌನ?
ಈ ಭೂಮಿ ನಾನಾಗಿ ಆ ವ್ಯೋಮ ನೀನಾಗಿ
ಸಾಧನೆಯೆ ಅಭಿಯಾನ ಸ್ವರ್ಗ ಸೋಪಾನ?

ಏನು ಅವತಾರವಿದು ಆತ್ಮ ಪರಮಾತ್ಮನದು
ವಿಶ್ವರೂಪದಿ ಸೃಷ್ಟಿ ಸ್ಥಿತಿಲಯದ ಮರ್ಮ?
ಅದರಾಚೆಗೇನಿಹುದು ಯಾರು ಬಲ್ಲರು ಎಲ್ಲಿ
ಯಾವೆಡೆಗೆ ಒಯ್ಯುವುದೊ ಧರ್ಮಕರ್ಮ?

ನಾನು ಎನ್ನುವುದೇನು ಮನನದಲಿ ಇದೆ ಭಾನು
ಬಾನಿನಲಿ ಬೆಳಗುತ್ತ ತೊಳಗುತ್ತ ತಾನು!
ನಾನು ಎನ್ನುವ ಕಿರಣ ನೀನು ಎನ್ನುವ ಸ್ಫುರಣ
ಏನು ಅನುಸಂಧಾನ ಜ್ಞಾನ ಪ್ರತಿಭಾನ?



ಸವಿನೆನಪುಗಳೇ ನನ್ನ ಸಂಗಾತಿಗಳು

(ಅಂಥದೊಂದು ಸಿಹಿಕಹಿ ನೆನಪು)

• ಎನ್ಕೆ
ಎನ್. ಕೆ. ಕುಲಕರ್ಣಿ,
'ಮಾತೃಶ್ರೀ', ಮಹಿಷಿ ರಸ್ತೆ,
ಮಾಳಮಡ್ಡಿ, ಧಾರವಾಡ- 580 001.



ಎಂಭತ್ತೆಂಟರ ಅಲುಗಿನಲ್ಲಿರುವ ವಯೋವೃದ್ಧರಿಗೆ ಬದುಕಿನ ನೆನಪುಗಳು ಸವಿಬುತ್ತಿಗಳು.

ಲಲಿತ ಪ್ರಬಂಧ

ಅಲ್ಲದೆ ಏನು? ಇಬ್ಬರು ಸಹಧರ್ಮಿಣಿಯರನ್ನು ಕಳೆದುಕೊಂಡ ಈ 88ಲ್ಲಿರುವ ಎಳೆಯ ವೃದ್ಧನಿಗೆ ಆ ಮಧುರ ನೆನಪುಗಳ ಮೆಲುಕೆ 'ಬಂಧು ಜೀವ'ಕ್ಕಿರುವ ಮಲುಕು. ('ಬಂಧುಜೀವ' ಎಂಬುದು ಒಂದು ಹೂವಿನ ಹೆಸರು. ಭಾಗವತದಲ್ಲಿ ಇದರ ಉಲ್ಲೇಖ. ಶ್ರೀಕೃಷ್ಣನ ಮೆಚ್ಚಿನ ಹೂ.)

ನನಗೆ ಏಕಾಂತದ ವೇಳೆ ದೊರಕಿದಾಗಲೆಲ್ಲಾ ನನ್ನ ನೆನಪಿನ ದೋಣಿಯನ್ನು ಗತಕಾಲದ ಕಾಸಾರದಲ್ಲಿ ಹುಟ್ಟುಹಾಕಿ ಓಡಾಡಿಸುತ್ತೇನೆ. ಆಗ ಕಾಸಾರದ ತಳದಿಂದ ಕಿತ್ತಿಕೊಂಡು ಎದ್ದು ಬರುತ್ತವೆ ನೆನಪಿನ ಮುತ್ತುಗಳು! ಇಂತಹ ಸವಿನೆನಪುಗಳಲ್ಲಿ ಮೊದಲ ಗಮನ ಮದುವೆಗಲ್ಲದೆ ಇನ್ನಾವುದಕ್ಕೆ?

ನಾನು ಮೊದಲ ಮದುವೆಯಾದಾಗ ಇನ್ನೂ ಕಾಲೇಜ್ ವಿದ್ಯಾರ್ಥಿ! (ಮೊದಲ ಮದುವೆ ಎಂದರೆ? ಹೌದು ನನ್ನ ಬದುಕಿನಲ್ಲಿ ಇಮ್ಮನೆ ಮದುವೆಗಳು - ಆದರೂ ನಾನು ವಿಧುರ). ಹಾಸ್ಟೆಲ್‌ನಲ್ಲಿದ್ದು ಕಾಲೇಜ್ ಬದುಕು ಭೋಗಿಸುವಷ್ಟು ಭಾಗ್ಯ ಸಂಪತ್ತು ನನಗಿರಲಿಲ್ಲ. ಅಂತೆಯೆ ನನ್ನ ಬಳಗದವರ ಮನೆಯಲ್ಲಿದ್ದುಕೊಂಡು ಕಾಲೇಜ್ ಕಟ್ಟೆ ಹತ್ತಿದೆ. ಊಟವೇನೊ ಉಚಿತ. ಕಾಲೇಜ್ ಫೀ ಕಟ್ಟಬೇಕಲ್ಲ? ಪ್ರಥಮ ವರುಷದ ಪ್ರಥಮ ಟರ್ಮಿಗೇ ಬಂತು ಪ್ರಬಲ ಪ್ರಶ್ನೆ. ಅಣ್ಣ ಹೇಗೋ ಬಗೆಹರಿಸಿದ. ಮುಂದೆ? ಪ್ರಾಚಾರ್ಯರಿಗೆ ಹೇಳಿಕೊಂಡು ಎರಡನೆಯ ಟರ್ಮಿನ ಫೀ ಹಣ ತುಂಬಲು ಎರಡು ವಾರ ಕಾಲಾವಧಿ ಕೇಳಿಕೊಂಡೆ. ಆದರೇನು? ಆ ಅವಧಿಯಲ್ಲೂ ಅಲ್ಪ ಸಂಬಳದ ನನ್ನಣ್ಣನಿಂದ ಹಣ ಪಡೆಯಲಾಗಲಿಲ್ಲ. ಅನಿವಾರ್ಯವಾಗಿ, ಅಂಗೈಯಲ್ಲಿ ಜೀವ ಹಿಡಿದುಕೊಂಡು ನನ್ನ ಅನ್ನದಾತರಿಗೆ ಧನದ ಸಹಾಯಕ್ಕಾಗಿ ಬಾಯ್ತೆರೆದು ಕೈ ಚಾಚಿದೆ. ಅವರು ಒಂದು ಯೋಚನೆ ಮೊದಲೆ ಹಾಕಿದ್ದರೆಂದು ತೋರುತ್ತದೆ. 'ನಿನಗೆ ಫೀ ಹಣ ನಿನ್ನ ಕಾಲೇಜ್ ಪೂರ್ತಿ ಮುಗಿಯುವವರೆಗೂ ಕೊಡುತ್ತೇನೆ. ಆದರೆ....' ಈ ಆದರೆ ಆಕಾಶಬಾಣ ತನ್ನ ಗರ್ಭದಲ್ಲಿ ಏನಿರಿಸಿಕೊಂಡಿತ್ತೊ? ಕುತೂಹಲದಿಂದ ಬಾಯೊಡನೆ ಕಣ್ಣೂ ತೆರೆದೆ.

'ನಮ್ಮ ಹುಡುಗಿಯನ್ನು ಮದುವೆಯಾಗಬೇಕು' ಎಂದರು. ಭಕ್ತ ಒಂದು ವರ ಕೇಳಿದರೆ ಉದಾರಿ ಬ್ರಹ್ಮ ಎರಡು ವರಗಳನ್ನು ಕರುಣಿಸಿದಂತಾಗಿತ್ತು ನನ್ನ ಮನಃಸ್ಥಿತಿ! ಏಕೆಂದರೆ ಅವ್ಯಕ್ತವಾಗಿ ಈ ಅನ್ನದ ಮನೆಯಲ್ಲಿ ಉಂಬುವ ಜೀವಕ್ಕೆ ಇನ್ನೊಂದು ಹಸಿವನ್ನೂ ಹುಟ್ಟಿಸಿದ್ದವು ಅಲ್ಲಿಯ ಎರಡು ಕುತೂಹಲದ ತರುಣ ಕಣ್ಣುಗಳು! ಆ ಕಣ್ಮೇಲೆ ತೂಗಾಡುವ ಎರಡು ಗಾಳ ಹಾಕುವ ಕುರುಳುಗಳು!

ಹೀಗೆ ನಾನು ಕಾಲೇಜ್ ವಿದ್ಯಾರ್ಥಿಯಾಗಿಯೆ ಚತುರ್ಭುಜನಾಗಿದ್ದೆ.

ಆದರೆ.... ಆದರೆ, ನೀವೇ ಊಹಿಸಿರಿ. ಚತುರ್ಭುಜನಾಗಿ ಕಣ್ಮುಂದೆ ಕೈ ಹಿಡಿದವಳು ಸುಳಿದಾಡುತ್ತಿದ್ದರೂ ಆಕೆಯನ್ನು ಕದ್ದು ನೋಡುವುದು, ಆಕೆ ಮುಡಿದ ಸಂಪಿಗೆ-ಕಾಮ ಕಸ್ತೂರಿಗಳ ಭಗ್ಗೆಂಬ ವಾಸನೆಯನ್ನು ದೂರಿಂದಲೆ ಮೂಗಿನಿಂದ ಉಣ್ಣುವುದು, ಆಕೆ ತನ್ನ ತಾಯಿಯೊಡನೆ ನನ್ನ ವಿಷಯ ವಿಚಾರವಾಗಿಯೆ ಮಾತಾಡುವುದನ್ನು ಕೇಳಿ ಖುಷಿಪಡುವುದು - ಆದರೆ ಆಕೆಯನ್ನು ಸ್ಪರ್ಶಿಸುವಂತಿಲ್ಲ - ಕೈ ಹಿಡಿದವಳ ಕೈ ಕೂಡ ಹಿಡಿಯುವಂತಿಲ್ಲ - ಮಾತಾಡುವುದಂತೂ ದೂರವೆ. ಈಗಿನಂತೆ ಎಪ್ಪತ್ತು ವರ್ಷಗಳ ಹಿಂದಿನ ನಮ್ಮ ತಲೆಮಾರಿಗೆ ರೋಮಾನ್ಸ್ ಎಂದರೆ ಮದುವೆಯಾದ ಮೇಲೂ ಗೊತ್ತಿರಲಿಲ್ಲ. ಮತ್ತೆ?

ನೋಡ್ರೆಪ್ಪ, ಹೊಲ ಖರೀದಿಸುತ್ತೇವೆ, ನಮ್ಮ ಹೆಸರಿನಲ್ಲಿ ನೋಂದಣಿ ಆಗಿರುತ್ತದೆ. ಆದರೂ ಕ್ಷೇತ್ರವು ನಮ್ಮ ಕಬ್ಜಾಕ್ಕೆ ಬಂದಿರುವುದಿಲ್ಲ. ಹಾಗಾಗಿತ್ತು ನನ್ನ ಅವಸ್ಥೆ. ಕ್ಷೇತ್ರವಿನ್ನೂ ಕಬ್ಜಾಕ್ಕೆ ಬಂದಿರಲಿಲ್ಲ. ಫಲಶೋಭನ ಎಂಬ ಖಾಸಗೀಕರಣ ಕಾರ್ಯಕ್ರಮದ ವಿಧಿ ನೇರವೇರಿರಲಿಲ್ಲ. ಹೀಗಾಗಿ ಒಡೆತನವಿದ್ದೂ ಒಡವೆ ನನ್ನದಾಗಿರಲಿಲ್ಲ. ಒಮ್ಮೆ ನಮ್ಮ ಕಾಲೇಜ್‌ನಲ್ಲಿ king's Commission ಮೇಲೆ ಹೋಗಲು ಅರ್ಜಿ ಕರೆದಿದ್ದರು. ಪ್ರಿನ್ಸಿಪಾಲ್ ಫ್ಯಾರೆನ್ (ಅವರು ಬ್ರಹ್ಮಚಾರಿ) ಅವರು ಅರ್ಜಿದಾರನ್ನು ಪ್ರಶ್ನಿಸುತ್ತಿದ್ದರು - 'Are you married?' ಎಂದು. ಒಬ್ಬ ಅರ್ಜಿದಾರ ಮಾತ್ರ ಉತ್ತರಿಸಿದ್ದ - 'Yes sir I am married but not that' ಎಂದು! ಅಮಾಯಕ ಪ್ರಾಚಾರ್ಯರು ಕೇಳಿದರು - 'what is that?' ಎಂದು ಎಲ್ಲ ವಿದ್ಯಾರ್ಥಿಗಳೂ ಘೊಳ್ಳೆಂದು ನಕ್ಕು ಬಿಟ್ಟಿದ್ದರು. ಅವರಿಗೆ ಅರ್ಥವಾಗಿತ್ತು.

ಹೀಗಿತ್ತು ನನ್ನ ಅವಸ್ಥೆ. ನಾಲ್ಕೂ ಇಂದ್ರಿಯಗಳಿಗೆ ವಿಷಯವಾಗಬಲ್ಲ ವಿಧಿವತ್ತಾದ ವಧೂ ಸ್ಪರ್ಶೇಂದ್ರಿಯಕ್ಕೆ ಮಾತ್ರ ಬಾಹಿರಳು - ಆ 'that' ಆಗುವವರೆಗೆ ನಾನೇನೂ ಮನೆ ಅಳಿಯನಾಗಿ 'ಕಾಲೇಜ್ ಕಲಿ'ಯುತ್ತಿದ್ದೆ. ನನ್ನ ಕಲಿಕೆ ಪೂರ್ಣ ಮುಗಿಯುವವರೆಗೆ ಆ 'that' ಕಾರ್ಯಕ್ರಮ ಬೇಡವೆಂದು ಮುಂದಕ್ಕೆ ಹಾಕಿಬಿಟ್ಟಿದ್ದರು. ಆದರೆ ಈ ಹಿರಿಯರಿಗೆ ಈ ಹರೆಯನ ಸೈಕಾಲಜಿ ಅರ್ಥವಾಗಬೇಕಲ್ಲ? ಎದುರಿಗೆ ಮೇನಕೆಯ ಮಾಯೆ ಆಟವಾಡುತ್ತಿರುವಾಗ, ವಿಶ್ವಾಮಿತ್ರನಿಗೆ ತಪಸ್ಸು ಮುಂದುವರಿಸಲು ಸಾಧ್ಯವಾಗಲಿಲ್ಲ! ಇನ್ನು ನಿನ್ನಂತವನು ಮೇನಕೆಯಿಂದ ಮನಸ್ಸನ್ನು ನಿಗ್ರಹಿಸಿ, ನನ್ನ ಅಧ್ಯಯನ-ಅಭ್ಯಾಸ ತಪಶ್ಚರ್ಯ ನಡೆಸಲು ಏಕಾಗ್ರಚಿತ್ತತೆ ಸಾಧ್ಯವಾದೀತೆ? ನನ್ನ ಚಿತ್ತವೆಂಬುದು ಛಿದ್ರಛಿದ್ರವಾಗಿ ಹೋಗುತ್ತಿರುವುದರ ಕಲ್ಪನೆ ಈ ಹಿರಿಯರಿಗೆ - ಅರ್ಥಾತ್ ಅತ್ತೆಮಾವಂದಿರಿಗೆ - ಬರಬಾರದೆ?

ಸರಿ. ಇನ್ನು ಇದಕ್ಕೆ ಉಪಾಯ? ಏನೆ ಆಗಲಿ, ಧೈರ್ಯ ಮಾಡಿಯೋ ಮಾಡಬೇಕು - ಮುಗಿಲು ಕಡಿದು ಬೀಳಲಿ, ಸ್ವರ್ಗಚೂರು ಚೂರಾಗಲಿ ಎಂದುಕೊಂಡು - ಅಂದು ನಸುಕಿನಲ್ಲೇ ಎದ್ದೆ. ನನ್ನಾಕೆ ಚುಮು ಚುಮು ನಸುಕಿನಲ್ಲಿಯೆ ಎದ್ದು ಹಿತ್ತಿಲಲ್ಲಿ ತುಳಸಿಯ ಗಿಡಕ್ಕೆ ನೀರು ಹಾಕಿ ಪೂಜೆ ಮಾಡಿ ನಮಸ್ಕರಿಸುವಳು. ಅದೇ ಹೊತ್ತು ಸಾಧಿಸಿ ನಾನು ಪ್ರಾತರ್ವಿಧಿಯ ನೆಪ ಮಾಡಿಕೊಂಡು ಹಿತ್ತಲಲ್ಲಿ ಬಂದೆ. ಇನ್ನೇನು ತುಳಿಸಿಯೆದುರಿಗೆ ಬೇಡಿಕೊಂಡು (ಏನೆಂದೊ ಏನೊ!) ಕೈ ಮುಗಿಯುತ್ತಿರುವಾಗ ಹಿಂದಿನಿಂದ ಹೋಗಿ ಆ ಮುಗಿದ ಕೈಗಳನ್ನು ಮುಚ್ಚಿದೆ ನನ್ನ ಕೈಗಳಿಂದ? ಯಾವ ದರೋಡೆಕೋರ ಬಂದನೊ ಎಂದು ಗಾಬರಿಗೊಂಡು ಪೋಲೀಸರಿಗೆ ವರದಿಕೊಡುವವರ ಹಾಗೆ ಧಾವಿಸಿ ಬಿಟ್ಟಳು! ಒಂದು ಜಿಂಕೆ ಕೂಡ ಇಷ್ಟು ವೇಗವಾಗಿ ಧಾವಿಸಿರಲಿಕ್ಕಿಲ್ಲ! ಹತಾಶನಾಗಿ ನಾನು ಹಿಂತಿರುಗಿದೆ.

ಅಲ್ಲಾರೀ ಹೊರಗೆ ಭಯವಿದ್ದರೂ ಒಳಗೆ ಭಕ್ತಿ ಇರದಿರುತ್ತದೆಯೇ? ಇದನ್ನು ಆಕೆ ಎಷ್ಟು ಬುದ್ಧಿವಂತಿಕೆಯಿಂದ ವ್ಯಕ್ತಮಾಡುತ್ತಿದ್ದಳು ಗೊತ್ತೆ? ಗುರುವಾರಕ್ಕೊಮ್ಮೆ ನಮ್ಮ ಮಾವನವರಿಗೆ ಸಂಜೆ ಊಟವಿಲ್ಲವೆಂದು ಹಾಲೊಳಗಿನ ಚಪಾತಿ ನನ್ನಾಕೆಯ ಹದವಾದ ಕೈಯಿಂದ ತಯಾರಾಗುತ್ತಿದ್ದವು. ಉಪವಾಸ ಮಾಡುವ ಮಾವನವರು ಇನ್ನೂ ಸಂಜೆ ಮನೆಗೆ ಕೂಡ ಬಂದಿರಲಾರರು. ಆಗ ಅವರಿಗಾಗಿ ಮಾಡಿದ ಚಪಾತಿಯಲ್ಲಿ ಎರಡು ಬಿಸಿ ಚಪಾತಿ ಈ ಅಳಿಯನಿಗೆ ಆಕೆ ಕದ್ದು ಬಡಿಸಬೇಕು. ಎರಡು ಚಪಾತಿಗಳ ನಡುವೆ ತುಪ್ಪದ ತುಂಗಭದ್ರೆಯೆ ಹರಿಯುತ್ತಿರಬೇಕು, ಆ ಪ್ರವಾಹಕ್ಕೆ ಚಟ್ನಿಪುಡಿಯ ಒಡ್ಡು ಹಾಕಿ, ಮೇಲೆ ಇನ್ನೊಂದು ಚಪಾತಿಯ ಚಪ್ಪರ ಹಾಕಿ ನನಗೆಂದು ಮಹಡಿಯ ಮೇಲಿನ ನನ್ನ ಕೋಣೆಗೆ ಬಂದು ಸ್ಟೂಲಿನ ಮೇಲೆ ಪ್ಲೇಟು ಇಟ್ಟವಳೆ ಓಡಿ ಬಿಡುವಳು - ಮತ್ತೆ ನಾನೆಲ್ಲಿ ತಡೆದು ನಿಲ್ಲಿಸುವೆನೋ ಎಂಬ ಭಯದಿಂದ. ಹೀಗೆ ಭಯ-ಭಕ್ತಿ ಎರಡನ್ನೂ ಏಕಕಾಲಕ್ಕೆ ಪ್ರಕಟಿಸುತ್ತಿದ್ದ ಆಕೆಯ ಚುರುಕು-ಚಾಣಾಕ್ಷತೆಗಳನ್ನು ಎಷ್ಟೆಂದು ಪೊಗಳಲಿ?

ನಾನು ಕಾಲೇಜಿಗೆ ಹೋಗುವ ಹೊತ್ತಿಗೆ ನಿತ್ಯ ನನ್ನ ಕೋಟಿನ ಒಳ ಜೇಬಿನಲ್ಲಿ ಎರಡು ಬೀಡಾಗಳು ಬಿದ್ದಿರುತ್ತಿದ್ದವು. ನಾನು ಕಾಲೇಜಿಗೆ ಹೋಗುವಾಗ ಜೇಬಿನಲ್ಲಿ ಪೆನ್ ಇದೆಯೊ ಇಲ್ಲವೋ ನೋಡಿಕೊಳ್ಳ ಹೋದಾಗ ಈ ಪೆಣ್ ರಚಿಸಿದ ಕಣ್ಮಾಯೆ ಬಾಯ್ಗೆ ಸವಿ ನೀಡುವುದು. ಒಮ್ಮೊಮ್ಮೆ ನನಗೆ ತಿಳಿಯದಂತೆಯೆ ಸೂಕ್ಷ್ಮವಾಗಿ ನನ್ನ ಆರ್ಥಿಕ ಶೂನ್ಯ ಪರಿಸ್ಥಿತಿ ಮನಗಂಡು ನನ್ನ ಜೇಬಿನಲ್ಲಿ ಒಂದು ರೂಪಾಯಿ ಚಿಲ್ರೆಯಿಂದ ಒಮ್ಮೊಮ್ಮೆ ಐದು ರೂಪಾಯಿವರೆಗೂ ನನ್ನ ಜೇಬಿನ ಭಂಡಾರ ತುಂಬುತ್ತಿದ್ದುದುಂಟು. ಒಮ್ಮೆಯಂತೂ ಒಂದು ಬೀಡಾ ತುಂಡಾಗಿತ್ತು. ನನಗೆ ಎಷ್ಟೇ ಹೊತ್ತು ಇದರ ಗುಟ್ಟು ಹೊಳೆದಿರಲೇ ಇಲ್ಲ. ಆಮೇಲೆ ತಿಳಿದಿತ್ತು ಇದು ಗಿಣಿಕಚ್ಚಿದ ತುಂಡು ಎಂದು!! ಆಮೇಲೆ ಅದನ್ನು ಬಾಯೊಳಗಿಟ್ಟುಕೊಂಡಾಗ ಏನದರ ಕಮ್ಮಗಿನ ಮಸಾಲೆಯ ರುಚಿ, ಏನದರ ಸೊಗಸು ಸೊಂಪು! ಬೀಡಾ ತಿಂದು ತುಟಿಯ ಕೆಂಪು ನೋಡಿಕೊಳ್ಳುತ್ತ ಖುಷಿಯ ರಸ ಋಷಿಯಾಗಿ ಕಾವ್ಯ ಬರೆಯದ ಶೃಂಗಾರ ಕವಿಯಾಗಿ ಕಾಲೇಜ್ ಹಾದಿ ಹಿಡಿಯುತ್ತಿದ್ದೆ.

ಆದರೆ ಹೀಗೆಯೇ ಎಷ್ಟೆಂದು ಈ ಮೂಕಪ್ರೇಮ ಮಂತ್ರ! ಇಂದಿನ ಕಾಲಕ್ಕಾದರೂ ಮದುವೆಗೆ ಮೊದಲೇ ಹೋಟೆಲ್, ಸಿನಿಮಾ, ಡೇಟಿಂಗ್ ಏನೆಲ್ಲಾ ನಡೆಯುತ್ತವೆ. ಹಿರಿಯರ ಸಮ್ಮುಖದಲ್ಲೇ ಈ ಪ್ರೇಮದ ಉಮೇದುವಾರರು ಏನೆಲ್ಲ ಚಪಲ ಚೇಷ್ಟೆಗಳನ್ನು ನಡೆಸಿ ಬಿಟ್ಟಿರುತ್ತಾರೆ! ಇಂದಿನ ಹಿರಿಯರೂ ಬಹುಶಃ ಅನಿವಾರ್ಯವಾಗಿ ಸುಮ್ಮನಿರುತ್ತಾರಷ್ಟೆ ಅಲ್ಲ ಕುಮ್ಮಕ್ಕು ಕೊಡುತ್ತಾರೆ! ಆದರೆ ಈಗ ಎಪ್ಪತ್ತು ವರ್ಷಗಳ ಹಿಂದಿನ ಹಿಸ್ಟರಿ ನಾನು ಹೇಳೋದು.

ಮದುವೆಯಾದ ನಂತರ ಆ 'That' ನೆರವೇರುವವರೆಗೂ ನಮ್ಮ ಪ್ರೇಮದ ಸೆರೆಗೆ ಬಿಡುಗಡೆಯೆ ಇಲ್ಲವೆ? ಸರಿ, ಇನ್ನೇನು ಮಾಡುವುದು? ನಸುಕಿನ ತುಳಸೀ ಪೂಜೆಯ ಸಮಯಕ್ಕೆ ಕೈ ಸುಟ್ಟುಕೊಂಡುದಾಯಿತು. ಹಣ್ಣು, ಕಣ್ಣಿಗೆಟುಕಿದಂತೆ ಕೈಗೆ ಎಟುಕಲಿಲ್ಲ. ಸರಿ ಒಂದು ಉಪಾಯ ಹೊಳೆಯಿತು. ಬಾಂಬ್ ಸ್ಫೋಟ ಮಾಡುವುದು!

ನನ್ನಾಕೆ ಸಂಜೆ ಹೊತ್ತಿಗೆ ನಾನು ಹೊರಬಿದ್ದ ಕೂಡಲೆ ನನ್ನ ಹಾಸುಗೆ ಹಾಸಿ ಚಾದರ - ಬೆಡ್‌ಶೀಟ್ ಸರಿಮಾಡಿಟ್ಟಿರುತ್ತಿದ್ದಳು. ನನಗೊಂದು ವಿಚಾರದ ಮಿಂಚು ಹೊಳೆಯಿತು. ನನ್ನ ದಿಂಬಿನ ಬುಡದಲ್ಲಿ ಒಂದು ಬಾಂಬ್ ಅರ್ಥಾತ್ ಒಂದು ಭಯಂಕರ ಪ್ರೇಮ ಪತ್ರ - ಇರಿಸಿದೆ.

'ಕು.ಸೌ.ವತಿಗೆ,

ನನ್ನ ಈ ನೋಟೀಸಿನ ಪ್ರಕಾರ ನೀನು ನನ್ನ ಜೊತೆ ಹೋಟೆಲ್‌ಗೆ ಮತ್ತು ಸಿನಿಮಾಕ್ಕೆ ನಾಳೆ ಬರಲಿಕ್ಕೇ ಬೇಕು. ಇಲ್ಲದಿದ್ದರೆ ನಾನು ಕಾಲೇಜ್ ಕಲಿಯುವುದು ಬಿಟ್ಟು ನಮ್ಮೂರಿಗೆ ಹೋಗಿ ಬಿಡುತ್ತೇನೆ ತಿಳಿಯುವುದು. ಇತಿ ನಿನ್ನ ಪಾಣಿಗ್ರಹಣದ ಪ್ರಾಣಪತಿ'

ಇದರ ಪರಿಣಾಮ ಆಕೆಯ ಮೇಲೆ ಯಾವ ರೀತಿ ಪ್ರಭಾವ ಬೀರಿತೊ ಹೇಗೆ ತಿಳಿಯಬೇಕು? ಮರುದಿನ ಇನ್ನೊಂದು ಪತ್ರದ ಬಾಂಬನ್ನಿಡಬೇಕೆಂದು ದಿಂಬು ಎತ್ತುತ್ತೇನೆ. ಅಲ್ಲೊಂದು ಅಣುಬಾಂಬು, ಟಾಯಿಂ ಬಾಂಬ್ ಆಗಿ ಕೂತಿತ್ತು.

'-ರಾಯರಿಗೆ,

ನೀವು ಹೀಂಗೆಲ್ಲಾ ಮಾಡಿದರ ನಾನು ಭಾವಿ ಬೀಳ್ತೀನಿ, ತಿಳಿಯುವುದು.

-ನಿಮ್ಮ ಕು॥ ಸೌ॥'

ಅಯ್ಯೋ ದೇವರೆ, ನೀನೇ ಕಾಪಾಡಪ್ಪ, ಎಂದುಕೊಂಡು ಮರುದಿನ ಹೊರಗೆ ಹೊರಟವನು ಹತ್ತೇ ನಿಮಿಷಗಳಲ್ಲಿ ಮನೆಗೆ ಬಂದೆ. ಅಟ್ಟದ ಮೆಟ್ಟಿಲೇರಿದೆ. ನನ್ನಾಕೆ ಹಾಸುಗೆ ಸರಿ ಮಾಡುತ್ತಿದ್ದಳು. ಹೋದವನೆ ಆಕೆಯ ಕಾಲಿಗೆ ಬಿದ್ದೆ - 'ಕ್ಷಮಿಸು, ಮಾರಾಯಿತಿ, ತಪ್ಪಾತು' ಎಂದೆ. 'ಛಿ, ಇದೇನಿದು ನನ್ನ ಕಾಲು ಮುಟ್ಟೋದು' ಎಂದುಕೊಂಡು ನನ್ನ ಕಾಲು ಗಟ್ಟಿ ಹಿಡಿದು ತಲೆ ಬಾಗಿ ಪಾದ ಧೂಳಿಯನ್ನೂ ತಲೆಗಿಟ್ಟುಕೊಂಡು ನಡೆದುಬಿಟ್ಟಳು. ■

ಹಾಸ್ಯ

ಉಪಾಧಿಗಳೆಂಬ ಉಪದ್ರವಗಳು

• ಮಲ್ಲಿಕಾರ್ಜುನ ಹುಲಗಬಾಳಿ,
'ಬಸವ ಸಂಪದ', ಬನಹಟ್ಟಿ- 587 311
ಬಾಗಲಕೋಟೆ ಜಿಲ್ಲೆ.

ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಬರಬೇಕೆಂದು ಆಗ್ರಹಿಸಿ ಹೋಗಿದ್ದ ತರುಣ ಕಾರ್ಯಕರ್ತರ್ರೈವರು, ಅದಾದ ಎಂಟು ದಿನಕ್ಕೆ ತಾವೇ ಬಂದು ಕೈಗೆ ಮುದ್ರಿತ ಆಮಂತ್ರಣ ಪತ್ರಿಕೆ ಇತ್ತರು. ಎಂದಿನಂತೆ ಆಮಂತ್ರಣ ಪತ್ರಿಕೆಯಲ್ಲಿರುವ ನನ್ನ ಹೆಸರಿಗಾಗಿ ಕಣ್ಣೋಡಿಸಿದೆ. ಆಶ್ಚರ್ಯ...! ನನ್ನ ಹೆಸರಿನ ಜತೆ, 'ಜನಪ್ರಿಯ ಹಾಸ್ಯ ಸಾಹಿತಿ' ಎಂಬ ಉಪಾಧಿ ರಾರಾಜಿಸುತ್ತಿದೆ. ಈ ಸಾಹಿತಿಗಳು ಎಂದಿನಿಂದ ಜನಪ್ರಿಯರಾಗತೊಡಗಿದರು....! ಈ ಗುಟ್ಟು ಇವತ್ತಿಗೂ ತಿಳಿಯಧೆ, ಇನ್ನೂ ಗಲಿಬಿಲಿಯಲ್ಲಿರುವೆ.

ಈ 'ಜನಪ್ರಿಯ' ಎಂಬ ವಿಶೇಷಣ ಕೇವಲ 'ಭಾಮಜ' (ಭಾರೀ ಮಹತ್ವದ ಜನ)ರಿಗೆ, ಸಿನೇಮಾ ತಾರೆಯರಿಗೆ ಮಾತ್ರ ಮೀಸಲಾದುದು ಎಂಬುದು ನನ್ನ ಪೂರ್ವಗ್ರಹ ನಂಬಿಕೆಯಾಗಿತ್ತು. ಈಗದು ನನ್ನಂತಹ ಸಾಹಿತಿಗಳಿಗೂ 'ಕಂಪನಿ' ಕೊಡುತ್ತಿದೆಯಲ್ಲ ಎಂದು ಸಂತೋಷವೂ ಆಯ್ತು. ಮುಂದೆ ನಮ್ಮಲ್ಲಿ ಜನಪ್ರಿಯ ಕವಿ, ಜನಪ್ರಿಯ ಕಥೆಗಾರರು ಕಾಣಿಸಿಕೊಂಡರೆ ಆಶ್ಚರ್ಯವಿಲ್ಲ. ಅದು ಇನ್ನಷ್ಟು ಬಾಚಿಕೊಂಡಲ್ಲಿ, ಅದರ ತೆಕ್ಕೆಗೆ ವಿಮರ್ಶಕರೂ ಸೇರಿಕೊಂಡಾರು! ಈ ವಿಮರ್ಶಕರು ಅದು ಹ್ಯಾಗೆ ತಮ್ಮ 'ಜನಪ್ರಿಯತೆ'ಯನ್ನು ಗಳಿಸಿಕೊಳ್ಳುತ್ತಾರೆ - ಎಂಬುದು ಆಮೇಲಿನ ವಿಚಾರ.

ಆದರೆ ಇವರೆಲ್ಲ ಎಷ್ಟು ಜನರಿಗೆ 'ಪ್ರಿಯರು?' ಯಾವ ಕಾರಣಗಳಿಗಾಗಿ 'ಪ್ರಿಯರು'? ಎಂಬೆಲ್ಲ ಪ್ರಶ್ನೆಗಳ ಬಗ್ಗೆ ನಾವಾರು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಇರುವ ಒಂದೇ ಒಂದು ಜಗತ್ತಿಗೆ ನಮ್ಮಲ್ಲಿ ಅದೆಷ್ಟು 'ಜಗದ್ಗುರುಗಳು'? ಕೆಲವೊಂದಿಷ್ಟು ಜನರ ಹೆಸರಿನ ಹಿಂದೆ 'ಖ್ಯಾತ' ಎಂಬ ಉಪಾಧಿ ಅಂಟಿಕೊಂಡಿರುತ್ತದೆ. ಉದಾ : 'ಖ್ಯಾತ ಪತ್ರಕರ್ತ', 'ಖ್ಯಾತ ವಿಜ್ಞಾನಿ' ಇತ್ಯಾದಿ. ಆದರೆ ಅವೆರಷ್ಟು 'ಖ್ಯಾತ'ರು ಎಂಬುದೇ ಅರ್ಥವಾಗುವುದಿಲ್ಲ. ಒಂದು ವೇಳೆ ಅವರು ಅಷ್ಟೊಂದು ಖ್ಯಾತರಿದ್ದರೆ, ಈ ಉಪಾಧಿಯೇ ಅನಗತ್ಯ, ಅಲ್ಲವೆ? ಯಾಕಂದ್ರೆ ಅವರ ಕೀರ್ತಿ ಆವಾಗಲೇ ಎಲ್ಲೆಡೆ ಕಂಪು ಬೀರಿರುತ್ತದೆ.

ಇನ್ನೂ ಅಷ್ಟೊಂದು ನಾಮಧೇಯವಲ್ಲದವರಿಗೂ 'ಖ್ಯಾತ' ರೆಂದು ಕರೆಯುವುದರ ಹಿಂದಿನ ಹುನ್ನಾರಗಳು ಇಲ್ಲಿ ಅಪ್ರಸ್ತುತ. (ಇಂಥ ಉಪಾಧಿಗಳನ್ನು ಧಾರಾಳವಾಗಿ ಬಳಸಿ, ತಮ್ಮ ಕಾರ್ಯ ಸಿದ್ಧಿಸಿಕೊಳ್ಳುವವರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರಲ್ಲ!) ಹೇಗೆ ಇಲ್ಲಿ ಈ ಎಲ್ಲ ಉಪಾಧಿಗಳ ಒಂದು ರೀತಿಯಲ್ಲಿ ಉಪದ್ರವಗಳಾಗಿವೆ ನೋಡಿದಿರಾ?

ನನ್ನ ಮಟ್ಟಿಗೆ, ಈ ಎಲ್ಲ ಉಪಾಧಿಗಳಲ್ಲಿ 'ಜನಪ್ರಿಯ' ಎಂಬ ಉಪಾಧಿಯೇ ಹೆಚ್ಚು ಜನಪ್ರಿಯ. ಯಾವುದೇ ಜನಹಿತ ಕಾರ್ಯ ಮಾಡದ, ಜನಪರ ಆಂದೋಲನಗಳಲ್ಲಿ ಭಾಗ ತೆಗೆದುಕೊಳ್ಳದ, 'ದಂತ ಗೋಪುರದ ದೊರೆ'ಗೂ ಕೂಡ 'ಜನಪ್ರಿಯ'ದ ಹುಚ್ಚು



'ಜನಪ್ರಿಯ' ಎನ್ನುವ ಪದವೇ ನನ್ನನ್ನು ಬೆಚ್ಚಿ ಬೀಳಿಸುವಂತಾಗಿದೆ. ನೂರಾನಾಲ್ಕು ಡಿಗ್ರಿ ಜ್ವರ ಬಂದವನಂತೆ ನಡುಗುತ್ತೇನೆ.

ಹಿಡಿದಿರುತ್ತದೆ. ಶ್ರೀ, ಶ್ರೀಮಾನ, ಮಾನ್ಯ, ಸನ್ಮಾನ್ಯ, ಸಹೃದಯಿ, ಶರಣಜೀವಿ, ಬಡವರ ಬಂಧು, ಕೊಡುಗೈ ದೊರೆ - ಇಂಥ ಮತ್ತು ಇದರಂಥ ಅನೇಕ ಉಪಾಧಿಗಳೇನೋ ಇವೆ. ಆದರೂ ಈ 'ಜನಪ್ರಿಯಕ್ಕಿರುವಷ್ಟು ಜನಾಕರ್ಷಣೆ ಅವುಗಳಿಗಿಲ್ಲ. ಈ 'ಉಪಾಧಿ' ಭೂಷಿತರಾಗಲು ಅನೇಕರಿಗೆ ತಹತಹಿಕೆ.

ನಿಮ್ಮ ಜನಪ್ರಿಯ ಸಿನೇಮ ನಟರು ಅಭಿನಯಿಸಿರುವ '........' ಎಂಬ ಜನಪ್ರಿಯ ಚಲನಚಿತ್ರವು, ನಿಮ್ಮ ಜನಪ್ರಿಯ ಥೇಟರಿನಲ್ಲಿ, 'ಜನಪ್ರಿಯ' ಎಂಟನೆಯ ವಾರದಲ್ಲಿ ಪ್ರದರ್ಶಿತಗೊಳ್ಳುತ್ತಿರುವ ಸಂಗತಿ ನಿಜವಾಗಿಯೂ ಜನಪ್ರಿಯವೇ ಸರಿ. ಹೀಗೆ, ಹೇಳಿದರೇನೆ ಅದಕ್ಕೊಂದು 'ರಂಗು' ಬರುವದು....., ಇಲ್ಲದಿದ್ದರೆ ಉಪ್ಪಿಲ್ಲದ ಅಡುಗೆಯ ಹಾಗೆ ಇದೂ ಸಪ್ಪೆ ಊಟವಾದೀತು.

ನಾವು ಗಳಿಸಿದ ಪದವಿಗಳು ಪದ ಪುಂಜಗಳಾಗಿ, ಆಮಂತ್ರಣ ಪತ್ರಿಕೆ, ಲಗ್ನ ಪತ್ರಿಕೆಗಳಲ್ಲಿ ನಮ್ಮ ಹೆಸರಿನ ಹಿಂದೆ ಮುಂದೆ ಅಚ್ಚುಗೊಂಡಿದ್ದರೆ.... ಅದರ ಸೊಗಸೇ ಬೇರೆ. ಉಪಾಧಿ ಉಪಾಂತ್ಯಗಳೆಂಬ ಮುಂಗಾರು ಹಿಂಗಾರುಗಳಿಂದಾಗಿ ತಮ್ಮ ವ್ಯಕ್ತಿತ್ವಕ್ಕೆ ಭೂಷಣ ಬರುತ್ತದೆ ಎಂದುಕೊಂಡವರು ಬಹಳ ಜನ. ಜೋಡು ಜಡೆಯ ಜಮುನಾಳ ವೈಯಾರವನ್ನೂ ಮೀರಿಸುವ ಈ ಉಪಾಧಿ ಉಪಾಂತ್ಯಗಳಿರುವುದರಿಂದಾಗಿ, ಆಮಂತ್ರಣ ಪತ್ರಿಕೆಗಳೂ, ನಮ್ಮ ಲೆಟರ್ ಹೆಡ್‌ಗಳೂ, ವಿಜಿಟಿಂಗ್ ಕಾರ್ಡ್‌ಗಳೂ, ಮನೆಯ ಹೆಬ್ಬಾಗಿಲಿಗೆ ಜೋತಾಡುವ ನಾಮಫಲಕಗಳೂ ಜೀವಕಳೆ ಹೊಂದಿರುತ್ತವೆ. (ಮೂರ್ತಿ ಚಿಕ್ಕದಾದರೇನಂತೆ.. ಉದ್ದುದ್ದ ಉಪಾಧಿ - ಉಪಾಂತ್ಯಗಳಂತಲ್ಲ!)

ನನ್ನ ಪರಿಚಯದವರ ಮನೆಯಲ್ಲಿ ಇಬ್ಬರು 'ಡಾಕ್ಟರ್' ಗಳಿದ್ದಾರೆ. ಅವರಿಬ್ಬರನ್ನು ಡಾ. ಸೂಜಿ ಮತ್ತು ಡಾ. ಪೆನ್ನು ಎಂಬ ಉಪಾಧಿಯೊಂದಿಗೆ ಗುರುತಿಸುತ್ತಾರೆ. ವೈದ್ಯಕೀಯ ಮಾಡುತ್ತಿರುವ ಹಿರಿಯ ಮಗ ಡಾ. ಸೂಜಿ (ಇಂಜೆಕ್ಷನ್), ಮತ್ತೆ ಸಾಹಿತ್ಯದಲ್ಲಿ ಡಾಕ್ಟರೇಟ್ ಮಾಡಿರುವ ಕಿರಿಯ ಮಗಳು ಡಾ. ಪೆನ್ನು. 'ಡಾಕ್ಟರ‍್ರು ಇದ್ದಾರೇನ್ರಿ ಮನೆಯಲ್ಲಿ?' ಎಂದು ಯಾರಾದರೂ ವಿಚಾರಿಸುತ್ತ ಬಂದರೆ - ಮನೆಯವರು ಕೂಡಲೆ ಪ್ರಶ್ನಿಸುತ್ತಾರೆ - 'ಯಾವ ಡಾಕ್ಟರ‍್ರು ಬೇಕಾಗಿತ್ತು ನಿಮಗೆ? ಸೂಜಿನೋ..? ಇಲ್ಲಾ ಪೆನ್ನೋ?' ಪಾಪ, ಬಂದಿರುವವರಿಗೆ ತಬ್ಬಿಬ್ಬು. ಅನಂತರ ಮನೆಯವರೇ ಈ ಉಪಾಧಿಗಳ ಬಗ್ಗೆ ವಿವರಣೆ ನೀಡುತ್ತಾರೆ.

'ಓಹೋ...! ಹಿಂಗರ‍್ಯ....!' ಎಂದು ಆಗಂತುಕನು ಬಾಯ್ತುಂಬ ನಕ್ಕು, ಆಮೇಲೆ ತನಗೆ ಬೇಕಾಗಿರುವ ಉಪಾಧಿಯನ್ನು ಹೇಳುತ್ತಾನೆ. ಮುಂದೆ ಇದೇ ವ್ಯಕ್ತಿ ಎರಡನೆಯ ಸಲ ದಯಮಾಡಿಸಿದಾಗ ನೇರವಾಗಿಯೇ ಹೇಳುತ್ತಾನೆ - 'ಡಾ. ಸೂಜಿ ಇದ್ದಾರೇನ್ರಿ?' ಎಂದು.

'ಏಕಮೂರ್ತಿ ತ್ರಯೋಭಾಗ' ಎನ್ನುತ್ತಾರಲ್ಲ ಹಾಗೆ, ಈ ಹಿಂದೆ ನಮ್ಮಲ್ಲಿ 'ಶ್ರೀ ರಾಜಮಾನ ರಾಜಶ್ರೀ' (ಶ್ರೀ. ರಾ.ರಾ.) ಎಂಬ ಮೂರ್ಮೂರು ಉಪಾಧಿಗಳನ್ನು ಹೊಂದಿದ್ದ 'ಭಾಮಜ'ರಿದ್ದರು. ಬ್ರಿಟಿಷರು ದಯಪಾಲಿಸಿದ ರಾವಬಹಾದ್ದೂರ..... ರಾವಸಾಹೇಬ, ಸರ್ದಾರ್, ಸರ್‌ಗಳೆಂಬ ಉಪಾಧಿಗಳೆಲ್ಲ ಈಗ out - dated, 'ಮುಗಿಯಿತೊ ಮುಗಿಯಿತೋ ಓರ್ವರ ಕಾಲ, ಗರ್ವರ ಕಾಲ. ಇದು ಸರ್ವರ ಕಾಲ' ಎಂದು ಕವಿ ಕುವೆಂಪು ಅವರ ಈ ಸಾಲುಗಳಿಗೆ ಜೋಡಣೆಯಾಗಿ - 'ಇದು ಜನಪ್ರಿಯರ ಕಾಲ' ಎಂಬುದನ್ನೂ ಸೇರಿಸಿದರೆ ಹೇಗೆ? ಬಹುಶಃ ಇದಕ್ಕೆ ಯಾರದೂ ತಕರಾರು ಇರಲಿಕ್ಕಿಲ್ಲ... ನನ್ನದೊಬ್ಬನದು ಬಿಟ್ಟು.

ಹೌದು, ಈ ಜನಪ್ರಿಯ ಎಂಬ ಉಪಾಧಿಯು ನನ್ನ ಮಾನವನ್ನೂ ಮೂರಾಬಟ್ಟೆ ಮಾಡಿಬಿಟ್ಟಿದೆ. ಅದೂ ನನ್ನ ಮನೆಯವರ ಮುಂದೆ. 'ಜನಪ್ರಿಯ ಹಾಸ್ಯ ಸಾಹಿತಿ' ಎಂಬ ಉಪಾಧಿಯೊಂದಿಗೆ ಮಿಂಚುತ್ತಿದ್ದ ನನ್ನ ಹೆಸರಿನಿಂದಾಗಿ ಪುಳಕಿತಗೊಂಡಿದ್ದ ನಾನು, ಆ ಕಾರ್ಯಕ್ರಮಕ್ಕೆ ಸಕುಟುಂಬ (ಸ್ವಕುಟುಂಬ?) ಸಮೇತ ಹಾಜರಾದೆ. ನನ್ನ ಜನಪ್ರಿಯತೆಯನ್ನು ನೋಡಿ, ನನ್ನ ಮನೆಯವರಿಗೆ ನನ್ನ 'ಆಳ ಎತ್ತರ'ಗಳು ಬಿತ್ತರವಾಗಲಿ ಎಂಬ ಒಳಾಶೆ. ಇನ್ಮುಂದಾದರೂ ಅವರು ನನ್ನ ಸಾಹಿತ್ಯ ಸೇವೆಯನ್ನು ಕೆಕ್ಕರುಗಣ್ಣಿನಿಂದ ನೋಡದಿರಲಿ ಎಂಬ ಉದ್ದೇಶವೂ ನನಗಿತ್ತು.

ಅಂದು ಸಭಾಂಗಣ ಕಿಕ್ಕಿರಿದು ತುಂಬಿತ್ತು. 'ಅಬ್ಬಬ್ಬಾ....! ನನಗಿರುವ ಜನಪ್ರಿಯತೆಯೆ......!' ಎಂದು ಮನದಲ್ಲಿ ಉಬ್ಬಿ ಹೋದೆ. ನಿಜಕ್ಕೂ ನಾನು ಜನಪ್ರಿಯನೇ ಸರಿ!! ಹೆಂಡತಿ ಮಕ್ಕಳಿಗೆ ನನ್ನ ಬಗ್ಗೆ ಈಗಲಾದರೂ 'ಗೌರವ ಭಾವ' ಮೂಡಿರಬಹುದು.....'


ಕಾರ್ಯಕ್ರಮ ಸುರುವಾಯಿತು. ಪ್ರಾರಂಭಿಕ 'ಕರ್ಮ'ಗಳಾದ ಸ್ವಾಗತ ಗೀತೆ, ಸ್ವಾಗತ, ಪರಿಚಯ ಭಾಷಣ, ಮಾಲಾರ್ಪಣೆಗಳಾದವು... ಆಗಾಗ ಪ್ರೇಕ್ಷಕರಿಂದ ಚಪ್ಪಾಳೆ - ಸಿಳ್ಳೆಗಳು ಬರುತ್ತಲೇ ಇದ್ದವು. 'ಜಲ್ದೀ ಮುಗಸ್ರೀ......, ಜಲ್ದೀ ಮುಗಸ್ರೀ' ಎಂಬ ಬೇಡಿಕೆಯ ಕೂಗುಗಳು. ಇವರೆಲ್ಲ ನನ್ನ ಭಾಷಣ ಕೇಳಲಿಕ್ಕೆ ಎಷ್ಟೊಂದು ಕಾತುರರಾಗಿದ್ದಾರಲ್ಲ....! ಹರ್ಷಿತನಾದೆ.

ಮೈಕ್ ಮುಂದೆ ನಿಂತು, ಕೊರೆತಕ್ಕೆ ಸಿದ್ಧನಾದೆ. 'ನನ್ನ ಅಭಿಮಾನಿಗಳೇ...! ನೀವು ನನ್ನ ಮೇಲಿಟ್ಟಿರುವ ಅಭಿಮಾನಕ್ಕೆ.... 'ಇನ್ನೂ ವಾಕ್ಯ ಪೂರ್ತಿಯಾಗಿರಲಿಲ್ಲ.... 'ಏ..., ಮಾರಾಯಾ, ಸಾಕ್ ಮಾಡು ನಿನ್ನ ಬೊಗಳೆ, ಜಲ್ದೀ ಮನರಂಜನಾ ಕಾರ್ಯಕ್ರಮ ಸುರು ಮಾಡಿಸು... ನಾವ್ಯಾರು ನಿನ್ನ ಈ ಸುಡಗಾಡ ಮುಖಾ ನೋಡಾಕ ಬಂದಿಲ್ಲಾ....' ಪ್ರೇಕ್ಷಕ ಗಣಂಗಳಲ್ಲಿದ್ದ ಒಬ್ಬ 'ಗಣ' ಕೂಗುತ್ತಿದ್ದ. 'ತಡ್ಕೊಳ್ರಿ, ಐದೇ ಐದು ನಿಮಿಷದಾಗ ಭಾಷ್ಣಾ ಮುಗಸ್ತೀನಿ' ಎಂದು ಕೈಮುಗಿದೆ. 'ನಾವು ಇಷ್ಟೋತನಕಾ ಸಹಿಸಿಕೊಂಡು ಬಂದಿರೋದೇ ದೊಡ್ಡದು. ಇನ್ನ ನಾವು ಸುಮ್ನ ಕುಂಡ್ರಾಗಿಲ್ಲಾ......., ಹೂಂ, ಜಲ್ದೀ ಮನರಂಜನಾ ಸುರು ಆಗ್ಲಿ. ಸುಡಗಾಡ ನಿಮ್ಮ ಸಾಹಿತ್ಯ ಯಾರಿಗೆ ಬೇಕು?' ಎಂದು ಕೂಗಾಡುತ್ತ ಒಂದು ಗುಂಪು ವೇದಿಕೆಗೇ ಬಂತು. ಮುಂದಿದ್ದ ಮೈಕು ಆ ಕಡೆಗಿಟ್ಟು ನನ್ನನ್ನು ಅನಾಮತ್ತಾಗಿ ಕೆಳಗಿಳಿಸಿಬಿಟ್ಟರು. ಪಾಪ, ಸಂಘಟಕರು ಕೈಕೈ ಹಿಸುಕುತ್ತ ಸುಮ್ಮನಿದ್ದರು.

ನನಗೆ ಭಯಂಕರ ಅವಮಾನವಾಗಿತ್ತು ಅದೂ ಮಡದಿ ಮಕ್ಕಳ ಸಮಕ್ಷಮದಲ್ಲಿ. ಈಗೀಗ ನನ್ನ ಕಿರಿಯ ಮಗ ಈಸೂರ ಲೇವಡಿ ಮಾಡುತ್ತಾನೆ. 'ಜನಪ್ರಿಯ ಹಾಸ್ಯ ಸಾಹಿತಿಯ ಜನಪ್ರಿಯ ಮಗ ನಾನಾಗೋದು ಒಲ್ಲೆ' ಎಂದೂ ಆಂಗ್ಲ ಸಾಹಿತಿ ಆಸ್ಟಿನ್ ಒಮೆಲೆ ಒಂದು ಕಡೆ, 'ಜಗತ್‌ಪ್ರಸಿದ್ಧರು ಪ್ರತಿಭಾವಂತರು ಜನಪ್ರಿಯ ತಂದೆಯ ಮಕ್ಕಳಾಗಿರುವುದು ದುರದೃಷ್ಟಕರ' ಎಂದು ಹೇಳಿದ್ದಾನೆ. ಬಹುಶಃ ಈಸೂರನಿಗೆ ಇದು ಗೊತ್ತಿರುವಂತಿದೆ.

ಈಗೀಗ ಈ 'ಜನಪ್ರಿಯ' ಎಂಬ ಉಪಾಧಿ ಕಿವಿಗೆ ಬಿದ್ದರೆ ಸಾಕು, ನೂರಾನಾಲ್ಕು ಡಿಗ್ರಿ ಜ್ವರ ಬಂದವರಂತೆ ನಡುಗುತ್ತೇನೆ ಇದು ನನ್ನ ಪಾಲಿಗೆ ಉಪಾಧಿಯಲ್ಲ... ಮಹಾ ಉಪದ್ರವವಾಗಿದೆ.

ಆದರೆ ಬಹು ಸಂಖ್ಯಾತರಿಗೆ 'ಜನಪ್ರಿಯ' ಅಂಬೋದು ಬಹು ಜನಪ್ರಿಯ ಉಪಾಧಿಯಾಗಿದೆ.... ಆ ಮಾತು ಬೇರೆ. ■



ಒಳ್ಳೆ ಕನಸು

ಒಂದು ದಿನ ವೆಂಕಿ ತನ್ನ ಜಿಪುಣ ಗಂಡ ವೆಂಕನಿಗೆ ಹೇಳಿದರು. 'ರ‍್ರೀ ನೆನ್ನೆ ರಾತ್ರಿ ನನಗೆ ಎಂಥ ಒಳ್ಳೆಯ ಕನಸು ಬಿದ್ದಿತ್ತು ಗೊತ್ತಾ?'

'ಏನು?' ವೆಂಕ ಕೇಳಿದ

'ನೀವು ನನಗೆ ಒಂದು ಮುತ್ತಿನ ಹಾರ ತೊಡಿಸುತ್ತಿದ್ದಂತೆ ಕನಸು ಬಿತ್ತು' ಎಂದಳು ವೆಂಕಿ ಪ್ರೇಮ ತುಂಬಿದ ಸ್ವರದಲ್ಲಿ.

'ಹೌದಾ? ಅದನ್ನು ಭದ್ರವಾಗಿ ಪೆಟ್ಟಿಗೆಯಲ್ಲಿ ಮುಚ್ಚಿಡು' ಜಿಪುಣ ವೆಂಕಟ ಆರಾಮವಾಗಿ ಹೇಳಿದ.

– ಜಗದೀಶ ಗಂ.ದಲಭಂಜನ,
ಗುಳೇದಗುಡ್ಡ.

With Best Compliments From :

K. M. Parvathamma


Mine Owner

UBBALAGANDI IRON ORE MINE, RAJAPURA IRON ORE MINE, SREE GURU IRON ORE MINE, K.M.P. PULVERISERS, K.M.P. CHEMICALS


XVII/35, 2nd Link Road, Parvathi Nagar, Bellary - 583 101. Karnataka
Ph : Off : 72385, Res : 78059, FAX : (08392) 77147



K. M. PARVATHAMMA
Mine Owner



K. M. BASAVARAJ



K. M. VISHWANATH B.A. (LLB)
Mine Owner & Exporter

K. M. Vishwanath B.A., (LLB)

STATE PRESIDENT :
KARNATAKA STATE STUDENTS CULTURAL SOCIETY, KARNATAKA STATE EXECUTIVE
COUNCIL MEMBER : BHARATIYA MAITRI DAL (R) DELHI.
GENERAL SECRETARY : BELLARY CITY AKHILA BHARATHA VEERASAIVA MAHASABHE
MEMBER : FEDERATION OF INDIAN MINERAL INDUSTRIES, NEW DELHI.
MEMBER : ORGANISATION OF MINE OWNERS, BELLARY. HOSPET SECTOR
MEMBER : ADVISOR COMMITTEE, GYNANASAGARA, P.G. CENTRE, BELLARY.

ನನ್ನ ದನಿ


● ಡಾ. ಕೆ. ಎಸ್. ನರಸಿಂಹಸ್ವಾಮಿ

ಎಲ್ಲ ದನಿಗಳ ನಡುವೆ ನನ್ನದೂ ಒಂದು ದನಿ,
ಸಪ್ತಸಾಗರಗಳಲಿ ನಾನೊಂದು ಒಂಟಿ ಹನಿ;
ನನ್ನಿರವು ನನಗೀಗ ಅರ್ಥವಾಗಿದೆ ನೋಡಿ,
ಎಂದೆಂದಿಗೂ ನಾನು ಚೆಲುವು ಸಂಧ್ಯಾರಾಗ.

ನಿದ್ದೆಯುದ್ದಕ್ಕು ಬಂಗಾರ ಬಣ್ಣದ ಕನಸು;
ಕನಸು ಕಾಮನಬಿಲ್ಲು; ಬಾಗಿಲಿಗೆ ಬಂದವನು
ನಿಂತು ನೋಡಿದ್ದೇನೆ ಬಣ್ಣಬಣ್ಣದ ಬದುಕ
ಕೈ ಬೀಸಿ ಕರೆಯುತ್ತ ಹಿಂದೆಂದೂ ಆದುದನು.

ನಾನಿಂದು ಒಂದು ಹಸು; ಕರುವಿನೊಂದಿಗೆ ಬಂದು
ನೀರ ಕುಡಿಯುವ ತೊಟ್ಟಿಯಲ್ಲಿ ಮುಖವನ್ನಿಟ್ಟು
ಅದನು ನೆಕ್ಕುತ್ತಲಿದ್ದೇನೆ. ನೆತ್ತಿಯ ಮೇಲೆ
ಹೊಳೆವ ನಕ್ಷತ್ರಗಳ ಪುಂಜದಲಿ ನಾ ಧೂಳು.

ಚಾಪೆ ಹಾಸಿದ್ದಾರೆ, ಒಳಗೆ ಬನ್ನಿರಿ, ಕುಳಿತು
ಹೊಸ ಹಾಡ ಕೇಳಿ, ಎದ್ದೇಳಿ ನೆಮ್ಮದಿಯಿಂದ. ■



ರೀ.... ಲೇ.... ಗಳ ರಿಲೇ!



• ಟಿ.ಎಸ್. ಅಂಬುಜಾ
ಈಶಾವಾಸ, ಲಕ್ಷ್ಮೀಂದ್ರ ನಗರ
ಉಡುಪಿ

ಹಾಸ್ಯ

ನನ್ನ ಮನದೊಳಗೆ ಏನೇನೋ ಹಸಿರು ಚಿತ್ರಗಳು! ಚಿನ್ನಾ-ರನ್ನಾ- ಮುತ್ತು ಮುಂತಾದ ಪದಗಳ ಕಲ್ಪನೆ! ಹೇಗಾದರೂ, ಅಜ್ಜಿಯ ಮನ ಒಲಿಸಿ ಆ ಬಗ್ಗೆ ತಿಳಿದುಕೊಳ್ಳಲೇಬೇಕೆಂದು, ಮತ್ತೆ ಅಜ್ಜಿಗೆ ಬೆಣ್ಣೆ ಹಚ್ಚಿದೆ.

ನಿಜ. ಶೀರ್ಷಿಕೆ ಓದಿದ್ದೇ ತಡ, ಒಳಹೂರಣವೂ ಹೊರಬಿದ್ದೇ ಬಿಡ್ತು ಎಂದುಕೊಂಡು ತಾವೆಲ್ಲ, ನಿಮ್ಮ ಮುತ್ತಜ್ಜಿ ತನ್ನ ಪತಿದೇವರನ್ನು ಸಂಬೋಧಿಸುತ್ತಿದ್ದುದನ್ನು, ನಿಮ್ಮ ಅಜ್ಜ ತನ್ನ ಸಹಧರ್ಮಿಣಿಯನ್ನು ಕರೆಯುತ್ತಿದ್ದುದನ್ನು, ನಿಮ್ಮ ಅಮ್ಮ - ನಿಮ್ಮಪ್ಪನನ್ನು ಕೂಗುತ್ತಿದ್ದುದನ್ನು, ನೀವು ನಿಮ್ಮವರನ್ನು ಗುರುತಿಸುವ ಶೈಲಿಯನ್ನು ಮತ್ತು (ಇದ್ದರೆ) ನಿಮ್ಮ ಮಗ ತನ್ನ ಹೆಂಡತಿಯನ್ನು, ಮೊಮ್ಮಗಳು ತನ್ನ ಜೀವನ ಸಂಗಾತಿಯನ್ನು ತನ್ನೆಡೆಗೆ ಮುಖ ತಿರುಗಿಸುವಂತೆ ಮಾಡುವ ಬಗೆಯನ್ನು (ಹಾಗೇ, ಈ ಎಲ್ಲ ಕ್ರಿಯೆಗಳಿಗೆ ಪ್ರತಿಕ್ರಿಯೆಯ ರೂಪದ ವೈಸ್ ವರ್ಸಾಗಳನ್ನೂ!) ನಿಮ್ಮ ಕಣ್ಮುಂದೆ ತಂದುಕೊಳ್ಳುತ್ತಿರಬಹುದೇನೋ? ಆದರೆ, ನಾನು ಬೆಟ್ ಕಟ್ಟಬಲ್ಲಷ್ಟು ಗ್ಯಾರಂಟಿಯಾಗಿ ಹೇಳುವುದೆಂದರೆ, ಅಲ್ಲೆಲ್ಲೂ ಇದೇ 'ರೀ... ಲೇ...'ಗಳ ನೇರ ರಿಲೇಯಂತೂ ಸರ್ವಥಾ ಇರಲಾರದು! ಏನಿದ್ದರೂ, ಕೇವಲ ಆ ಸಂಬೋಧನೆಗಳ ಅರ್ಥವನ್ನು ಪೂರೈಸುವ ವಿವಿಧ ರೀತಿಯ ಕೂಗುಗಳು ಮಾತ್ರ ನಿಮಗೆ ಕೇಳಿಸುತ್ತಿರಬಹುದಲ್ಲವೇ?

ದಂಪತಿಗಳೊಳಗೆ ಪರಸ್ಪರ, ಪ್ರಿಯೆ - ಪ್ರಾಣೇಶ್ವರಿ - ನಾಥೋ - ವಲ್ಲಭಾ ಎಂಬಿತ್ಯಾದಿ ಪ್ರಯೋಗಗಳು ಪುರಾಣ ಕಾಲದಲ್ಲಿದ್ದಿರಬಹುದಾದರೂ ಈಚಿನ ಸಹಸ್ರಮಾನದಲ್ಲೇ ಅವು ಅನುಷ್ಠಾನಗೊಂಡಂತಿಲ್ಲ! ಬದಲಿ ವ್ಯವಸ್ಥೆಯಂತೆ, ಡಿಯರ್ - ಡಾರ್ಲಿಂಗ್‌ಗಳು! ಹಾಗಾಗಿಯೇ ಅವುಗಳನ್ನಿಂದು ನಾಟಕ - ಯಕ್ಷಗಾನ ದೊಡ್ಡಾಟಗಳಲ್ಲಿ ಮಾತ್ರ ಕೇಳಿ, ಹೆಂಗಸರು, ತನ್ನ ಗಂಡ 'ಪ್ರಾಣಕಾಂತೇ' ಎಂದು ತನ್ನನ್ನು ಪ್ರೇಮರಸ ಉಕ್ಕಿಸುತ್ತ ಕರೆದಂತೆ ಊಹಿಸಿಕೊಂಡು, ಗಂಡಸರು ತನ್ನ ಮಡದಿ ತನ್ನನ್ನು 'ಆರ್ಯಪುತ್ರಾ..' ಎಂದು ಪ್ರೀತಿಯ ಭಾಂಡದಲ್ಲೇ ಮುಳುಗೇಳುತ್ತ ಕೂಗಿದ ಹಾಗೆ ಕಲ್ಪಿಸಿಕೊಂಡು ಸುಖಿಸುವುದರಲ್ಲೇ ತೃಪ್ತರಾಗಬೇಕಾಗಿದೆ! ಹಿಂದಿನ ಕೂಡು ಕುಟುಂಬಗಳಲ್ಲಂತೂ, ಈ ಕುರಿತು ಬಲು ಸ್ವಾರಸ್ಯಕರ ಸಂದರ್ಭಗಳೇ ಸೃಷ್ಟಿಯಾದುದಿತ್ತು...

ನಾನಾಗ ಹೈಸ್ಕೂಲ್ ಹುಡುಗಿ 'ಮುದ್ದಣ-ಮನೋರಮೇಯರ ಸಲ್ಲಾಪ' ಓದುತ್ತಿದಂತೇ, ಏನೋ ಹೊಳೆದು, ಅಲ್ಲೇ ಇದ್ದ ನಮ್ಮಜ್ಜಿಯನ್ನು ಕೇಳಿದೆ 'ಅಜ್ಜೀ. ನೀವು ಅಜ್ಜನನ್ನು ಹೇಗೆ ಕರಿತಾ ಇದ್ರಿ?'

ಅಜ್ಜಿಯೋ ಒಮ್ಮೆ ಕಂಗಾಲು! ಅಲ್ಲಾ, ಇನ್ನು ಲಗ್ನವಾಗಿರದ ಷೋಡಶಿಯೊಬ್ಬಳು ಇಂತಹ ರಸಿಕ (ಪೋಲಿ?) ಪ್ರಶ್ನೆಗಳನ್ನು ಹಾಕುವುದೆಂದರೆ? ಏನರ್ಥ? ಅನರ್ಥ!

ದೊಡ್ಡ ಅನಾಹುತವೆಂಬಂತೆ ಕಣ್ಣು ತಿರುಗಿಸುತ್ತ ಅಜ್ಜಿ ಅಂದರು 'ನಿನಗ್ಯಾಕೇ ಅದೆಲ್ಲ? ಅದ್ಕೇ ಹಿಂದೆಲ್ಲ, ಹದಿಮೂರರೊಳಗೆ ಲಗ್ನೆ ಮಾಡಿಬಿಡ್ತಿದ್ದದ್ದು. ನಿಮ್ಮನ್ನೆಲ್ಲ ಈ ಓದಿನ ನೌಕ್ರಿಯ ನೆವಮಾಡಿ, ಸಂಕೋಲೆ ಹಾಕ್ದೇ ಬಿಡ್ತಾರೆ ನೋಡು, ನಿಮ್ಮ ಅಪ್ಪ-ಅಮ್ಮ? ಅದ್ಕೇ ಹೀಗೆಲ್ಲ ನಿಮ್ಮ ಮನಸ್ಸು ಎಲ್ಲೆಲ್ಲಿಗೋ ಓಡುದು! ಹೇಗ್ಹೇಗೋ ಸುತ್ತೋದು!'' ಎಂದು ಕಾಮೆಂಟಿಸಿದರು ಸಹಾ! ಆದರೇನು? ನಾನು ಅಜ್ಜಿಯ ಆ

ತಾರುಣ್ಯದ ಕಾಲಗರ್ಭವನ್ನು ಹೊಕ್ಕಿಯಾಗಿತ್ತಲ್ಲ!

ನನ್ನ ಮನದೊಳಗೆ ಏನೇನೋ ಹಸಿರು ಚಿತ್ರಗಳು! ಚಿನ್ನಾ-ರನ್ನಾ-ಮುತ್ತು ಮುಂತಾದ ಪದಗಳ ಕಲ್ಪನೆ! ಹೇಗಾದರೂ, ಅಜ್ಜಿಯ ಮನ ಒಲಿಸಿ ಆ ಬಗ್ಗೆ ತಿಳಿದುಕೊಳ್ಳಲೇಬೇಕೆಂದು, ಮತ್ತೆ ಅಜ್ಜಿಗೆ ಬೆಣ್ಣೆ ಹಚ್ಚಿದೆ. ನಮ್ ಪಾಠದಲ್ಲಿ, ಆ ಬಗ್ಗೆ ತಿಳ್ಕೊಂಡು ಒಂದು ಪ್ರಬಂಧ ಬರೀಲಿಕ್ಕಿದೆ ಎಂದೆಲ್ಲ ರೈಲು ಬಿಟ್ಟೆ. ನಾನು ಎಲ್ಲೂ ನಿಮ್ ಹೆಸ್ರು ತೆಗೆಯೋದಿಲ್ಲ! ಎಂದು ಆಶ್ವಾಸನೆ ನೀಡಿದೆ. ಕೊನೆಗೂ, ನನ್ನ ತಪಸ್ಸಿಗೆ ಅಜ್ಜಿ ಒಲಿದೇ ಒಲಿದು ಹೇಳಲಾರಂಭಿಸಿದರು...

''ಮನೆಯಲ್ಲಿ, ಅತ್ತೆ ಮಾವ, ಮತ್ತು ಮಾವನ ಅಣ್ಣ-ಅತ್ತಿಗೆಯೂ ಇರ್ತಿದ್ರು. ಅವ್ರ ಇಬ್ರು ಮಗಂದಿರ ಸಂಸಾರ, ಆಮೇಲೆ ನನ್ನ ಭಾವ ಮೈದುನರ ಕುಟುಂಬ ಹೀಗೆ ಒಟ್ಟು ಆ ಮನೆಯಲ್ಲಿ ಊಟಕ್ಕೆ ಹದಿನಾರು ತಟ್ಟೆ ಇಡ್ತಿದ್ದೆವು. ಮೊದ ಮೊದಲಲ್ಲಂತೂ, ಅಂದ್ರೆ, ಲಗ್ನ ಆಗಿ ಏಳೆಂಟು ವರ್ಷಗಳ ವರೆಗೂ ನಿನ್ನ ಅಜ್ಜ ನನ್ನನ್ನು ಕರೆಯುವ ಕ್ರಮವೇ ಇರ್ಲಿಲ್ಲ! ಅಷ್ಟರತನಕ ನಾನಂತೂ, ಅವ್ರ ಮುಖ ನೋಡ್ದೂ ಇರ್ಲಿಲ್ಲ! ಅಷ್ಟೂ ಸಂಕೋಚ! ಅಷ್ಟು ನಾಚಿಕೆ!!! ಅಷ್ಟೂ ಭಯ !!! ಆಮೇಲಾಮೇಲೆ ಅದೂ ಅಪರೂಪಕ್ಕೊಮ್ಮೆ ಅವ್ರು, ತನ್ನ ತಂಗಿಯನ್ನುದ್ದೇಶಿಸಿ 'ಏ' ರತ್ನೀ ನಿನ್ನತ್ತಿಗೆಯನ್ನು ಕರಿಯೊ' ಎಂದೋ, ತನ್ನ ತಮ್ಮನಿಗೆ 'ಏ ರಾಮೂ, ಅತ್ತಿಗೆ ಎಲ್ಲಿದ್ದಾಳೆ?' ಎಂದೋ ಆದೇಶಿಸಿ, ಪರೋಕ್ಷ 'ಕರೆ' ನೀಡುವುದಿತ್ತು. ಆಶ್ಚರ್ಯವೆಂದರೆ, ಬಳಿಕ ನನ್ನ ನಾದಿನಿ ಲಗ್ನವಾಗಿ ತನ್ನ ಪತಿಗೃಹಕೆ ಹೋದ ಮೇಲೂ ಮೈದುನ ಹೊರಗೆಲ್ಲೋ ಹೋಗಿದ್ದು ಮನೆಯಲ್ಲಿಲ್ಲದ ವೇಳೆಯಲ್ಲೂ, ಇವರ ಇದೇ ಶೈಲಿಯೇ ಮುಂದುವರಿಯುತ್ತಿದ್ದುದು ಅದನ್ನು ಕೇಳಿಸ್ಕೊಂಡ ನಾನು ಹೊರ ಬರುತ್ತಿದ್ದುದು!....

ನಾನು ಮಧ್ಯದಲ್ಲೇ ತಡೆದು ಕೇಳಿದೆ 'ಆದ್ರೆ....ಅವರು ನೇರವಾಗಿ ನಿಮ್ಮನ್ನು 'ಲಕ್ಷ್ಮೀ...' ಅಂತ ಕರೀಬಹುದಿತ್ತಲ್ಲ ಅಜ್ಜಿ? ಗಂಡಸ್ರಿಗೆಂತ ನಾಚಿಕೆ ಅಲ್ವಾ?''

ನನಗೆ ಅದುವರೆಗೂ ಗೊತ್ತಿರದಿದ್ದ ವಿಷಯವೊಂದನ್ನು ಅಂದು ಹೀಗೆ ಅಜ್ಜಿಯಿಂದ ತಿಳಿದೆ....'ಅದಾ? ಆಗ ಯಾರೂ ಹೆಂಡ್ತಿ ಹೆಸ್ರು ಹೇಳ್ತಿರ್ಲಿಲ್ಲ. ಏನಿದ್ರೂ ತಮ್ಮ ಅಪ್ಪ-ಅಮ್ಮನತ್ರ 'ನಿಮ್ ಸೊಸೆ' ಎಂದೇ ಅನ್ತಿದ್ದುದು!''

ನನಗೋ ಕಸಿವಿಸಿ. ಹೌದು ಹೆಂಡತಿ ಗಂಡನ ಹೆಸರು ಹೇಳಿದರೆ, ಅದು ಸಲುಗೆಗೆ ಕಾರಣವಾಗಿ ಗೌರವ ಕಡಿಮೆಯಾದೀತೆಂಬ ಪೂರ್ವಾಲೋಚನೆಯಿಂದ ಆ ಒಂದು ಪದ್ಧತಿಯನ್ನು ಹಿರಿಯರು ಸೃಷ್ಟಿಸಿರಬಹುದೆಂದು ಯೋಚಿಸಿದ್ದ ನನಗೆ, ಈ ಹೆಂಡತಿಯ ಹೆಸರನ್ನು ಉಚ್ಚರಿಸಬಾರದ ಸಂಪ್ರದಾಯಕ್ಕೆ ಕಾರಣ, ಏನೆಂದು ಎಷ್ಟು ಚಿಂತಿಸಿದರೂ ಹೊಳೆಯಲೇ ಇಲ್ಲ. ಅಂತೂ ಕೊನೆಗೆ ನಾನು ನಿರ್ಧರಿಸಿದ್ದೇನೆಂದರೆ, ಬಹುಶಃ ಶಾಸ್ತ್ರಕಾರರು ವನಿತೆಯರಿಗೂ ಅವರವರ ಪುರುಷರಿಂದ ಸಾಕಷ್ಟು ಮರ್ಯಾದೆ ಲಭಿಸುತ್ತಿರಲಿ ಎಂಬ (ಸತ್!) ಉದ್ದೇಶದಿಂದಲೇ ಈ 'ಲಕ್ಷ್ಮಣ ರೇಖೆ' ಯನ್ನು ಎಳೆದಿದ್ದರಾದರೂ, ಮುಂದೆ ಪುರುಷರೇ ಅದನ್ನು ಉಲ್ಲಂಘಿಸಿ, ಆ ಸಂಬಂಧಿತ ಕಟ್ಟಳೆಯನ್ನು ಸ್ತ್ರೀಯರ ಮೇಲೆ ಮಾತ್ರ ಆರೋಪಿಸಿ ಸ್ವತಂತ್ರರಾಗಿದ್ದಿರಬಹುದೇ?!

ಅಜ್ಜಿಯ ವಿವರಣೆ ಸಾಗಿತ್ತು.....''ಹಾಗೆ ನೋಡಿದ್ರೆ, ನಮ್ ನಾಣಿ ಹುಟ್ಟಿದ ಮೇಲೇ ಅವ್ರು ನನ್ನತ್ರ-ನಾನು ಅವ್ರತ್ರ ನೇರವಾಗಿ ಮಾತಾಡಿದ್ದು ಅಷ್ಟೇಕು. ಅವರೆಗೂ ನಾವಿಬ್ರೂ ಮಾತಾಡ್ಕೊಂಡದ್ದೇ ಇಲ್ಲ! ಇನ್ನು ನಾನೇ ಅವರನ್ನು ಕರಿಯೊದು ಅಂದ್ರೆ ದೂರವೇ ಉಳಿಯಿತು!'' ನನಗೋ ವಿಸ್ಮಯ! ಯಾಕೆಂದರೆ, ಅವರ 'ನಾಣಿ' ಎಂದರೆ ನನ್ನ ಚಿಕ್ಕಪ್ಪನ ಜನನಕ್ಕೆ ಮುನ್ನವೇ, ಅವರಿಗೆ ನಾಲ್ಕು ಮಕ್ಕಳಾಗಿಯಾಗಿತ್ತು! ಹಾಗಾದರೆ, ಪರಸ್ಪರ ವಾಕ್ ಸಂಪರ್ಕವಿಲ್ಲದೆಯೇ, (ಮನುಷ್ಯರಿಗೂ!) ಸಂತಾನ ಲಾಭವಾಗುತ್ತದಲ್ಲ! ಎಂಬ ದಿಗ್ಭ್ರಾಂತಿ, ನನ್ನನ್ನು ಆವರಿಸಿದ್ದರೂ, ಆಗ ತೋರಿಸುವಂತಿದೆಯೊ ಯಾಕೆಂದರೆ, ಆಗಿನ್ನೂ ನಾನು ಕೇವಲ, 'ಥಿಯರಿ'ಯ ಜ್ಞಾನವಿದ್ದ, ಪ್ರಾಕ್ಟಿಕಲ್‌ನ ಅನುಭವವಿರದಿದ್ದ ಹುಡುಗಿ! ಈಗ ಅಂದರೆ ಎರಡು ಮಕ್ಕಳ ತಾಯಾದ ನಂತರ, ನಾನು ಈ 'ಸಂದರ್ಶನ' ನಡೆಸಿದ್ದರೆ ಖಂಡಿತಾ ಅಜ್ಜಿಯನ್ನು ಆ ಬಗ್ಗೆ ಕೆದಕಿ ಕೆದಕಿ ಕೇಳದಿರುತ್ತಿದ್ದೆನೆ?!



ನಮ್ಮ ತಂದೆಯವರ ಸಮಕಾಲೀನರಲ್ಲಿ, ಹಲವರು, ಇನ್ನು ಪತ್ನಿಯರಿಗೆ ಗೌರವ ಸೂಚಿಸುವುದನ್ನು, ಅಂದರೆ ಹೆಸರ್ಹಿಡಿದು ಕರೆಯದೇ 'ಲೇ....' ಎನ್ನುವ ಒಂದು ವಿಶಿಷ್ಟ ಅಕ್ಷರವನ್ನು, ವಿಭಿನ್ನ ಧಾಟಿಯಲ್ಲಿ ಎಳೆಯುತ್ತ ಕರೆಯುತ್ತಿದ್ದರಾದರೂ, ನಮ್ಮಪ್ಪನನ್ನೂ ಸೇರಿಸಿ ಇನ್ನು ಕೆಲವರು ಹೆಂಡತಿಯನ್ನು ಸಂಪೂರ್ಣ ಹೆಸರಿನಿಂದಲೇ ಸಂಬೋಧಿಸುವುದಿತ್ತು. ಉದಾಹರಣೆಗೆ : ಭಾಗೀರಥೀ.... ನಾಗರತ್ನಾ....ಗೋದಾವರೀ.....ಇತ್ಯಾದಿತ್ಯಾದಿ. ನನಗೊಂದು ಗುಮಾನಿ....ಏನೆಂದರೆ, ಈ ಪೂರ್ಣನಾಮಿಯರೆಲ್ಲ, ಅಂತಃಪುರ ಸೇರಿದೊಡನೇ, ಅಥವಾ ಇರುಳು ಕವಿದೊಡನೆ ಭಾಗೀ-ನಾಗಿ-ಗೋಧಿಗಳೆಂಬ ಮುದ್ದು ಸರಸ ನಾಮ ಧಾರಿಗಳಾಗುತ್ತಿದ್ದರೋ ಹೇಗೆ?!

ನಮ್ಮಮ್ಮನೂ ಅಷ್ಟೆ. ''ಕೇಳಿಸ್ತಾ?'' 'ಇಲ್ನೋಡಿ' ಎಂದೇ ಅಪ್ಪನನ್ನು ಕರೆಯುವಳಲ್ಲದೇ, ಉತ್ತರ ಭಾರತದ ಭಾಷೆಗಳಲ್ಲಿಯಂತೆ 'ಮುನ್ನಾನ ತಂದೆಯೇ' 'ಬಬ್ಲೀಯ ಪಪ್ಪನೇ' ಎಂಬರ್ಥದಲ್ಲೆಲ್ಲ ಮಕ್ಕಳ ಹೆಸರುಗಳನ್ನು ಬಳಸಿ ಗುರುತಿಸುವವಳಲ್ಲ! ಆ ಕಾಲಕ್ಕೆ 'ಹೋಯ್!' ಎಂಬೊಂದು ವಿಚಿತ್ರ ದನಿ ಹೊರಡಿಸಿ, ತಮ್ಮ ಪತಿ ಪರಮಾತ್ಮನ ಗಮನವನ್ನು ತನ್ನತ್ತ ಸೆಳೆಯುವ

ಅಪರಂಜಿ

ಕೇಳಿದ್ದನ್ನೆಲ್ಲಾ ಕೊಡಿಸಿದರೆ
ಹೇಳುವಳು ನನಗಂಡ
ಅಪರಂಜಿ
ಅವಳಿಗೇನು ಗೊತ್ತು
ಹರಿದದ್ದು
ನನ ಪಂಜಿ?



– ಪ್ರಕಾಶ ಶಿರಗಂಬಿ,
ಹಿರೇಕೆರೂರು.

ಸತಿಯರೂ ಇರದಿರಲಿಲ್ಲ!

ಮುಂದೆ ಬಂದುದು ನಮ್ಮ ಕಾಲ. ಬಹುಶಃ ಆರ್ಯಭಾಷೆಯ 'ಜೀ'ಯನ್ನು ನಾವು 'ರೀ' ಆಗಿ ಪರಾಮರ್ಶಿಸಿಕೊಂಡೆವೋ ಎಂಬಂತೆ, ನಾವು ನಂ-ನಮ್ಮ ಅರ್ಧಾಂಗರನ್ನು, 'ರೀ....' ಎಂದು ಮಾರುದ್ದ ರಾಗ ಎಳೆದು ಕರೆಯಲಾರಂಭಿಸಿದೆವು!

ಬಹುಶಃ ಗಂಡನ ನಾಮಧೇಯವನ್ನು ಉಚ್ಚರಿಸಿದರೇ ಅವನ ಆಯುಷ್ಯ ಕಡಿಮೆಯಾಗುತ್ತದೆಂಬ ಹಳೆಯ ಅಂಧವಿಶ್ವಾಸ ನಮ್ಮಲ್ಲಿರದಿದ್ದರೂ, (ದೇವಸ್ಥಾನದಿಂದಾರಂಭಿಸಿ ಸಂತೆ ಪೇಟೆಯಲ್ಲೂ ನಿರ್ಭಿಡೆಯಿಂದ ಗಂಡನ ಹೆಸರನ್ನು ಹೇಳಿಕೊಳ್ಳುತ್ತೇವಲ್ಲ!) ನೇರವಾಗಿ ಕರೆಯುವಷ್ಟು 'ಸೋಶಿಯಲ್(!) ನಾವಾಗಲಿಲ್ಲವೆಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ! ಅವರೂ ಅಷ್ಟೆ, ನಂ-ನಮ್ಮ ನಾಲ್ಕಕ್ಷರದ ಹೆಸರನ್ನು ಮೂರಕ್ಕಿಳಿಸಿ ಮೂರಕ್ಷರದ್ದನ್ನು ಎರಡಕ್ಕಿಳಿಸಿ ಕರೆದು, ಬಿಟ್ಟು ಆಚಾರಕ್ಕೂ ಆಯ್ತು ಸುಖಕ್ಕೂ ಆಯ್ತು ಎಂಬಂತೆ, ಮುದ್ದಿಗೂ ಆಯ್ತು, ನಾಲಿಗೆಗೂ ಶ್ರಮ ಕಡಿಮೆಯಾಯ್ತು ಎಂದುಕೊಂಡು ಖುಷಿ ಪಟ್ಟಿರಬಹುದೇನೋ? ಆದರೆ ಈಗಿನವರದು ಹಾಗಲ್ಲ...

ಈಚೆಗೆ ಲಗ್ನವಾದ ನನ್ನಕ್ಕನ ಮಗಳನ್ನು, ಆಗೀಗ ಅವಳ ಪತಿ ಸ್ಕೂಟರ್‌ನಲ್ಲಿ ಕರೆತಂದು ನಮ್ಮಲ್ಲಿ ಗೇಟ್ ಬಳಿ ಬಿಟ್ಟು ಆಫೀಸಿಗೆ ತೆರಳಿ ಮತ್ತೆ ಸಂಜೆ ಬಂದು ಕರೆದೊಯ್ಯುವುದುಂಟು. ಆ ಒಂದು ದಿನ, ಆಕೆ ಗೇಟ್ ತೆಗೆದು ಒಳಬರುತ್ತಿದ್ದಂತೆ ಲೋಕಾಭಿರಾಮವಾಗಿ ಕೇಳಿದೆ...'ಹ್ಹಾ ಬಂದ್ಯಾ? ಯಜಮಾನ್ರು ಬಿಟ್ಟು ಹೋದ್ರಾ?'' ಎಂದೆ. ಆಕೆ ಚೋದ್ಯವೊಂದನ್ನು ಕೇಳಿದವಳಂತೆ 'ಇಲ್ಲಪ್ಪ ಅವರ್‍ಯಾಕೆ ಬರ್‍ತಾರೆ? ಸುರೇಶ್ ಬಿಟ್ಟು ಹೋದ್ರು!' ಎಂದಳು! ಅಂದ ಹಾಗೆ, ಸುರೇಶ್ ಅವಳ ಗಂಡ! ನನ್ನ 'ಯಜಮಾನರು' ಎಂಬ ಪದಪ್ರಯೋಗದ ಅರ್ಥವಾಗಿ ಅವಳ ಕಣ್ಣೆದುರು ನಿಂತಿದ್ದುದು, ಅವರ ಬಾಡಿಗೆ ಮನೆಯ ಯಜಮಾನನಂತೆ! 'ಓಹ್! ನಾನು, ನೀವು ನಮ್ಮ 'ಓನರ್ ಅಂಕಲ್'ನ ಕೇಳ್ತಿದ್ದೀರಂತ ಅಂದ್ಕೊಂಡೆ' ಎಂದು ಆಕೆ ನಿಡುಸುಯ್ದಾಗ, ನಾನು ಬಾಯಿತೆರೆದು, ಬೆಪ್ಪಾಗಿ ನಿಂತೆ!'' ನಮ್ ಯಜಮಾನರು'' ಎನ್ನುತ್ತ ನನ್ನವರ ಬಗ್ಗೆ ಹೇಳಿಕೊಳ್ಳುವ ನಾನು ಆಕೆಯ ದೃಷ್ಟಿಯಲ್ಲಿ, ಪೌರಾಣಿಕ ಪಾತ್ರದಂತೆನಿಸಿದೆಯೋ ಏನೋ ಎಂದೂ ಅಂದುಕೊಂಡೆ!

ಇವಳಾದರೂ ಪರವಾಗಿಲ್ಲ ಕಳೆದ ತಿಂಗಳಷ್ಟೇ ದಾಂಪತ್ಯ ಜೀವನಕ್ಕೆ ಕಾಲಿರಿಸಿದ ನನ್ನ ಒಬ್ಬ ಬಂಧುವಿನ ಕತೆ ಕೇಳಿದರೆ, ಇನ್ನು ಅವೆಷ್ಟು ಇಂತಹ ಆಧುನಿಕ 'ರೀ-ಲೇ'ಗಳ ರೀಲೆಗಳ ಆವಿಷ್ಕಾರವಾಗಲಿವೆಯೋ ಎಂಬ ಭಯವೂ ಉಂಟಾಗುತ್ತದೆ!

ಮದುವೆ ನಿಶ್ಚಿತವಾಗುವ ಮುನ್ನ, ವಧೂ ವರರು ಪರಸ್ಪರರಲ್ಲಿ ಮುಂದಾಗಿಯೇ ಹೇಳಿಕೊಳ್ಳುವಂತಹುದೇನಾದರೂ ಇದ್ದಲ್ಲಿ, ಯಾವುದೇ ಭಿನ್ನಾಭಿಪ್ರಾಯಗಳಿದ್ದರೆ ವಿವಾಹವಾಗದಿರುವಂತೆ, ಇತ್ಯಾದಿ ಉದ್ದೇಶಗಳಿಂದ ಅವರಿಬ್ಬರನ್ನೇ ಮಾತಾಡಲು ಬಿಡಲಾಗಿತ್ತು. ಬಾಳಿನುದ್ದಕ್ಕೂ ತನ್ನೊಂದಿಗೆ ಹೆಜ್ಜೆ ಹಾಕಲಿರುವ ಆಕೆಗೆ ಆತ ಕೇಳಿದ ಪ್ರಶ್ನೆ ''ನಿನ್ನ ಯಾವ ಶರ್ತಗಳಿದ್ದರೂ ಈಗಲೇ ಹೇಳು. ಬಳಿಕ ಇಬ್ಬರೂ ಹಪಿಹಪಿಸುವುದಕ್ಕಿಂತ ಮೊದಲೇ ಅರಿತು ಮುನ್ನಡೆಯುವುದೊಳಿತು'' ಎಂಬರ್ಥದ್ದಾಗಿತ್ತು. ಈಕೆಯ ಉತ್ತರ ಸಿದ್ಧವಿತ್ತು, 'ಮತ್ತೆಲ್ಲ ರೀತಿಯಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಮೊದಲೇ ಹೇಳ್ತಿದ್ದೇನೆ. ನಾನು ನಿಮ್ಮನ್ನು 'ಶ್ಯಾಮ ಸುಂದರ' ಅಂತೆಲ್ಲ ಅಷ್ಟುದ್ದಕ್ಕೆ ಕರೀಲಿಕ್ಕೆ ಸಾಧ್ಯವೇ ಇಲ್ಲ! ನಾನು 'ಶ್ಯಾಮ್' ಅಂತ ಮಾತ್ರ ಕೂಗ್ತೇನೆ. ಆಗ್ಬೋದಾದ್ರೆ ಮಾತ್ರ ಒಪ್ಪಿಗೆ ಕೊಡಿ. ಇಲ್ಲಾಂದ್ರೆ ಬೇಡ!

ಅರರೆ! ಸುಧೀರ್ಘ ಬಾಳಿನ ದಾರಿಯಲ್ಲಿ ಆಕೆಗೆ ಹೊಳೆದ ಘನ ಗಂಭೀರ ವಿಷಯವೇ! ಎಷ್ಟೆಂದರೂ ಮುಂದೆ ದಿನ ದಿನವೂ ಕ್ಷಣಕ್ಷಣವೂ ಎದುರಿಸಬೇಕಾದ ಸಮಸ್ಯೆಯಲ್ಲವೆ?!

ಈತನಿಗೋ, ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಹ ಅನುಭವ! ಹಾಗಾಗಿ ಹೇಳಿದ...''ಅಷ್ಟೂ ಬೇಡ. ನೀನು ಶ್ಯಾಮ್ ಅಂತ್ಲೂ ಹೇಳುವಷ್ಟು ಕಷ್ಟಯಾಕೆ? ಬರೀ 'ಶ್' ಅಂದ್ರೆ ಸಾಕು! ನಾನೂ ನಿನ್ನನ್ನು 'ಶ್ರೇಯಾ' ಅಂತ ಅಷ್ಟುದ್ದ ಎಳಿಯುದಿಲ್ಲ 'ಶ್' ಅಂತ್ಲೇ ಕರಿತೇನೆ.'' ಎಂದ!

ಇಂದಿನ ಯುವಜನಾಂಗದಲ್ಲಿ ಅಬ್ಬ! ಎಂಥಾ ವೈಚಾರಿಕತೆ! ಏನು ಹೊಂದಾಣಿಕೆ! ಅದೆಷ್ಟು ಸಾಮರಸ್ಯ! ಮೊನ್ನೆ ಅವರ ಬಿಡಾರಕ್ಕೆ ಹೋಗಿದ್ದೆ. ಆಹಾ! ಸಮಾನತೆಯ ಸರಳ ದಾಂಪತ್ಯ! ಈಕೆ 'ಶ್! ಶ್!' ಎಂದೊಡನೆ ಆತ ಹಾಜರ್! ಆತ 'ಶ್!ಶ್! ಎಂದುದೇ ತಡ, ಈಕೆ 'ಬಂದೇ' ಎನ್ನುವಳು! ಆದರೆ, ಒಂದೇ ಒಂದು ತೊಂದರೆ, ನೆರೆಯವರಿಗೆ ಮಾತ್ರ ಅಕ್ಕಪಕ್ಕದಿಂದ ತೂರಿ ಬರುವ ಈ ಅನವರತ 'ಶ್' ಕಾರದಿಂದ ತಲೆಚಿಟ್ಟು ಹಿಡಿದು ಹೋಗಿದೆಯಂತೆ!

ಬಹುಶಃ ಇನ್ನು ಒಂದು ಮಗುವಾದ ಮೇಲಾದರೂ ಇವರು, ಅದೇ, ನಮ್ಮಜ್ಜಿಯ ಕಾಲದ ಕ್ರಮದಲ್ಲಿ 'ಪಾಪೂ, ಮಮ್ಮೀನ ಕರಿಯೋ' ಎಂದೋ 'ಪುಟ್ಟೀ, ಡ್ಯಾಡೀನ ಕೂಗೋ' ಎಂದೋ, ಪರಸ್ಪರರನ್ನು ಸಂಬೋಧಿಸಲಾರಂಭಿಸಿದಾಗ ಮಾತ್ರ, ನೆರೆಯವರಿಗೆ ಈ 'ಶ್' ಎಂಬ ಸುಳಿನ ರಗಳೆ ತಪ್ಪೀತೇನೋ! ಅದುವರೆಗೂ, ತಂ-ತಮ್ಮ ಕರಾರನ್ನು ಪಾಲಿಸುತ್ತ ಸುಖದಿಂದಿರುವ ಈ ನವದಂಪತಿಗಳನ್ನು ಆಕ್ಷೇಪಿಸುವುದೇಕೆ? ಅಲ್ಲವೆ?

ಒಟ್ಟಾರೆ, ಈ 'ರೀ-ಲೇ' ಗಳ ರೀಲೆಯಂತೂ, ನಾನಾ ಕಾಲದಲ್ಲಿ ನಾನಾ ರೂಪದಲ್ಲಿ, ನಾನಾ ಪ್ರದೇಶಗಳಲ್ಲಿ-ನಾನಾ ಬಗೆಯಾಗಿ ಶೋಭಿಸುತ್ತಲೇ ಇರುವುದು, ಮಾನವನ ಸಂಘ ಜೀವನಕ್ಕೆ ಪ್ರಮುಖ ಆಧಾರವಾಗಿ ನಿಲ್ಲುವ ಅಂಶವಾಗಿದ್ದು, ಯಾರಾದರೂ ಡಾಕ್ಟರೇಟ್ ಪ್ರಬಂಧ ಬರೆಯುವುದಿದ್ದರೆ (ಸಾಕಷ್ಟು ಮಾಹಿತಿಗಾಗಿ ನನ್ನನ್ನು ವಿಚಾರಿಸಿ!) ಸಂಶೋಧನೆಯನ್ನು ನಡೆಸಬಹುದಾದ ವಿಷಯ. ನೀವೇನಂತೀರಾ?! ■

ಕಾರಣ

ಗಾಯಕನೊಬ್ಬನ ಹಾಡಿನ ಸಮಾರಂಭ ಮುಗಿದೊಡನೆ ಯಾರೋ ಅವನ ಬಳಿ ಬಂದು ಹೇಳಿದರು 'ನಿಮ್ಮ ಹಾಡು ಶುರುವಾದೊಡನೆ ನಿಶ್ಶಬ್ದ ಎಲ್ಲ ಕಡೆಗೂ ಆವರಿಸಿಕೊಂಡಿತು'

'ಹೌದಾ? ನನ್ನ ಹಾಡೆಂದರೆ ಜನರಿಗೆ ಅಷ್ಟೊಂದು ಇಷ್ಟವೆ?' ಗಾಯಕ ಹೆಮ್ಮೆಯಿಂದ ಬೀಗುತ್ತಾ ಕೇಳಿದ.

ಶ್ರೋತೃ ತಲೆಯಾಡಿಸುತ್ತ 'ಹೌದು, ಹಾಡು ಕೇಳಿದೊಡನೆ ಎಲ್ಲರಿಗೂ ಆನಂದದಿಂದ ನಿದ್ದೆ ಬಂದು ಬಿಟ್ಟಿತು' ಎಂದ.


– ಜಗದೀಶ ಗಂ.ದಲಭಂಜನ,
ಗುಳೇದಗುಡ್ಡ.



ಈ ಶತಮಾನದ ಶ್ರೇಷ್ಠ ಕನ್ನಡದ ಮಠ - ಪುಸ್ತಕದ ಜಗದ್ಗುರು

● ಶಂಕರ ಬೈಚಬಾಳ
ಪಶು ಆಸ್ಪತ್ರೆ, ಇಂಡಿ- 586209 ಬಿಜಾಪುರ ಜಿಲ್ಲೆ.

ಜಾತಿ ಮತಗಳ ಸಂಕುಚಿತ ಎಲ್ಲೆಯನ್ನು ಮೀರಿ, ಗೊಡ್ಡು ಸಂಪ್ರದಾಯಗಳನ್ನು ದೂರ ಸರಿಸಿ, ಶಿಕ್ಷಣ ಭಾವೈಕ್ಯತೆಯ ಹರಿಕಾರರೆನಿಸಿದವರು. ಸಾಹಿತ್ಯ ಸಮಾಜಗಳಿಗೆ ತಮ್ಮನ್ನು ಸಮರ್ಪಿಸಿಕೊಂಡ ಕನ್ನಡನಾಡಿನ ಶ್ರೇಷ್ಠ ಮಠದ ಪುಸ್ತಕದ ಜಗದ್ಗುರು ಸಾಮಾನ್ಯರ ಸ್ವಾಮೀಜಿಯವರ ಈ ಚಟುವಟಿಕೆಗಳು ನಾಡಿನ ಧಾರ್ಮಿಕ ಸಂಘಟನೆಗಳಿಗೆ ಮಾದರಿಯಾಗಿವೆ.





ಮಠಕ್ಕೆ ಬಂದ ಹಳ್ಳಿಯ ಮುದುಕಿ ಪೂಜ್ಯರಿಗೆ ನಮಸ್ಕರಿಸಿದಳು. ಕಲ್ಲು ಸಕ್ಕರೆ ಆಶೀರ್ವದಿಸಲು ಶ್ರೀಗಳು ಕೈಚಾಚಿದರು. 'ಬುದ್ಧಿ ಜೊತೆಗೆ ಎರಡು ಸಣ್ಣ ಪುಸ್ತಕ ಆರ್ಶೀವಾದ ಮಾಡಿ' ಎಂದಳು ಆ ಮುದುಕಿ. ಪೂಜ್ಯರು ಹರ್ಷಚಿತ್ತರಾಗಿ ಎರಡು ಅಲ್ಲ ಇಪ್ಪತ್ತು ಪುಸ್ತಕಗಳನ್ನು ನೀಡಿದರು. ಮುದುಕಿ ಅವುಗಳನ್ನು ಕಣ್ಣಿಗೊತ್ತಿಕೊಂಡು ಉಡಿಯಲ್ಲಿ ತುಂಬಿಕೊಂಡಳು. ಪ್ರಕಾಶನದ ನಿರ್ದೇಶಕನಾದ ನನ್ನ ಕಣ್ಣಲ್ಲಿ ಧನ್ಯತೆಯ ನೀರು ತುಂಬಿತು'. ಇದು ಖ್ಯಾತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿ ಅವರು ಕನ್ನಡದ ಸನ್ಯಾಸಿ ಸಾಮಾನ್ಯರ ಸ್ವಾಮೀಜಿ ಗದಗ - ಡಂಬಳ ತೋಂಟದಾರ್ಯ ಮಠದ ಡಾ. ಸಿದ್ಧಲಿಂಗ ಶ್ರೀಗಳು ಪುಸ್ತಕದ ಬಗ್ಗೆ ಮೂಡಿದ ಜಾಗೃತಿ ಕುರಿತು ಹೇಳಿದ್ದು.

ವಿಜಾಪುರ ಜಿಲ್ಲೆ ಸಿಂದಗಿಯ ಶಾಂತವೀರ ಪಟ್ಟಾಧ್ಯಕ್ಷರ ಕರುಣೆಯ ಕೂಸಾಗಿ ಬೆಳೆದಿದ್ದ ಸಿದ್ಧರಾಮರು ಗದುಗಿನ ಜಗದ್ಗುರು ತೋಂಟದಾರ್ಯ ಮಠದ ಪೀಠಾಧ್ಯಕ್ಷ ಸಿದ್ಧಲಿಂಗರಾಗಿ ಬಂದಾಗಿನಿಂದ ಆ ಮಠದ ಮೂಲಕ ಕನ್ನಡ ನಾಡಿನ ಪುಣ್ಯೇತಿಹಾಸದ ಸ್ವರ್ಣಾಧ್ಯಾಯ ತೆರೆದುಕೊಂಡಿದೆ. ಅಲ್ಲಮಪ್ರಭು ಸಂಪ್ರದಾಯದ ಎಡೆಯೂರು ತೋಂಟದ ಸಿದ್ಧಲಿಂಗ ಶಿವಯೋಗಿಗಳು ಪ್ರಭುದೇವರ ನಂತರದ ಹತ್ತೊಂಬತ್ತನೇ ಪೀಠಾಧ್ಯಕ್ಷರಾಗಿದ್ದರು. ಎಡೆಯೂರು ಸಿದ್ಧಲಿಂಗೇಶ್ವರರ (ನಿರ್ವಿಕಲ್ಪ ಸಮಾಧಿ) ನಂತರ ಈಗ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು 1974ಲ್ಲಿ ಅಧಿಕಾರ ಸ್ವೀಕರಿಸಿ ಪುನಃ ಇವರೂ ಹತ್ತೊಂಬತ್ತನೆಯವರು. ಇವರು ತೋಂಟದಾರ್ಯ ಮಠಕ್ಕೆ ಬಂದ ಪ್ರಥಮ ದಿನ ಹೇಳಿದ ಮಾತು 'ನಾನು ಮಠದ ಆಸ್ತಿ ನೋಡಿ ಬರಲಿಲ್ಲ. ಭಕ್ತರ ಭಕ್ತಿ ಶ್ರೀಮಂತಿಕೆ ನೋಡಿ ಬಂದೀನಿ, ಕನ್ನಡದ ಜ್ಯೋತಿಗೆ ಬಸವ ಜ್ಯೋತಿಗೆ ಎಣ್ಣೆ ಬತ್ತಿಯಾಗಲು ಬಂದೀನಿ' ಎಂದಿದ್ದರು.

ಆಗ ಮಠದ ಅಂಗಳದಲ್ಲಿ ಕಾಂಗ್ರೆಸ್ ಕಸ ಇತ್ತು. ಕೊಠಡಿಗಳಲ್ಲಿ ಇಲಿ




ಹೆಗ್ಗಣಗಳು ಓಡಾಡುತ್ತಿದ್ದವು. ಮಠದಲ್ಲಿಯ ವಿದ್ಯಾರ್ಥಿಗಳೊಂದಿಗೆ ಅಕ್ಕಿಯ ಅನ್ನ ಉಣ್ಣದೆ ಜೋಳದ ನುಚ್ಚು (ಸಂಗಟಿ) ಹಿಟ್ಟಿನ, ಮುದ್ದಿ ಉಂಡು, ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರವಚನ ಮಾಡಿ ಬಂದ ಕಾಣಿಕೆ (ಹಣ)ಯಿಂದ ಬಡ ಮಕ್ಕಳನ್ನು ಬೆಳೆಸಿ ವಿದ್ಯಾವಂತರನ್ನಾಗಿ ಮಾಡಿದರು. ಸಾಲದಿಂದ ತತ್ತರಿಸುತ್ತಿದ್ದ ಮಠವನ್ನು ಹೊಸ ರೀತಿಯ ಒಕ್ಕಲುತನ ಅಭಿವೃದ್ಧಿಪಡಿಸಿ ಸಾಲದಿಂದ ಪಾರು ಮಾಡಿದರು. ದೀನದಲಿತರಿಗೆ ಆಶ್ರಯ ನೀಡಿದರು. ಶಿಕ್ಷಣಕ್ಕೆ ಮಾನ್ಯತೆ ಕೊಟ್ಟರು. ಕನ್ನಡ ಕೆಲಸಕ್ಕೆ ಟೊಂಕಕಟ್ಟಿ ನಿಂತರು. ಎಲ್ಲಕ್ಕೂ ಹೆಚ್ಚು ಮಠವನ್ನು ಮಠೀಯ ಬೇಲಿಯಿಂದಾಚೆಗೆ ತಂದರು.

ತೋಂಟದಾರ್ಯ ಮಠದ ಸಾಂಸ್ಕೃತಿಕ ಸಾಹಿತ್ಯಕ ಚಟುವಟಿಕೆಯ ಉಪ ಸಂಸ್ಥೆಗಳು ಹತ್ತಾರು. ಅದರಲ್ಲಿ ವೀರಶೈವ ಪ್ರಗತಿಶೀಲ ಯುವಕ ಸಂಘ, ವೀರಶೈವ ಅಧ್ಯಯನ ಸಂಸ್ಥೆ, ವೀರಶೈವ ವಿಶ್ವಕೋಶ ಯೋಜನೆ ಸಮಿತಿ, ಪ್ರಮುಖವಾದವುಗಳು. 1975ರಲ್ಲಿ ಸ್ಥಾಪಿತವಾದ ವೀರಶೈವ ಅಧ್ಯಯನ ಸಂಸ್ಥೆಯು ಇಲ್ಲಿಯವರೆಗೆ ಸುಮಾರು 290 ಪುಸ್ತಕಗಳನ್ನು ಪ್ರಕಟಿಸಿದೆ ಎಂದರೆ ಅದು ಪವಾಡವೇ ಹೌದು. ಪವಾಡ ಸದೃಶವಾದ ಈ ಪ್ರಕಟಣಾ ಸಂಸ್ಥೆಯಲ್ಲಿ ಯಾವ ಸಂಶೋಧನ ಸಹಾಯಕರಾಗಲಿ, ಸಂಶೋಧಕರಾಗಲೀ, ಮುದ್ರಣ ವ್ಯವಸ್ಥಾಪಕರಾಗಲಿ ಇಲ್ಲ, ಮುದ್ರಣಾಲಯವಂತೂ ಮೊದಲೇ ಇಲ್ಲ. ಮಠಕ್ಕೆ ಹೋದರೆ ಈ


ಗೋಕಾಕ್ ಚಳುವಳಿಯ ಪ್ರಥಮ ಕಿಡಿ ಹಾರಿದ್ದು ಈ ಸಾಮಾನ್ಯರ ಸ್ವಾಮೀಜಿ ಅವರ ಸಿಂದಗಿ ಭಾಷಣದಿಂದ. ಗದಗಿನಲ್ಲಿರುವ ಇವರ ಮುಂಚೂಣಿಯಲ್ಲೇ ಚಳುವಳಿ ಗರಿಕೆದರಿಕೊಂಡು ಕನ್ನಡಿಗರ ತಾಳ್ಮೆಯ ಕಟ್ಟೆ ಒಡೆದು ಕೊನೆಗೊಮ್ಮೆ ಅದು ರಾಜ್ಯಾದ್ಯಂತ ಜನಾಂದೋಲನವೆನಿಸಿ ಅದ್ಭುತ ಯಶಸ್ಸು ಪಡೆದ ಘಟನೆ ಈ ರಾಜ್ಯದ ಜನಮನದಲ್ಲಿ ಇನ್ನೂ ಹಚ್ಚ ಹಸುರಾಗಿದೆ.

ಪ್ರಕಟಣಾ ಯೋಜನೆಯಲ್ಲಿ ದುಡಿಯುವರಾರು ಕಾಣಿಸುವುದಿಲ್ಲ. ಪುಸ್ತಕಗಳು ಮಾತ್ರ ಕಾಣಿಸುತ್ತವೆ. ಅವು ನಿರಂತರವಾಗಿ ಪ್ರಕಟವಾಗುತ್ತಿರುತ್ತವೆ. ಇದು ಹೇಗೆ ಸಾಧ್ಯ? ಎಂದು ಅಚ್ಚರಿಯಾಗುತ್ತದೆ. ಹೂವು ಅರಳಿದಂತೆ ಸಹಜವಾಗಿ ಇಲ್ಲಿ ಸಾಹಿತ್ಯ ಅರಳುತ್ತದೆ. ವೀರಶೈವ ಅಧ್ಯಯನ ಸಂಸ್ಥೆ ಶೈಕ್ಷಣಿಕ ಶಿಸ್ತನ್ನು ಅಳವಡಿಸಿಕೊಂಡು ಅತ್ಯುತ್ತಮ ಪುಸ್ತಕಗಳನ್ನು ಪ್ರಕಟಣೆ ಮಾಡಬೇಕು. ಸಾಮಾನ್ಯವಾಗಿ ಮಠದಂಥ ಧಾರ್ಮಿಕ ಸಂಸ್ಥೆಗಳಲ್ಲಿ ಪುಸ್ತಕ ಪ್ರಕಟಣೆ ಮಾಡುವಾಗ ಆ ಮಠದ ಸ್ವಾಮಿಗಳ ಭಾವಚಿತ್ರ, ಆಶೀರ್ವಚನ, ಗ್ರಂಥದಾನಿಗಳ ಚಿತ್ರ ಪ್ರಕಟವಾಗುವುದುಂಟು. ಆದರೆ 'ಹೆಸರು ಕೆಲಸದ ವೈರಿ' ಎಂದು ಭಾವಿಸಿದ ಪೂಜ್ಯರು ಹಾಗೂ ಎಂ.ಎಂ. ಕಲಬುರ್ಗಿ ಇಬ್ಬರೂ ಮಠದ ಸಣ್ಣ ಮುರುಕಲು ಕೋಣೆಯೊಂದರಲ್ಲಿ ಸೇರಿ 'ಒಂದು ಮಠದ ಕೆಲಸ ಎಂದರೆ ಒಂದು ಸಮಾಜದ ಕೆಲಸ ಅದು ಕನ್ನಡದ ಕೆಲಸವೆಂಬ' ಪವಿತ್ರ ಭಾವನೆಯಿಂದ ಕಾರ್ಯ ಮಾಡಲು ತತ್ಪರರಾದ ಫಲವೇ ಇಂದಿನ ಗದುಗಿನ ತೋಂಟದಾರ್ಯ ಸಂಸ್ಥಾನ ಮಠಕ್ಕೆ ಈ ಶತಮಾನದ ಶ್ರೇಷ್ಠ ಕನ್ನಡದ ಮಠ ಪುಸ್ತಕದ ಜಗದ್ಗುರು' ಎಂಬ ಅನ್ವರ್ಥಕ ನಾಮ ಬಂದದ್ದು.

ಕೆಲವರು ಇತಿಹಾಸದ ಬೆನ್ನು ಹತ್ತಿ ದಣಿದುಬಿಡುತ್ತಾರೆ. ಇತಿಹಾಸ ಕೆಲವೊಬ್ಬರ ಬೆನ್ನು ಹತ್ತಿ ನಸುಕಿನೆಡೆಗೆ ನಡೆಯುತ್ತಿದೆ. ಬೆಳಕಾಗಿ ಬೆಳಗುತ್ತದೆ. ಈ ಮಠದ ವೀರಶೈವ ಅಧ್ಯಯನ ಸಂಸ್ಥೆಯ ಈ ಇಪ್ಪತ್ತೈದು ವರ್ಷದ ರಜತಪರ್ವ ಇತಿಹಾಸಕ್ಕೆ ಗರ್ವ. ಈ ಅವಧಿಯಲ್ಲಿ ಶ್ರೀ ಮಠ ಸಾಮಾಜಿಕವಾಗಿ ಮಾಡಿದ ಎಲ್ಲ ಕಾರ್ಯಗಳನ್ನು ಈ ಲೇಖನದಲ್ಲಿ ಪರಿಚಯಿಸಲಿಕ್ಕಾಗದು. ಕೇವಲ ಸಾಹಿತ್ಯದ ಬಗ್ಗೆ ಹೇಳಬೇಕಾದರೆ ಇಲ್ಲಿಯವರೆಗೆ ಸುಮಾರು 290 ಪುಸ್ತಕಗಳನ್ನು ಪ್ರಕಟಿಸಿದೆ. ಇದರ ಅಂದಾಜು ಪುಟ ಐವತ್ತು ಸಾವಿರ, ಇದಕ್ಕೆ ತಗುಲಿದ ವೆಚ್ಚ 30 ಲಕ್ಷ ರೂಪಾಯಿ. ಯಾವ ವಿಶ್ವವಿದ್ಯಾಲಯಗಳು ಈ ಸಾಧನೆ ಮಾಡಿರಲಿಕ್ಕಿಲ್ಲ! ಪ್ರತಿಯೊಂದು ಪ್ರಕಟಣೆಗೂ ಒಬ್ಬ ಗ್ರಂಥದಾನಿ ಇರುತ್ತಾನಾದರೂ ಅದು ಹೆಚ್ಚು ಹೆಚ್ಚು ಜನರನ್ನು ಸಾಹಿತ್ಯಕ ಮಣಿಹದಲ್ಲಿ ತೊಡಗಿಸುವ ಹೊಸ ಪ್ರಯತ್ನವೇ ಹೊರತು ಅಧಿಕ ಆರ್ಥಿಕ ಭಾರವನ್ನು ಅಧ್ಯಯನ ಸಂಸ್ಥೆಯೇ



ಹೊರುತ್ತ ಬಂದಿದೆ. ಇದೊಂದು ಜ್ಞಾನ ದಾಸೋಹ. ಅಧ್ಯಯನ ಸಂಸ್ಥೆಯ ಪ್ರಕಟಣೆಗಳಲ್ಲಿ ಹತ್ತು ವಿವಿಧ ತರದ ಸಾಹಿತ್ಯರತ್ನ ಮಾಲೆಗಳಿವೆ. ಅವುಗಳಿಗೆ ತಮ್ಮದೇ ಆದ ಗುರಿ ಚೌಕಟ್ಟುಗಳುಂಟು.



ಪುಣ್ಯ ಪುರುಷ ಸಾಹಿತ್ಯ ರತ್ನಮಾಲೆ : ಇದರಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಾಡು ಕಟ್ಟಲು ಕಾರಣರಾದ ಹರ್ಡೇಕರ ಮಂಜಪ್ಪ, ಡೆಪ್ಯುಟಿ ಚನ್ನಬಸಪ್ಪ, ಜಸ್ಟೀಸ್ ಮಹಾದೇವಯ್ಯ, ಎಸ್.ಆರ್. ಕಂಠಿ ಮತ್ತು ಹೆಚ್. ಸಿದ್ಧವೀರಯ್ಯನವರಂತಹ 159 ವ್ಯಕ್ತಿಗಳ ಪುಸ್ತಕಗಳು ಪ್ರಕಟಣೆಯಾಗಿವೆ. ಒಬ್ಬೊಬ್ಬ ಪುಣ್ಯ ಪುರುಷರ ಬಗ್ಗೆ ಒಂದೊಂದು ಸೋಮವಾರ ಶ್ರೀಮಠದಲ್ಲಿ ಉಪನ್ಯಾಸ ಏರ್ಪಡಿಸಿ ಅದನ್ನು ಸುಮಾರು ನೂರು ಪುಟದ ಕ್ರೌನ್ ಸೈಜ್ ಪುಸ್ತಕದಲ್ಲಿ ಮುದ್ರಿಸಿ ಸುಲಭ ಬೆಲೆಗೆ ವಿತರಿಸುವುದು ನಡೆದುಕೊಂಡು ಬಂದಿದೆ.

ವಚನ ಸಾಹಿತ್ಯ ರತ್ನಮಾಲೆ : ಈ ಸಾಹಿತ್ಯ ವೀರಶೈವದ ಆತ್ಮ ಕನ್ನಡದ ಉಪನಿಷತ್, ವೀರಶೈವ ಸಂಸ್ಕೃತಿಯನ್ನು ಹಿಡಿದಿಟ್ಟುಕೊಂಡ ಅಮೂಲ್ಯ ಸಂಪತ್ತು. 39 ಬೃಹತ್ ಗ್ರಂಥಗಳಲ್ಲಿ ಈಗಾಗಲೇ ಪ್ರಕಟಿಸಿದ ಈ ಮಾಲೆ ಐದು ಘಟ್ಟಗಳಲ್ಲಿ ನಡೆದು ಬಂದಿದೆ. ಅವುಗಳೆಂದರೆ 1. ಪ್ರಾರಂಭದ ಪ್ರಯತ್ನಗಳು 2. ವಿಜಾಪೂರದ ಶಿವಾನುಭವ ಗ್ರಂಥ ಮಾಲೆ 3. ಧಾರವಾಡದ ಕನ್ನಡ ಅಧ್ಯಯನ ಪೀಠ, ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ 5. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.


ಸ್ವರವಚನ ಸಾಹಿತ್ಯ ರತ್ನಮಾಲೆ : ಹಾಡುಗಬ್ಬರೂಪವಾದ ಈ ಸಾಹಿತ್ಯ ಪ್ರಕಟಣೆ ತುಂಬ ಉಪೇಕ್ಷೆಗೆ ಗುರಿಯಾಗಿತ್ತು. ಕೈವಲ್ಯ ಪದಗಾರರೆನಿಸಿದ ಅನುಭಾವಿಗಳ ಹಾಡುಗಳು ಮಾತ್ರ ಪ್ರಕಟವಾಗಿದ್ದವು. ಏಕೋತ್ತರಶತಸ್ಥಲ, ಶೂನ್ಯ ಸಂಪಾದನೆ ಮೊದಲಾದ ವಚನ ಸಂಕಲನಗಳಲ್ಲಿ ಅಡಕಗೊಂಡಿದ್ದ ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು (ಸಂ.ಶಾಂತರಸ), ಮೋಟ್ನಹಳ್ಳಿ ಹಸನಸಾಬರ ತತ್ವಪದಗಳು (ಸಂ.ಎಂ.ಜಿ. ಬಿರಾದಾರ), ಮರಿಶಾಂತ ಬಸವದೇವರ ಸ್ವರವಚನಗಳು (ಸಂ.ಎಸ್.ಶಿವಣ್ಣ) ದಂಥ 16 ಮೌಲಿಕ ಕೃತಿಗಳು ಈ ಮಾಲೆಯಲ್ಲಿ ಬಂದಿವೆ.


ಪ್ರಾಚೀನ ಸಾಹಿತ್ಯ ರತ್ನಮಾಲೆ : ತತ್ವ ಸಾಹಿತ್ಯ ಇನ್ನು ಮೂಲೆಯಲ್ಲಿ ಕುಳಿತಿದೆ. ಈ ಸಾಹಿತ್ಯವನ್ನು ಒಂದು ವ್ಯವಸ್ಥಿತ ಕ್ರಮದಲ್ಲಿ ಅಕಾಡೆಮಿಕ್ ಮಟ್ಟದಲ್ಲಿ ವಿವಿಧ ಸಂಶೋಧಕರಿಂದ ಷಟಸ್ಥಲ ವಲ್ಲಭ, ಕರಪಾಲ ಬಸವ ಪುರಾಣ, ಕರ್ನಾಟಕ ಶಬ್ದ ಮಂಜರಿ ಎಂಬಂಥ ಉತ್ತಮೋತ್ತಮ 14ಕ್ಕೂ ಹೆಚ್ಚು ಪುಸ್ತಕಗಳು ಈ ಮಾಲೆಯಲ್ಲಿವೆ.

ಮಹಾಪ್ರಬಂಧ ಸಾಹಿತ್ಯ ರತ್ನ ಮಾಲೆ : ಸಂಶೋಧನೆ ಎನ್ನುವುದು ಶ್ರಮದ ಹಾಗೂ ಶ್ರದ್ಧೆಯ ಕಾರ್ಯ. ವಿಶ್ವವಿದ್ಯಾಲಯಗಳೇ ಪಿ.ಎಚ್.ಡಿ ಮಹಾಪ್ರಬಂಧಗಳನ್ನು ಪ್ರಕಟಿಸುವ ಕಾಲ ಒಂದಿತ್ತು. ಈ ಮಠ ಸಂಶೋಧನಾ ಗ್ರಂಥ ಪ್ರಕಟಣೆಯಲ್ಲಿ ಸಂಪನ್ಮೂಲ ಕೊರತೆ, ಸಂಪ್ರದಾಯ ಶಕ್ತಿಗಳ ಪ್ರಾಬಲ್ಯ ಎರಡನ್ನು ಸಹಿಸಿಕೊಂಡು ಈ ಸಾಹಸಕ್ಕೆಳಿಯಿತು. ಆರ್ಥಿಕ ಲಾಭ ಹಾನಿಯನ್ನು ಪರಿಗಣಿಸಲಿಲ್ಲ. ಕನ್ನಡದ ಶ್ರದ್ಧೆಯ ಕೆಲಸ ಎಂದು ಭಾವಿಸಿ, ವೆಂಕಟೇಶ ಜೋಯಿಸರ 'ಕೆಳದಿ ಅರಸರ ಶಾಸನ ಸಂಪುಟ' ವಿರುಪಾಕ್ಷ ಬಡಿಗೇರರ 'ಸಿರಸಂಗಿ ಸಂಸ್ಥಾನ ಒಂದು ಅಧ್ಯಯನ' ಅನ್ನಪೂರ್ಣ ಜಾಲವಾದಿ ಅವರ 'ಶಂಕರ ದಾಸಿಮಯ್ಯನ ಪುರಾಣ' ದಂಥ 9 ಪಿ.ಎಚ್.ಡಿ ಮಹಾ ಪ್ರಬಂಧಗಳನ್ನು ಪ್ರಕಟಿಸಿ ತನ್ನ ಘನತೆಯನ್ನು ಎತ್ತಿ ಹಿಡಿದಿದೆ.

ಆಧುನಿಕ ಸಾಹಿತ್ಯ ರತ್ನಮಾಲೆ : ಅಧ್ಯಯನ ಕೇಂದ್ರದ ಉತ್ಕೃಷ್ಟ

ಈ ಅಧ್ಯಯನ ಸಂಸ್ಥೆಯ ಮುಂದಿನ ಹಲವು ಯೋಜನೆಗಳಲ್ಲಿ ವೀರಶೈವ ವಿಶ್ವಕೋಶ ಯೋಜನೆ' ಪ್ರಮುಖವಾದುದು. 15 ಲಕ್ಷ ರುಪಾಯಿಗಳನ್ನು ವಿನಿಯೋಗಿಸಿ 500 ಪುಟಗಳಿಗೆ ಒಂದರಂತೆ 12 ಸಂಪುಟಗಳಲ್ಲಿ ಒಟ್ಟು 6000 ಪುಟಗಳ 'ವೀರಶೈವ ವಿಶ್ವಕೋಶ' ಸಿದ್ಧಪಡಿಸುವ ಕಾರ್ಯ ಭರದಿಂದ ನಡೆಯುತ್ತಿದೆ. ದಕ್ಷಿಣ ಭಾರತದ ಒಂದು ಪ್ರಮುಖ ಜನಾಂಗದ 800 ವರ್ಷಗಳ ಸಮುಗ್ರ ಇತಿಹಾಸ ಪ್ರಕಟಿಸುವ ಪ್ರಥಮ ಮಹಾಕಾರ್ಯ ಇದಾಗಿದೆ. ಒಬ್ಬ ಮಹಾಪ್ರಧಾನ ಸಂಪಾದಕ ಹನ್ನೆರಡು ಜನ ಪ್ರಧಾನ ಸಂಪಾದಕರು 60 ಜನ ಸಹ ಸಂಪಾದಕರು ಅವರ ಹಿಂದೆ ಸಾವಿರಾರು ಲೇಖಕರು ಅಂತಿಮ ಘಟ್ಟದಲ್ಲಿ ಹನ್ನೆರಡು ಜನ ಪರಿಶೀಲಕರು ದುಡಿದು ಈ ಮಹಾನ್ ಕಾರ್ಯ ಪೂರೈಸಲಿದ್ದಾರೆ.





ಮಾದರಿಯ ತನ್ನ ಹಲವು ಮಾಲಿಕೆಗಳಲ್ಲಿ ಇದನ್ನು ಸ್ಥಾಪಿಸಿ ಶ್ರೀಜಚನಿಯವರ 'ಶಿವಾದ್ವೈತದರ್ಶನ' ಕೆ.ಎನ್. ಚೆಟ್ನೀಸ್‌ರ 'ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ' ದಂಥ 17 ಗಟ್ಟಿ ಗ್ರಂಥಗಳನ್ನು ಕೊಟ್ಟು ಕನ್ನಡ ಸಾಹಿತ್ಯ ಸಂದರ್ಭದ ಹಲವು ಅಗತ್ಯಗಳನ್ನು ಈಡೇರಿಸಿ ಕೊಡುವಲ್ಲಿ ಸಫಲವಾಗಿದೆ.

ಅಭಿನಂದನ ಸಾಹಿತ್ಯರತ್ನಮಾಲೆ : ನಾಡು ನುಡಿ ಕಟ್ಟುವಲ್ಲಿ ಶ್ರಮಿಸಿದ ಮಹನೀಯರಿಗೆ ಅರ್ಪಿಸುವ ಗೌರವ ಗ್ರಂಥಗಳ ಸಮರ್ಪಣೆ ಇತ್ತೀಚೆಗೆ ಸಾಹಿತ್ಯ ಕ್ಷೇತ್ರದಲ್ಲಿ ಜರುಗುತ್ತಿದ್ದು ಇದು ಒಂದು ಆರೋಗ್ಯಕರ ಬೆಳವಣಿಗೆ. ಎಂ.ಎಂ. ಕಲಬುರ್ಗಿ ಅವರ ಕುರಿತು 'ಮಹಾಮಾರ್ಗ' ತೋಂಟದಾರ್ಯ ಸಿದ್ಧಲಿಂಗ ಶ್ರೀಗಳ ಕುರಿತು 'ಕಲ್ಯಾಣದ ಹಾದಿ' ಸ.ಸ. ಮಾಳವಾಡರ ಕುರಿತು 'ವ್ಯಾಸಂಗ' ದಂಥ ಆರು 500ರಿಂದ 800 ಪುಟಗಳ ಮಹಾಕೃತಿಗಳು ಈ ಮಾಲಿಕೆಯಲ್ಲಿ ಬೆಳಕು ಕಂಡಿವೆ.

ಅನುವಾದ ಸಾಹಿತ್ಯರತ್ನಮಾಲೆ ಮತ್ತು ಗ್ರಾಮೀಣ ಸಾಹಿತ್ಯರತ್ನ ಮಾಲೆ : ಈ ಎರಡು ಮಾಲೆಗಳು ಅಧ್ಯಯನ ಕೇಂದ್ರದ ಅಂಬೆಗಾಲಿಕ್ಕುವ ಮಗುವಿದ್ದಂತೆ. ಈಗ ತಾನೆ ಜನ್ಮ ತಾಳಿದ ಇವುಗಳಲ್ಲಿ ಬಾಲಚಂದ್ರ, ಜಯಶೆಟ್ಟಿ ಅವರ 'ಜೇಡರ ದಾಸಿಮಯ್ಯ ಕೇ ವಚನ್ (ಹಿಂದಿ) ಹರಿಲಾಲ ಪವಾರರ 'ಸಂತ ಸೇವಾಲಾಲ' ಕೃತಿಗಳು ಹೊರ ಬಂದು ಅಧ್ಯಯನ ಕೇಂದ್ರದ ವಿಸ್ತಾರಕ್ಕೆ ಸಾಕ್ಷಿಯಾಗಿವೆ.




ಪೀಠಾರೋಹಣ ರಜತ ಸಂಪುಟಗಳು : ಇಷ್ಟೆಲ್ಲಾ ವಿವಿಧ ರೀತಿಯ ಮಾಲಿಕೆ ಸ್ಥಾಪಿಸಿ ತಮ್ಮ ಇಪ್ಪತ್ತೈದು ವರ್ಷದ ರಜತ ಪರ್ವದಲ್ಲಿಯವರೆಗೂ ಭಕ್ತರನ್ನು ಬಿಟ್ಟರೆ ಶ್ರೀಗಳು ಪ್ರೀತಿಸುವುದು ಪುಸ್ತಕವನ್ನು ಮತ್ತು ಕನ್ನಡವನ್ನು. ಅಂಥ ಪುಸ್ತಕ ಪ್ರೀತಿಯ ಪುಸ್ತಕದ ಜಗದ್ಗುರುಗಳಿಗೆ ಪುಸ್ತಕ ಸಮ್ಮಾನ' ಎಂದು ಸಮಿತಿಯವರು ಯೋಚಿಸಿ ಶೂನ್ಯ ಸಿಂಹಾಸನರೋಹಣ ಮಾಡಿದ 25ನೆಯ ವರ್ಷದ ನೆನಪಿನ ನಿಧಿ ಎಂಬಂತೆ 25 ಸಂಪುಟಗಳನ್ನು ಹೊರ ತಂದಿದ್ದಾರೆ. ಉಳಿದ ಸ್ವಾಮಿಗಳಿಗೆ ಈ ಸಂಮಾನ ಬೆಳ್ಳಿ ಬಂಗಾರದಲ್ಲಿ ನಡೆದರೆ ಶ್ರೀಗಳಿಗೆ ಕನ್ನಡದ ಅಕ್ಷರಗಳ ಸಮ್ಮಾನ, ಪುಸ್ತಕ ಸಮ್ಮಾನ! ಪುಸ್ತಕ ಪೂಜೆಯೆ ಅವರಿಗೆ ಶಿವಪೂಜೆ ಲಿಂಗಪೂಜೆ. ಈ ಬೆಳ್ಳಿ ಹಬ್ಬದಲ್ಲಿ ಪುಸ್ತಕಗಳದ್ದೆ ಒಂದು ಪಾಲು. 'ಕಲ್ಯಾಣದ ಹಾದಿ' ಎಂಬ ಅಭಿನಂದನಾ ಗ್ರಂಥವನ್ನು ಜನತೆಗೆ ಪೀಠಾರೋಹಣ ರಜತ ಸಂಪುಟ ಮಾಲೆಯಲ್ಲಿ ಎರಡು ಭಾಗಗಳಿವೆ. ವಚನವಾಹಿನಿ ಎಂಬ ಶೀರ್ಷಿಕೆಯಲ್ಲಿ 13 ಆಯ್ದ ಸಂಪುಟಗಳು 12 ಇತರ ಕೃತಿಗಳು ಪ್ರಕಟಗೊಂಡು ಕನ್ನಡದ ಪ್ರಕಟಣಾ ಇತಿಹಾಸದಲ್ಲಿಯೇ ಇದೊಂದು ಮಹತ್ವದ ಯೋಜನೆಯಾಗಿದೆ. ಹೀಗೆ ಕಾಲು ಶತಮಾನದ ತಮ್ಮ ಹೆಜ್ಜೆಗಳನ್ನು ಶ್ರೀಗಳು ಮೂಡಿಸಿ ಸಾಹಿತ್ಯ ಕ್ಷೇತ್ರದಲ್ಲಿ ಎದ್ದು ಕಾಣತೊಡಗಿದ್ದಾರೆ.

ಇಲ್ಲಿಯ ಸಾಹಿತ್ಯಕ ಸೊಗಸಿನ ಶಿವಾನುಭವ ವೇದಿಕೆ ಎಲ್ಲಾ ಧರ್ಮೀಯರಿಗೂ ಮುಕ್ತ ಅವಕಾಶ ನೀಡಿದೆ. ಕುರಾನ್, ಬೈಬಲ್‌ಗಳ ಬಗ್ಗೆ ದೃಷ್ಟಾಂತಗಳು, ಮೊಹರಂ ಸೂಫಿಗಳ ಬಗ್ಗೆ ಕನ್ನಡ ಉಪನ್ಯಾಸಗಳು, ರಿವಾಯತ್ ಕರ್ಬಲಾ ಹಾಡುಗಳು, ಭಾರತಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ, ಮಹಾವೀರ ಅಹಿಂಸಾ ಧರ್ಮ..... ಇತ್ಯಾದಿ ಸಂಗತಿಗಳ ಬಗ್ಗೆ ಉಪನ್ಯಾಸಗಳನ್ನು ಆಯಾ ಧರ್ಮದ ವಿಚಾರವಂತರಿಂದ ಹೇಳಿಸುವುದರೊಂದಿಗೆ ಭಾವೈಕ್ಯ ಬೆಸೆವ ಕಾರ್ಯಕ್ರಮ ಶ್ರೀಮಠದಲ್ಲಿ ನಿರಂತರ ಸಾಗಿದೆ. ಪ್ರತಿ ಏಪ್ರಿಲ್ ಮೊದಲ ವಾರದಲ್ಲಿ ನಡೆಯುವ ತೋಂಟದಾರ್ಯ ಜಾತ್ರಾ ಮಹೋತ್ಸವದ ಬದಲಾಗಿ ಈಗ 'ನಮ್ಮೂರ ಜಾತ್ರೆ' ಎಂಬ ಅಧಿಕೃತ ಹೆಸರಿನಿಂದ ಕನ್ನಡದ ಜಾತ್ರೆಯಾಗಿ, ಕನ್ನಡ ರಥೋತ್ಸವವಾಗಿ ಮಾರ್ಪಟ್ಟಿದ್ದು ಕಂಡರೆ ಇಲ್ಲಿಯ ಚಟುವಟಿಕೆಗಳು ಸಾಹಿತ್ಯಕ ಕಾರ್ಯಕ್ರಮಗಳು ನಮ್ಮ ರಾಜ್ಯದ ಮಠ ಮಂದಿರ ಮಸೀದಿಗಳಿಗೆ ಮಾರ್ಗದರ್ಶನ ಮಾಡುತ್ತಿವೆ ಎಂದು ಹೇಳಲು ಹಿಂಜರಿಯುವಂತಿಲ್ಲ.

'ಪ್ರಾರ್ಥನೆ ಮಾಡುವ ತುಟಿಗಳಿಗಿಂತ ಸಹಾಯ ಮಾಡುವ ಹಸ್ತಗಳು ಪವಿತ್ರ' ಎಂಬ ನುಡಿಮುತ್ತಿನ ಮೇಲೆ ವಿಶ್ವಾಸವಿರಿಸಿದ ಪೂಜ್ಯರು ಸ್ಪಷ್ಟಗುರಿ, ದಿಟ್ಟ ವಿಚಾರಧಾರೆ, ಸಮಕಾಲೀನ ಸಂವೇದನೆಗಳಿಗೆ ಸ್ಪಂದಿಸಿ ಕನ್ನಡ ಸಾಹಿತ್ಯ ಕ್ಷೇತ್ರ ಅಭಿಮಾನಪಡುವಂತೆ ಸಾಹಿತ್ಯದಾನ ಮಾಡಿದ್ದಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ ಡಾಕ್ಟರೇಟ್, ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಗಳನ್ನು ಅರ್ಪಿಸಿ ಅವು ತಮ್ಮ ಗೌರವ ಹೆಚ್ಚಿಸಿಕೊಂಡಿವೆ. ಅಖಿಲ ಭಾರತ ಮಟ್ಟದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ ಒಂದರ 'ಸರ್ವಾಧ್ಯಕ್ಷ' ಗೌರವವನ್ನು ಈ ಕನ್ನಡ ಸನ್ಯಾಸಿ ಪುಸ್ತಕ ಸಂಸ್ಕೃತಿಯ ಹರಿಕಾರರಿಗೆ ಅರ್ಪಿಸಿ ಆ ಸಂಘಟನೆಗಳು ತಮ್ಮ ಗರಿಮೆ ಹೆಚ್ಚಿಸಿಕೊಳ್ಳಬಹುದಾಗಿದೆ. ■

'ಕೌನ್ ಬನೇಗಾ ಕ-ರೋಡ್ ಪತಿ?'

• ಶ್ರೀನಿವಾಸ ಜಾಲವಾದಿ
ಗಾಂಧಿ ಚೌಕದ ಹತ್ತಿರ,
ಸುರಪುರ- 585224,
ಗುಲ್ಬರ್ಗಾ ಜಿಲ್ಲೆ



ಹಾಸ್ಯ

'ಕೌನ್ ಬನೇಗಾ ಕರೋಡಪತಿ'?.... 'ಕೌನ್ ಬನೇಗಾ ಕರೋಡಪತಿ?' ಹಂ ಬನೆಂಗೆ.... ಹಂ ಬನೆಂಗೆ! ಕೌನ್ ಬನೇಗಾ...... ಹೀಂಗಽ ಏನಪಾಂತಂದ್ರಽ ಕೂಗಕೋತ್ ಬಂದಾ ನಮ್ಮ ಗುಂಡೂರಾಯ್!?

ಬಂದವನೇ ಶುರು ಮಾಡಿದಾ 'ಈಗ ನಾವೇನದ ಅಂದ್ರಽ ಬರೇ ನೂರು, ಸಾವಿರ, ಲಕ್ಷ ಅಂತ ಎಣಿಸೂದು ಬಿಟ್ಟೇವೇನಪಾ ಪೋತರಾಜಾ, ಈಗೇನಾದ್ರೂ ನಮ್ಮ ವ್ಯವಹಾರ ಕೋಟಿ ಕೋಟಿ! ಯಾಕಂದ್ರಽ ನಾವು ಕನ್ನಡಿಗರು ಯಾವಾಗಲೂ ಮುಕ್ಕೋಟಿ, ಚತುಷ್ಕೋಟಿ ಅಂತ ಅನ್ಕೋತನೇ ಈಗ ಪಂಚಕೋಟಿಗೆ ಬಂದು ಮುಟ್ಟೇವಿ ಏನಪಾ?' ಅಂತ ಅಂದ.

ಈಗಲೂ ನಾನು ಸುಮ್ಮನೇ ಇದ್ದೆ.

'ಯಾಕಪಾ ಮೌನವ್ರತ ಆಚರಿಸ್ಲಿಕತ್ತಿದೆಲ್ಲಾ? ಇನ್ನಽ ನಿನ್ನ ಚಾತುರ್ಮಾಸ ಮುಗಿದಿಲ್ಲ ಏನು? ಅಂತ ನನಗೊಂದು ಜೋರಾಗಿ ಗುಮ್ಮಿದ.

'ಅಲ್ಲಪಾ, ಗುಂಡ್ಯಾ, ಈ ಸ್ಟಾರ್ ಟಿವ್ಹಿ ನಿನ್ನ ಮ್ಯಾಲನೂ ಸವಾರಿ ಮಾಡೇದೇನಪಾ?' ಅಂದೆ.

'ಹೌದಪಾ ಗುರೂ, ಈ ಲಂಬೂಜಿ ಕೈಯಾಗಿಂದ ಪಾರಾಗಿ ಬಂದು ಕೋಟ್ಯಾಧಿಪತಿ ಆದ್ನೆಂದ್ರಽ ನಿನ್ನ ಕಡೆ ಒಂದ ಲಕ್ಷ(!) ಒಗಿತೀನಿ ತೊಗೊ, ಎಂಥದು ಮಾರಾಯ ನಿಂದು?' ಎಂದ.

ನಮ್ಮ 'ಗುಂಡ್ಯಾ'ನಿಗೆ ಕರೋಡ್ ಪತಿ ಆಗೋಕ್ಕೆ ಒಂದು 'ಕ್ಲೂ' ಹೇಳಿದಾಗ, ಅವ ಕೆಕ್ಕರಿಸಿ ನೋಡಿದ.

'ಅಲ್ಲಿಲೇ ಗುಂಡ್ಯಾ, ನೀನು 'ಕ'ರೋಡಪತಿ ಆಗೂ ಬದ್ಲಿ 'ರೋಡ್‌ಪತಿ' ಆಗೂ ಸಂಭವ ಭಾಳ ಜಾಸ್ತಿ ಅದ ನೋಡು.... ಅಂತ ನಾ ಅನ್ಲಿಕತ್ತಿದ್ದಾಗಲೇ ಅರ್ಧಕ್ಕೆ ಕಟ್ ಮಾಡಿದ ಗುಂಡ್ಯಾ,

'ಅಲ್ಲಲೇ ಮಗನಽ, ನಾನ ರೋಡಪತಿಯರೇ ಇರ್ಲಕ, ರೋಡಭಾಪರೇ ಇರ್ಲಕ, ಆದ್ರಽ ನಾನು ಲಂಬೂಜಿ ಪ್ರಶ್ನೆಕ್ಕಽ ಉತ್ತರಾ ಕೊಡೂದೇ ಖರೇ, ಕೌನ್ ಬನೇಗಾ ಕರೋಡಪತಿ ಅಂತ ಕೇಳಿದರು ನಾನು 'ಮೈ ಹೂಂ' ಅಂತ ಹೇಳೂದೇಽ ಖರೇ ತಿಳಿತಿಲ್ಲೊ?' ಅಂತ.

'ಏಽ ರೋಡಭಾಪ್ ಗುಂಡ್ಯಾ ಕೇಳಿಲ್ಲ, ನೀನು ಕೋಟ್ಯಾಧಿಪತಿ ಆಗ್ಲಿಕ್ಕೆ ಒಂದು ಭಾರಿ 'ಕ್ಲೂ' ಕೊಡ್ತೀನಿ, ಹಂಗ ಮಾಡು ಗ್ಯಾರಂಟಿ ನೀನೇ 'ಕೋಟ್ಯಾಧಿಪತಿ' ಆಗ್ತೀದಿ ಗೊತ್ತಾ? ಎಂದೆ.

'ಏನು?' ಅಂದ ಗುಂಡ್ಯಾ.

'ಏನಿಲ್ಲಾ, ಒಂದು ಕೋಟು ಹೊಲಿಸು, ಅದ್ನ ಹಾಕ್ಕೊಂಡ ತಿರುಗ್ಯಾಡು ಅಂದ್ರಽ ಎಲ್ಲಾರೂ ನಿನಗ ಕೋಟಿನ ಅಧಿಪತಿ, ಕೋಟಿನ ಅಧಿಪತಿ = ಕೋಟ್ಯಾಧಿಪತಿ ಅಂತ ಕರಿತಾರೂ ತಿಳಿತಿಲ್ಲೊ?' ಎಂದು ಖೊಳ್ಳನೇ ನಕ್ಕೆ.

ಗುಂಡ್ಯಾ ಸಿಟ್ಟಿನಿಂದ ನನ್ನೆಡೆಗೆ ಕೆಕ್ಕರಿಸಿ ನೋಡಿದಽ....

‘ಅಲ್ಲಲೇ ಮಳ್ಳ ಗುಂಡ್ಯಾ, ಜಗತ್ತು ಎಷ್ಟು ಸುಧಾರಿಸ್ತು ಖರೇ ನೀಯೇನು ಸುಧಾರ್ಸಿಲ್ಲ ನೋಡು? ಈಗೆಲ್ಲಾ ಕಂಪ್ಯೂಟರ್, ಇ-ಮೇಲ್ ಅಂತ ಜಗತ್ತು ಸುತ್ಯಾಡ್ಲಿಕತ್ತದಽ ನೀನು ಆ ಮಟ್ಕಾನಂಬರ್ ನೋಡುವ್ರಗತ್ಲೆ ಮೈಬನೂಂಗಾ... ಮೈ ಬನೂಂಗಾ... ಕರೋಡಪತಿ ಅಂತ ಅನ್ನಿಕತ್ತಿದಿ, ಹೀಂಗಽ ಈ ಹಣ ಮಾಡುವ ‘ಸ್ಕೀಂ’ಗಳ ಬೆನ್ನು ಹತ್ತಿದೆಂದ್ರ’ ನೀ ಏನಪಾಂತಂದ್ರಽ ಕರೋಡಪತಿ ಆಗೂದಿಲ್ಲಾ, ‘ತಿರುಪತಿ’ ಆಗ್ತಿದಿ, ಅದಾದ ಮ್ಯಾಗ ‘ರೋಡ್ ಕಂ ಪತಿ’ ಆಗ್ತಿದಿ ಅಂತ ಹಚ್ಚಿ ಝಾಡಿಸುತ್ತಿದ್ದಾಗಲೇ ಸಮ್ಮ ವೆಬ್‌ಸೈಟ್ ಬಂತು....

‘ನಾನೂ ಕರೋಡಪತಿ ಕಾರ್ಯಕ್ರಮ ನೋಡಿನ್ರಿಽ, Star ದಾಗ ಬರ್ತ, ಭಲೋ ಐತ್ರಿ ನಾನೂ ಅದರಾಗ ಭಾಗವಹಿಸಿ ಬಹುಮಾನ ತೊಗೊಂಡು winning horse ಆಗ್ತೀನಿ’ ಅಂದಳು ನನ್ನಾಕೆ.

‘ಅಲ್ರಿ ವೈನಿಯವರಽ, ನಾನೇ ಈಗಾಗಲೇ ಕರೋಡಪತಿ ಕಾರ್ಯಕ್ರಮದಾಗ ಎಲ್ಲಾ ಗೆದ್ದು, ಅಗ್ದಿ ಸಮೀಪ ಬಂದೀನ್ರಿ ಅಂದ್ರ, ಇಂವಾ ನನ್ನ ಈಗಾಗಲೇ ‘ತಿರುಪತಿ’ ಮಾಡಿದಾ, ರೋಡಪತಿ ಮಾಡಿದಾ, ಕೊನಿಗೆ ‘ರೋಡಭಾಪ’ ಅಂದು, ರೋಡ್-ಕಂ-ಪತಿನೂ ಮಾಡ್ಯಾನ್ರಿ, ಯಪ್ಪೊ ನನ್ನ ಪರಿಸ್ಥಿತಿ ಎಲ್ಲಿಗೆ ಬಂತಪಾ ಯಪ್ಪಾ, ನಾ ಹ್ಯಾಂಗಽ ಮಾಡ್ಲಿರೇ, ಇಂವಾ ಹ್ಯಾಟ್ಯಾ ನನ್ನ ರೋಡ್‌ಭಾಪ ಅಂತ ನಿವಾಳಿಸಿ ಒಗಿದಾನ್ರೇಽ ಯವ್ವಾ...’ ಅಂತ, ಹಿಂಗೇನಪಾಂತಂದ್ರಽ ಸತ್ತಾಗ ಅಳ್ತಾರಲ್ಲಾ, ಹಂಗಽ ಹಾಡ್ಯಾಡಿಕೊಂಡು ಅಳ್ಲಿಕ್ಕೆ ಶುರು ಹಿಡಿಸಿಬಿಟ್ಟ ಗುಂಡ್ಯಾ.

‘ಏನ್ರಿಽ, ಗುಂಡಣ್ಣನಂತ ಸಜ್ಜನರಿಗೆ ಅಳಿಸಿದ ಪಾಪ ನಿಮಗ ಬರ್ತದ, ಜರಾಽ ಅರೇ ತಲಿ ಅದ ಏನು ನಿಮಗ?’ ಅಂತ ನನ್ನಾಕೆ Direct Hit ಮಾಡಿದ್ಳು, ‘ಅಲ್ಲಽ ನಾಯೇನು ಅಂದಿನಿ ಅಂವಗ? ಅಂವಾ ಹ್ಯಾಂಗ ಇದ್ದಾನ ನಿನಗ ಇನ್ನಾ ಗೊತ್ತಿಲ್ಲ,

‘ಹೆಣ್ಮಕ್ಕಳು ಸುಮ್ಮ ಸುಮ್ನೆ ನಗೂದು, ಗಂಡುಮಕ್ಕಳು ಸುಮ್ಮಸುಮ್ನೆ ಅಳೂದೂ’ ಎರಡೂ ಭಾಳ ಡೇಂಜರ್ರು, ಇಂಥವ್ರನ್ನ ನಂಬಬಾರದು ಅಂತಾರ ತಿಳಿತಾ?’ ಅಂದೆ.

‘ಅಂದ್ರಽ ನಾ ಸುಳ್ಳ ಹೇಳ್ತಿನಿಂತ ತಿಳಿದಿ ಏನು?’ ಗುಂಡ್ಯಾ ಅಂದ.

‘ಏಽ ಗುಂಡ್ಯಾ, ನೀನು ರೋಡ್ ರೋಮಿಯೋನ ಗತ್ಲೆ ಮಾತಾಡೂದು ಬಂದ್ ಮಾಡು. ಆಮ್ಯಾಲ ಮುಂದಿನಂದೆಲ್ಲಾ ಸುದ್ದಿ ಮಾತಾಡೂಣು. ಅಲ್ಲಾ, ಎಂಥ ಮಳ್ಳ ಇದ್ದೀದಿ ನೀನು? ಆ ಜಯಾಪತಿಯೇ ಕರೋಡಪತಿ ಆಗ್ತಾನಂತಽ ಇಡೀ ದೇಶಕ್ಕೆ ಗೊತ್ತೈತಿ, ಜಯಾಪತಿಯ ಎಬಿಸಿಎಲ್ ಹಳ್ಳಾ ಹಿಡಿತು, ನೂರಾ ಎಂಟು ಆಪಾದನೆಗಳು ಬಂದ್ವು, ಆಗ ಈ ಕರೋಡಪತಿ ಪ್ಲ್ಯಾನ್ ಹಾಕಿದ್ರು ತಿಳಿತಾ? ‘ಜನಮರುಳೋ ಜಾತ್ರೆ ಮರುಳೊ’ ಅನ್ನೂ ಹಂಗ ಎಲ್ಲಾರೂ ಲಂಬೂಜಿ ಮೋಡಿಗೆ ಸಿಗಬಿದ್ದಾರ? ‘ಸ್ಟಾರ್’ ಕೆಳಗ ಇಳ್ಕೋತ ಹೊಂಟಿತ್ತು, ‘ಝೀ’ನ್ನ ಬಗ್ಗ ಬಡಿಬೇಕಂತ ಈ ‘ಮಿಲಿಯಾನಿಯರ್’ ರೋಡಿಗೆ ಬಂದ, ಅದು ಬಂದಿದ್ದು ನಿಮ್ಮಂಥವ್ರನ್ನ’ ರೋಡ್‌ಭಾಪ್’ ಮಾಡೂಸಲುವಾಗೇ ತಿಳಿತಿಲ್ಲ.... ಎಂದು ಉಗಿಯುತ್ತಲೇ ಇದ್ದೆ.

‘ಅಲ್ರಿ ಧಣ್ಯಾರ, ಹಾದ್ಯಾಗ ಆ ‘ಜಿಗ್ರೇ’ ಭೆಟ್ಟಿ ಆಗಿದ್ದಾ, ಅಂವಾ ಒಂದು ನಮೂನಿ ಯಕ್ಷಪ್ರಶ್ನೆ ಗತ್ಲೆ ಮಾತಾಡಿದ್ನಲ್ರಿಽ, ಅಲ್ರಿ ಆ ಜಿಗ್ರೇ ಅಂತಾನ, ‘ಹುಚ್ಚಿಗೆ ಲಗ್ನಾ ಮಾಡೂದೂ ಒಂದೇ, ರೊಕ್ಕದ ಬೆನ್ನು ಹತ್ತಿ ಮಂಗ್ಯಾ ಆಗಿ, ಸೀತಾಪತಿ ಗತ್ಲೆ ಕಾಡು ಸುತ್ತೂದು ಒಂದೇ’ ಅಂತ ಹಂಗಂದ್ರಽ ಏನ್ರಿ?’ ಅಂದಳು ಮಡದಿ.

‘ಹೌದ್ರಿ ವೈನಿಜೀ, ಮೊನ್ನೆ ನನ್ಗೂ ಹಂಗೇ ಅಂದಾ ಆ ಜಿಗ್ರೆ, ಬಹುಶಃ ಅವ್ನಿಗೆ ‘ಕಲಿಯುಗದ ಕಾಮಧೇನು ಪಾಕೀಟಪತಿ’ ಈ ಮಾತು ಹೇಳಿರಬೇಕ್ರಿ!’ ಎಂದು ಗುಂಡ್ಯಾ ಆಕೆಯ ಪ್ರಶ್ನೆಗೆ ಉತ್ತರಿಸಿದ.

ಈಗ ಉತ್ತರಾ ಕೊಡೂದು, ಪ್ರಶ್ನಾವಳಿ ತಯಾರು ಮಾಡೋದು, ಈ ಎಲ್ಲಾದರಾಗೂ ಗುಂಡ್ಯಾ ಭಾಳ Expert ಆಗ್ಯಾನಂತ ಸುದ್ದಿ ಬಂದಿತ್ತು. ಈಗ ಅದು ‘ಬರೋಬರ’ ಅಂತ ಅನಸ್ತು.

‘ಅಲ್ಲಪಾ ಗುಂಡ್ಯಾ ನಮ್ಮ ಬೀchi ಅವರು ಒಂದು ಮಾತು ಹೇಳ್ಯಾರ ಗೊತ್ತೈತೇನು ನಿನಗ?’ ಅಂದೆ, ಅಲ್ಲಾ ನಿನಗೆ ಹ್ಯಾಂಗ್ ಗೊತ್ತಿರಬೇಕಪಾ ಜಗಪತಿ, ಬರೇ ನಿನ್ನ ಲಕ್ಷ್ಯ ಈಗ ಕರೋಡ ಕರೋಡ ಮೇ ಹೈ! ಎಂದೆ ಮತ್ತೆ.

‘ಏನಪಾ ನಿಂದೊಂದು, ಏನು ಹೇಳೂದು ಅದಽ ಸೀದಾಸಾಫ್ ಹೇಳು, ನನಗೆ ಬರೇ tingle ಮಾಡೂದ್ರಾಗೆ ನಿನ್ನ ಶಕ್ತಿ ಎಲ್ಲಾ ವ್ಯಯ ಮಾಡಬೇಡ ಗುರುವೇ?’ ಅಂತ ಗುಂಡ್ಯಾ ಬೇಸರಿಸಿದ.

‘ಬೀchi ಹೇಳ್ಯಾರ, ‘ಅಯ್ಯೋ ಮೂರ್ಖಾ, ಹೆಣ್ಣೂ ಸುಳ್ಳಾಡಬಾರದಾದರೇ ಆ ಸುಳ್ಳೆಂಬುದು ಇನ್ನು ಬದುಕಬೇಕಾದರೂ ಎಲ್ಲಿ? ಸತ್ಯದೊಂದಿಗೇ ಸೃಷ್ಟಿಯಾದ ಸುಳ್ಳು ಉಪಯೋಗವಾಗದೆ ತಿಪ್ಪೆಯಲ್ಲಿ ಬಿದ್ದು ಕೊಳೆತು ನಾರಬೇಕು? ಸತ್ಯಕ್ಕೆ ಬೆಲೆ, ಗೌರವ ತಂದುಕೊಟ್ಟದ್ದು ಯಾವುದು? ಸುಳ್ಳೇ ಅಲ್ಲವೇ? ಸುಳ್ಳಿರದಿದ್ದರೇ ಹರಿಶ್ಚಂದ್ರನ ಸತ್ಯ ಎಲ್ಲಿರುತ್ತಿತ್ತು?’ ಅಂತ. ಅಲ್ಲಾ ಗುಂಡ್ಯಾ, ಖರೆ ಹೇಳು, ಎಷ್ಟು ಬರೋಬರ ಹೇಳ್ಯಾರ ಬೀchi, ಹಿಂಗೇನಪಾಂತಂದ್ರಽ ಸತ್ಯದ ತಲೆಯ ಮೇಲೆ ಹೊಡೆಯುವಂತಹ ಬುದ್ಧಿವಂತರಿರುವ ತನಕಾ ಕರೋಡಪತಿಗಳನ್ನ ಸೃಷ್ಟಿಸುವವರು, ನೀವು ಶೀಘ್ರದಲ್ಲಿಯೇ ಲಕ್ಷಾಧೀಶರಾಗಬೇಕೆ ಅಂತ ಕೇಳುವವರೂ, ಇದ್ದೇ ಇರ್ತಾರ. ಸೆಕೆಂಡಿಗೆ Star ದವರು ಲಕ್ಷ ಲಕ್ಷ ಬಾಚ್ತಾರ, ನಿಮ್ಮ ಲಕ್ಷೀಪತಿ’ನ್ನ ಮಾಡ್ತೀನಂತ ಹೇಳಿ ತಂದು ಕೂಡಿಸಿ, ಕೂಡಿಸಿ, ಕಾಯ್ಲಿಕ್ಕೆ ಹಚ್ಚಿ ‘ಶೋಕಪತಿ’ನ್ನ ಮಾಡ್ತಾರ! ಇದ್ಕ ಇಂಥಾ ಕಿತಾಪತಿ ಮಾಡವ್ರಿಗೆ ಏನಂತೀರಿ ರಾಣಿ ಸಾಹೇಬ್?’ ಎಂದೆ.

‘ಹೌದ್ರಿ ಹೌದು ಖರೇ ಐತಿ’, ಕರೋಡಪತಿ ಜಯೆಯ ಪ್ರೀತಿಧಾರೆಯೇ, ಅರಿಷಿಣದ ನೀರೇ ‘ಅಭಿಷೇಕ್’ವಲ್ಲವೆ?’ ಎಂದು ಕಾವ್ಯಾತ್ಮಕ style ದಲ್ಲಿ ಹೇಳಿದ ಸಖಿ, ಮತ್ತೆ ಹೇಳಿದಳು, ‘ಅಂದ್ಹಂಗಽ ನಿಮಗ ಆ ದಖನಿಪತಿ, ಅದೇ ಬ್ಲೀಚಿಂಗ್ ಪೌಡರ್ ಕಿಂಗ್, ದಖನಿಪತಿ, ಹ್ಯಾಂಗ ಪತಿ-ಪತ್ನಿ ಮಾಡ್ಲಿಕ್ಕೆ ಹೋಗಿ, ಹೈರಾಣಾಗಿದ್ದ ಕಥಿ ಹೇಳ್ತಿನಿ ಕೇಳ್ರಿಽ, ‘ನಮ್ಮ ದಖನಿಪತಿ ಯಥಾ ಪ್ರಕಾರ ಬ್ಲೀಚಿಂಗ್ ಪೌಡರ್ ಟೆಂಡರ್ಕ್ ಹೋಂಟಿದ್ದಾ. ದೇವತ್ತೂರದಾ ಅಷ್ಟರಾಗೆ ಒಂದು ಅಂತರಜಾತಿ ಲಗ್ನದ ಗ್ಯಾಂಗ್ ತುಳಜಾಪುರಕ್ಕೆ ಲಗ್ನಾ ಮಾಡ್ಕೊಂಡ ಬರ್ಲಿಕ್ಕೆ ಹೊಂಟಿತ್ತು. ಬಸ್‌ದಾಗ ಈ ದಖನಿಪತಿನ್ನ ನೋಡಿ, ಜೋರಾಜುಲ್ಮಿಲ್ಲೇ ಇವ್ನೂ ಕರ್‍ಕೊಂಡು ಹೋದ್ರು. ಲಗ್ನಾ ಆಯ್ತು, ಇಂವ್ನನ್ನ ಹುಡುಗಿ ಅಣ್ಣ ಅಂದ್ರು, ಇದೊಂದು ಭಾವೈಕ್ಯತಾ ಮದುವಿ, ಲವ್‌ಮ್ಯಾರೇಜ್ ಎಲ್ಲಾ ಇದ್ದಂಗ ಇತ್ತು., ಆಯ್ತು ಲಗ್ನಾ ಆಯ್ತು, ರಿಜಿಸ್ಟ್ರೇಶನ್ ಆಯ್ತು. ಸಂಸಾರ ಶುರು ಆಯ್ತು. ಆದ್ರಽ ತಕಲೀಫ್ ಯಾವಾಗ ಶುರು ಆಯ್ತಂದ್ರ, ‘ಲಗ್ನ ಆದ ನಾಲ್ಕು ತಿಂಗಳಿಗೆ ಹುಡುಗಾ-ಹುಡುಗಿಗೆ ಝಟಾಪಟಿ ಶುರು ಆಯ್ತು, ಹುಡುಗಿ ಕೋರ್ಟಿಗೆ ಹೋಗ್ತಿನಿ ಡೈವರ್ಸ್ ತೊಗೋತಿನಿ ಅಂದ್ಲು, ದಖನಿಪತಿ ಬೆವೆತಾ, ಯಾಕಂದ್ರಽ ಹುಡುಗಿ ಅಣ್ಣ ಆಗಿ ಕೋರ್ಟಿನ್ಯಾಗ ಸಾಕ್ಷಿ ಹೇಳ್ಬೇಕಲ್ರಿ!

ಅಂತೂ ಹಾಂಗಽ ಹೀಂಗ ಮಾಡಿ ಡೈವರ್ಸ್ ಆಗೂದನ್ನ ತಪ್ಪಿಸಿ, ಹುಡಗ್ಗ ಒಂದು ನೌಕರಿ ಕೊಡ್ಸಿದಾ, ಈಗ ಅವ್ರು ಕಾರವಾರದಾಗ ಆರಾಂ ಅದಾರು. ಹ್ಯಾಂಗದರಿ ಈ ಭಾವೈಕ್ಯಪತಿಯ ಸಾಹಸ?’ ಅಂದಳು ಸಖಿ.

‘ಏಽ ಆ ಸ್ಟಾರ್ TV ಕಾರ್ಯಕ್ರಮಕ್ಕ ನಾ ಹೋಗ್ಬೇಕರಿ ಹೊತ್ತಾಯ್ತು, ನೀವು ಬರಂಗ ಇತ್ತಂದ್ರಽ ಜಲ್ದಿ ಬರ್ರಿ, ನಾ ಅಂತೂ ಹೋಗ್ತೀನಿ ನೋಡ್ರಿ!’ ಅಂತ ಖರೆಖರೇನೇ ಕರೋಡ್‌ಪತಿ Style ದಾಗ ಗುಂಡೂ ಹೊಂಟೇಹೋದ!!

ಅರೇ ಗುಂಡ್ಯಾಗ ಹೇಳೂದೇ ಮರತೇವಲ್ರಿಽ, ‘ಕರೋಡಪತಿ ಅಗ್ದೀ ಸರಳ ಆಗ್ಬೇಕಂದ್ರಽ ಮಠಾಧಿಪತಿ’ ಜಲ್ದಿ ಆಗಂತಽ!!’

■

ಅಭದ್ರ



ಹಣ, ಆಸ್ತಿ, ಎಲ್ಲವೂ ಈಗ
ಅಭದ್ರದ ಆಟ
ಸರ್ಕಾರದ ನೋಟ
ಸಿ.ಓ.ಡಿ. ಯವರ ಕಾಟ
ಹಾಗಾಗಿ ಇದ್ದದ್ದನ್ನು
ಹೂತಿಟ್ಟಿದ್ದೇನೆ
ಸಮುದ್ರದಾಳದಲ್ಲಿ

– ಟಿ.ಮಹಾಬಲೇಶ್ವರ ಭಟ್ಟ,
ಸಾಗರ.

ಮೊದಲು ಮಾನವನಾಗು

• ಸುಧನ್ವಾ ದೇರಾಜೆ
ಅಂಚೆ : ಐವರ್ನಾಡು
ಸುಳ್ಯ ತಾಲೂಕು, ದ.ಕ-574245.


ಬದುಕಿನಲ್ಲಿ ಭಾವನೆಗಳಲ್ಲೇ ಮುಳುಗಿರುವವನು ಪ್ರಾಣಿಯಾಗುತ್ತಾನೆ. ಬುದ್ಧಿಯನ್ನೇ ಆಶ್ರಯಿಸಿರುವವನು ರಾಕ್ಷಸನಾಗುತ್ತಾನೆ. ಆದರೆ ಪ್ರಾಣಿಗಿಂತ ರಾಕ್ಷಸನೇ ಅಪಾಯಕಾರಿಯಲ್ಲವೆ?



ಧರಿತ್ರಿಯನ್ನು ಹೊಸ ರೀತಿಯಲ್ಲಿ ಅಲಂಕರಿಸಿ ಅದಕ್ಕೆ ಅದ್ಭುತ ಸೌಂದರ್ಯವನ್ನು ನೀಡಿದ ಕೀರ್ತಿ ಮಾನವರಿಗೆ ಸಲ್ಲುತ್ತದೆ. ಯಾವುದರ ಪರಿವೆಯೂ ಇಲ್ಲದಿದ್ದ ಪ್ರಾಕೃತಿಕ ಸೌಂದರ್ಯಕ್ಕೆ ಸ್ಪಂದಿಸಿ ಹೊಸ ಬದುಕನ್ನು ನಾವು ಕಂಡುಕೊಂಡಿದ್ದೇವೆ. ಸೌಂದರ್ಯವನ್ನು ಯಾವನೇ ಒಬ್ಬ ಆಸ್ವಾದಿಸಿದಾಗ ಅದಕ್ಕೊಂದು ಸಾರ್ಥಕತೆ ದೊರಕುತ್ತದೆ. ಆದರೆ ಈ ಜಗತ್ತಿನ ಸೃಷ್ಟಿಕರ್ತ ದೊಡ್ಡದೊಂದು ತಪ್ಪೆಸಗಿದ್ದಾನೆ. ಮಾನವನಿಗೆ ಬುದ್ಧಿಶಕ್ತಿಯೊಂದನ್ನು ಉದಾರವಾಗಿ ಕೊಟ್ಟುಬಿಟ್ಟಿದ್ದಾನೆ ! ಹೊಸ ಭೂಮಿಯನ್ನೆ ಸೃಷ್ಟಿಸಬಲ್ಲೆನೆಂಬ ಕೊಬ್ಬು ನಮಗೆ ಬರುವಂತೆ ಮಾಡಿದ್ದಾನೆ! ಬಹುಶಃ ಈ ಮೆದುಳನ್ನು ಕೊಡುವುದರ ಬದಲು ಎರಡು ಹೃದಯಗಳನ್ನೇ ಕೊಡುತ್ತಿದ್ದರೆ ಒಳ್ಳೆಯದಿತ್ತೇನೋ ಎಂದೆನಿಸುತ್ತದೆ. ಯಾಕೆಂದರೆ ನಾವು ಹುಟ್ಟಿದಾಗ, ಬೆಳೆಯುವಾಗ ಬೇರುಗಳು ಆಳಕ್ಕಿಳಿದು ಭದ್ರಗೊಳ್ಳಬೇಕು. ಆಗ ಮಾತ್ರ ಟೊಂಗೆಗಳು ಮುಗಿಲೆತ್ತರಕ್ಕೆ ಬೆಳೆದು ವಿಶಾಲ ವಿಶ್ವದಲ್ಲಿರುವ ಸತ್ಯವನ್ನು ನೋಡಬಲ್ಲವು ಮತ್ತು ಪಡೆಯಬಲ್ಲವು. ಆದರೆ ಮನುಷ್ಯರಾಗಿ ಜನಿಸಿದ ನಾವು ಮನುಷ್ಯರಾಗಿಯೇ ಬೆಳೆಯಬೇಕು ಎಂಬುದು ಹಲವರಿಗೆ ಅರ್ಥವಾಗದಿರುವುದು ವಿಪರ್ಯಾಸ.

ಬದುಕಿನಲ್ಲಿ ಭಾವನೆಗಳಲ್ಲೇ ಮುಳುಗಿರುವವನು ಪ್ರಾಣಿಯಾಗುತ್ತಾನೆ. ಬುದ್ಧಿಯನ್ನೇ ಆಶ್ರಯಿಸಿರುವವನು ರಾಕ್ಷಸನಾಗುತ್ತಾನೆ. ಆದರೆ ಪ್ರಾಣಿಗಿಂತ ರಾಕ್ಷಸನೇ ಅಪಾಯಕಾರಿಯಲ್ಲವೆ? ಈ ಬುದ್ಧಿ ಭಾವಗಳನ್ನು ಹೊಳೈಸಿಕೊಂಡು ಹೋಗಲು ಕುಟುಂಬ ಪದ್ಧತಿಯನ್ನು ತಿಳಿದವರು ನಮ್ಮಲ್ಲಿ ರೂಪಿಸಿದ್ದಾರೆ. ದುರದೃಷ್ಟವಶಾತ್ ಈಗಿನ ಹಲವು ಬುದ್ಧಿವಂತರಿಗೆ ಮಾನವನಾಗುವುದು ಬೇಕಿಲ್ಲ. ಒಬ್ಬ ಒಳ್ಳೆಯ ಹುಡುಗ, ಒಳ್ಳೆಯ ತಂದೆ-ತಾಯಿಯಾಗುವುದು ಅವರಿಗೆ ಬೇಡ ಅವರ ಆಸೆಗಳೆಂದರೆ ಸಾಹಿತಿ, ಕಲಾವಿದ, ವಿಜ್ಞಾನಿಯೋ ಅಥವಾ ಇನ್ನಾವುದೋ ಆಗುವುದು, ಆದರೆ ಬುದ್ಧಿಯ ಪ್ರಾಬಲ್ಯವಿಲ್ಲದ ಜನರಿಗೆ ಮನುಷ್ಯ ಸೃಷ್ಟಿಸಿದ ಐಷಾರಾಮದ, ಜನಪ್ರಿಯತೆಯ ಆಸೆಯಿಲ್ಲ. ಈಗ ಜನಸಾಮಾನ್ಯರೆಂದು ಕರೆಸಿಕೊಳ್ಳುವ ಅವರಿಗೆ ಮೊತ್ತಮೊದಲು ಬೇಕಾದದ್ದು ಸುಖೀ ಮಾನವ ಜೀವನ. ಅದಕ್ಕಾಗಿ ಸುಖೀ ಕುಟುಂಬ. ಅವರು ವಿಚಾರವಿಲ್ಲದೆ ಅನುಭವದ ಆಳಕ್ಕೆ ಇಳಿದಾಗ ಅಮೂರ್ತವಾಗಿದ್ದ ವಿಷಯಗಳೆಲ್ಲ ಗರಿಗೆದರಿ ಹೃದಯ ತಟ್ಟುವುದು ಖಂಡಿತ. ಆದರೆ ಹಲವು ಬುದ್ಧಿವಂತರು ಅನುಭವಕ್ಕೂ ನಿರೂಪಣೆ ಹುಡುಕುವ ಮೂರ್ಖರು, ಒಳ್ಳೆಯ ಮನುಷ್ಯನಾಗದೆ ವಿಜ್ಞಾನಿ, ಸಾಹಿತಿಯೋ ಅಥವಾ ಇನ್ನಾವುದೋ ಆಗುವುದು ತಮ್ಮ ದೌರ್ಬಲ್ಯವನ್ನು ಮರೆಮಾಚಲು ಹಾಕಿಕೊಳ್ಳುವ ಮುಖವಾಡ ಎಂಬುದನ್ನು ನಾವು ತಿಳಿಯುವುದು ಅಗತ್ಯ.

ಈಗಿನ ಪ್ರಪಂಚದಲ್ಲಿ ವಿಜ್ಞಾನಿಯೋ, ರಾಜಕಾರಣಿಯೋ,




ಸಾಹಿತಿಯೋ ಆಗುವುದು ಸುಲಭ. ಆದರೆ ನಮ್ಮ ರಾಗದ್ವೇಷಗಳನ್ನು ಹಿಡಿತದಲ್ಲಿಟ್ಟು ಮಾನವನಾಗುವುದು ಸುಲಭವಲ್ಲ. ಒಬ್ಬ ವ್ಯಕ್ತಿ ಯಕ್ಷಗಾನದಲ್ಲಿ ಒಮ್ಮೆ ರಾಮನಾಗುತ್ತಾನೆ. ಮರುದಿನ ರಾವಣನೂ ಆಗುತ್ತಾನೆ. ಆದರೆ ತನ್ನ ನಿಜ ಜೀವನದಲ್ಲಿ ಆತ ರಾಮನಾಗಿರದಿದ್ದರೂ ರಾವಣನಾಗಬಾರದಲ್ಲವೆ? ಹಾಗಿದ್ದರೂ ಸಮಾಜದಲ್ಲಿನ ತಮ್ಮ ವಿವಿಧ ಪಾತ್ರಗಳಿಂದಾಗಿ ತಮ್ಮಲ್ಲೇ ಬುದ್ಧಿ ಸ್ಥಿಮಿತ ಕಳೆದು ಹೋಗುತ್ತದೆ ಎಂಬುದು ಕೆಲವರ ಅಭಿಪ್ರಾಯ. ಹಾಗಿದ್ದಲ್ಲಿ ಅದು ನಿಜವಾಗಿಯೂ ದುರಂತ. ಯಾಕೆಂದರೆ ಸುಂದರ ಜಗತ್ತಿನ ನಿರ್ಮಾಣಕ್ಕೆ ಬೇಕಾದದ್ದು ಸು-ಮನಸ್ಸಿನ ಮನುಷ್ಯರೇ ಹೊರತು ಸಾಹಿತಿ, ವಿಜ್ಞಾನಿ, ರಾಜಕಾರಣಗಳಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಯಾವನೇ ಒಬ್ಬ ಶಾಲೆಗೆ ಹೋಗಲು ಆರಂಭಿಸಿದಾಗ ಆತನ ಜವಾಬ್ದಾರಿಯೂ ಆರಂಭವಾಗುತ್ತದೆ. ನಾನು ಹೇಳುತ್ತಿರುವುದೆಂದರೆ, ಆ ಸಮಯದಲ್ಲಿ ಆತ ಒಳ್ಳೆಯ ವಿದ್ಯಾರ್ಥಿಯಾಗುವುದಕ್ಕಿಂತ ಹೆಚ್ಚಾಗಿ ಒಳ್ಳೆಯ ಹುಡುಗನಾಗಬೇಕು. ಮುಂದೆ ಆತ ದೊಡ್ಡ ಅಧಿಕಾರಿಯಾಗಿ ಪತ್ನಿಯನ್ನು ಹಣದ ರಾಶಿಯಲ್ಲೇ ಕುಳ್ಳಿರಿಸಬಹುದು. ಆದರೆ ಆತ ಮೊದಲು ಉತ್ತಮ ಗೃಹಸ್ಥನಾಗಬೇಕು. ಕೌಟುಂಬಿಕ ವ್ಯವಸ್ಥೆಗೆ ನಮ್ಮಲ್ಲಿ ದೊಡ್ಡ ಸ್ಥಾನವಿದೆ. ಯಾಕೆಂದರೆ ಅದು ಮೊತ್ತಮೊದಲು ಮಾನವತೆಯನ್ನು ಬೋಧಿಸುತ್ತದೆ. ಆದರೆ ಇದಿಲ್ಲದಿರುವ ಪಾಶ್ಚಾತ್ಯ ದೇಶಗಳಲ್ಲಿ ಮತ್ತೆ ಮಾನವರಾಗುವ ಪ್ರಯತ್ನಗಳು ಆರಂಭವಾಗಿರುವುದನ್ನು ನಾವು ಗುರುತಿಸಬಹುದು. ಹಾಗಾಗಿ ಇಂದು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಹಡಗಿನ ನಾವಿಕ ಹಡಗು ಸರಿಯಾಗಿ ಸಾಗುತ್ತಿಲ್ಲವೆಂದರೆ ಹಡಗನ್ನೇ ದೂರುವುದಲ್ಲ. ತಾನು ನಡೆಸುತ್ತಿರುವ ರೀತಿಯನ್ನು ಗಮನಿಸಬೇಕಲ್ಲವೆ? ಒಬ್ಬ ವ್ಯಕ್ತಿ ತನ್ನಲ್ಲೇ ಪರಿವರ್ತನೆ ತರಬೇಕಿದ್ದರೆ ಹೆಚ್ಚಿನ ವಿಚಾರಗಳನ್ನು, ನಂಬಿಕೆಗಳನ್ನು ಹೊಂದುವುದಲ್ಲ. ಖ್ಯಾತ ಮಾನವತಾವಾದಿ ಜಿಡ್ಡು ಕೃಷ್ಣಮೂರ್ತಿ ಹೇಳುತ್ತಾರೆ 'ಈ ಜಗತ್ತೆಂದರೆ ನಾವು ನೀವು ಸ್ಥಾಪಿಸಿರುವ ಅಥವಾ ಸ್ಥಾಪಿಸಲಿಚ್ಚಿಸಿರುವ ಸಂಬಂಧಗಳು. ಆದ್ದರಿಂದ ಸಮಸ್ಯೆ ಜಗತ್ತಲ್ಲ. ನಾವು-ನೀವು. ಹಾಗಾಗಿ ನಮ್ಮ ಸುತ್ತಲಿನ ರೂಪ ನಮ್ಮ ಅಂತರಂಗದ್ದೇ ಪ್ರತಿರೂಪ. ಆದ್ದರಿಂದ ಈ ಹೊರಗಿನದ್ದನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ಒಳಗಿನದ್ದನ್ನು ಅರ್ಥಮಾಡಿಕೊಳ್ಳಬೇಕು. ಈ ಅಂತರಂಗವನ್ನು ಅರಿಯುವುದು ಬಹಿರಂಗದ ವಾಸ್ತವತೆಯನ್ನು ಅರಿಯುವುದರಿಂದ ಮಾತ್ರ ಶಕ್ಯ'.

ಉದಾಹರಣೆಗೆ ಇಂದಿನ ಕ್ರಿಕೆಟ್‌ನ್ನು ಗಮನಿಸಿದಾಗ ಅಲ್ಲೂ ಮಾನವೀಯತೆ ಕಡಿಮೆಯಾಗುತ್ತಿರುವುದು ಕಾಣುತ್ತಿದೆ. ಒಬ್ಬ ಬೌಲರ್‌ಗೆ ಬ್ಯಾಟ್ಸ್‌ಮನ್‌ನನ್ನು ಹೇಗಾದರೂ ಮಾಡಿ ಔಟ್ ಮಾಡುವುದೇ ಉದ್ದೇಶವಾಗಿರುತ್ತದೆ. ಅದು ಆತನ ದೇಹಕ್ಕೆ ಚೆಂಡನ್ನು ಬೇಕೆಂದೇ ಎಸೆದು ಗಾಯಗೊಳಿಸುವುದರಿಂದ, ಬೈಗುಳಗಳಿಂದ ಆತನನ್ನು ಉದ್ರೇಕಿಸುವುದರಿಂದ ಇತ್ಯಾದಿ. ಯಾಕೆಂದರೆ ಆತ ಆ ಸಮಯದಲ್ಲಿ ಒಬ್ಬ ಕೆಟ್ಟ ಬೌಲರ್ ಮಾತ್ರ. ಮಾನವೀಯತೆ ಅಲ್ಲಿರದಿರುವುದೇ ಇದಕ್ಕೆಲ್ಲಾ ಕಾರಣ. ಅಲ್ಲದೆ ಮನುಷ್ಯತ್ವ ಇಲ್ಲವಾಗುವುದಕ್ಕೆ ಮುಖ್ಯ ಕಾರಣ ದುರಾಸೆ. ಬದುಕನ್ನು ವಿಕೃತವಾಗಿಸಿ ಆಸ್ವಾದಿಸಲು ಆಸೆ ಪಡುವ ಮನುಷ್ಯ ತನ್ನನ್ನೇ ತಾನು ಮರೆಯುತ್ತಾನೆ. ಒಬ್ಬ ಕ್ರೀಡಾಪಟುವಿನ ಬಳಿ ಹೋದರೆ ಕ್ರೀಡಾತಜ್ಞನಂತೆ ವರ್ತಿಸುವುದು, ಸಾಹಿತಿಯ ಬಳಿ ಹೋಗಿ ತಾನು ಮಹಾನ್ ಓದುಗ ಎನ್ನುವುದು ಇಂದಿನ ಹಲವರ ಕಾರ್ಯ. ಇಂದು ವಿಶ್ವದಲ್ಲೆಡೆ ಹೆಚ್ಚಿರುವ ಮತೀಯ ಗಲಭೆಗಳು ಮಾನವೀಯತೆ ನಮ್ಮಲ್ಲಿ ನಶಿಸುತ್ತಿರುವುದನ್ನು ಸ್ಪಷ್ಟವಾಗಿ ತೋರಿಸುತ್ತವೆ. ಹಾಗೆಂದು ಅವಸರದಲ್ಲಿ 'ಜಾತಿ ಪದ್ಧತಿ ರದ್ದಾಗಲಿ', 'ಎಲ್ಲರೂ ಸಮಾನರಾಗಲಿ' ಎಂದು ಘೋಷಿಸುವುದಲ್ಲ' ಅದರ ಬದಲು ಪ್ರತಿಯೊಬ್ಬರೂ ಹೃದಯವಂತ ಮಾನವರಾಗೋಣ ಎಂಬ ಘೋಷಣೆ, ಆಕಾಂಕ್ಷೆ ಒಂದಿದ್ದರೆ ಜಾತಿ, ಅಸಮಾನತೆ ಯಾವುವೂ ನಮಗೆ ತೊಡಕು ಎನಿಸಲಾರವು.

ಒಟ್ಟಿನಲ್ಲಿ ನಾವು ರಾಜಕಾರಣಿ, ವಿಜ್ಞಾನಿ, ಸಾಹಿತಿ ಏನೇ ಆದರೂ ನಾವು ಮಾನವರು ಎಂಬ ಅರಿವು ನಮ್ಮಲ್ಲಿರಬೇಕು. ಒಳ್ಳೆಯ ಮನುಜನಾಗಲು ಬುದ್ಧಿ, ವಿಚಾರ - ಹೃದಯಭಾವ ಇವುಗಳ ನಡುವೆ ಅನ್ಯೋನ್ಯತೆಯಿರಬೇಕು. ಯಾವಾಗ ತನಗೆ ತನ್ನಲ್ಲಿ, ತಮ್ಮ ಮನೆಯಲ್ಲಿ ಹೆಚ್ಚು ಅನ್ಯೋನ್ಯತೆ ಬೆಳೆಯುತ್ತದೋ ಆಗ ಸಮಾಜದ ಜೊತೆಗೂ ಆಪ್ತವಾಗಿ ಬೆಳೆಯುವುದು ಸುಲಭವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬನೂ ದೈಹಿಕವಾಗಿ, ವ್ಯಾವಹಾರಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಯಾಗುವ ಮೊದಲು ಮಾನಸಿಕವಾಗಿ ಪ್ರಬುದ್ಧನಾಗಬೇಕು. ತನಗೆ ಲೋಕ ಹೇಗೆ ಕಾಣುತ್ತದೆ ಎಂಬುದಕ್ಕಿಂತ ಹೆಚ್ಚಾಗಿ ಲೋಕಕ್ಕೆ ತಾನು ಹೇಗೆ ಕಾಣುತ್ತೇನೆ ಎಂಬುದನ್ನು ತಿಳಿಯಬೇಕು. ಮಂಗನಿಂದ ಮಾನವ ಎಂದ ನಾವು ಮುಂದೆ ರಾಕ್ಷಸರಾಗಬಾರದು. ಅತಿಮಾನುಷವಾದದ್ದನ್ನು ಸಾಧಿಸಿರುವ ನಾವು ಕಳೆದುಹೋಗಿರುವ ನಮ್ಮ ಮನುಷ್ಯತ್ವವನ್ನು ಹುಡುಕಿ ಸಂರಕ್ಷಿಸಬೇಕು. ಮೊದಲು ಹೃದಯವಂತ ಮಾನವರಾಗಿ ಅವರ ಅರಿವಿನಲ್ಲಿ ಮುಂದಿನದ್ದಕ್ಕೆ ತೊಡಗಬೇಕು. ಅಲ್ಲವೆ?

■



ಹೊಗಳಿಕೆ


ಕಳ್ಳತನದ ಆರೋಪದ ಮೇಲೆ ಒಬ್ಬನನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಿದ್ದರು. ವಾದ ವಿವಾದಗಳು ನಡೆದ ನಂತರ ನ್ಯಾಯಾಧೀಶರು ಅಪರಾಧಿಯನ್ನುದ್ದೇಶಿ ಹೇಳಿದರು; 'ಹಾಗಾದ್ರೇ ನೀನು ಆ ದಿನ ರಾತ್ರಿ ಬಹಳ ಧೈರ್ಯದಿಂದ ಹಾಗೂ ಚಾಲೂಕುತನದಿಂದ ಆ ಮನೆಗೆ ನುಗ್ಗಿದೆ ಹಾಗೂ ಬಹಳ ಸುಲಭವಾಗಿ ತಿಜೋರಿಯನ್ನು ತೆಗೆದು............'

ಅವರ ಮಾತನ್ನು ಮಧ್ಯದಲ್ಲೆ ತುಂಡರಿಸಿ ಕಳ್ಳ ಹೇಳಿದ 'ತುಂಬಾ ಹೊಗಳಬೇಡಿ ಸಾರ್......, ನನಗೆ ಸಂಕೋಚವಾಗುತ್ತೆ.'

– ಜಗದೀಶ ಗಂ.ದಲಭಂಜನ, ಗುಳೇದಗುಡ್ಡ.

ನಗು ಮೊಗಕೆ ಭೂಷಣವಷ್ಟೇ ಅಲ್ಲ....

• ರಾಜಶ್ರೀ ವಿನಾಯಕ ಗುಮಾಸ್ತೆ,
ವಾಟರ್ ಟ್ಯಾಂಕ್ ಹತ್ತಿರ, ಗದಗ ರೋಡ್,
ಬಸವನಗರ, ಕೊಪ್ಪಳ- 583231.



ನಗುವುದು ಸಹಜ ಧರ್ಮ ನಗಿಸುವುದು ಪರಧರ್ಮ, ನಗುತ ಕೇಳುತ ನಗುವುದತಿಶಯದ ಧರ್ಮ. ನಗುವ ನಗಿಸುವ ನಗಿಸಿ ಬಾಳುವವರದು ಬುಗೆ ನೀನು ಬೇಡಿಕೊಳ್ಳೋ - ಮಂಕುತಿಮ್ಮ ಎಂದು ಸುಪ್ರಸಿದ್ಧ ಕವಿ ಡಿ.ವಿ.ಜಿಯವರು ವ್ಯಾಖ್ಯಾನವನ್ನು ನೀಡಿದ್ದಾರೆ. ಹೌದು ನಿಜ, ನವರಸಗಳಲ್ಲಿಯೇ ಅತ್ಯಂತ ಪ್ರಮುಖ ಸ್ಥಾನ ಹಾಸ್ಯಕ್ಕಿದೆ. ಹಾಸ್ಯವೆಂಬ ರಸದ ಒಡಲಿನಿಂದ ಹೊರಹೊಮ್ಮಿ ಬರುವ ನಗು ಬದುಕಿನಲ್ಲಿ ಎದುರಾಗುವ ಕಠಿಣ ಸಮಸ್ಯೆಗಳನ್ನು ಅಲ್ಲದೆ ಜೀವನದಲ್ಲಿ ಎದುರಾಗುವ ನಿರುತ್ಸಾಹ, ಚಿಂತೆ, ಆತಂಕ, ತಳಮಳ ಇನ್ನು ಅನೇಕ ಸಂಕಷ್ಟಗಳನ್ನು ಏಕಾಂಗಿತನ ಇವೆಲ್ಲವುಗಳನ್ನು ದೂರತಳ್ಳಿ ಹಾಕಿ ಆನಂದಮಯವಾದ ವಾತಾವರಣ ಸೃಷ್ಟಿಸುತ್ತದೆ.

ನಗುವೇ ಮೊಗಕೆ ಭೂಷಣವಾದುದು. ಅನುಪಮ ಸೌಂದರ್ಯವುಳ್ಳದ್ದು, ಆಕರ್ಷಣೀಯವಾದದ್ದು. ಚಂದವಾಗಿ ಕಾಣುವ ಮುಖಲಕ್ಷಣದಿಂದ ಕೂಡಿದ ನಗುವು ಮಾನವನ ಸಹಜ ಸ್ವಭಾವ. ನಗುವುದು ಮಾನವರಿಗೆ ಮಾತ್ರ ನಿಸರ್ಗದತ್ತವಾಗಿ ಬಂದಿರುವ ವಿಶಿಷ್ಟ ಶಕ್ತಿಯಾಗಿದೆ.

'Smile is the thing which costs nothing but gains everthing' ಎನ್ನುವ ಆಂಗ್ಲಗಾದೆಯಂತೆ ನಮ್ಮ ಸುತ್ತಮುತ್ತಲ ಜನರ ಮೇಲೆ ಒಳ್ಳೆಯ ಪ್ರಭಾವ ಬೀರುವ ಅಸ್ತ್ರವೆಂದರೆ ನಗು ಮಾತ್ರ. ನಗುವಿನಲ್ಲಿ ಅದ್ಭುತವಾದ ಶಕ್ತಿ ಇದೆ. ಇದು ಹಲವಾರು ರೋಗಗಳನ್ನು ಗುಣಪಡಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ ಎಂದು ವೈದ್ಯಕೀಯ ಸಂಶೋಧನೆಗಳಿಂದಲೂ ದೃಢಪಟ್ಟಿದೆ.

ಎಷ್ಟೋ ವರ್ಷಗಳ ಹಿಂದೆಯೇ ಬುದ್ಧನು 'ಜಗತ್ತು ದುಃಖ ಹಾಗೂ ನೋವಿನಿಂದ ಕೂಡಿದೆ ಎಂದು ಹೇಳಿದ ಮಾತು ಇಂದಿನ ಕಂಪ್ಯೂಟರ್ ಬದುಕಿನಲ್ಲೂ ಅನ್ವಯಿಸುತ್ತದೆ. ಚಿಂತೆ, ಹೆದರಿಕೆ, ತಳಮಳ, ಆತಂಕಗಳಂಥ ಇನ್ನೂ ಅನೇಕ ಸಮಸ್ಯೆಗಳು ಎದುರಾಗಿ ಉಲ್ಲಾಸದ ಚೈತನ್ಯದ ಹರ್ಷವನ್ನು ಸೂಚಿಸುವ ಇಂಥ ನಗುವು ಮೊಗದಲಿ ಮಾಯವಾಗಿದೆ.

ಆದರೆ ಮಾನಸಿಕ ಹಾಗೂ ದೈಹಿಕ ಆರೋಗ್ಯದ ದೃಷ್ಟಿಯಿಂದ ನಗುವುದು ಒಳ್ಳೆಯದಾಗಿದೆ. ವೈದ್ಯರಾದ ಕೊಠಾರಿಯವರು ನಗುವಿನ ಮಹತ್ವವನ್ನು ತಿಳಿದವರಾಗಿದ್ದರು. ಅದಕ್ಕೆಂದೇ 'ಲಾಫರ್ ಕ್ಲಬ್' ಎಂದು ಆರಂಭಿಸಲಾಯಿತು. ಭಾರತದಲ್ಲಿ ಹುಟ್ಟಿಕೊಂಡ 'ಲಾಫರ್ ಕ್ಲಬ್' ಇಂದು ಜಗತ್ತಿನಾದ್ಯಂತ ಹರಡಿಕೊಂಡಿದೆ.

'ಮಹಾತ್ಮಾ ಗಾಂಧೀಜಿಯವರು ಹೀಗೆ ಹೇಳಿದ್ದಾರೆ. 'ಹಾಸ್ಯಪ್ರಜ್ಞೆ ಇಲ್ಲದೆ ಇದ್ದರೆ ನಾನು ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ' ಎಂದು.

ನಗುವೊಂದು ಇಲ್ಲದೆ ಹೋಗಿದ್ದರೆ ಈ ಪ್ರಪಂಚವೇ ಶೂನ್ಯವಾಗಿರುತ್ತಿತ್ತು. ನಗಬಲ್ಲವರು ಸಮಾಜದಲ್ಲಿ ನಾಲ್ವರೊಂದಿಗೆ ಬೆರೆತು ಬಾಳುವರು. ಮಾನವ ವ್ಯಕ್ತಿತ್ವಕ್ಕೆ ಒಂದು ವಿಶೇಷ ಆಭರಣ ನಗುವಾಗಿದೆ. ಆಯುಷ್ಯಾವಧಿಯಲ್ಲಿ ಒಂದು ತಿಂಗಳಿನಷ್ಟು ಕಡಿಮೆ ಮಾಡಿದರೆ ಅದೇ ಒಂದು ಕ್ಷಣದ ನಗು ನೂರಾರು ಚಿಂತೆಯ ಕಾಲವನ್ನು ತಳ್ಳಿ ಹಾಕುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

'A smile is the golden key that opens the innermost dore to the hearts of all' ಎನ್ನುವ ಆಂಗ್ಲ ಗಾದೆಯಂತೆ ನಗುವುದರಿಂದ ಮನಸ್ಸಿಗೆ ಹಿತಕರವಾದ ಅನುಭವ ನೀಡುತ್ತದೆ. ನಗು ಕೇವಲ ಮೇಲ್ನೋಟಕ್ಕೆ ಇರದೇ ಅಂತರಾಳದಿಂದ ಉಕ್ಕಿ ಪುಟಿದೇಳಬೇಕು. ಹೃದಯ ತುಂಬಿ ಬರಬೇಕು ಇಂಥ ಅದ್ಭುತವಾದ ನಗುವಿಗೆ ಇಷ್ಟೇ ಎಂದು ಬೆಲೆಯನ್ನು ಕಟ್ಟಲಸಾಧ್ಯವಾದುದು.

'ಮಕ್ಕಳಾಟವು ಚಂದ ಮತ್ತೆ ಯೌವನ ಚಂದ ಮುಪ್ಪಿನಲಿ ಚಂದ ನರೆಗಡ್ಡ - ಜಗದೊಳಗೆ ಎತ್ತ ನೋಡಿದರತ್ತ ನಗುಚಂದ.'

ಇಂಥ ಅಂದ-ಚಂದದ ನಗು ಸ್ನೇಹದ ಆತ್ಮೀಯತೆಯ ಸಂಕೇತವೂ ಅಹುದು. ಎರಡು ಹೃದಯಗಳನ್ನು ಬೆಸೆದು ಕ್ಷಣಕಾಲವಾದರೂ ಸಂತೋಷದ ವಾತಾವರಣವನ್ನು ನಿರ್ಮಿಸುವ ಆಯುಷ್ಯವೃದ್ಧಿಯ, ಸಂತೋಷದ ಹಾಗೂ ಆತ್ಮತೃಪ್ತಿಯ ಪ್ರತೀಕವಾದ ಮಾನಸಿಕ ದೈಹಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇರಿಸುವ 'ನಗುವಿನ್ನು' ಯಾರಿಗೆ ಬೇಡ ಎಲ್ಲರೂ ನಕ್ಕು ನಲಿಯೋಣ. ನಗುವಿನಲ್ಲೆ ಬದುಕಿನ ಜೀವನ ಸೆಲೆಯೇ ಇದೆ. ಹೀಗಾಗಿ 'ನಾವೆಲ್ಲಾ ನಗುನಗುತ ಬಾಳೋಣ' ಆರೋಗ್ಯದಿಂದ ಜೀವನ ಕಳೆಯೋಣ'. ■

ದೀಪಾವಳಿ ಬೋನಸ್

• ವೆಂಕಟೇಶ್ ಆರ್.
ನಂ.21, 10ನೇ 'ಎ' ಅಡ್ಡರಸ್ತೆ,
ಅಗ್ರಹಾರ ದಾಸರಹಳ್ಳಿ,
ಬೆಂಗಳೂರು-79.

ನಾನು ಚಿಕ್ಕವನಿದ್ದಾಗ ನನ್ನ ತಂದೆಯವರನ್ನು ಕಂಡರೆ ತುಂಬಾ ಹೆದರುತ್ತಿದ್ದೆ. ಈಗೇನೂ ಹೆದರುವುದಿಲ್ಲ ಎಂದೇನಿಲ್ಲ., ಆದರೆ ಆಗಿನಷ್ಟು ಈಗಿಲ್ಲ ಅಷ್ಟೆ. ಆಗ ನನ್ನ ತಂದೆಯವರಿಗೆ ಕೋಪ ಬಂದಂಥ ಸಂದರ್ಭದಲ್ಲಿ ಕೈಗೇನಾದರೂ ಬೆತ್ತ ಸಿಕ್ಕಿತೆಂದರೆ ಮುಗಿಯಿತು. ನನ್ನ ಮೈಮೇಲೆ ಬಾಸುಂಡೆಗಳು ಉದ್ದಿನ ವಡೆಯಂತೆ ಊದಿಕೊಳ್ಳುವುದಂತೂ ಖಾತರಿ.

ನಿತ್ಯ ಅವರ ಮುಂದೆ ಕೋಲೆ ಬಸವನಂತೆ ಅವರು ಹೇಳಿದ್ದಕ್ಕೆಲ್ಲ ತಲೆ ಆಡಿಸುತ್ತಿರಬೇಕು. (ನಟನೆಯಾದರೂ ಸರಿಯೇ) ಹೆಚ್ಚಾಗಿ ಟಿ.ವಿ ನೋಡಬಾರದು (ಅವರೇ ಹಾಕಿದಾಗ ಹೊರತುಪಡಿಸಿ) ಓದುತ್ತಿರದಿದ್ದರೂ ಕೈಲೊಂದು ಪುಸ್ತಕವಿರಲೇಬೇಕು. ಇಷ್ಟೊಂದು ನಿಯಮಗಳಿದ್ದವು.

ಈಗ್ಗೆ ಸರಿ ಸುಮಾರು ಎರಡು ವರ್ಷಗಳ ಹಿಂದೆ ಖಾಸಗಿ ಉದ್ದಿಮೆಯೊಂದರಲ್ಲಿ ನೌಕರಿ ಕೊಡಿಸಿದ ತಂದೆಯವರು ಇನ್ನು ನನಗೊಂದು ಮೂಗುದಾರ ಹಾಕುವುದೊಂದೆ ಬಾಕಿ ಎಂದು ಆಗಾಗ್ಗೆ ಅಮ್ಮನಲ್ಲಿ ಉಸುರುತ್ತಿದ್ದರು. ಕಳೆದ ವರ್ಷ ದೀಪಾವಳಿಗೆ ಇನ್ನೂ ತಿಂಗಳಿತ್ತು. ಆ ವರ್ಷ ಉದ್ದಿಮೆಗೆ ಸ್ವಲ್ಪ ನಷ್ಟವಾಗಿದ್ದರಿಂದ ದೀಪಾವಳಿಗೆ ಬೋನಸ್ ಕೊಡುವುದಿಲ್ಲ ಎಂದು ಘೋಷಿಸಿದರು. ಈ ವಿಷಯವನ್ನು ಮನೆಯಲ್ಲಿ ಹೇಳಿದಾಗ ಕೋಪಗೊಂಡರು ಅಪ್ಪ. ಬೋನಸ್ ಕೊಡಲ್ವ ಅದ್ ಹೇಗ್ ಕೊಡಲ್ಲ? ನಾನು ಕೊಡಿಸ್ತೀನಿ' ಎಂದರು.



ಪ್ರತಿ ತಿಂಗಳ ಕೊನೆಯ ಹಾಗೂ ಮೊದಲ ವಾರದಲ್ಲಂತೂ ನಮಗೆ ಎಲ್ಲಿಲ್ಲದ ಕೆಲಸ. ಎಷ್ಟೋ ಬಾರಿ ಹಲವು ಫೈಲುಗಳನ್ನು ತೆಗೆದುಕೊಂಡು ಹೋಗಿ ಕೆಲಸ ಮುಗಿಸಬೇಕಾಗಿತ್ತು. ಅಂದು ತಿಂಗಳ ಕೊನೆಯ ದಿನವಾಗಿದ್ದರಿಂದ ಸಾಕಷ್ಟು ಕೆಲಸವಿತ್ತು. ಬೆಳಗ್ಗಿನಿಂದ ಕೆಲಸ ಮಾಡೀ ಮಾಡಿ ತಲೆ ನೋವು ಬೇರೆ ಶುರುವಾಗಿತ್ತು. ಆದರೂ ಸಂಜೆ ಮನೆಗೆ ಹೋಗುವಾಗ ನಾಲ್ಕೈದು ಫೈಲುಗಳನ್ನು ತೆಗೆದುಕೊಂಡು ಹೊರಟೆ. ದಾರಿಯಲ್ಲಿ ಒಂದು ಆಟೋರಿಕ್ಷಾ ನನ್ನ ಪಕ್ಕದಲ್ಲಿಯೇ ಬಂದು ನಿಂತಿತು. ಒಳಗೆ ಅಪ್ಪ-ಅಮ್ಮ ಇದ್ದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ನಾನು ಮಾತನಾಡುವುದರೊಳಗೆ 'ಬಾರೋ ಹತ್ತು' ಅಪ್ಪನ ಗಡಸು ಧ್ವನಿ. ಹತ್ತಿ ಕುಳಿತ ಮೇಲೆ 'ಎಲ್ಲಿಗಮ್ಮ?' ಕೇಳಿದೆ. 'ಎಲ್ಲಿಗೋ ಸುಮ್ಮನಿರು' ಅಪ್ಪನ ರಾಜಾಜ್ಞೆಯಾಗಿತ್ತು. ತೆಪ್ಪಗಾದೆ.

ಆಟೋರಿಕ್ಷಾ ಮನೆಯೊಂದರ ಮುಂದೆ ನಿಂತಾಗ ಬಾಗಿಲಿನಲ್ಲಿಯೇ ನಿಂತು ನಮ್ಮ ಬರುವಿಕೆಯನ್ನೇ ಇದಿರು ನೋಡುತ್ತಿದ್ದ ದಂಪತಿಗಳಿಬ್ಬರೂ ನಮ್ಮನ್ನು ಒಳಗೆ ಆಮಂತ್ರಿಸಿದರು. ಒಳಗೆ ನಾನೊಂದು ಸುಖಾಸೀನದ ಮೇಲೆ ಕುಳಿತೆ. 'ಇವನೇ ನೋಡು ಶಂಕರಪ್ಪ ನಮ್ಮ ಕುಲಪುತ್ರ' ಅಪ್ಪನ ಧೀರವಾಣಿ. ದಂಪತಿಗಳಿಬ್ಬರೂ ಕ್ಷಣ ನನ್ನನ್ನೇ ನೋಡಿದರು (ಅಪ್ಪನ ಗೆಳೆಯ ಶಂಕರಪ್ಪ, ಹೆಂಡತಿ ಶಾರದಮ್ಮ ಇವರ ಜ್ಯೇಷ್ಠ ಪುತ್ರಿ ಸುಷ್ಮಾಳಿಗೆ ನನ್ನ ಮದುವೆ ಸಂಬಂಧ ಮಾಡಬೇಕೆಂದು ಆಗಾಗ ಮಾತನಾಡುತ್ತಿದ್ದುದು ನೆನಪಾಯಿತು). ಅಪ್ಪ ಶಂಕರಪ್ಪ ಇಬ್ಬರೂ ಸುತ್ತಾಡಿಕೊಂಡು ಬರಲು ಹೊರಗೆ ಹೋದರು. ಅಮ್ಮ ಶಾರದಮ್ಮನವರ ಜೊತೆ ಕುಶಲೋಪರಿಯನ್ನು ವಿಚಾರಿಸುತ್ತಾ ಚಾಪೆಯೊಂದರ ಮೇಲೆ ಆಸೀನರಾದರು.

ನನಗೂ ವಿಪರೀತ ತಲೆನೋವು. ಜೊತೆಗೆ ಕೊನೆಗೂ ಕೈ ಕೊಟ್ಟರು ಎಂದುಕೊಂಡೆ. ಮೊದಲೇ ತಿಳಿಸಿದ್ದಿದ್ದರೆ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು, ಮೇಕಪ್ ಮಾಡಿಕೊಂಡು ಠೀವಿಯಿಂದ ಬರಬಹುದಿತ್ತಲ್ಲಾ ಎಂದು ಪರಿತಪಿಸಿದೆ. ಕೈಯಲ್ಲೇ ಕ್ರಾಪ್ ಸರಿ ಮಾಡಿಕೊಂಡೆ. ನನಗೆ ನನ್ನವಳಾಗುವಳು ಹೇಗಿರುವಳೆಂಬ ಕುತೂಹಲ. ಒಟ್ಟಿನಲ್ಲಿ ಶೂರ್ಪನಖಿಯಂತಿರದಿದ್ದರೆ ಸಾಕು ಎಂದುಕೊಂಡೆ. ಅಷ್ಟರಲ್ಲಿ ಕಾಫಿಯನ್ನು ತಂದ ಸುಷ್ಮಾಳನ್ನು ನೋಡಿ ಬೆರಗಾದೆ. ದಂತದ ಬೊಂಬೆಯಂತಿದ್ದರೂ ಹಲ್ಲುಗಳು ಸ್ವಲ್ಪ ಉಬ್ಬಿದಂತಿದ್ದವು. ಸ್ವಲ್ಪ ನನಗಿಂತಲೂ ಕುಳ್ಳಿ ಎನಿಸಿದಾಗ ಎದ್ದು ಅಳತೆ ಮಾಡೋಣವೆನಿಸಿತು. ಆದರೆ ಏಳಲಿಲ್ಲ. ಯಾಂತ್ರಿಕವಾಗಿ ಕೈ ಕಾಫಿಯನ್ನು ತೆಗೆದುಕೊಂಡಿತಾದರೂ ಕಣ್ಣ ನೋಟ ಸಡಿಲಿಸಿರಲಿಲ್ಲ. ಅವರಮ್ಮನ ಪಕ್ಕದಲ್ಲಿಯೇ ಕುಳಿತುಕೊಂಡಳು. ನನಗೆ ಅಪ್ಪನಿಗೆ ಥ್ಯಾಂಕ್ಸ್ ಹೇಳಬೇಕೆನಿಸಿತು. ಅಷ್ಟರಲ್ಲಿ ಅವರೇ ಬಂದರು. ಬಂದು ಸೋಫಾ ಮೇಲೆ ಕುಳಿತರು 'ಏನೋ ದೀಪಾವಳಿ ಬೋನಸ್ ಹೇಗಿದ್ಯೋ?' ಅಪ್ಪಾ ಕೇಳಿದಾಗ ನನಗೆ ಆಶ್ಚರ್ಯವಾಯಿತು. ಏನೂ ಮಾತನಾಡದೆ ಸುಮ್ಮನೆ ಮುಗುಳ್ನಕ್ಕೆ. ಮಾವನಾಗಲಿರುವ ಶಂಕರಪ್ಪನವರು ಹಾಗಾದ್ರೆ 'ಶುಭಸ್ಯ ಶೀಘ್ರಂ' ಎಂದರು.

ಅಂತೂ ಪ್ರತಿ ದೀಪಾವಳಿಗೆ ವರ್ಷದ ಬೋನಸ್ ಎಲ್ಲರಿಗೂ ಸಿಕ್ಕರೆ, ಜೀವನದುದ್ದಕ್ಕೂ ಬರುವ ನಿಜವಾದ ಬೋನಸ್ ಅನ್ನು ಅಪ್ಪ ಕಳೆದ ವರ್ಷ ಕೊಡಿಸಿಯೇ ಬಿಟ್ಟರು. ■


ಓದುಗರ ವೇದಿಕೆ

ಈ ಸಲ 'ಬದುಕು' ದೀಪಾವಳಿ ವಿಶೇಷಾಂಕದ ಓದುಗರ ವೇದಿಕೆಗೆ ನಾವು ಕೊಟ್ಟ ವಿಷಯಗಳು ಮೂರು. ಐ ಲವ್ ಯೂ ಎಂದ ಮಧುರ ಕ್ಷಣ..., ಅಗಲಿದ ಆಪ್ತರು ಹಾಗೂ 50 ವರ್ಷ ಮುಂದೆ. ಈ ಮೂರು ವಿಷಯಗಳಿಗೆ ಸ್ಪಂದಿಸಿದವರು ನೂರಾರು ಜನ. ಅದರಲ್ಲೂ ಹೆಚ್ಚಾಗಿ 'ಐ ಲವ್ ಯೂ....' ಎಂಬ ವಿಷಯಕ್ಕೆ ಸ್ಪಂದಿಸಿದವರೆ ಬಹಳ. ಕೆಲವರು ಕಲ್ಪಿತ ಕಥೆಗಳನ್ನು ಬರೆದಿದ್ದರೆ, ಇನ್ನೂ ಕೆಲವರು ನೈಜ ಘಟನೆಯನ್ನು ಬರೆದಿದ್ದಾರೆ. ಅದರಲ್ಲಿ ವಾಸ್ತವಕ್ಕೆ ಹತ್ತಿರವೆಂದು ಕಂಡು ಬಂದ ಕೆಲವು ಆಯ್ದ ಬರಹಗಳನ್ನು ಇಲ್ಲಿ ನೀಡುತ್ತಿದ್ದೇವೆ.

'ಐ ಲವ್ ಯೂ' ಎಂದ ಮಧುರ ಕ್ಷಣ

ಪ್ರೀತಿ –ಪ್ರೇಮದ ಕಾರಂಜಿ

ಮಾನ್ಯ ಕವಿ ಕೆ.ಎಸ್. ನರಸಿಂಹಸ್ವಾಮಿಯವರ ಮೈಸೂರು ಮಲ್ಲಿಗೆಯ ಕವನ 'ನನ್ನವಳು ನನ್ನದೆಯ ಹೊನ್ನಾಡನಾಳುವಳು, ಬೆಡಗುಗೆನ್ನೆ ಚೆಲುವೆ ನನ್ನ ಹುಡುಗಿ' ಈ ಕವನಕ್ಕೆ ಮಾರು ಹೋಗದ ಕನ್ನಡಿಗರಿಲ್ಲ. ನಮ್ಮ ವಿವಾಹದ ಪೂರ್ವ ದಿನಗಳವು. ನಮ್ಮ ಪ್ರೇಮ ಪತ್ರಗಳಲ್ಲಿ **(I love you)** ಬಂದು ಹೋದ ವಿಷಯಗಳು ನೂರಾರು.



ಒಮ್ಮೆ ಮೇಲಿನ ಈ ಕವನ ಹಾಸ್ಯ ಕವಿಯೊಬ್ಬರ ಹಾಸ್ಯ ಕವಿತೆಯಾಗಿ ಪತ್ರಿಕೆಯಲ್ಲಿ ಬಂತು. ನನ್ನವಳು ನನ್ನೆಡೆಗೆ ಮೆಣಸನು ಅರೆಯುವಳು. ಈ ಕವಿತೆಯನ್ನು ಬರೆದು ನನ್ನ ಭಾವಿ ಪತ್ನಿಯನ್ನು ಸ್ವಲ್ಪ ಛೇಡಿಸೋಣ ಎನಿಸಿತು. ಈ ಕವಿತೆಯನ್ನು ಉದಾಹರಿಸಿ 'ನಾನು ನಿನ್ನ ಎದೆಗೆ ಮೆಣಸನ್ನು ಅರೆದರೆ ಏನು ಮಾಡುತ್ತೀಯೇ' ಎಂದು ಬರೆದೆ. ಅದಕ್ಕೆ ನನ್ನವಳಿಂದ ಬಂದ ಈ ಉತ್ತರ ನನ್ನನ್ನು ಭಾವಾತಿರೇಕದಿಂದ ಮೂಕನನ್ನಾಗಿಸಿತು.

'ನನ್ನೆದೆಗೆ ಮೆಣಸನು ಅರೆದರೆ ಅದರ ಉರಿ ನಿಮಗೇ ತಾನೆ? ಯಾಕೆಂದರೆ ನನ್ನೆದೆಯಲ್ಲಿರುವವರು ನೀವೇ ಅಲ್ಲವೇ?'

ಅಣುಕು ಗೀತೆಯಲ್ಲಿ ಬದುಕಿನ ಪಾಠ ಹೇಳಿದ ನನ್ನವಳನ್ನು ಮನಸ್ಸಿನಲ್ಲಿಯೇ ಅಭಿನಂದಿಸಿದೆ.

–ಜಗದೀಶ ಗಂ. ದಲಭಂಜನ,
ಗುಳೇದಗುಡ್ಡ.

ಆ ಮಧುರ ಕ್ಷಣ

ಪ್ರತಿಯೊಬ್ಬರ ಜೀವನದಲ್ಲಿ ಬಂದೇ ಬರುವ ಆ ಒಂದು ಮಧುರ ಕ್ಷಣ ನನ್ನ ಜೀವನದಲ್ಲೂ ಒಂದು ಮಧುರ ಕ್ಷಣವಾಗಿ ಬಂದೇ ಬಂದಿತು. ನಿಜ. ಪ್ರೇಮಿಗಳು ಪರಸ್ಪರರಲ್ಲಿ ನುಡಿಯುವ 'ಐ ಲವ್ ಯೂ' ಎಂಬ ಮೂರು ಪದಗಳ ಸರಮಾಲೆ ಅವರ ಜೀವನದಲ್ಲಿ ಹೊಸ ತಿರುವನ್ನು ಮೂಡಿಸಿ ಅವರ ಬದುಕನ್ನು ಇನ್ನಷ್ಟು ವರ್ಣಮಯವಾಗಿಸುವ ಆ ಕ್ಷಣ ಅವರಿಗೆ ಅವಿಸ್ಮರಣೀಯ ಕ್ಷಣವಾಗಿ ಅವರ ಮನದಲ್ಲಿ ಉಳಿಯುತ್ತದೆ.

ಮೊಟ್ಟ ಮೊದಲು ನಮ್ಮಿಬ್ಬರ ಮುಖ ಪರಿಚಯಗೊಂಡದ್ದು ನಮ್ಮಿಬ್ಬರ ಸಂಬಂಧಿಕರೊಬ್ಬರ ಮದುವೆ ಸಮಾರಂಭದಲ್ಲಿ. ನಂತರ ನನ್ನೊಂದಿಗೆ ಪರಿಚಯ ಬೆಳೆಸಿದ ಪುಶ್ ನನ್ನನ್ನು ಮೆಚ್ಚಿದ ವಿಷಯವನ್ನು ನನಗೆ ಇತರ ಪದಗಳಿಂದ ಮನವರಿಕೆ ಮಾಡಿಸಿದರು. ಹಲವು ದಿನಗಳು ಕಳೆದವು. ಆದರೆ ಇದುವರೆಗೂ ನಾನು ಅವರಿಂದ ಆ ಪದಗಳನ್ನು ಕೇಳಲಾಗಲೇ ಇಲ್ಲ. ಒಮ್ಮೆ ದೂರವಾಣಿಯಲ್ಲಿ ಅವರೊಂದಿಗೆ ಮಾತನಾಡುವಾಗ ಅವರನ್ನು ಕೇಳಿಯೇ ಬಿಟ್ಟೆ 'ನಿಮಗೆ ನನ್ನಲ್ಲಿ ಏನಾದರೂ ಹೇಳುವುದಿದೆಯೇ?' ಎಂದು. ತತ್‌ಕ್ಷಣ ನನ್ನ ಮನಸ್ಸನ್ನರಿತ ಅವರು ಹೇಳಿಯೇ ಬಿಟ್ಟರು 'ಐ ಲವ್ ಯೂ' ಎಂದು ಆ ಪದಗಳು ನನ್ನ ಕಿವಿಗೆ ತಾಕಿದಂತೆ ನನ್ನಲ್ಲೇನೋ ಒಂದು ಸಂತಸ ಹಾಗೂ ಮುಜುಗರದ ಅನುಭವ ಆದಂತಾಯಿತು. ಆದರೆ ಕೂಡಲೆ ನಾನು ಉತ್ತರ ನೀಡದೆ ನನ್ನ ಕರೆಗಾಗಿ ಕಾಯುವಂತೆ ತಿಳಿಸಿದೆ. ಇದಾದ ಒಂದೆರಡು ದಿನದಲ್ಲಿ ನಾನು ಅವರಲ್ಲಿ ಫೋನಾಯಿಸಿ ಹೇಳಿಯೇ ಬಿಟ್ಟೆ 'ಐ ಲವ್ ಯೂ' ಎಂದು. ಆ ಕ್ಷಣ ಅವರಿಗಾದ ಸಂತೋಷವನ್ನು ನಾನು ಶಬ್ದಗಳಲ್ಲಿ ಬಣ್ಣಿಸಲಾರೆ. ಆದರೆ ಇಷ್ಟು ಮಾತ್ರ ನಿಜ. ದೂರದಲ್ಲಿರುವ ನಮ್ಮಿಬ್ಬರನ್ನು ದೂರವಾಣಿ ಹತ್ತಿರಕ್ಕೆ ತಂದಿತು ಎಂದು. ನಮ್ಮೊಂದಿಗೆ ಇತರ ಪ್ರೇಮಿಗಳಿಗೂ ಅವರ ಪ್ರೇಮದಲ್ಲಿ ಜಯ ಸಿಗಲಿ ಎಂದು ಆಶಿಸುವ.

– ಪ್ರಣಾಲಿ,
ಬೀದರ.

★

ಮತ್ತೆ ಸ್ತ್ರೀ ದ್ವೇಷಿಯಾದೆ



ಅದೊಂದು ಕಾಲದಲ್ಲಿ ನನಗೆ I love you ಎಂಬ ಪದ ಹಿಡಿಸುತ್ತಿರಲಿಲ್ಲ. ಮನಸಾರೆ ಈ ಪ್ರೀತಿ, ಪ್ರೇಮ ಮುಂತಾದವನ್ನು ದ್ವೇಷಿಸುತ್ತಿದ್ದೆ. ಈಗಲೂ ಕೂಡಾ ದ್ವೇಷಿಸುತ್ತಿದ್ದೇನೆ. ಆದರೆ ಆ ಕಾಲ ಈ ಕಾಲದ ಮಧ್ಯೆ ತುಸು ಕಾಲದಲ್ಲಿ I Love you ಎಂಬ ಪದ ಬಳಸಬೇಕಾದ ಸನ್ನಿವೇಶ ಉಂಟಾಗಿದ್ದು ನನ್ನ ಜೀವನದ ಒಂದು ನೆನಪಾಗಿಯೇ ಉಳಿದಿದೆ. ನಾನು ಚಿಕ್ಕಂದಿನಿಂದಲೂ ಕೇವಲ ಗೆಳೆಯರ ಮಧ್ಯೆ ಬೆಳೆದುದರಿಂದ ನಿರೀಕ್ಷಿತವಾಗಿ ನಾನು ಒಬ್ಬ ಸ್ತ್ರೀದ್ವೇಷಿಯಾದೆ. ಈ ನನ್ನ ಗುಣ ಕಾಲೇಜು ಜೀವನದಲ್ಲೂ ಸಹ ಮುಂದುವರೆಯಿತು. ಪ್ರೀತಿ, ಪ್ರೇಮ ಎನ್ನುತ್ತಾ ಮುಗಿಬೀಳುವ, ಅಶ್ಲೀಲವಾದ ಉಡುಗೆ ತೊಡುವ, ಗಂಡಸರ ಮಟ್ಟಕ್ಕೆ ಸಮಾನತೆಯನ್ನು ಅಪೇಕ್ಷಿಸುವ ಈ ಕಾಲದ ತರುಣಿಯರ ಬಗ್ಗೆ ನನಗೆ ಸ್ವಲ್ಪವೂ ಕುತೂಹಲವಿರಲಿಲ್ಲ.

ಆದರೆ ಆಕೆಯ ಪ್ರತಿಯೊಂದು ಚಲನವಲನಗಳು ನನ್ನಲ್ಲಿ ಕುತೂಹಲ ಮೂಡಿಸಿದ್ದವು. ಮೈ ತುಂಬಾ ಬಟ್ಟೆ, ಹಣೆಯ ಮಧ್ಯೆ ಸುಂದರವಾದ ಸಿಂಧೂರ, ನೀಟಾಗಿ ಬಾಚಿ ಕಟ್ಟಿರುವ ಜಡೆ, ಜಡೆಗೊಂದು ಚೆಂದದ ಹೂವು. ಆಧುನಿಕ ಜಗತ್ತಿನ ಯಾವ ಪರಿಣಾಮಗಳೂ ಅವಳಲ್ಲಿಲ್ಲದಿರುವುದು ನನ್ನಲ್ಲಿ ಅವಳ ಬಗ್ಗೆ ಗೌರವ ಭಾವನೆ ಮೂಡಿಸುತ್ತಿದ್ದವು. ನಡೆಯುವಾಗ ಆಕೆ ತಲೆ ತಗ್ಗಿಸಿದರೆ ಪುನಃ ತಲೆ ಎತ್ತುತ್ತಿದ್ದುದು ಕಾಲೇಜು ಬಂದ ಮೇಲೆಯೆ. ಈ ನಿಯಮ ಬರುವಾಗಲೂ ಕೂಡಾ. ಅವಳ ಈ ನಡವಳಿಕೆ ನನ್ನನ್ನು ಪದೆ ಪದೆ ಅವಳತ್ತ ನೋಡುವಂತೆ ಪ್ರೇರೇಪಿಸುತ್ತಿತ್ತು. ಇಲ್ಲಿ ಅವಳ ಸೌಂದರ್ಯ ಅಪ್ರಸ್ತುತ.

ದಿನದಿಂದ ದಿನಕ್ಕೆ ನಾನು ಅವಳ ಗಮನವನ್ನು ನನ್ನತ್ತ ಸೆಳೆಯಲು ಪ್ರಯತ್ನಿಸಿದೆ, ಫಲ ಶೂನ್ಯ. ಬೆಳಿಗ್ಗೆ ಆಕೆ ಪೂಜೆ ಮಾಡುವಾಗ ಎಷ್ಟೋ ಸಲ ಬಳಿಯಲ್ಲಿ ಸುಳಿದಾಡಿದರೂ ಅವಳ ಕುಡಿನೋಟವೂ ನನ್ನ ಮೇಲೆ ಬೀಳಲಿಲ್ಲ. ಭಯಂಕರ ಸ್ತ್ರೀ ದ್ವೇಷಿಯಾದ ನಾನು ಆಗಲೆ ಅವಳ ಪ್ರೀತಿಯಲ್ಲಿ ಬಿದ್ದಿದ್ದೆ. ಹಗಲು - ರಾತ್ರಿ ಅವಳದೆ, ನೆನಪು. ಸರಿಯಾಗಿ ಊಟವಿಲ್ಲ, ನಿದ್ದೆಯಿಲ್ಲ. ನಾನು ಬಹುವಾಗಿ ಬದಲಾಗಿದ್ದೆ, ಆದರೆ ಅವಳು ಇದ್ದಂತೆಯೇ ಇದ್ದಳು. ಈಗೀಗಂತೂ ಅವಳನ್ನು ನೆನೆದರೆ ಸಾಕು ಮೈಯಲ್ಲಿ ಚೈತನ್ಯ ಉಕ್ಕುತ್ತಿತ್ತು.

ಅಂದು ರಾಖಿ ಹಬ್ಬ, ಆಕೆಯ ರಾಖಿ ಅನಿರೀಕ್ಷಿತವಾಗಿ ನನ್ನ ಕೈಯನ್ನು ಅಲಂಕರಿಸಿದಾಗ ನನ್ನ ಮನದಲ್ಲಿನ ಅಲ್ಲೋಲ ಕಲ್ಲೋಲವನ್ನು ಪ್ರತಿಯೊಬ್ಬ ಓದುಗರು ಅರ್ಥ ಮಾಡಿಕೊಳ್ಳಬಹುದು. ಅಣ್ಣಾ ಎಂದಾಗ, I Love you ಎನ್ನಲಾಗುವುದೇ.... ನನ್ನ ಮನಸ್ಸಿನ ಆಸೆಗಳು ನುಚ್ಚುನೂರಾಗಿದ್ದವು. ಪುನಃ ಅತಿ ಶೀಘ್ರವಾಗಿ ನಾನು ಮೊದಲಿನ ಸ್ತ್ರೀ ದ್ವೇಷಿಯಾಗಿ ಮಾರ್ಪಾಟಾಗಿದ್ದೆ.

-ಬಿ.ಎನ್. ಯಶವಂತರಾವ್, ದಾವಣಗೆರೆ

★

ಸಂಗಾತಿ ದೊರೆತ ಕ್ಷಣ

ದಿನಾಂಕ 25.2.71 ನನ್ನ ಮೊದಲ ಹೆಂಡತಿ ಸ್ವರ್ಗವಾಸಿಯಾದಳು. ನನಗೆ ನಾಲ್ಕು ಮಕ್ಕಳು. ವಯಸ್ಸು 40 ಆಗಿತ್ತು.

ಎಲ್ಲ ಮಕ್ಕಳು 8 ವರ್ಷದ ಕೆಳಗೆ -

ನಾನು ಅಂಚೆ ಕಚೇರಿಯಲ್ಲಿ ಪೋಸ್ಟ್ ಮಾಸ್ತರ ಇದ್ದೆ. ಕೆಲಸದ ಒತ್ತಡದಿಂದ ನನಗೆ ಎರಡನೆಯ ಮದುವೆ ಅನಿವಾರ್ಯವಾಗಿತ್ತು. ನಮ್ಮ ಆಫೀಸ ನಲ್ಲಿ ಕುಂದರಗಿಹಳ್ಳಿಯ ವಿನಾಯಕ ಅಂತಾ ಹಳ್ಳಿಯಲ್ಲಿ ಕೆಲಸ ಮಾಡುವ ಪೋಸ್ಟ್‌ಮನ್ ಇದ್ದರು. ಅವರು ನನಗೆ 'ಮಾಸ್ತರರೇ ನಾನು ಬಟವಡೆ ಮಾಡುವ ಜಾನಮಟ್ಟಿ ಹಳ್ಳಿಯಲ್ಲಿ ಶಾಂತಾಬಾಯಿ ಅಂತಾ ಟೀಚರ್ ಇದ್ದಾರೆ. ನೀವು ಮ್ಯಾರೇಜ್ ಆಗುವ ಇಚ್ಛಾ ಇದ್ದಲ್ಲಿ, ನಾನು ಅವರನ್ನು ವಿಚಾರಿಸುತ್ತೇನೆ' ಅಂದರು. ನಾನು ಒಳ್ಳೇದು ಅಂದೆ. ಮುಂದೆ 15 ದಿವಸ ಬಿಟ್ಟಲ್ಲ, ಶಾಂತಾಬಾಯಿ ಟೀಚರ್‌ದೊಂದಿಗೆ ಕನ್ಯಾ ಪರೀಕ್ಷೆ ಮುಗಿಯಿತು. ಏಳೆಂಟು ದಿವಸವಾದರೂ ಅವರಿಂದ ಪತ್ರ ಬರಲೇ ಇಲ್ಲ. ನಾನೇ ಅವರಿಗೆ ಒಂದು ಕಾಗದ ಬರೆದು ಕೊಟ್ಟು ಕಳಿಸಿದೆ. ಅದಕ್ಕೆ ಅವರಿಂದ ಒಪ್ಪಿಗೆ ಪತ್ರ ಬಂದಿತು. ಅವರು ಅದರಲ್ಲಿ ಮುಂದಿನ ವಿಚಾರ ಸಲುವಾಗಿ ವಿಜಾಪೂರಕ್ಕೆ ಹೋಗಿ ಬಂದು ನಮ್ಮ ತಂದೆ ತಾಯಿ ಹಾಗೂ ಬಳಗದವರನ್ನು ವಿಚಾರಿಸುತ್ತೇನೆ ಅಂದರು. ನಾನು ಅವರನ್ನು ಬಾಗಲಕೋಟೆಯಿಂದ ವಿಜಾಪೂರಕ್ಕೆ ಕರಕೊಂಡು ಹೋಗುವುದು. ಸುಮಾರು 11 ಗಂಟೆಗೆ ಟ್ರೈನು ಬಂದಿತು. ಟೀಚರ್ ನಾನು ಟ್ರೈನಿನಲ್ಲಿ ಕುಳಿತುಕೊಂಡೆವು. ಕ್ರಾಸಿಂಗ್ ಇದ್ದ ಕಾರಣ ಟ್ರೇನ್ ಬಿಡುವುದು 15 ನಿಮಿಷ ತಡವಾಯಿತು. ಟ್ರೈನಿನ ಬಿಡುವ ಗಂಟೆ ಬಾರಿಸಿತು. ನಾನು ಬರುತ್ತೇನೆ ಮೇಡಮ್ ಅಂದೆ. ಅದಕ್ಕೆ ಅವರು Thanks ಅಂತಾ ನನ್ನ ಕೈ ಹಿಡಿದರು. ನಾನು I Love you ಅಂತಾ ಅಂದೆ. ಅದು ಅನ್ನುವಾಗ ನಮ್ಮಿಬ್ಬರ ಕಣ್ಣುಗಳು ಒಂದಾದವು. ಮುಂದೆ 10 ದಿವಸದಲ್ಲಿ ನಮ್ಮ ವಿವಾಹ ಆಯಿತು.


-ಎಚ್.ಬಿ. ಕುಲಕರ್ಣಿ, ಬಾಗಲಕೋಟೆ.

★

'ಐ ಲವ್‌ಯೂ' ದಾರಿಯಲ್ಲಿ....

ಅಂದು ಆಗಸ್ಟ್ 15. ನಾವು ಸ್ವಾತಂತ್ರ್ಯದ ಗಾಳಿಯನ್ನು ಉಸಿರಾಡಿದ ಸ್ಮರಣೀಯ ದಿನ. ನನ್ನ ಬದುಕಲ್ಲಿ ಆ ದಿನಕ್ಕೆ ಇನ್ನೊಂದು ಮಹತ್ವವಿದೆ. ಹೌದು.... ಅಂದೇ ನಾನು 'ಅವಳ'ನ್ನು ಮೊದಲ ಸಾರಿ ನೋಡಿದ್ದು.

ಯುನಿವರ್ಸಿಟಿ ಕ್ಯಾಂಪಸ್‌ನ ಕೇಂದ್ರ ಭಾಗದಲ್ಲಿ 'ಧ್ವಜ ವಂದನೆ'ಯ ಕಾರ್ಯಕ್ರಮ ನಡೆದಿತ್ತು. ಹೊಸ ಶೈಕ್ಷಣಿಕ ವರ್ಷದ ಆರಂಭದ ದಿನಗಳವು. ನಾನು ಅಲ್ಲಿನ ವಿದ್ಯಾರ್ಥಿಯಾಗಿ ಆಗಿನ್ನೂ ಮೂರು ದಿನಗಳಷ್ಟೇ ಕಳೆದಿದ್ದವು. ಅಲ್ಲಿ ನನ್ನಂತೆ ಬಂದಿದ್ದ ವಿದ್ಯಾರ್ಥಿಗಳು ಕೆಲವೇ ಕೆಲವು ಮಂದಿ. ಎಲ್ಲ ಮುಖಗಳೂ ಅಪರಿಚಿತವೇ ಎಂದು ಗಂಟೆಗೆ ಸರಿಯಾಗಿ ತಾಯಿ ಭಾರತಿಗೆ ಗೌರವ ವನ್ನು ಸಲ್ಲಿಸಿ, 'ವಿಜಯಿ ವಿಶ್ವತಿ'ಗ ಎಲ್ಲರೊಂದಿಗೆ ನಾನೂ ದನಿಗೂಡಿಸಿದೆ. 'ಮಂಗಳೂರು'ನ ಮಳೆಯ ಬಿರುಸು ಸ್ವಲ್ಪ ತಗ್ಗಿತ್ತು. ಎದುರಿನ ಹೂದೋಟದಲ್ಲಿ ಗುಲಾಬಿಗಳು ಅರಬಿರಿದು ನಗುತ್ತಿದ್ದವು. ಸುತ್ತಲಿನ ಪರಿಸರ ಹಸಿರು ಹೊದಿಕೆಯಿಂದ ರಾರಾಜಿಸುತ್ತಿತ್ತು. ಅಲ್ಲಿನ ವಾತಾವರಣ ಚೇತೋಹಾರಿಯಾಗಿತ್ತು. ಇದನ್ನೆಲ್ಲ ಆಸಕ್ತಿಯಿಂದ ಗಮನಿಸುತ್ತಿದ್ದ ನನ್ನ ದೃಷ್ಟಿ ಫಕ್ಕನೆ ಒಂದು ಕಡೆ ನಿಂತಿತು ಅಲ್ಲಿ 'ಅವಳು' ಇದ್ದಳು. ದಿಟ್ಟಿಸಿ ನೋಡಿದೆ. ಇವಳು ನನ್ನವಳಾದರೆ... ಅನ್ನಿಸಿತು. ಮೊದಲೆಂದೂ ಯಾವ ಹುಡುಗಿಯನ್ನು ನೋಡಿದಾಗಲೂ ಬಂದಿರದ ಭಾವನೆ ಈಗೇಕೆ ಎಂಬ ಆಶ್ಚರ್ಯವೂ ಜೊತೆಗೇ ಹುಟ್ಟಿಕೊಂಡಿತು. ಆದರೆ ಅಷ್ಟರಲ್ಲಿ ನನ್ನ ಮನಸ್ಸು ಅವಳನ್ನು ನೋಡಿ 'ಐ ಲವ್ ಯೂ' ಎಂದಿತ್ತು.



ಕ್ರಮೇಣ ಅವಳ ಪರಿಚಯ ಮಾಡಿಕೊಂಡೆ. ನನ್ನ ಕುರಿತು ಹೇಳಿದೆ. ಅವಳನ್ನು ನಾನು ಪ್ರೀತಿಸುತ್ತಿರುವ ವಿಷಯವನ್ನು ಸೂಚ್ಯವಾಗಿ ಅವಳಿಗೆ ತಿಳಿಸಲೆತ್ನಿಸಿದೆ. ಆದರೆ ಅವಳಿಗೆ ಅರ್ಥವೇ ಆಗಲಿಲ್ಲ. (ಅಥವಾ ಅರ್ಥವಾದರೂ ಆಗದಂತೆ ನಟಿಸುತ್ತಿದ್ದಳೋ ಏನೋ!) ನೇರವಾಗಿ ಪ್ರಸ್ತಾಪಿಸಲು ಹಿಂಜರಿಕೆಯಾಗುತ್ತಿತ್ತು. ನನ್ನ ಅವಳ ನಡುವೆ ಜಾತಿ

ಅಂತಸ್ತುಗಳ ದೊಡ್ಡ ಕಂದಕಗಳಿದ್ದುವು. ನನ್ನ ಕನಸು ಕನಸಾಗಿಯೇ ಉಳಿಯುತ್ತದೇನೋ ಎಂಬ ಭಯ ನನ್ನನ್ನು ದಿನವೂ ಕಾಡುತ್ತಿತ್ತು.

ಅವಳಿಲ್ಲದೆ ಬದುಕುವುದು ಕಷ್ಟ ಎಂಬ ತೀರ್ಮಾನಕ್ಕೆ ಬಂದಿದ್ದೆ. ಹೀಗೆ ಎಷ್ಟೋ ದಿನಗಳ ತೊಳಲಾಟದ ನಂತರ ಒಂದು ದಿನ ಧೈರ್ಯ ತಂದುಕೊಂಡು ನನ್ನ ಪ್ರೇಮವನ್ನು ನಿವೇದಿಸಿಕೊಂಡೆ. 'ಜೀವನವಿಡೀ ನಿನ್ನ ಕಷ್ಟ ಸುಖಗಳಲ್ಲಿ ನಾನು ಜೊತೆಯಾಗಿರುತ್ತೇನೆ. ದಯವಿಟ್ಟು ನನ್ನನ್ನು ನಿರಾಶೆಗೊಳಿಸಬೇಡ. ನೀನಿಲ್ಲದೆ ನನ್ನ ಬದುಕು ವ್ಯರ್ಥ..... ಐ ಲವ್ ಯೂ ವೆರಿಮಚ್...... '' ಎಂದೆಲ್ಲ ಹೇಳಿದೆ. ಇವು ನನ್ನ ಪ್ರಾಮಾಣಿಕ ಮಾತುಗಳಾಗಿದ್ದವು. ಇದನ್ನೆಲ್ಲ ಹೇಳುವಾಗ ನನ್ನ ಎದೆ 'ಡಬ್ ಡಬ್' ಎಂದು ಅವಲಕ್ಕಿ ಕುಟ್ಟುತ್ತಿತ್ತು.

ಈಗ ಮೂರು ವರ್ಷಗಳು ಕಳೆದಿವೆ. ಅವಳು ನನ್ನ ಬಾಳ ಸಂಗಾತಿಯಾಗಿದ್ದಾಳೆ; ಸ್ಫೂರ್ತಿಯ ಸೆಲೆಯಾಗಿದ್ದಾಳೆ. ಬದುಕಿನ ದಾರಿಯಲ್ಲಿ ಎಷ್ಟೋ ಕಲ್ಲು ಮುಳ್ಳುಗಳನ್ನು ತುಳಿದಿದ್ದೇನೆ. ತುಳಿಯುತ್ತಿದ್ದೇವೆ. ನಮ್ಮ ನಡುವಿನ ಒಲವ ತಂಪು ಈ ಕಲ್ಲು ಮುಳ್ಳುಗಳನ್ನು ಹೂವಾಗಿಸುತ್ತಿದೆ. ಪರಸ್ಪರ ಪ್ರೀತಿ, ವಿಶ್ವಾಸ, ಹೊಂದಾಣಿಕೆ ಇವುಗಳೇ ನಮಗೆ ಶ್ರೀರಕ್ಷೆಯಾಗಿವೆ. ಜೀವನವನ್ನು ಮಧುರವಾಗಿಸಿವೆ.

-ಕುಶಾಲ್ ದೇರ್ಲ, ಸುಬ್ರಹ್ಮಣ್ಯ

★

ಆ ಸಮಯಕ್ಕಾಗಿ ಕಾದಿರುವೆ



'ಸುಮಾ ಐ ಲವ್ ಯೂ' ಎಂದು ನನ್ನ ಮನ ಕೂಗಿ ಕೂಗಿ ಹೇಳುತ್ತಿದ್ದರೂ, ಅದು ನನ್ನನ್ನು ಹೊರತು ಬೇರೆ ಯಾರಿಗೂ ಕೇಳಿಸುತ್ತಿರಲಿಲ್ಲ. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಬಾಯ್ ಫ್ರೆಂಡ್‌ನಂತೆ ಗರ್ಲ್ ಫ್ರೆಂಡ್ಸ್ ಸಾಕಷ್ಟಿದ್ದರು. ನನ್ನ ಅತಿ ಆಪ್ತವಾದವಳೆಂದರೇ ಸುಮಾ ಮಾತ್ರ. ನನ್ನೊಂದಿಗೆ ಅವಳು ನಡೆದುಕೊಳ್ಳುತ್ತಿದ್ದ ರೀತಿ, ಭಾವನೆಗಳನ್ನು ಗಮನಿಸಿದರೆ ಅವಳು ನನ್ನನ್ನು ಪ್ರೀತಿಸುತ್ತಿರಬಹುದೆ ಎನಿಸುತ್ತಿತ್ತು. ಆದರೂ ನನಗೆ ಅವಳ ಎದುರುಗಡೆ ನಿಂತು 'ಸುಮಾ ಐ ಲವ್ ಯೂ' ಎಂದು ಹೇಳಲು ಧೈರ್ಯ ಸಾಲುತ್ತಿರಲಿಲ್ಲ.

ಕೆಲವೊಮ್ಮೆ ನಾನು ಅವಳೊಂದಿಗೆ ಮಾತನಾಡಲು ಹಿಂಜರಿದರೆ 'ಏ ಮ್ಯಾನ್ ವ್ಹಾಯ್... ಕಮಾನ್ ಎಂಜಾಯ್ ಯುವರ್‌ಸೆಲ್ಫ್' ಎಂದು ಅತಿ ಆಪ್ತ ರೀತಿಯಿಂದ ಮಾತನಾಡಿಸುತ್ತಿದ್ದಳು,.

ಒಮ್ಮೆ ಟೀ ಶಾಪ್‌ನಲ್ಲಿ ಟೀ ಕುಡಿಯಬೇಕಾದ ಸಂದರ್ಭದಲ್ಲಿ ನಾನು ಸುಮಾ ಮತ್ತು ನನ್ನ ಅನೇಕ ಗೆಳೆಯರೆಲ್ಲರೂ ಕುಳಿತಿದ್ದೆವು. ಯಾರೋ ಇಬ್ಬರು ಹುಡುಗಿಯರು ಜೋರಾಗಿ ನಗುತ್ತ ಕ್ಯಾಂಟೀನ್ ಪ್ರವೇಶಿಸಿದರು. ನಾನು ಅವರಿಬ್ಬರನ್ನು ಸ್ವಲ್ಪ ಮುಗುಳು ನಗುತ್ತಲೆ ನೋಡಿದೆ. ಆಗ ಸುಮಾ ನನ್ನ ಕೈಯನ್ನು ಚೂಟಿ 'ಏ ಕಳ್ಳಿ ಅವರಿಬ್ಬರಲ್ಲಿ ಯಾರ್‍ನ ಸೆಲೆಕ್ಟ್ ಮಾಡ್ಕೋತಿಯಾ' ಎಂದು ಕೇಳಿದಳು. ನಾನೊಮ್ಮೆ ಸುಮಾಳನ್ನು ದಿಟ್ಟಿಸಿ ನೋಡಿದೆ. ಆ ಮುಗ್ಧತೆ ತುಂಬಿದ ಮುಖದಲ್ಲಿ ತುಂಟನಗೆ ಇತ್ತು, ಆಗಲೆ ನನ್ನ ಮನ 'ಸುಮಾ ನಿನ್ನಂತ ಅತಿ ಸುಂದರವಾದ ಮುಗ್ಧ ಪ್ರೇಮಿಯನ್ನು ಬಿಟ್ಟು ಬೇರೆ ಯಾರನ್ನಾದರೂ ಪ್ರೀತಿಸುವೆನೆ ಸುಮ ಐ ಲವ್‌ಯೂ' ಎಂದು ಕೂಗಿ ಕೂಗಿ ಕೇಳುತ್ತಲೆ ಇತ್ತು. ಅದೇ ಧ್ವನಿ ನನ್ನನ್ನು ಹೊರತು ಕೇಳಿಸಿರಲಿಲ್ಲ ಅಷ್ಟೆ. ಮತ್ತೆ ಅವ್ಳು 'ಏ ನಾಟಿ ಏನ್ ನನ್ ಮುಖ ನೋಡ್ತಿಯಾ'. ಹೇಳು ಯಾರನ್ನು ಸೆಲೆಕ್ಟ್ ಮಾಡ್ಕೋತೀಯಾ ಅಂದ್ಲು' ನಾನು ಯಾರನ್ನು ಇಲ್ಲವೆಂಬಂತೆ ತಲೆಯಾಡಿಸಿದೆ.

ಈಗಲೂ ಅವಳು ನನ್ನೊಂದಿಗೆ ನಡೆದುಕೊಳ್ಳುವ ರೀತಿ ಪ್ರೀತಿ ತುಂಬಿದ ಮಾತುಗಳು ಕೇಳಿದರೆ ಈಗಲೆ 'ನಾನಿನ್ನ ಪ್ರೀತಿಸುವೆ ಸುಮಾ' ಅಂತ ಹೇಳಿಬಿಡಲೆ ಎನ್ನಿಸುತ್ತದೆ. ಅದಕ್ಕಾಗಿ ಸಮಯವನ್ನು ಕಾಯುತ್ತಾ ಕುಳಿತಿರುವೆ. ಬರಿ ಮನದಲ್ಲೆ ಗುಟ್ಟಾಗಿ ಐ ಲವ್ ಯೂ ಎಂದರೆ ಅವಳಿಗ್ಹೇಗೆ ಅರ್ಥವಾದೀತು. ಅಂತಹ ಒಳ್ಳೆಯ ಸಮಯ ಸಿಗಲಿ ಎಂದು ಪ್ರೇಮ ದೇವತೆಯಲ್ಲಿ ಕೇಳಿಕೊಳ್ಳುವೆನು, ಸಮಯ ಸಿಕ್ಕಾಗ ಕೂಗಿ ಹೇಳುವೆ 'ಸುಮಾ ನಾಟಿ ಗರ್ಲ್, I Love you' ಎಂದು.

- ಚೆನ್ನಪ್ಪ ಶೇಖರಪ್ಪ ಹೂಗಾರ, ಗದಗ

★

ಪ್ರೇಮಲೋಕದಲ್ಲಿ



ವಸಂತರಾಜನ ಆಗಮನ ವಾಯಿತೆಂದರೆ, ಮಾಮರಕ್ಕೆ ಚಿಗಿಯುವ ತವಕ, ಕೋಗಿಲೆಗೆ ತನ್ನ ಇಂಪಾದ ಕಂಠದಿಂದ ಹಾಡುವಾಸೆಯಾದರೆ ನವ ತರುಣ ತರುಣಿಯರಲ್ಲಿ ಏನೇನೋ ಹೊಸ ಆಸೆ ಕನಸುಗಳು. ಹೀಗೇ ಏನೇನೋ ಅಬ್ಬರಗಳ ನಡುವೆ ವಸಂತ ಕಳೆದು ಗ್ರೀಷ್ಮ ಬಂತೆಂದರೆ ನಿದ್ದೆಯಿಂದೆದ್ದ ಮಗುವಿನಂತೆ ಉದ್ಯೋಗಿಗಳು ರಜೆಯನ್ನು ಮುಗಿಸಿ ತಮ್ಮ ಕೆಲಸಕ್ಕೆ ಅಣಿಯಾಗುವರು, ವಿದ್ಯಾರ್ಥಿಗಳು ತಮ್ಮ ಮುಂದಿನ ತರಗತಿಗಳಿಗೆ ಹೋಗಲು ತವಕಿಸುವರು.

ನನಗೂ ಸಹ ಆ ದಿನಗಳ ನೆನಪು ಇನ್ನೂ ಹಸಿರಾಗಿಯೇ ಇದೆ. ಹತ್ತನೆಯ ತರಗತಿ ಮುಗಿಸಿದ ನನ್ನಲ್ಲಿ ಕಾಲೇಜಿಗೆ ಹೋಗುವ ಯೋಚನೆ, ಆದರೆ ಮನೆಯಲ್ಲಿ ಅದಕ್ಕೆ ಸಮ್ಮತಿ ಇರಲಿಲ್ಲ. ಆದರೂ ಕೊನೆಯಲ್ಲಿ ನನ್ನ ಹಟಕ್ಕೆ ಮಣಿದು ಒಪ್ಪಿಕೊಂಡರು.

ಜುಲೈ 15ರೊಳಗೆ ಅಡ್ಮಿಶನ್ ಮುಗಿದು ಕಾಲೇಜು ಪ್ರಾರಂಭವಾಗಿತ್ತು. ನಾನು ಕಾಲೇಜಿಗೆ ಹೋಗುವುದೋ ಬಿಡುವುದೋ ಎಂಬ ತೊಳಲಾಟದಿಂದ ಹೊರಬಂದು ಕಾಲೇಜಿಗೆ ದಂಡ ಕಟ್ಟಿ ಅಡ್ಮಿಶನ್ ಮಾಡಿದ್ದು ಜುಲೈ 24ರಂದು. ಮರುದಿನ ಅಂದರೆ ಜುಲೈ 25ರಂದು ಮೊದಲ ದಿನದ ಪ್ರವೇಶವಾದ್ದರಿಂದ ಭಯಮಿಶ್ರಿತ ಆನಂದದಿಂದ ಕಾಲೇಜಿಗೆ ಹೋದೆ. ಮೊದಮೊದಲಿನ ದಿನಗಳಲ್ಲಿ ಮುಜುಗರವಾಗುತ್ತಿದ್ದರೂ ಬಹುಬೇಗ ಆ ವಾತಾವರಣಕ್ಕೆ ಹೊಂದಿಕೊಂಡೆ. ನನ್ನ ಅಭ್ಯಾಸದ ಮಟ್ಟ ಚೆನ್ನಾಗಿದ್ದುದರಿಂದ ಎಲ್ಲ ಗುರುಗಳಿಗೆ ಬಹುಬೇಗನೆ ಅಚ್ಚುಮೆಚ್ಚಿನವಳಾದೆ. ನಮಗೆ ಕಲಿಸುತ್ತಿದ್ದ ಒಬ್ಬ ಗುರುಗಳು ಅವಿವಾಹಿತರು. ನಾನು ಅವರ ಗುಣ, ನಡತೆಗಳನ್ನು ಮೆಚ್ಚಿಕೊಂಡೆ. ಅವರೂ ನನ್ನನ್ನು ಇತರರಿಗಿಂತ ಹೆಚ್ಚಾಗಿ ಮೆಚ್ಚಿಕೊಂಡಿರುವುದು ಅವರ ವರ್ತನೆಯಿಂದ ತಿಳಿದುಹೋಯಿತು. ಹೀಗೆ ನಮ್ಮ ಆತ್ಮೀಯ ಬಾಂಧವ್ಯ ಪ್ರೇಮಕ್ಕೆ ತಿರುಗಿತು. ಆದರೆ ಇಬ್ಬರೂ ಹೇಳಲಾರದ ಸ್ಥಿತಿಯಲ್ಲಿದ್ದೆವು. ಆದರೆ ಅದೊಂದು ದಿನ ಅದಕ್ಕೆ ಅವಕಾಶ ಒದಗಿ ಬಂತು. ಅಂದು ಸ್ಟಾಫ್ ರೂಂನಲ್ಲಿ ಅವರನ್ನು ಬಿಟ್ಟರೆ ಉಳಿದವರಾರೂ ಇರಲಿಲ್ಲ. ಜವಾನ ಬಂದು ನನ್ನನ್ನು ಕರೆದಾಗ ಅಳುಕುತ್ತಲೇ ಅಲ್ಲಿಗೆ ಹೋದೆ. ನಾನು ಒಳಗೆ ಕಾಲಿಡುತ್ತಲೇ ಅವರು ಎದ್ದು ಬಂದು ನನ್ನ ಕೈತೆಗೆದುಕೊಂಡು ತಟ್ಟನೇ ಹೂಮುತ್ತನಿಟ್ಟುಬಿಟ್ಟರು. ಅದನ್ನು ನಿರೀಕ್ಷಿಸಿರದ ನಾನು ಅಧೀರಳಾಗಲೇಬೇಕಾಯ್ತು. ಆದರೆ ತಕ್ಷಣ ಸಾವರಿಸಿಕೊಂಡು 'ಇದೇನ್ ಸಾರ್, ಹೀಗೆ ಮಾಡಿದ್ರಿ?' ಎಂದೆ ಅದಕ್ಕವರು. ಕ್ಷಮಿಸು, ನಾನು ನಿನ್ನನ್ನು ತುಂಬಾ ಪ್ರೀತಿಸ್ತಿದೀನಿ. ದಯವಿಟ್ಟು ನನ್ನನ್ನು ದೂರ ಮಾಡ್ಬೇಡ' ಎಂದಾಗ ನನಗೆ ಸ್ವರ್ಗಕ್ಕೆ ಮೂರೇ ಗೇಣು ಎನ್ನುವಷ್ಟು ಸಂತೋಷವಾಯಿತು. ಆದರೆ ಏನೂ ಮಾತನಾಡದೇ ಏನೇನೋ ಕನಸು ಕಾಣುತ್ತಾ ನಿಂತುಬಿಟ್ಟೆ. ನಾನು ಮಾತನಾಡದಿರುವುದನ್ನು ಕಂಡು ಅವರು 'ನೀನು ಈಗಲೇ ಹೇಳು ಅಂತಲ್ಲ. ವೇಳೆ ತಗೋ ಆದ್ರೆ ಉತ್ತರ ಪಾಸಿಟಿವ್ ಇರ್‍ಲಿ' ಎಂದರು. ತಕ್ಷಣ ನಾನೂ ವಾಸ್ತವಕ್ಕೆ ಬಂದವಳೇ 'ಐ ಲವ್ ಯೂ' ಎಂದು ಅವರ ಬಳಿ ಪಿಸುಗುಟ್ಟಿ ಅಲ್ಲಿಂದ ಓಡಿಬಿಟ್ಟೆ. ಅಂದಿನಿಂದ ಇಂದಿನವರೆಗೂ ನಮ್ಮ ಪ್ರೇಮನದಿ ನಿಷ್ಕಲ್ಮಶವಾಗಿ ನಿರಂತರವಾಗಿ ಹರಿಯುತ್ತಲೇ ಇದೆ.

- ಆಸು,

★

ಅವಳ ಪ್ರೀತಿಗಾಗಿ ಕಾದಿರುವೆ

ಐ ಲವ್ ಯೂ ಎಂಬ ಪದವು ಈಗ ಎಲ್ಲರ ಬಾಯಿಯಲ್ಲೂ ಕೇಳಿ ಬರುವಂತಹ ಅಥವಾ ಒಳಗೊಳಗೆ ಗುನುಗುವಂತಹ ವಿಷಯವಾಗಿದೆ. ಈಗ 6 ವರ್ಷದಿಂದ 50 ವರ್ಷದವರ ಬಾಯಿಯಲ್ಲೂ ಇದಕ್ಕೆ ಅರ್ಥವಿಲ್ಲದಂತಾಗಿದೆ. ಆದರೆ ಅದರ ಸಾಂಕೇತಿಕ ಅರ್ಥವನ್ನು ಯಾರೂ ತಿಳಿದುಕೊಂಡಿಲ್ಲ. ಮತ್ತು ಅದರ ಅಗತ್ಯವೂ ಯಾರಿಗೂ ಬೇಕಾಗಿಲ್ಲ.

ಅಂತೂ ಈ ಒಂದು ವಾಕ್ಯವನ್ನು ನನ್ನ ವಿದ್ಯಾರ್ಥಿ ಜೀವನದಲ್ಲಿ ಗುನುಗಿ ಬಿಟ್ಟಿದ್ದೇನೆ, ಮತ್ತು ಬಿಡುತ್ತಿದ್ದೇನೆ. ಅಂತೂ ನಾನು ಸಹ ನನ್ನ ಹೃದಯದಲ್ಲಿ ಒಂದು ಕಮಲದಂತಹ ಪ್ರೇಯಸಿಗೆ ಗೂಡು ಕಟ್ಟಲೂ ಸಹಾಯಕನಾದೆ. ನಾನೂ ಸಹ, ಅವಳ ಎದುರಿಗೆ ಐ ಲವ್ ಯೂ ಎಂದು ಹೇಳಲೂ ತವಕ ಪಡುತ್ತಿದ್ದೆ. ಹಾಗೆ ಅಂತಹ ಒಂದು ಶುಭ ಸಂದರ್ಭ ನನಗೆ ಎದುರು ನೋಡುತ್ತಿತ್ತು. ಆ ದಿನವೇ ನಾನು ಅವಳಲ್ಲಿಗೆ ಹೋಗಿ, ಅವಳ ಹೃದಯ ದಲ್ಲಿ ನಾನು ಇದ್ದೆನೊ? ಎಂಬುದನ್ನು ತಿಳಿಯಲೇಬೇಕೆಂದು, ನಾನು ಕಾಲೇಜು ಬಿಟ್ಟವನೆ ಕಾಲೇಜು ಹೂದೋಟಕ್ಕೆ ಬಂದು ತುಂಬ ಕುತೂಹಲ ದಿಂದ ಅವಳನ್ನು ಹುಡುಕತೊಡಗಿದೆ. ಆಗ ನನಗೆ ಆಶ್ಚರ್ಯವೇ ಆಯಿತು. ಏಕೆಂದರೆ, ಆ ನನ್ನ ಪ್ರೇಯಸಿಯು ಇತರ ಹುಡುಗರೊಂದಿಗೆ ತುಂಬ ತಮಾಷೆಯಾಗಿ ಮಾತನಾಡುತ್ತಿದ್ದಳು. ಇದನ್ನು ನನಗೆ, ನಾನು ಹೇಳಬೇಕೆಂದಿದ್ದ ಐ ಲವ್ ಯೂ ಎಂಬ ಪದವನ್ನು ನನ್ನ ತುಟಿಯಂಚಿನಲ್ಲಿ ಇಟ್ಟುಕೊಂಡು ಬಂದಿದ್ದನ್ನು ನಂತರ ಆ ಪದವನ್ನೇ ನನ್ನ ಪ್ರೇಯಸಿಗಾಗಿ ನಾನೇ ಒಳಗೊಳಗೆ ನುಂಗಿಕೊಂಡೆ. ಆದರೂ ಸಹ ನನ್ನ ಹೃದಯದಲ್ಲಿ ಗೂಡು ಕಟ್ಟಿದ ಅವಳನ್ನು ಈಗಲೂ ಕಿತ್ತೊಗೆಯಲೂ ಸಾಧ್ಯವಾಗಿಲ್ಲ, ಸಾಧ್ಯವಾಗುತ್ತಿಲ್ಲ.

ನಾನು ನನ್ನ ಪ್ರೇಯಸಿಗೆ ಹೇಳಬೇಕೆಂದಿರುವ 'ಐ ಲವ್ ಯೂ' ಎಂಬ ಪದಕ್ಕೆ ಅವಳು ಯಾವಾಗ ಪ್ರತಿಕ್ರಿಯೆ ತೋರಿಸುತ್ತಾಳೊ? ತಿರಸ್ಕರಿಸುತ್ತಾಳೊ? ಇಲ್ಲ, ಅದಕ್ಕೆ ಒಂದು ಫುಲ್‌ಸ್ಟಾಪ್ ನೀಡುತ್ತಾಳೊ? ಎಂದು ನಾನು ಅವಳಿಗಾಗಿಯೇ (ಪ್ರೇಯಸಿಗಾಗಿಯೇ) ಕಾದು ನೋಡುತ್ತಿದ್ದೇನೆ.

- ಗಣಪತಿ ಬೆಳ್ಳಿ, ಭಟ್ಕಳ

★

ನೀವೂ ಪ್ರೀತಿಸಿ ನೋಡಿ

ಜೀವನದಲ್ಲಿ ಪ್ರೇಮಿಸಿರಿ, ಇಲ್ಲವಾದರೆ ಮದುವೆ ಆದನಂತರ ಪ್ರೀತಿಸಿರಿ. ಅಥವಾ ಮದುವೆ ಆಗುವ ಮೊದಲು ಪ್ರೀತಿಸಿರಿ. ಈ ಪ್ರೀತಿಯಲ್ಲಿ 'ಐ ಲವ್ ಯೂ' ಎಂಬ ಶಬ್ದವನ್ನು ಬಳಸಿರಿ. ಆ ಒಂದು ಶಬ್ದದಿಂದ ನಿಮ್ಮ ಅನುಭವ ಏನೆಂದು ನೋಡಿರಿ. ಆದರೆ ಇದರಲ್ಲಿ ಮದುವೆ ಮೊದಲು ಪ್ರೀತಿಯಲ್ಲಿ ನನ್ನ ಅನುಭವ ಹೇಳುತ್ತೇನೆ. ನಾನು ಜೀವನದಲ್ಲಿ ಮೊದಲನೆ ಸಲ ಒಬ್ಬ ವ್ಯಕ್ತಿಯನ್ನು ಪ್ರೀತಿಸಿದೆ. ಆದರೆ, ಅವನಿಗೆ ಪ್ರೀತಿಸುತ್ತೇನೆಂದು ಯಾವತ್ತೂ ಹೇಳಲಿಲ್ಲಾ. ಅವನ ಕಣ್ಣಿನ ಭಾವನೆಯಿಂದಲೇ ಅವನಿಗೆ ನನ್ನಲ್ಲಿ ಪ್ರೀತಿ ಇದೆ ಎಂದು ಗೊತ್ತಾಯಿತು. ಅವನ ಮುಂದೆ ಐ ಲವ್ ಯೂ ಎಂದು ಹೇಳುವ ಧೈರ್ಯ ನನಗೆ ಇಲ್ಲವಾಗಿತ್ತು. ಆದರೆ, ಅವನ ಈ ಮಾತಿಗೆ ದಾರಿ ಕಾಯುತ್ತಿದ್ದ ನನಗೆ ಒಂದು ದಿನ ಅವನು ಹೇಳಿದ್ದೇ ತಡ ಸ್ವರ್ಗ ನನ್ನ ಕೈಯಲ್ಲೇ ಬಂದಂತಾಯಿತು. ನನ್ನ ಕನಸು ನನಸಾಯಿತು. ಆದರೆ, ನಾನು ಯಾವತ್ತೂ ಅವನಿಗೆ ಐ ಲವ್ ಯೂ ಅಂತಾ ಹೇಳಲಿಲ್ಲಾ. ಹೇಗೋ 2 ತಿಂಗಳ ಮೇಲೆ ಅವನಾಗಿಯೇ ನನ್ನನ್ನು ಐ ಲವ್ ಯೂ ಎಂದು ಹೇಳು ಎಂದ ಆದರೆ, ನನಗೆ ಎಷ್ಟು ಹೇಳಲೂ ಹೋದರೂ ಸಾಧ್ಯಾನೇ ಆಗಲಿಲ್ಲಾ. ಕೊನೆಗೂ ಹೇಳಲು ಮನಸ್ಸು ಮಾಡಿದಾಗ ಆ 'ಐ' ಎಂಬ ಶಬ್ದ ನನ್ನಲ್ಲಿ ಎಂಥಹ ಮಧುರ ಭಾವನೆ ತುಂಬಿ ತುಳುಕಾಡಿತ್ತು ಅಂದರೆ, ನನ್ನ ಹೃದಯ, ಮನಸ್ಸು ಎಲ್ಲೋ ತೇಲಾಡಿದ ಅನುಭವವಾದಂತಾಯಿತು. ಈ 'ಐ' ಎಂಬ ಶಬ್ದದಲ್ಲಿ ನಾನು ಎಂಬ 'ಅಹಂ' ನನ್ನನ್ನು ಎಷ್ಟು ಮುಗ್ಧ ಮೂರ್ಖನನ್ನಾಗಿ ಮಾಡಿತ್ತು. ಅಂದರೆ 'ಐ' ಎಂಬುದು ನಾನಾಗಿ ಇರಲಿಲ್ಲ ಅವನಲ್ಲಿ ಲೀನವಾದಂತಿತ್ತು. ಈ 'ಲವ್' ಎಂಬ ಇಂಗ್ಲಿಷ್ ನಾಲ್ಕು ಅಕ್ಷರ ನನ್ನ ಹೃದಯವೇ ಅದರಲ್ಲಿ ಬೆಸೆದುಗೊಂಡಿತ್ತು. ಕಾಯಾ, ವಾಚಾ, ಮನಸಾ ಹಾಗೂ ಮದುವೆ ವೇಳೆಯಲ್ಲಿ 'ಮಾಂಗಲ್ಯಂ ತಂತು ನಾನೇನ' ಎನ್ನುವಂತೆ ಅವನಲ್ಲಿ ಕೂಡಿಕೊಂಡಿತ್ತು. ಇನ್ನೊಂದು 'ಯು' ಎಂಬ ಈ ಮೂರು ಅಕ್ಷರದಲ್ಲಿ ಮೂರು ತರಹದ ಗುಣಗಳು ಕೂಡಿದ್ದವು.

ಅವನಲ್ಲಿ ನನ್ನ ಸುಖ - ದುಃಖಗಳೆರಡೂ ತುಂಬಿರುತ್ತವೆಂದೂ, ನಾವು ಯಾವತ್ತು ಅಗಲಲಾರದ ಹೂಗಳೆಂದೂ, ಯಾವತ್ತೂ ಎರಡೂ ಒಂದೇ ದೇಹ ಎಂಬ ಭಾವನೆ ಕೂಡಿತ್ತು. ಅದು ಈ ಐ ಲವ್ ಯೂ ಈ ಮೂರು ಪದ 1, 4, 3 ಎಂದು ಕರೆಯಬಹುದು. ಇದು ಅನುಭವಿಸುವವರಿಗೆ ಮಾತ್ರ ಗೊತ್ತು. ಇದು ಯಾವತ್ತೂ ನನ್ನವನಿಗೆ ಮೀಸಲಾಗಿರುವ ಅಕ್ಷರವಾಗಿರುತ್ತದೆ. ಅವನು ಯಾವತ್ತೂ ನನ್ನಿಂದ ದೂರ ಇದ್ದಾಗ ಈ ಐ ಲವ್ ಯೂ ಹೇಳಿದ. ಸಮಯವನ್ನು ಜ್ಞಾಪಿಸಿಕೊಂಡು ಅವನ ನೆನಪಿನಲ್ಲಿ ಕಾಲ ಕಳೆಯುತ್ತೇನೆ. ಈ ರಸಾನುಭವ ಎಲ್ಲರಿಗೂ ಸಿಗುವುದಿಲ್ಲಾ. ಅದಕ್ಕೂ ಒಂದು ಅದೃಷ್ಟ ಬೇಕಾಗುತ್ತದೆ. ಕಾಟಾಚಾರಕ್ಕೆ ಹೇಳುವ ಐ ಲವ್ ಯೂ ಬೇರೆ ಅರ್ಥ. ಅದರಲ್ಲಿ ಬರೀ ಸ್ವಾರ್ಥ, ಕಾಮುಕತೆಯೇ ತುಂಬಿರುತ್ತದೆ. ಹಾಗೂ ಜೀವನದ ದಾರಿಗಾಗಿ ಜೀವ ಬೆಸುಗೆಯ ಐ ಲವ್ ಯೂ ಎಂದು ಹೇಳುವುದೇ ಒಂದು ತರಹದ ರೋಮಾಂಚಕ ಅನುಭವ. ಅದನ್ನೂ ಬರೀ ಹೇಳಿದರೆ ಗೊತ್ತಾಗದು. ಅನುಭವಿಸುವವರಿಗೆ ಮಾತ್ರ ಗೊತ್ತು. ನಿಮಗೆ ಯಾರಿಂದಲೂ ಹೇಳಿಸಿಕೊಳ್ಳಬೇಕಾದರೆ ಪ್ರೀತಿಸುವವರಿಗೆ ಹೃದಯ ಕೊಟ್ಟು ಅನುಭವ ಪಡೆಯಿರಿ. ನಿಮಗೆ ಇದರಿಂದ ಸಿಹಿ ಮುತ್ತಿನ ಅನುಭವ ವಾಗುವುದು. ಈ ಒಂದು ಸ್ಪರ್ಧೆಯಿಂದ ನನ್ನ ಪ್ರಿಯನಿಗೆ ಇನ್ನೊಮ್ಮೆ ಐ ಲವ್ ಯೂ ಸುನೀ ಎಂದು ಹೇಳುವುದಕ್ಕೆ ಅನುವು ಮಾಡಿಕೊಟ್ಟಿದ್ದಕ್ಕೆ ನಿಮಗೆ ನನ್ನ ಧನ್ಯವಾದಗಳು.

- ಸೋನು ಎಂ.ಎಸ್, ಕಾರವಾರ, ಉ.ಕ.



'ಮಾತು ಅರಿಯದ ಮುಗ್ಧೆಯ ಪ್ರಣಯ ಸಂಕೇತ'

ಟೀಸೊಪ್ಪು - ನೀನಿಲ್ಲದೆ ಚಹಾ ಸೇರುತ್ತಿಲ್ಲ.

ಹುಲ್ಲುಕಡ್ಡಿ - ನೀನಿಲ್ಲದೆ ಸೊರಗಿ ಕಡ್ಡಿಯಾಗಿರುವೆ.

ಕೆಂಪುಹಣ್ಣು - ನೀನು ಮೊದಲು ಕಂಡಾಗ ರಸಗುಲ್ಲ ತರ ಇದ್ದೆ.

ಒಣಗಿದ ಹಣ್ಣು - ನೀನಿಲ್ಲದೆ ಒಣಗಿದ ಹಣ್ಣಿನ ಹಾಗೆ ಆಗಿದ್ದೇನೆ.

ಇದ್ದಿಲ ತುಂಡು - ನಿನ್ನ ಪ್ರೇಮದಿಂದ ಉರಿಯುತ್ತಿರುವೆ.

ಹೂವು - ನೀನು ತುಂಬಾ ಚೆಲುವಾ.

ಕಲ್ಲು ಸಕ್ಕರೆ - ನೀನು ಬೇಗ ಬಾ ಸಿಹಿಯಾದ ಸುದ್ದಿಯೊಂದಿಗೆ.

ಕಲ್ಲು - ನನಗೆ ರೆಕ್ಕೆ ಇದ್ದರೆ ಹಾರಿಬರುತ್ತಿದ್ದೆ.

ಬೀಜ - ನಿನ್ನಲ್ಲಿ ನಾನು ಅರ್ಪಿತಳಾಗಿದ್ದೇನೆ.

'ನಾನೊಂದು ಹೂವಾಗಬೇಕು ಆ ಹೂವಿನ ಪರಿಮಳ ನೀನಾಗಬೇಕು'

- ಅನಿತಾ ಕೆ.ಗುಡಿ, ಇಲಕಲ್ಲ.

ಅಗಲಿದ ಆಪ್ತರು

ಓದುಗರ ವೇದಿಕೆ

ನನ್ನ ಚಿಕ್ಕಪ್ಪ



ಮಧ್ಯಮ ವರ್ಗದವನಾದ ನಾನು ಕಪಿ ಕೇಳಿಸದಿದ್ದರೂ ಸತತ ಪರಿಶ್ರಮಪಟ್ಟು ಪದವಿ ಪಡೆದು ಕೊಟ್ಟೂರಿನ ಪದವಿ ಕಾಲೇಜಲ್ಲಿ ಅತ್ಯಲ್ಪ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದೆ. ಒಂದು ದಿನ ಇದ್ದಕ್ಕಿದ್ದಂತೆ ರಾತ್ರಿ ಕರಾಳ ಸುದ್ದಿಯನ್ನು ಕೇಳಿದಾಗ ನನಗೆ ನಂಬಲಾಗಲಿಲ್ಲ. ಊರಿಂದಲೇ ಹುಡುಗರನ್ನು ಕಳಿಸಿದ್ದರು, ನಿಮ್ಮ ಚಿಕ್ಕಪ್ಪ ಹೃದಯಾಘಾತದಿಂದ ನಿಧನರಾದರೆಂದು. ಇಡೀ ರಾತ್ರಿ ನಿದ್ರೆ ಬರಲಿಲ್ಲ. ಯಾರೋ ಕಾಗೆ ಮಿಥುನ ನೋಡಿ ಈ ರೀತಿ ಸುಳ್ಳು ಹೇಳಿ ಕಳಿಸಿರಬಹುದೆಂದು ಧೈರ್ಯ ತಾಳಿ ಊರಿಗೆ ಹೋದಾಗ ನನ್ನ ಜಂಘಾಬಲವೇ ಹುದುಗಿ ಹೋದಂತಾಯಿತು.

ಅವಿದ್ಯಾವಂತರಾದ ನನ್ನ ಚಿಕ್ಕಪ್ಪ ತಾವು ಎಷ್ಟೇ ಕಷ್ಟ ಪಟ್ಟುಕೊಂಡರೂ ಸದಾ ನನ್ನ ಹಿತದ ಬಗ್ಗೆ ಚಿಂತಿಸುತ್ತಿದ್ದರು. ಖಾಲಿ ಇರುವುದೆಂದರೆ ಆವರಿಗಾಗುತ್ತಿರಲಿಲ್ಲ. ಕರ್ತವ್ಯದಲ್ಲಿ, ದುಡಿಮೆಯಲ್ಲಿ ಸ್ವಲ್ಪ ಏರುಪೇರಾದರೂ ಉಗ್ರರಾಗುತ್ತಿದ್ದರು. ಒಮ್ಮೆ ಬಾಲ್ಯದಲ್ಲಿ ದನಗಳನ್ನು ಮೇಯಲು ಬಿಡಲು ಅಂದರೆ ಹಗ್ಗ ಬಿಚ್ಚಿ ಕಾಯುವವರಿಗೆ ಹೊಡೆದು ಕೊಡದ ಗೋಲಿ ಆಡುತ್ತಿದ್ದಾಗ ಸಹನೆ ಕಳೆದುಕೊಂಡ ಚಿಕ್ಕಪ್ಪ ನನ್ನಲ್ಲಿ ಬಂದವರೆ ಸಾಕಷ್ಟು ಬೈಯ್ದು ತಲೆಗೆ ರೊಪ್ಪನೆ ಏಟು ಕೊಟ್ಟರು. ಆ ಏಟು ಎಷ್ಟಿತ್ತೆಂದರೆ ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದೆ. ಎಚ್ಚರವಾದಾಗ ಅವರ ತೊಡೆಯ ಮೇಲಿದ್ದೆ. ಮೊಟ್ಟ ಮೊದಲ ಬಾರಿಗೆ ಅವರ ಕಣ್ಣು ನೀರಿಂದ ಮಂಜಾಗಿತ್ತು. ತೊಯ್ದ ನನ್ನ ತಲೆ ಸವರುತ್ತಾ 'ಮಗಾ ಜೀವಿಸಲು ದುಡಿಯಬೇಕು, ದುಡಿದು ಉಣ್ಣಬೇಕು, ಹಾಲು ಮೊಸರು ಕೊಡುವ ಮೂಕ ಪ್ರಾಣಿಗಳಿಗೆ ನಾವು ಹುಲ್ಲನಾದರೂ ಕೊಡದಿದ್ದರೆ ನಾವು ಮನುಷ್ಯರಾ....!?' ಅಂದ ಮಾತುಗಳು ಈಗಲೂ ಎದೆಯನ್ನು ಮೀಟುತ್ತವೆ. ಈಗ ನಾನು ಅಂಚೆ ಇಲಾಖೆಯ ಉದ್ಯೋಗಿ. ಆದರೆ ನಾನು ದುಡಿದು ತಿನ್ನುವುದನ್ನು ನೋಡಲು ನನ್ನ ಚಿಕ್ಕಪ್ಪ ಇದ್ದಿದ್ದರೆ, ಅವರ ಸೇವೆಗೆ ಅವಕಾಶ ಸಿಕ್ಕಿದ್ರೆ ಅಂತ ಹಲವಾರು ಬಾರಿ ಅಂದುಕೊಳ್ಳುತ್ತಿರುತ್ತೇನೆ. ದುಡಿಯುವ ದುಡಿದು ಎಲ್ಲರನ್ನೂ ಪ್ರೀತಿಸುವ, ನವಿಲು, ಗಿಳಿ, ಮೊಲ, ಪಾರಿವಾಳ, ದನಗಳೆಲ್ಲವನ್ನು ಸಾಕಿ ಸಲುಹಿದ ಚಿಕ್ಕಪ್ಪನನ್ನು ಇನ್ನೂ ವಯಸ್ಸಿರುವಾಗಲೇ ದೇವರು ನಮ್ಮಿಂದ ದೂರ ಮಾಡಿಬಿಟ್ಟ.

-ಶಿವಪ್ಪ ಹುರುಳಿಹಾಳ್, ಬೆಂಗಳೂರು

★

ಮಾಸದ ಕಹಿ ಘಟನೆ

ಅಂದು ನನಗೆ ಬಹಳ ಕರಾಳ ದುಃಖದ ದಿನವಾಗಿತ್ತು. ನಾನು ಅತಿ ಗೌರವ ಅಭಿಮಾನದಿಂದ ಕಾಣುತ್ತಿದ್ದ ನನ್ನ ಸ್ನೇಹಿತನ ತಂದೆಯವರು ನನ್ನನ್ನಷ್ಟೆ ಅಲ್ಲ, ನನ್ನೆಲ್ಲ ಗೆಳೆಯ ವೃಂದವನ್ನೇ ಅಗಲಿದ್ದರು. ನನ್ನ ಗೆಳೆಯನಿಗಿಂತ ಅವರು ನನಗೆ ತುಂಬ ಹತ್ತಿರವಾದ ಆಪ್ತರಾಗಿದ್ದರು. ಅವರ ಸಾವಿನ ಸುದ್ದಿ ತಿಳಿದಾಗ ನನ್ನ ಗೆಳೆಯ ವೃಂದಕ್ಕೆಲ್ಲ ಆಶ್ಚರ್ಯಕರ ಮತ್ತು ಅಷ್ಟೆ ಆಘಾತಕಾರಿಯಾಗಿತ್ತು. ನನ್ನ ಗೆಳೆಯರೊಂದಿಗೆ ಅದೇ ನಸುಕಿನಲ್ಲಿ ವಾಕಿಂಗ್ ಬಂದ ಅವರು ಬೆಳಿಗ್ಗೆ ಹೃದಯಾಘಾತದಿಂದ ತೀರಿಕೊಂಡರೆಂದು ತಿಳಿದಾಗ, ನನ್ನ ಹೃದಯದ ಮೇಲೆ ಮುಳ್ಳಿನ ಬೇಲಿಯನ್ನು ಸುತ್ತಿದಂತಾಯ್ತು, ಸಿಡಿಲೆರಗಿದ ಮರದಂತಾಗಿತ್ತು ನನ್ನ ಮನ. ತಮ್ಮ ಮಗನಂತೆ, ನನ್ನ ಮತ್ತು ನನ್ನೆಲ್ಲ ಗೆಳೆಯರನ್ನು ತಮ್ಮ ಮಕ್ಕಳಂತೆ ಅತಿ ಹೆಚ್ಚಿನ ಪ್ರೀತಿಯಿಂದ ಕಾಣುತ್ತಿದ್ದ ಅವರು ನನ್ನೊಬ್ಬನನ್ನಲ್ಲದೆ ಗೆಳೆಯವೃಂದವನ್ನೇ ಅಗಲಿದ್ದರು.

ನನ್ನ ತಂದೆ ತೀರಿದಾಗ 'ಮಗು ನೀನು ಅಳಬಾರ್ದು, ಮನೆಗೆ ಹಿರಿಮಗ ನೀನಾಗಿ, ಇನ್ಮೇಲೆ ಮನೆಯ ಜವಾಬ್ದಾರಿಯನ್ನು ಚೆನ್ನಾಗಿ ನೋಡ್ಕೋಬೇಕು' ಎಂದು ನನ್ನಲ್ಲಿ ಧೈರ್ಯ ತುಂಬಿದ್ದರು. ಅವರ ಬಗ್ಗೆ ನನಗೆ ಅಭಿಮಾನದ ಮತ್ತು ಗೌರವದ ಭಾವನೆಯಿತ್ತು.


ಮೊನ್ನೆ ಅಂದರೆ ಈಗ ಎರಡು ತಿಂಗಳುಗಳ ಹಿಂದೆ ಅವರ 60ನೇ ಹುಟ್ಟು ಹಬ್ಬದ ದಿನದಂದು 'ನೂರು ಕಾಲ ಬಾಳಿರೀ ನೀವು, ದೇವರು ನಿಮಗೆ ಆಯುರಾರೋಗ್ಯ ನೀಡಲಿ' ಎಂದು ನಾನು ನನ್ನ ಗೆಳೆಯರೆಲ್ಲರು ಸೇರಿ ಒಂದು ಶುಭಾಶಯ ಪತ್ರವನ್ನು ನೀಡಿದ್ದೆವು. ಆದರೆ 'ದೇವರ ಬಹುದೊಡ್ಡ ಕೊಡುಗೆಗಳೆಂದರೆ ನಮ್ಮ ಹಲವು ಈಡೇರದ ಮೊರೆಗಳು' ಎನ್ನುವಂತೆ ನಮ್ಮ ಪ್ರಾರ್ಥನೆ ಆ ದೇವರಿಗೆ ಕೇಳಿಸಲೇ ಇಲ್ಲ.

ಅವರು ಅಗಲಿದ ದಿನ ನನ್ನ ಮತ್ತು ನನ್ನ ಗೆಳೆಯರೆಲ್ಲರಿಗೂ ತುಂಬಲಾರದ ಹಾನಿಯಾಗಿತ್ತು. ನನ್ನ ಶುಭ್ರ ಮನಸ್ಸಿನ ಮೇಲೆ ಗಾಯದ ಕಪ್ಪು ಕಲೆಯಾಗಿ ಎಂದಿಗೂ ಮಾಸದಂತ ಒಂದು ಕಹಿ ಘಟನೆಯಾಗಿಯೆ ಉಳಿಯಿತು.

-ಚನ್ನಪ್ಪ ಶೇಖರಪ್ಪ ಹೂಗಾರ, ಗದಗ.

★

ತಂದೆಯ ಮನಸ್ಸು



ಈಗ್ಗೆ ಸುಮಾರು ಒಂಬತ್ತು ವರ್ಷಗಳ ಹಿಂದೆ ನಾನು 7ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದೆ. ನನ್ನ ತಂದೆ ಖಾಜೇಲಾಲ ಸಾಹೇಬರಿಗೆ ಬ್ಲಡ್ ಕ್ಯಾನ್ಸರ್ ಆಗಿತ್ತು. ಹೈದರಾಬಾದಿನ ಉಸ್ಮಾನಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೆಲವು ದಿವಸದ ನಂತರ ವೈದ್ಯರ ಸಲಹೆಯಂತೆ ರೋಗ ವಾಸಿಯಾಗಿದೆಯೆಂದು ಊರಿಗೆ ಬಂದರು. ಎಲ್ಲರನ್ನು ಸರಿಯಾಗಿ ಮಾತಾಡಿಸಿದರು. ಆದರೆ 2 - 3 ದಿವಸದ ನಂತರ ರೋಗ ಮತ್ತೆ ಕಾಡಿಸಲು ಹತ್ತಿದ್ದರಿಂದ ಗುಲ್ಬರ್ಗಾದ ಕೆಬಿಎನ್ ಆಸ್ಪತ್ರೆಗೆ ಅಡ್ಮಿಟ್ ಮಾಡಿದರು. ಅಲ್ಲಿ ಅವರ ನೆರವಿಗಾಗಿ ನಮ್ಮ ಇಬ್ಬರು ಅಜ್ಜಂದಿರು (ತಂದೆಯವರ ತಂದೆ ಮತ್ತು ತಾಯಿಯವರ ತಂದೆ) ಸರ್ವ ಪ್ರಯತ್ನ ಮಾಡಿದರೂ ರೋಗ ಹತೋಟಿಗೆ ಬರಲಿಲ್ಲ. ದಿನದಿಂದ ದಿನಕ್ಕೆ ಉಲ್ಬಣವಾಗುತ್ತಲೇ ಹೋಯಿತು.

ಸಾಯುವ 2 ದಿವಸ ಮುಂಚೆ ನನಗೆ ಬರ ಹೇಳಿದ್ದರು. ನಾನು ಅವರ 4 ಮಕ್ಕಳಲ್ಲಿ ದೊಡ್ಡವನು. ನನಗೆ ಅವರು ಏನು ಹೇಳುವವರಿದ್ದಾರೋ, ನನ್ನ ಭಾವೀ ಜೀವನದ ಬಗ್ಗೆ ಏನು ನಿರ್ದೇಶನಗಳನ್ನು ನೀಡುವರೋ ಎಂದು ಅವರ ಮಾತುಗಳನ್ನು ಕೇಳಲು ಉತ್ಸುಕನಾಗಿದ್ದೆ. ಆದರೆ ನಾನು ನಮ್ಮ ಊರಿನ ಇನ್ನೂ ಇಬ್ಬರ ಜೊತೆ ಹಣ ಹೊಂದಿಸಿಕೊಂಡು ಹೋಗಬೇಕಾಗಿದ್ದರಿಂದ ನಮ್ಮ ತಂದೆಯವರು ಸಾಯುವ ದಿವಸವೇ ನಾನು ಹೋಗಬೇಕಾಯಿತು. ನಾನು ಇನ್ನಿಬ್ಬರು ಆಪ್ತರೊಡನೆ ಇಜೇರಿಯಿಂದ ಜೇವರ್ಗಿಗೆ ಬಸ್ಸಿನಲ್ಲಿ ಹೋಗಿ ಅಲ್ಲಿ ಗುಲ್ಬರ್ಗಾಕ್ಕೆ ಹೋಗುವ ಬಸ್ಸನ್ನು ಹತ್ತುತ್ತಿದ್ದಾಗ, ಒಬ್ಬರು ಬಂದು 'ಅಂಬುಲೆನ್ಸ್ ಬಂದಿದೆ ಬನ್ರಿ, ಇಳಿರಿ', ಎಂದು ಮುಖ ಕಿವುಚಿ ಹೇಳಿದಾಗ, ಎಲ್ಲರೂ ಗಾಬರಿಯಾಗಿ ಓಡಿ ಅಂಬುಲೆನ್ಸ್ ಹತ್ತಿದೆವು. ಆಗ ನನಗೆ ಅಷ್ಟು ಪ್ರಜ್ಞೆ ಇರಲಿಲ್ಲ. ಅಲ್ಲಿದ್ದವರು 'ನಿಮ್ಮ ತಂದೆಯವರಿಗೆ ಏನೂ ಆಗಿಲ್ಲ ಆರಾಮಾಗಿದ್ದಾರೆ. ಸ್ವಲ್ಪ ಮಲಗಿದ್ದಾರೆ ಅಷ್ಟೆ' ಎಂದು ಹೇಳಿ ನನಗೆ ಸಮಾಧಾನಪಡಿಸಿದರು. ಆದರೂ ನನ್ನ ಮನಸ್ಸಿನಲ್ಲಿ ಒಂದು ರೀತಿಯ

ತಳಮಳ ಉಂಟಾಯಿತು. ಎಲ್ಲರ ಮುಖಗಳು ಬಾಡಿದ್ದವು. ನನ್ನ ಅಜ್ಜನವರಿಗೆ ದುಃಖ ತಡೆಯಲಾಗುತ್ತಿರಲಿಲ್ಲ. ಅವರು ಅಳಲು ಪ್ರಾರಂಭಿಸಿದಾಗ ಉಳಿದವರು ಅವರನ್ನು ಸುಮ್ಮನೆ ಕೂಡಿಸುತ್ತಿದ್ದರು. ನನಗಂತೂ ಅವರು ಹಿಂದೆ ಹೇಳಿದ ಬುದ್ಧಿಮಾತುಗಳೇ ನೆನಪಿಗೆ ಬರುತ್ತಿದ್ದವು. 'ಈ ಕಾಲದಲ್ಲಿ ಹುಷಾರಾಗಿರಬೇಕು. ನಿಮ್ಮ ಕಾಲ ಮೇಲೆ ನೀವು ನಿಲ್ಲುವುದನ್ನು ಕಲಿಯಬೇಕು. ನಾವಂತೂ ಹೇಗಾದರೂ ಬದುಕುತ್ತೇವೆ. ನಿಮ್ಮ ಮುಂದಿನ ಜೀವನಕ್ಕೆ ನೀವು ಸಜ್ಜಾಗಬೇಕು' ಎಂದು ಅವರು ಹೇಳಿದ ಮಾತುಗಳು ನನ್ನ ಮನಸ್ಸಿನಲ್ಲಿ ಪುನಃ ಪುನಃ ಬರುತ್ತಿದ್ದವು. ನಾವು ಊರಿಗೆ ಹೋಗಿ ಇಳಿದಾಗ ಅಲ್ಲಿ ಜನರು ಅಳುತ್ತಿರುವಾಗಲೇ ನನಗೆ ನಿಚ್ಚಳವಾಗಿ ನನ್ನ ತಂದೆಯವರು ಇಹಲೋಕದ ಪಯಣ ಮುಗಿಸಿದ್ದು ಅನುಭವಕ್ಕೆ ಬಂತು. ಅವರು ಏನು ಹೇಳುತ್ತಾರೋ ಎನ್ನುವ ನನ್ನ ಮನಸ್ಸಿನ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು. ಆ ಪ್ರಸಂಗವನ್ನು ನೆನಪಿಸಿದರೆ ನನ್ನ ಹೃದಯ ಝಿಲ್ ಎನ್ನುತ್ತದೆ.

- ಶಬ್ಬೀರ್ ಅಹಮದ್, ಮಡಕಿ, ಇಜೇರಿ.

★

ಆ ದೇವರಿಗೆ ಕರುಣೆ ಇದೆಯೇ!

ಅದಾಗ ತಾನೇ ಕರ್ತವ್ಯ ಮುಗಿಸಿ ಬಂದ ನನ್ನನ್ನ 'ಸಾಹೇಬರು ಕರೆಯುತ್ತಿದ್ದಾರೆ' ಎಂದ ಜವಾನ. ಏನಿರಬಹುದೆಂದುಕೊಳ್ಳುತ್ತಾ ಚೇಂಬರ್ ಪ್ರವೇಶಿಸಿದೆ. ನನ್ನನ್ನ ಒಂದು ಕ್ಷಣ ಬಿಟ್ಟಗಣ್ಣಿಂದ ಬಿಟ್ಟಂತೆ ನೋಡಿದ ಸಾಹೇಬರು, 'ನೀವು ತಕ್ಷಣ ಊರಿಗೆ ಹೋಗಿ ನಿಮ್ಮ ಸ್ನೇಹಿತರು ತೀರಿಕೊಂಡರಂತೆ!' ಅಂದರು. ಗಾಬರಿಯಿಂದ ಯಾರು ಸಾರ್ ಎಂದೆ. 'ಅದೇ ರವಿಯಂತೆ, ಯುವ ಮುಖಂಡರು.' ಅಂದರು.

ಆಕಾಶವೇ ಕಳಚಿ ಬಿದ್ದಂತೆಯಾಯಿತು. ನಂಬಲಿಕ್ಕೆ ಆಗದ ಮಾತು. ಬೆಳಿಗ್ಗೆ ಬರುವಾಗ ಜೊತೆಯಲ್ಲಿ ನಿಂತು ಮಾತಾಡಿ, ಚಹಾ ಹೀರಿ ಬಂದಿದ್ದೆ, ಕೇವಲ ಐದಾರು ಗಂಟೆಗಳಿಗೆ ಇಲ್ಲ. ಹೋಗಿ ಬಿಟ್ಟ ಎಂದರೆ, ಸಾಹೇಬರು ಸುಳ್ಳು ಹೇಳುತ್ತಿದ್ದರೇನೋ ಅನಿಸಿತು. ತತ್‌ಕ್ಷಣ ಮನಸ್ಸು, ಅವರಿಗಾದರೂ ನನ್ನ ಊರು, ಸ್ನೇಹಿತ, ಅವನ ವಿವರ ಹೇಗಾದರೂ ಗೊತ್ತು ಎಂದಿತು.

ಗೆಳೆಯ ರವಿ ನನ್ನ ಆಪ್ತರಲ್ಲಿ ಒಬ್ಬನಾಗಿದ್ದ. ನನಗೂ ಅವನಿಗೂ ವಯಸ್ಸಿನ ಅಂತರ ಹತ್ತು ಹನ್ನೆರಡು ವರ್ಷವಿದ್ದರೂ, ನನ್ನನ್ನ ಒಮ್ಮೆಯೂ ಏಕವಚನದಲ್ಲಿ ಕರೆದವನಲ್ಲ. ನಾನೆಂದರೆ ಅವನಿಗೆ, ಅವನೆಂದರೆ ನನಗೆ ಅಪಾರ ಅನ್ಯೋನ್ಯ, ಅದೆಂತಹದೋ ಪ್ರೇಮ! ರಾಜಕೀಯ ಅವನ ಕ್ಷೇತ್ರವಾದರೆ, ಪತ್ರಿಕೆಯಲ್ಲಿ ಬರೆಯುವುದು ನನ್ನ ಕ್ಷೇತ್ರ. ಹಾಗಾಗಿ ಅವನ ಹಲವು ಹೇಳಿಕೆಗಳನ್ನು ಪತ್ರಿಕೆಗಳಿಗೆ ಬರೆದು ಕಳಿಸುವ ಜವಾಬ್ದಾರಿ ನನ್ನದಾಗಿತ್ತು. ಅಷ್ಟೇನೂ ಓದದಿದ್ದರೂ ಅವನ ತಿಳುವಳಿಕೆ ಯಾವ ಪದವಿ ಪಡೆದವನಿಗೂ ಕಡಿಮೆಯಿರಲಿಲ್ಲ. ಜನಸಾಮಾನ್ಯರಿಗೆ ಅವನು ಸ್ಪಂದಿಸುತ್ತಿದ್ದ ರೀತಿ, ಕೋರ್ಟು, ಪೊಲೀಸ್, ಇಲಾಖೆ ಕೆಲಸಗಳನ್ನು ಅವನು ಹ್ಯಾಂಡಲ್ ಮಾಡುತ್ತಿದ್ದ ರೀತಿ ವಿಶಿಷ್ಟವಾಗಿತ್ತು. ಮಂಡಲ ಪಂಚಾಯ್ತಿ ಸದಸ್ಯನಾಗಿ, ಪಕ್ಷವೊಂದರ ಯುವ ವಿಭಾಗದ ಮುಖಂಡನಾಗಿ, ಜನಪ್ರಿಯನಾಗಿದ್ದ. ಮುಂದೊಂದು ದಿನ ಶಾಸಕಗಿರಿಗೆ ಹೋಗುವ ಲಕ್ಷಣಗಳೆಲ್ಲವೂ ಅವನಿಗಿತ್ತು. ತಾಲೂಕುನಿಂದ ವಿಧಾನಸೌಧದವರೆಗೆ, ಪೊಲೀಸ್ ಸ್ಟೇಷನ್‌ನಿಂದ - ಬೆಂಗಳೂರಿನ ಕಮೀಷನರ್ ತಾಲೂಕಿನ ಕೋರ್ಟಿನಿಂದ ಹೈ ಕೋರ್ಟ್‌ವರೆಗೂ ಅವನ ಪರಿಚಯವಿತ್ತು. ಎಂತಹ ಅಧಿಕಾರಿಯಿದ್ದರೂ ನೇರವಾಗಿ ಛೇಂಬರ್‌ಗೆ ಹೋಗಿ ಪ್ರಶ್ನಿಸುವ, ಅನ್ಯಾಯವನ್ನು ಖಂಡಿಸುವ ಎದೆಗಾರಿಕೆ ಅವನಲ್ಲಿತ್ತು.

ಅಂತಹ ಸ್ನೇಹಿತ ನನ್ನೂರಿನ ಮುಂಬೆಳಕಾಗಿದ್ದ, ಎಲ್ಲರ ಸ್ನೇಹ ಪ್ರೀತಿ ಗಳಿಸಿದ್ದ. ಅವನಿಲ್ಲವೆಂದಾಗ ದುಃಖದ ಕಟ್ಟೆ ಒಡೆದು ಹೋಗಿತ್ತು. ಯಾರ ಸಾವಲ್ಲೂ ಅಳದ ನಾನು ಗಂಟೆಗಟ್ಟಲೆ ಅತ್ತುಬಿಟ್ಟಿದ್ದೆ. ದುಃಖ ತಡೆಯಲಾರದ ಅವನ ನೆನಪಲ್ಲಿ ತಿಂಗಳುಗಟ್ಟಲೆ ಕಳೆದುಬಿಟ್ಟಿದ್ದೆ. ಯಾರ ಶವಸಂಸ್ಕಾರದ ಬಳಿಗೆ ಹೋಗದಿದ್ದ ನಾನು ಅವನು ಮಣ್ಣಾಗುವವರೆಗೂ ಜೊತೆಯಲ್ಲೇ ಇದ್ದು ಕಣ್ಣೀರು ಹಾಕಿದ್ದೆ.

ವ್ಯಕ್ತಿಗಳು ಯಾರೂ ಶಾಶ್ವತರಲ್ಲ, ನಿಜ. ಆದರೆ ಸಾವಿಗೂ ಒಂದು ವಯಸ್ಸಿರುತ್ತದೆಯಲ್ಲವೆ, ಸಾಕಷ್ಟು ಸಾಧಿಸುವ ಉತ್ಸಾಹದಲ್ಲಿರುವವರೆಲ್ಲಾ ಮೂವತ್ತು ಮೂವತ್ತೈದರ ತಾರುಣ್ಯದಲ್ಲೇ ಕಾಲನ ಗರ್ಭಕ್ಕೆ ಸೇರಿಬಿಟ್ಟರೆ ಈ ಸಮಾಜಕ್ಕೆ ಏನಾದರೂ ಸಹಾಯವಾಗುತ್ತದೆಯೇ! ಮದುವೆಯಾಗಿ ಆತ ಅರವತ್ತು ತಿಂಗಳೂ ಕಳೆದಿರಲಿಲ್ಲವೇನೋ? ಆತನನ್ನೇ ನಂಬಿ ಬಂದ ಹೆಣ್ಣು, ಇವನಿಂದ ಜನಿಸಿದ ಪುಟ್ಟ ಮಗು ಅವರನ್ನೆಲ್ಲಾ ಕಾಪಾಡುವವರರಾಗಿ ಅದಕ್ಕಿಂತ ಹೆಚ್ಚಾಗಿ ನನ್ನಂತಹವರಿಗೆ, ದೀನ ಬಡ - ಬಂಧುಗಳಿಗೆ ಉಂಟಾದ ನಷ್ಟಕ್ಕೆ ಪರಿಹಾರವೇನು? ಎಂದು ಮನಸ್ಸು ಚಿಂತಿಸುತ್ತಲೇ ಇರುತ್ತದೆ. ಯಾರಾದರೂ ಸತ್ತರು ಎಂದ ತಕ್ಷಣ ಈ ಪ್ರಶ್ನೆಗಳೆಲ್ಲಾ ಮನದಲ್ಲಿ ಉಂಟಾಗಿ ಮನಸ್ಸು ಕಲಕಿ ನೀರಾಗಿ ಬಿಡುತ್ತದೆ.

- ಬಲ್ಲೇನಹಳ್ಳಿ ಮಂಜುನಾಥ್, ಕೆ. ಆರ್. ಪೇಟೆ.

★

ತಮ್ಮನನ್ನು ಹೇಗೆ ಮರೆಯಲಿ?



ನನ್ನ ತಮ್ಮನೆಂದರೆ ನನಗೆ ತುಂಬಾ ಇಷ್ಟ. ಹೆಣ್ಣು ಮಕ್ಕಳಿಗಂತೂ ಅಣ್ಣ ತಮ್ಮಂದಿರೆಂದರೆ ಎಷ್ಟು ಆತ್ಮೀಯರೆಂದು ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ.

ಹತ್ತು ವರುಷಗಳ ಹಿಂದಿನ ನೆನಪಿನಾಳದಲ್ಲಿ ಹುದುಗಿದಾಗ ಕರುಳು ಕತ್ತರಿಸುವ ಯಾತನೆ ಉಂಟಾಗುತ್ತದೆ. ನನಗಾಗ ಮದುವೆಯಾಗಿ ಎರಡು ಮಕ್ಕಳಾಗಿದ್ದರು. ತಮ್ಮನಿಗೂ ಎರಡು ಪುಟ್ಟ ಹೆಣ್ಣು ಮಕ್ಕಳಿದ್ದರು. ಸಂಸಾರ ಸುಗಮ ರೀತಿಯಲ್ಲಿ ಸಾಗುತ್ತಿದ್ದಾಗ ಬಿರುಗಾಳಿಯೊಂದು ಬಿರುಸಿನಿಂದ ಬಂದು ಯಾರೆಂದು ಲೆಕ್ಕಿಸದೆ ಕೊಚ್ಚಿಕೊಂಡು ಹೋಯಿತು.

ದೀಪಾವಳಿಯ ದಿನ (ಹಬ್ಬದ ಅಮಾವಾಸ್ಯೆ) ಗೋಪೂಜೆ ಮಾಡುತ್ತಿರುವಾಗ 'ದೂರವಾಣಿಯ ಕರೆ' ಬಂತೆಂದು ಹಿರಿಮನೆಯಿಂದ ಜನ ಬಂತು. 'ನಿಮ್ಮ ತಮ್ಮನಿಗೆ ಜೋರಿದೆಯಂತೆ ನೋಡಬೇಕಾದರೆ ಹೋಗಬೇಕಂತೆ ಪುತ್ತೂರಿನ ಆಸ್ಪತ್ರೆಗೆ. ಅರೆ 'ನೋಡಬೇಕಾದರೆ' ಇದೇನಂತೆ! ಕೂಡಲೇ ದೇವರಲ್ಲಿ ಮೊರೆಯಿಟ್ಟು ಪ್ರಾರ್ಥಿಸಿದ್ದೆ. 'ಆಕ್ಸಿಡೆಂಟ್ ಏನಾದರೂ ಆಗಿದ್ದರೂ ಜೀವ ಉಳಿಸುವಂತೆ ಮಾಡು ದೇವರೇ' ಎಂದು. ಮಕ್ಕಳನ್ನು ಇಲ್ಲಿ ಮನೆಯಲ್ಲಿಯೇ ಅಜ್ಜಿಯ ಜತೆ ಬಿಟ್ಟು ನಾವು ಜೀಪಿನಲ್ಲಿ ಪುತ್ತೂರಿಗೆ ದೌಡಾಯಿಸಿದೆವು.

ಇಳಿಯುತ್ತಿದ್ದಂತೆಯೇ ನೋಡುವುದೇನು? ಹೇಳುವುದೇನು? ಹೊರಗಡೆಯಿಂದ ಅಮ್ಮ 'ರವಿ ಇನ್ನಿಲ್ಲ' ಎಂದು ನನ್ನನಪ್ಪಿ ಬೊಬ್ಬಿಟ್ಟರು. ಸೀದಾ ಒಳಗೆ ಹೋದಾಗ ತಮ್ಮನ ಹೆಂಡತಿ ನನ್ನನ್ನು ಗಟ್ಟಿ ಹಿಡಿದು ಕಿರುಚಿದಳು. ಮುಂದೆ ಹೋದೆ. ಅಲ್ಲಿ ಒಂದು ರೂಮಿನಲ್ಲಿ ಬೆಡ್ ಮೇಲೆ ದೊಡ್ಡ ದೇಹವನ್ನು ಮಲಗಿಸಿ ಬಿಟ್ಟಿದ್ದರು. ಮೈ ಇಡೀ ಅರಿಶಿನ ಬಳಿದಂತಿತ್ತು. ಅಯ್ಯೋ ಎಂದು ಕಿರುಚಿ ಅವನ ಮುಖದ ಮೇಲೆ ಮುಖವಿಟ್ಟರೂ ಮಾತನಾಡುವುದಿಲ್ಲ. 'ರವೀ' ಎಂದು ಕರೆದರೂ ಕೇಳುವುದಿಲ್ಲ. ಮುಟ್ಟಿದರೂ ಸ್ಪರ್ಶಜ್ಞಾನವಿಲ್ಲ. 'ಅನ್ಯಾಯವಾಯಿತಲ್ಲಾ ನಮ್ಮ ಪಾಲಿಗೆ ದೇವರೇ' ಎಂದು ಬೊಬ್ಬಿಟ್ಟು ಕಿರುಚಿದೆ. ಇಲ್ಲ, ಹೊರಟೇ ಹೋಗಿದ್ದ.

ಚಿಕ್ಕವನಿರುವಾಗ ನನ್ನ ಜತೆಗೇ ಮಲಗುತ್ತಿದ್ದ ನನ್ನ ಮುದ್ದಿನ ತಮ್ಮ ಎಲ್ಲರಿಗಿಂತಲೂ ತುಂಟ. ಆದರೆ ವಿಧಿ ಅವನನ್ನು ಎಲ್ಲರಿಗಿಂತಲೂ ಮುಂಚೆಯೇ ನಮ್ಮನ್ನಗಲಿ ಹೋಗುವಂತೆ ಮಾಡಿತಲ್ಲಾ!......

- ಇಂದೂ, ಪೆರಿಯಾಲ

★

ನನ್ನ ಅಮ್ಮ

ಅಮ್ಮಾ.... ನನ್ನಮ್ಮಾ.... ಹ್ಯಾಗೆ ಬರೆಯಲಮ್ಮಾ.... ಹ್ಯಾಗಮ್ಮಾ ಬರೆಯಲಿ ನಿನ್ನ ಬಗ್ಗೆ ಲೇಖನಾ..... ನೀನು ನಮ್ಮನ್ನೆಲ್ಲಾ ಬಿಟ್ಟು ಹೋಗಿ,

ನಿನ್ನ ಇಹಲೋಕದ ಶರೀರವನ್ನೇ ಬಿಟ್ಟು ಹೋಗಿ ಈಗ ಒಂದೂ ಕಾಲು ವರ್ಷವೇ ಸಂದು ಹೋಯಿತು. ಆದರೂ ನಿನ್ನ ನೆನಪು ಸದಾ ನಮ್ಮೆಲ್ಲರ ಒಳಗೂ ಹೊರಗೂ ಸಂಚರಿಸುತ್ತಲೇ ಇದೆ ಎಂದರೆ ನನಗೇ ಆಶ್ಚರ್ಯವೂ, ಅದ್ಭುತವೂ ಆಗಿ ಕಾಣುತ್ತದೆ.

ಅಗಲಿದ ಆಪ್ತರ ಬಗ್ಗೆ ಇರುವ ಅನಿಸಿಕೆಗಳನ್ನು ಬರೆಯಬೇಕೆಂದು ನೆನೆದಾಗ ಮೇಲೆ ಹೇಳಿದ ಭಾವನೆಗಳೆಲ್ಲಾ ನನ್ನ ಮನದಲ್ಲಿ ಸುಳಿದಾಡುತ್ತಲಿವೆ. ನನ್ನ ಅಮ್ಮ ತುಂಬ ಆಶಾಜೀವಿ. ಎಂದಿಗೂ ಕುಂದದ ಉತ್ಸಾಹ. ಸಂಪತ್ತು ಮತ್ತು ವಿದ್ಯೆ ಇವೆರಡರಲ್ಲಿ ಸಂಪತ್ತು ಶಾಶ್ವತವಲ್ಲ, ವಿದ್ಯೆ ಅಜರಾಮರ ಎಂದು ನನ್ನ ತಾಯಿಯವರು ನಂಬಿದಂತಿತ್ತು. ಅವರ ಕ್ರಮಗಳೆಲ್ಲ ಅವರ ಕೆಲಸಗಳೆಲ್ಲಾ ಅತೀ ಅಚ್ಚುಕಟ್ಟು. ಊಟ, ತಿಂಡಿ, ಪಾನೀಯ ಇವುಗಳನ್ನು ರುಚಿಕಟ್ಟಾಗಿ ಮಾಡುವುದರಲ್ಲಿ ಅವರಿಗೆ ಅತ್ಯಂತ ಶ್ರದ್ಧೆ. ಅಂದೊಮ್ಮೆ ಚಪಾತಿ ಮತ್ತು ಪೂರಿ ಸರಿಯಾಗಿ ಉರುಟಾಗಿ ಉಬ್ಬುವ ಹಾಗೆ ಮಾಡುವುದು ಹೇಗೆ ಎಂಬ ವಿಷಯ ಬಂತು. ಯಾವುದೇ ಚಿಕ್ಕ ಅಥವಾ ದೊಡ್ಡ ಕೆಲಸವಾಗಿರಲಿ ಆಯಾ ಕೆಲಸದ ಪ್ರಾರಂಭ ಮಾಡುವಾಗಿನ ಅಚ್ಚುಕಟ್ಟು ಮತ್ತು ಜಾಗ್ರತೆಯ ಕ್ರಮದಲ್ಲಿಯೇ, ಆ ಕೆಲಸದ ಪರಿಪೂರ್ಣತೆಯು ಅಡಗಿರುತ್ತದೆ ಎಂಬ ಸಂಗತಿಯನ್ನು ನನ್ನಮ್ಮ ಬಹಳ ಸೊಗಸಾಗಿ ಹಲವಾರು ಉದಾಹರಣೆಗಳೊಂದಿಗೆ ವಿವರಿಸಿದ್ದರು. ಒಲೆಯ ಮೇಲೆ ಕಾವಲಿಗೆಯನ್ನಿಟ್ಟು ದೋಸೆ ಮಾಡುವುದಾದರೂ ಏನೆಲ್ಲಾ ಪೂರ್ವ ತಯಾರಿ, ಮುಂಜಾಗ್ರತೆಗಳೆಲ್ಲಾ ಬೇಕಾಗುತ್ತವೆ ಎಂಬ ವಿಷಯವನ್ನು ತಿಳಿಯಪಡಿಸಿದ್ದು ಅವುಗಳಲ್ಲಿ ಒಂದು ಉದಾಹರಣೆ. ಹೀಗೆ ಪ್ರಾರಂಭಿಸುವಾಗಲೇ ಪ್ರತಿ ಕೆಲಸದಲ್ಲಿಯೂ ಅಮ್ಮನ ಶಿಸ್ತು ಎದ್ದು ತೋರುತ್ತಿತ್ತು.

ಕೊನೆಯ ದಿನಗಳಲ್ಲಿ ಮಾತ್ರ ಅಮ್ಮ ಅತ್ಯಂತ ಮೌನಿಯಾಗಿದ್ದರು. ಯಾರಲ್ಲಿಯೂ ಏನನ್ನೂ ಬೇಡದೆ, ಅಪೇಕ್ಷಿಸದೆ ಅನಾಯಾಸವಾಗಿ ನಮ್ಮೆಲ್ಲರನ್ನೂ ಬಿಟ್ಟು ಒಂದು ದಿನ ಹೋಗಿಯೇ ಬಿಟ್ಟರು. ತಮ್ಮ 78ನೇ ಪ್ರಾಯದವರೆಗೆ ನಮ್ಮೊಂದಿಗೆ ನಗುನಗುತ್ತಾ ಬಾಳಿ ಬದುಕಿದರು.

ಅಂತೂ, ನನ್ನಮ್ಮ ತಮ್ಮ ಜೀವನದ ಮಹಾಶಿಲ್ಪಿ. ಎಲ್ಲರೊಳಗೊಂದಾಗಿ ಬಾಳಲು ಪರಿತಪಿಸಿ ಹಾತೊರೆದ ಪ್ರೇಮಮಯಿ.

-ಕೆ. ಕಲಾವತಿ, ಕಾಂಚನ ಮನೆ,
ಕೊಂಬೆಟ್ಟು, ಪುತ್ತೂರು.

★

ಲಂಕೇಶರಿಲ್ಲ

ಅಂದು ಜನವರಿ 25, ಈ ನಾಡಿನ ಸಾಂಸ್ಕೃತಿಕ ಲೋಕದ ಮತ್ತು ಪತ್ರಿಕಾ ಪ್ರಪಂಚದ ದಿಟ್ಟ ಮತ್ತು ನಿಷ್ಠುರ ವ್ಯಕ್ತಿ ಅಸ್ತಂಗತವಾಗಿದ್ದರು. ಸಾವನ್ನು ಧ್ಯಾನಿಸುತ್ತಲೇ ಸಾವಿನ ಬಗ್ಗೆ ಮಾತನಾಡುತ್ತಲೇ ಲಂಕೇಶ ಇನ್ನಿಲ್ಲವಾಗಿದ್ದರು. ಲಂಕೇಶ ನನ್ನಂಥ ಅನೇಕ ಯುವಕರನ್ನು ಸಾಂಸ್ಕೃತಿಕವಾಗಿ ಚಿಂತನೆ ಮಾಡುವಂತೆ ರೂಪಿಸಿದ ಅಪರೂಪದ ಮಾಸ್ತರರು. ಅವರು ಆ ದಿನ ನಮ್ಮನ್ನು ಅಗಲಿದ ಆ ಕ್ಷಣ ತುಂಬಲಾರದ ಶೂನ್ಯವೆನಿಸಿತು. ಲಂಕೇಶರನ್ನು ನನ್ನ ಜೀವಮಾನದಲ್ಲಿ ಒಂದೇ ಬಾರಿ ತೀರಾ ಹತ್ತಿರದಿಂದ ನೋಡಿದ್ದೆನಾದರೂ, ಅವರ ವಿಚಾರಧಾರೆಗಳಿಂದ, ಅವರ ಸ್ಪಷ್ಟವಾದ ಬದ್ಧತೆಯ ಬಗ್ಗೆ ಪ್ರಭಾವಿತನಾಗಿ ಏಕಲವ್ಯನ ತರಹ ಅಂತರಂಗದ ಶಿಷ್ಯನಾಗಿದ್ದೆ. ಆ ದಿನ ಊಟ, ತಿಂಡಿ ಯಾವುದೂ ಹಿಡಿಸಲಿಲ್ಲ. ಕೊನೆಗೆ ಅವರ ಅಂತ್ಯ ಸಂಸ್ಕಾರಕ್ಕೆ ಬೆಂಗಳೂರಿಗೆ ಹೋಗಿ ಶ್ರದ್ಧಾಂಜಲಿ ಸಲ್ಲಿಸುವ ಭಾಗ್ಯವು ಕೂಡ ಬರಲಿಲ್ಲ. ಆ ದಿನ ರಾತ್ರಿಯೆಲ್ಲವೂ ಲಂಕೇಶರ ಕೃತಿ ಓದುವುದರ ಮೂಲಕವಷ್ಟೆ ಶ್ರದ್ಧಾಂಜಲಿ ಸಲ್ಲಿಸಬೇಕಾಯಿತು.



-ಡಿ. ರಾಮನವಲಿ, ಹರಪನಹಳ್ಳಿ.

★

ಆದರ್ಶ ವ್ಯಕ್ತಿ

ನಾನಾಗ ಕಂದಾಯ ಇಲಾಖೆಯ ಗುಪ್ತಚಾರ ನಿರ್ದೇಶನಾಲಯದಲ್ಲಿ ಮಂಗಳೂರಲ್ಲಿ ಕೆಲಸ ಮಾಡುತ್ತಿದ್ದೆ. ಆಗ ನಮ್ಮೂರಿನ ಕಡೆಗಿನ ಸುದ್ದಿಗಳು ನನಗೆ ಗೊತ್ತಾಗುತ್ತ ಇರಲಿಲ್ಲ. ಮಂಗಳೂರಿನ ದಿನಪತ್ರಿಕೆಗಳು ಉತ್ತರ ಕರ್ನಾಟಕದ ಸುದ್ದಿಗೆ ಮಹತ್ವ ಕೊಡದಿರುವದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿತ್ತು. ಹೀಗಾಗಿ ನಮ್ಮೂರ ಕಡೆಯ ಎಷ್ಟೋ ಸುದ್ದಿಗಳು ನನ್ನ ಗಮನಕ್ಕೆ ಬಾರದೇ ಹೋಗುತ್ತಿದ್ದವು.

ಹೀಗೆ ಒಮ್ಮೆ ಒಂದು ವಾರದ ಹಿಂದಿನ ಪತ್ರಿಕೆಗಳೆಲ್ಲವನ್ನೂ ತಿರುವಿ ಹಾಕುತ್ತಿದ್ದಾಗ 'ಕರ್ನಾಟಕ ವಿಶ್ವವಿದ್ಯಾಲಯದ ಶಿಲ್ಪಿ ಎಸ್.ಎಸ್.ಒಡೆಯರ್ ನಿಧನ' ಎಂಬ ಸುದ್ದಿ ಕಣ್ಣಿಗೆ ಬಿದ್ದು ಅಚ್ಚರಿಯಾಯ್ತು! ನನಗರಿವಿಲ್ಲದೆ ಕಣ್ಣೀರು ನನ್ನ ಕಣ್ಣಿಂದ ಸುರಿಯಿತು. ಕೆಲವೇ ತಿಂಗಳ ಹಿಂದೆಯಷ್ಟೆ ಒಂದು ದಿನವಿಡೀ ಅವರ ಜೊತೆ ಕಳೆದ ನನಗೆ ಈ ವಿಷಯ ನುಂಗಲಾರದ ತುತ್ತಾಗಿತ್ತು. ಈ ಸಾಕಾರಮೂರ್ತಿ ಸಾಧಿಸುವುದು ಇನ್ನೂ ಬಹಳವಿತ್ತು, ದೇವರು ಇಷ್ಟು ಬೇಗ ಇವರನ್ನು ಕರೆದುಕೊಂಡನಲ್ಲ ಎಂದು ದುಃಖವಾಯ್ತು.

ಆ ಅಗಲಿದ ಗಣ್ಯರು ನಮ್ಮೂರಿನಲ್ಲಿಯೇ ಜನ್ಮ ತಳೆದು ಉನ್ನತ ಶಿಕ್ಷಣ ಪಡೆದು, ಉಪನ್ಯಾಸಕ ವೃತ್ತಿ ಆರಂಭಿಸಿದ್ದರು. ಕ.ವಿ.ವಿ.ಯಂಥ ವಿದ್ಯಾದೇಗುಲದ ಉತ್ತಮ ಆಡಳಿತಗಾರರಾಗಿ, ಶ್ರೇಯೋಭಿಲಾಷಿಗಳಾಗಿ ತಮ್ಮ ಸರಳ ನಡೆನುಡಿ, ಸದ್ಗುಣಗಳಿಂದ ಜನಪ್ರಿಯರಾಗಿದ್ದರು. ಕುಗ್ರಾಮವಾದ ನಮ್ಮೂರಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಶ್ರೀ ಸದಾಶಿವ ಒಡೆಯರ್ ಅವರು ನಮ್ಮೂರು 'ಪಾನ ನಿರೋಧ ಗ್ರಾಮ'ವಾಗುವುದರಲ್ಲಿ ಯಶಸ್ವಿಯಾಗಿದ್ದರು. ಅವರ ಈ ಸಾಧನೆ ನಮ್ಮೂರಿಗಷ್ಟೆ ಸೀಮಿತವಾಗದೇ ನೆರೆಹೊರೆಯ ಗ್ರಾಮಗಳಿಗೂ ವಿಸ್ತರಿಸಿತ್ತು.

ಇಡೀ ಉತ್ತರ ಕರ್ನಾಟಕದ ಮುಂಬೈ ಪ್ರಾಂತ್ಯವಿಡೀ ಅವರು ಜನಪ್ರಿಯ ವ್ಯಕ್ತಿಯಾಗಿ ಬಾಳಿದ್ದರು. ಅವರ ಕನಸುಗಳು ಇನ್ನು ಈಡೇರುವ ಮುನ್ನವೇ ಅವರು ನಮ್ಮನ್ನೆಲ್ಲ ಅಗಲಿದ್ದು ನನಗೆ ಮಾತ್ರವಲ್ಲ ನಮ್ಮೂರಿನ ಜನತೆಗೆ ತೀರಾ ದುಃಖ ತರುವ ಸಂಗತಿಯಾಗಿದೆ.

ಅವರ ಮಗನಾದ ಬೆಂಗಳೂರಿನ ಸುಪ್ರಸಿದ್ಧ ಶಿಲ್ಪಿ (ಆರ್ಕಿಟೆಕ್ಟ್) ವಿದ್ಯಾಧರ ಒಡೆಯರ್ ಅವರು ತಂದೆಯ ಆದರ್ಶಗಳನ್ನು ಪಾಲಿಸಿಕೊಂಡು ಹೋಗುತ್ತಿರುವುದು ನಮ್ಮೆಲ್ಲರ ಸೌಭಾಗ್ಯ.

-ಗಂ.ಬ.ಜಗದೀಶ, ಚೌಡಯ್ಯದಾನಪುರ.

★

ಕಲಿಸಿದ ಅಮ್ಮ

ಯಾರೇ ಆದರೂ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆಯುವಂತಾಗಬಾರದು ಎಂಬುದು ನನ್ನ ಅನಿಸಿಕೆ. ನನ್ನ ಅಮ್ಮ ಈ ಮುಂಚೆ ಹಲವಾರು ಬಾರಿ ಆಸ್ಪತ್ರೆಯಲ್ಲಿದ್ದು ಗುಣಮುಖರಾಗಿ ಮನೆಗೆ ಬಂದಿದ್ದರು. ಈ ಸಲ ಮಾತ್ರ ಅಮ್ಮನನ್ನು ಆಸ್ಪತ್ರೆಗೆ ಕರೆದೊಯ್ಯಲು ಹೊರಡುತ್ತಿರುವಾಗಲೇ ದೇವರನ್ನು ಸೇರಿದುದು ದುಃಖದಲ್ಲೂ ಸಮಾಧಾನದ ಸಂಗತಿ.

25 ವರ್ಷಗಳಿಂದ ಉಸಿರಾಟದ ತೊಂದರೆಗೊಳಗಾದ ನಮ್ಮ ಮಾತೋಶ್ರೀಯವರು ತಮ್ಮ 78ನೇ ವಯಸ್ಸಿನಲ್ಲಿ ದೈವಾಧೀನರಾದರು. ನಮ್ಮ ತಾಯಿ ಪಾರ್ವತಿ ಅಮ್ಮನವರಿಗೆ ನಾವು 7 ಜನ ಮಕ್ಕಳು. ಅವರಲ್ಲಿ ಲೀಲಾ ಮಣ್ಣಾಲ (ಕನ್ನಡ ಲೇಖಕಿ) ಕೂಡಾ ಒಬ್ಬರು.

40 ವರ್ಷಗಳಿಂದ ನನ್ನೊಂದಿಗೆ ಇದ್ದ ನನ್ನ ಅತ್ಯಂತ ಪ್ರೀತಿಯ ಅಮ್ಮನನ್ನು ಒಮ್ಮೆಗೇ ಕಳಕೊಂಡಾಗ ಮನದಾಳದಿಂದ ಮೂಡಿ ಬಂದ ಭಾವನೆಗಳು ಹಲವು. ಅವುಗಳಲ್ಲಿ ಕೆಲವನ್ನಾದರೂ ತಮ್ಮ ಮುಂದೆ ತೆರೆದಿಡಲು ಪ್ರಯತ್ನಿಸುತ್ತೇನೆ.

'ಅಮ್ಮ' ಎನ್ನುವ ಶಬ್ದಕ್ಕೆ ಅದ್ಭುತ ಶಕ್ತಿಯನ್ನು ತೋರಿಸಿ ಕೊಟ್ಟವರು

ನನ್ನಮ್ಮ. ಹುಟ್ಟಿನಿಂದ ನನ್ನ ಇರುವಿಕೆಯ ಬಗ್ಗೆ ನನಗೆ ಅರಿವಾಗುತ್ತಾ ಬಂದಂತೆ ಈ ಜಗದ ಮಣ್ಣಿನ ಬಗ್ಗೆ ನಾನು ಚಿಂತಿಸಿರಲಿಲ್ಲ. ನನಗೊಬ್ಬ 'ಅಮ್ಮ' ಇದ್ದಾಳೆ ಎಂಬುದರ ಬಗ್ಗೆಯೂ ನಾನು ಚಿಂತಿಸಿರಲಿಲ್ಲ. ಅವೆರಡರೊಳಗೂ ನಾನು ವಿಲೀನನಾಗಿ ಜೀವಿಸುತ್ತಿದ್ದೆ. ಈ ನೆಲ ನನಗೆ ನಿಂತುಕೊಳ್ಳಲು, ಕುಳಿತುಕೊಳ್ಳಲು, ಓಡಾಡಲು ನನಗರಿವಿಲ್ಲದೆಯೇ ಅವಕಾಶಕೊಟ್ಟಂತೆ ನನ್ನಮ್ಮನೂ ನನಗರಿವಿಲ್ಲದೆಯೇ ನನಗೊಂದು ಅಗಾಧ ಆಸರೆಯಾಗಿದ್ದರು ಎಂಬುದರ ಅರಿವಾದುದೂ ಅವರು ಕಳಚಿಕೊಂಡು ದೇವರ ಸನ್ನಿಧಿಗೆ ಸೇರಿದಾಗಲೇ.

ಅಮ್ಮನಲ್ಲಿರುವ ಮಮತೆ, ಸಲಿಗೆಯ ಸೆಲೆಯೊಂದು ಅದ್ಭುತ ಪ್ರಕ್ರಿಯೆ. (ಅಮ್ಮನಿಗೆ ಮಕ್ಕಳಲ್ಲಿರುವ ಮಮತೆಯಿಂದಾಗಿಯೊ?)

ಅಮ್ಮನ ಪ್ರಾಣ ಹಾರಿಹೋದ ತಕ್ಷಣ ನನಗನಿಸಿತ್ತು, 'ಅಮ್ಮನಿಲ್ಲದ ಜಗದಲ್ಲಿ ನನಗಿಲ್ಲೇನಿನ್ನು ಕೆಲಸ?' ತಾಯಿ ಇಲ್ಲದ ಜೀವನ ಮರುಭೂಮಿಯಲ್ಲಿ ಅಲೆದಾಟದಂತೆ' ಎಂದು.

ಈ ಜಗತ್ತನ್ನು ನೋಡುವ ಅವಕಾಶವನ್ನು 'ಅಮ್ಮ' ಮಾಡಿಕೊಟ್ಟ ಕಾರಣ ಈ ಜಗತ್ತನ್ನೇ ಅಮ್ಮ ನನಗೆ ಕೊಟ್ಟಂತೆ ಭಾಸವಾಗುತ್ತದೆ ಈಗ.

ಯಾರು ಸತ್ತಾಗಲೂ 'ಅವರು ಸತ್ತಿದ್ದಾರೆ' ಎಂದು ನನ್ನ ಮನಸ್ಸಿಗೆ ಆಗುತ್ತಿತ್ತು. ಆದರೆ ನನ್ನ ಅಮ್ಮನೇ ಇಲ್ಲವಾದಾಗ ಅನಿಸುತ್ತದೆ - ಈ ವಾತಾವರಣದ ಕಣಕಣದಲ್ಲೂ ಅಮ್ಮ ಇದ್ದಾರೆ ಎಂದು.

ಕೆಲವೊಮ್ಮೆ ತೋರುತ್ತದೆ - 'ಇನ್ನು ಚಿಂತೆ ಸಾಕು. ಶಾಶ್ವತ ನೆಮ್ಮದಿಯನ್ನು ಅನುಭವಿಸು' ಎಂದು ಹೇಳಿ ದೇವರು ಅಮ್ಮನನ್ನು ತನ್ನಲ್ಲಿಗೆ ಕರಕೊಂಡಿರಬಹುದೋ ಎಂದು.

ತಾಯಿ ಮನೆಯಲ್ಲಿ ಉಸಿರಾಟಕ್ಕೆ ಒದ್ದಾಡುತ್ತಿರುವಾಗ ನಾನು ಆರಾಮದಿಂದ ಉಸಿರಾಡುತ್ತಿರುವೆನಲ್ಲಾ ಎಂದು ನನಗೆ ಎಷ್ಟೋ ಬಾರಿ ಅನ್ನಿಸುತ್ತಿತ್ತು.

ತಾಯಿಯಲ್ಲಿ ನಾನು ಕೇಳಿಯೂ ಇದ್ದೆ.

'ಈಗ ನಿನಗೆ ಜೈಲಿನಲ್ಲಿ ಹಾಕಿದಂತೆ ಆಗುತ್ತಿರಬಹುದಲ್ಲಾ' ಎಂದು. ಆಗ ಅವರು ಅನ್ನುತ್ತಿದ್ದರು - 'ಹಾಗೇನಿಲ್ಲ. ಸ್ವಲ್ಪ ಕಷ್ಟವಾಗುತ್ತದಷ್ಟೆ' ಎಂದು. ಅದು ಅವರು ನನ್ನ ಸಮಾಧಾನಕ್ಕೋಸ್ಕರ ಹಾಗನ್ನುತ್ತಿದಿರಬಹುದು.

ನಾನು ರಾತ್ರಿ ಊಟ ಮಾಡುತ್ತಿರಲಿಲ್ಲ. ಬೆಳಿಗ್ಗೆ ಏನಾದರೂ ತಿಂದರೆ ಆಯಿತು. ತಾಯಿಯಲ್ಲಿ ನಾನು ಹೇಳಿದ್ದೆ - 'ಉಸಿರು ಕಟ್ಟುವುದಕ್ಕೆ ರಾತ್ರಿ ಆಹಾರ ಸೇವಿಸಬಾರದು' ಅದಕ್ಕವರು - 'ನನಗೆ ರಾತ್ರಿ ಊಟ ಮಾಡದಿದ್ದರೆ ಹೆಚ್ಚು ಉಸಿರು ಕಟ್ಟುವುದು. ನೀನೂ ಊಟ ಮಾಡು' ಎಂದು ಹೇಳಿ ನನ್ನನ್ನೂ ಊಟ ಮಾಡಲು ಒತ್ತಾಯಿಸುತ್ತಿದ್ದರು.

ಇಂದುಮುಖಿ (ನನ್ನಾಕೆ) ತನ್ನ ತಾಯಿ ಮನೆಗೆ ಹೋಗಿದ್ದಾಗಿನ 2-3 ದಿನಗಳಲ್ಲಿ ನಮ್ಮಮ್ಮ ನನಗೆ ಊಟಕ್ಕೆ ಬಾಳೆಲೆ ಇಟ್ಟು, ನೀರು ಇಟ್ಟು, ಹಳೆ ಕ್ರಮದಂತೆ ಪ್ರೀತಿಯಿಂದ ಬಡಿಸುತ್ತಿದ್ದರು (ಅಷ್ಟು ಉಸಿರುಗಟ್ಟುವ ಎಡೆಯಲ್ಲಿ!)

ಇಂದುಮುಖಿ ಕೆಲವೊಮ್ಮೆ ನನ್ನಲ್ಲಿ ಅನ್ನುತ್ತಿದ್ದಳು. 'ಅವರು ಕಠಿಣವಾಗಿ ನುಡಿದು ಬೈದರೂ ಅವರ ಹೃದಯ ತುಂಬಾ ಕೋಮಲ. ಒಳಗಿನಿಂದ ಪ್ರೀತಿ, ಮಮತೆ ಇದ್ದರೂ ಅದನ್ನು ಹೊರಗಿನಿಂದ ತೋರ್ಪಡಿಸುವ ಕ್ರಮವಿಲ್ಲ ಅಷ್ಟೆ' ಎಂದು.

ಅಮ್ಮ ಇರುವಾಗಲೇ ಸಾಲವನ್ನೆಲ್ಲ ಮುಗಿಸಿ, ಅಮ್ಮನಿಗೊಂದು ಅಂದದ ರೂಂ ಇರುವ ಚೆಂದದ ಮನೆ ಕಟ್ಟಿಸಬೇಕೆಂದಿತ್ತು. ಅವರು ಸಲಹೆ ಸೂಚನೆಗಳನ್ನು ಕೊಟ್ಟು ಕಟ್ಟಿದ ಮನೆ ಇನ್ನೂ ಹೆಚ್ಚು ಅಂದವಾಗುತ್ತಿತ್ತು. ಆ ಭಾಗ್ಯ ಕೈಗೂಡಲಿಲ್ಲವಲ್ಲಾ ಎಂದು ವ್ಯಥೆಯಾದರೂ, 'ಈ ಭುವಿಯಲ್ಲಿ ಮನುಷ್ಯನಿಗೆ ಎಲ್ಲಾ ಆಸೆಗಳೂ ಕೈಗೂಡುವುದಿಲ್ಲ. 'ಆಯಾಯ ದಿನ ಸಿಕ್ಕಿದ ಸಂತೋಷದಲ್ಲೇ ತೃಪ್ತಿಪಟ್ಟುಕೊಂಡು ಮಾಡುವ ಜೀವನವೇ ಜೀವನ' ಎಂಬ ತತ್ವವನ್ನು ಮನಗಂಡು, 'ಆ ಅಮ್ಮನೇ ನನಗೆ ಅಮ್ಮನಾಗಿ ದೊರಕಿದರಲ್ಲಾ' ಎಂಬ ಸಮಾಧಾನ ಪಟ್ಟುಕೊಳ್ಳಬೇಕಷ್ಟೆ'.

ಅಮ್ಮನಿಲ್ಲವಾದ ತಕ್ಷಣ ನನಗೆ ಇನ್ನೊಂದು ವಿಚಾರ ಹೊಳೆಯಿತು. ಪ್ರಪಂಚವಿರುವುದು ನಮ್ಮ ತಲೆಯ ಒಳಗೋ ಅಥವಾ ಹೊರಗೋ? ನಮ್ಮ ತಲೆಯ ಒಳಗೆಯೇ. ಏಕೆಂದರೆ ನಾವು ಇಲ್ಲವಾದ ಕೂಡಲೇ ನಮ್ಮ ಮಟ್ಟಿಗೆ ಪ್ರಪಂಚವೂ ಇಲ್ಲವಾಗುತ್ತದಲ್ಲಾ.

ಅಮ್ಮ ನಮ್ಮನ್ನು ಈ ಜಗತ್ತಿನಲ್ಲಿ ಬಾಳಿ ಬದುಕಲು ಹೇಗೆ ಕಲಿಸಿಕೊಟ್ಟರೋ ಅದೇ ರೀತಿ ಈ ಜಗತ್ತಿನಿಂದ ದೇವರ ಸನ್ನಿಧಿಗೆ ವಾಪಸ್ ಹೋಗಿ ಸೇರುವ ಬಗ್ಗೆ ಹೆದರುವ ಅಗತ್ಯವೇ ಇಲ್ಲ ಎಂಬುದನ್ನೂ ತೋರಿಸಿಕೊಟ್ಟರು. ಅಲ್ಲಿ ಅಮ್ಮನೂ ಪುನಃ ಸಿಗಬಹುದು.

– ಜಿ.ವಿ. ಭಟ್, ಪಾಣಾಜೆ



50 ವರ್ಷ ಮುಂದೆ

ಓದುಗರ ವೇದಿಕೆ

2050ನೇ ಇಸ್ವಿಯಲ್ಲಿ ಹಿರೇಕೆರೂರ ಶಹರದಲ್ಲೊಂದು ಸಮಾರಂಭ



ಜುಲೈ 15-2050 ಹಿರೇಕೆರೂರ : ಉತ್ತರ ಕರ್ನಾಟಕದ ಹಿರೇಕೆರೂರ ಎಂಬ ಪುಟ್ಟ ಶಹರದಲ್ಲಿಯ ಚೀತ್ಕಾರ್ ಹೋಟೆಲ್ಲಿನ ಮುಂದೆ ಭಾರಿ ಜನ ಜಂಗುಳಿ ನೆರೆದಿತ್ತು. ದುರ್ಗಾಮಾತೆಯ ಜಾತ್ರೆಗಿಂತಲೂ ಹೆಚ್ಚಾಗಿ ಸೇರಿದ ಜನ ಪ್ರವಾಹವನ್ನು ಮತ್ತು ಅವರ ವಾಹನಗಳನ್ನು ಪಾರ್ಕ್ ಮಾಡಲು ಸ್ಥಳ ಸಿಗದೇ ಪರದಾಡುತ್ತಿದ್ದ ಮಾಲೀಕರು ಸಂದಿ - ಗೊಂದಿಗಳಲ್ಲಿ ವಾಹನಗಳನ್ನು ತೂರಿಸುತ್ತಿದ್ದರು. ಇದನ್ನು ಕಂಡು ಏನಿರಬಹುದೆಂಬ ಕುತೂಹಲದಿಂದ ಪ್ರಶ್ನಿಸಿದರೆ ಯಾರಿಗೂ ಉತ್ತರಿಸುವ ವ್ಯವಧಾನವಿರಲಿಲ್ಲ.

ಕಾರಣ ಎಲ್ಲರೊಳಗೊಂದಾಗಿ ನಾನೂ ತೂರಿಕೊಂಡೆ. ನೆರೆದ ಮಹಾಜನತೆಯನ್ನು ಹದ್ದುಬಸ್ತಿನಲ್ಲಿಡಲು ಪೊಲೀಸರಂತಿರುವ (ರೋಬೋಟ್) ಯಂತ್ರಗಳು ಪರಿಶ್ರಮಪಟ್ಟರೂ ವ್ಯರ್ಥಾಲಾಪವಾಗಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿತ್ತು. ಇಷ್ಟೆಲ್ಲ ಜನ ಸೇರಿದ್ದಕ್ಕೆ ಚೀತ್ಕಾರ್ ಹೋಟೆಲ್ ಮಾಲಕ ತಿನ್ನೋಜಿ ಒಳಗೊಳಗೆ ಸಂತಸಪಟ್ಟಿದ್ದ.

ಉದ್ಘಾಟನಾ ಸಮಾರಂಭ 10.00 ಗಂಟೆಗೆ ನಿಗದಿಯಾಗಿದ್ದರಿಂದ ಸಮಯ ಹತ್ತಿರ ಹತ್ತಿರವಾಗುತ್ತಿದ್ದಂತೆಯೇ ಎಲ್ಲರೂ ವೇದಿಕೆಗೆ ಬರುವವರನ್ನೇ ದಿಟ್ಟಿಸುತ್ತಿದ್ದರು. ಸು - ಭಿಕ್ಷೆ ಕಾಲವೆಂದು ವಿಶ್ವದಲ್ಲಿ ಹೆಸರು ಮಾಡಿದ್ದ ಭಾರತದಲ್ಲಿ ಕಡು ಬಡವರು ಗ್ಯಾಸ್ - ಸಿಲಿಂಡರ್, ಕರೆಂಟ್ ಒಲೆಗಳನ್ನೂ, ಮಧ್ಯಮ ವರ್ಗದವರು ಪಿಜ್ಜಾ ಕಾರ್ನರ್‌ಗಳನ್ನೂ ಮೇಲ್ ವರ್ಗದ ಶ್ರೀಮಂತರು ಊಟದ ಕ್ಯಾಪ್ಸೂಲ್‌ಗಳನ್ನೂ ಸೇವಿಸುವ ಪದ್ಧತಿ ರೂಢಿಯಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಗೆ ಮಾನ್ಯ ಆಹಾರ ಮಂತ್ರಿಗಳು ಸ್ವತಃ ಆಗಮಿಸಿದ್ದರು. ಎಲೆಕ್ಟ್ರಿಕ್ ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದ ಮಾನ್ಯ ಹೊಟ್ಟೆಬಾಕಪ್ಪನವರು ಹೀಗೆ ನುಡಿದರು.

'ಮಾನ್ಯ ಮಹಾಜನರೇ, ನಮ್ಮ ಪೂರ್ವಜರು ಸೌದೆ ಒಲೆ ಉರಿಸಿ ಅಡುಗೆ ಮಾಡುತ್ತಿದ್ದರು ಎಂಬುದನ್ನು ನಾವೆಲ್ಲ ಇತಿಹಾಸ ಓದಿ ತಿಳಿದಿದ್ದೇವೆ. ಸೌದೆ ಎಂದರೆ ಹೇಗಿರುತ್ತದೆ ಎಂದು ಚಿತ್ರಗಳಲ್ಲಿ ಕಂಡಿದ್ದೇವೆ. ಆದರೆ ಇಂದು ಚೀತ್ಕಾರ್ ಹೋಟೆಲ್ಲಿನ ಆಡಳಿತ ವರ್ಗದವರು ಬಡವರೇ ಹೆಚ್ಚಾಗಿ ವಾಸಿಸುವ ಈ ಡಾಲರ್ ಕಾಲೋನಿಯಲ್ಲಿ ವಿದೇಶದಿಂದ ಸೌದೆಯನ್ನು ಆಮದು ಮಾಡಿಕೊಂಡು ನಮಗೆಲ್ಲ ಸೌದೆ ಉರಿಸಿ ಬೇಯಿಸಿದ ಆಹಾರ ಪದಾರ್ಥಗಳನ್ನು ಪೂರೈಸುವ ಸಂಕಲ್ಪ ಮಾಡಿದ್ದಾರೆ. ಇಂತಹ ಸಾಹಸಕ್ಕೆ ಘನ ಸರ್ಕಾರದ ಪರವಾಗಿ ಅಭಿನಂದಿಸುವೆ. ಮತ್ತು ಈ ವರ್ಷದ 'ಉದ್ಯೋಗ ಸಾಹಸ ರತ್ನ' ಪ್ರಶಸ್ತಿಗಾಗಿ ಶಿಫಾರಸ್ಸು ಮಾಡುತ್ತೇನೆ' ಎಂದು ಜನ ಸಮೂಹದೆಡೆಗೆ ದಿಟ್ಟಿಸಿದಾಗ ಯಾರೂ ಚಪ್ಪಾಳೆ ತಟ್ಟಲಿಲ್ಲದ್ದನ್ನು ಕಂಡು ಸ್ವಲ್ಪ ಪೆಚ್ಚಾದರು.

ಕಾರ್ಯಕ್ರಮ ಮುಗಿದ ನಂತರ ಸೌದೆಯಲ್ಲಿ ಬೇಯಿಸಿದ ಆಹಾರ ಪದಾರ್ಥಗಳಿಗೆ ವಿಪರೀತ ನೂಕು ನುಗ್ಗಲು ಏರ್ಪಟ್ಟರೆ ದುಬಾರಿ ತಿಂಡಿ ಕೈಗೆಟುಕದವರು ಸೌದೆಯನ್ನಾದರೂ ಮುಟ್ಟಿ ನೋಡೋಣವೆಂದು ಪ್ರಯತ್ನಿಸುವುದು ಕಂಡು ಬಂತು.

ಅಂದಿನ 'ಸಂಜೆ ಸುದ್ದಿ'ಯಲ್ಲಿ ಚೀತ್ಕಾರ್ ಹೋಟೆಲ್‌ಗೆ 'ಉದ್ಯೋಗ ಸಾಹಸ ರತ್ನ' ಪ್ರಶಸ್ತಿ ಮುಖಪುಟದಲ್ಲಿ ಅಚ್ಚಾಗಿದ್ದರೆ, ಕಾನೂನು ಸುವ್ಯವಸ್ಥೆ ಕಾಪಾಡಲು ತೊಂದರೆಯಾಗುತ್ತದೆ ಎಂದು ಮಾನ್ಯ ಪ್ರಧಾನಮಂತ್ರಿಗಳು ಸೌದೆ ಆಮದನ್ನು ರದ್ದುಗೊಳಿಸಿದ್ದ ಬಗ್ಗೆ ಚೀತ್ಕಾರ್ ಹೋಟೆಲ್‌ಗೆ ಕಳುಹಿಸಿದ್ದ ಫ್ಯಾಕ್ಸ್ ಸಂದೇಶ ಮುದ್ರಿಸಲ್ಪಟ್ಟಿತ್ತು.

ಕಲ್ಪನೆ : ಪ್ರಕಾಶ ಅಂಬರಕರ, ಚಿಕ್ಕೇರೂರ.

★

2050ಕ್ಕೆ ನನ್ನೊಡನೆ ಬನ್ನಿ

ಇಂದಿನಿಂದ ಸರಿಯಾಗಿ 50 ವರ್ಷಗಳ ನಂತರ ಹೇಗಿರಬಹುದು ನಮ್ಮ ಬೆಂಗಳೂರು? ನಗರದಲ್ಲಿ ಸುಮಾರಾಗಿ ಕಾಣಿಸುವ ಎಲ್ಲಾ ಕೆಟ್ಟ ದೃಶ್ಯಗಳನ್ನು ನಿಮ್ಮ ಕಣ್ಣಿಗೆ ಬೀಳುವುದಿಲ್ಲ. ಅಚ್ಚರಿಯಾಯಿತೆ? ನನ್ನೊಡನೆ ಬನ್ನಿ. ರಸ್ತೆಗಳಲ್ಲಿ ಸುತ್ತೋಣ. ನಗರದಲ್ಲಿ ಬಸ್ಸು-ಕಾರುಗಳ ದಾಂಧಲೆ ಇದೆಯೇ? ಇಲ್ಲ. ಆಟೋಗಳ ಆಟಾಟೋಪವಿದೆಯೇ? ಇಲ್ಲ. ಎಲ್ಲ ಶಾಂತವಾಗಿದೆ. ರಸ್ತೆಗಳು ಭಣಗುಡುತ್ತವೆ. ಹಾಗಾಗಿ ಅಲ್ಲಿ ಹೊಂಡಗಳಿಲ್ಲ, ಕಲ್ಲುಗಳಿಲ್ಲ, ಹೊಗೆ-ಧೂಳುಗಳಿಲ್ಲ. ತರಕಾರಿ ಮಾರುವವರು? ರಸ್ತೆ ಪಕ್ಕದ ವಡೆ, ಮಸಾಲೆಪುರಿ ಅಂಗಡಿ? ಇಲ್ಲವೇ ಇಲ್ಲ. ಯಾಕೆ ಗೊತ್ತೆ? ಇದುವೇ ವಿಜ್ಞಾನದ ಪವಾಡ.

ಅದೇನು ಎಂದು ನೀವು ಕೇಳಿಯೇ ಕೇಳುವಿರಿ, ನನಗೆ ಗೊತ್ತು. ಜಗತ್ತೆಂಬ ಹಳ್ಳಿಯಲ್ಲಿ ತಾಂತ್ರಿಕತೆಯ ಅಮೋಘ ವಿಕಸನದ ಪ್ರಭಾವ ಅದು. ಕೇವಲ ಐವತ್ತು ವರ್ಷಗಳ ಹಿಂದೆ ಚಿತ್ರ, ಲೇಖನಗಳನ್ನು ಕಳಿಸಲು ಬಳಸುತ್ತಿರುವ ಫ್ಯಾಕ್ಸ್ ಯಂತ್ರವಿತ್ತು, ಗೊತ್ತಲ್ಲಾ? ಅದನ್ನು ಇನ್ನಷ್ಟು ವಿಕಾಸಗೊಳಿಸಲಾಯಿತು. ಅದರಿಂದಾಗಿ ಮನುಷ್ಯನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದು ಸುಲಭವಾಯಿತು. ಅಲ್ಲಲ್ಲಿ ಮನುಷ್ಯ ಗಾತ್ರದ ಯಂತ್ರಗಳನ್ನು ಇಡಲಾಯಿತು. ವ್ಯಕ್ತಿಯು ಒಳಹೊಕ್ಕು ತನಗೆ ಬೇಕಾದ ಸಂಖ್ಯೆ ಒತ್ತಿದರೆ ತಾನು ಬಯಸಿದ ಸ್ಥಳದಲ್ಲಿ ಮರುಕ್ಷಣದಲ್ಲಿಯೇ ಹಾಜರಾಗಬಹುದು.

ಹಾಗಾಗಿ ವಾಹನಗಳ ಅವಶ್ಯಕತೆ ಯಾರಿಗೂ ಇಲ್ಲ.

ಇನ್ನೊಂದು ಸಾಧನೆಯನ್ನು ನಾನು ಇಲ್ಲಿ ಪ್ರಸ್ತುತಪಡಿಸಲು ಬಯಸುತ್ತೇನೆ. ನಮ್ಮ ಬೆಂಗಳೂರಿನ ಜನ ತಿನ್ನುವುದರಲ್ಲಿ ನಿಸ್ಸೀಮರು. ಹೊಟ್ಟೆ ತುಂಬಿದ ಮೇಲೂ ಇನ್ನಷ್ಟು ತುರುಕುವವರು. ಫಲ? ಆಹಾರದ ಅಭಾವ. ದೇಶದ ನೂರೈವತ್ತು ಕೋಟಿ ಜನಕ್ಕೆ ಎಲ್ಲಿ ಆಹಾರ ದೊರಕುತ್ತದೆ? ತತ್ಫಲವಾಗಿ ಸರಕಾರ ಕಾರ್ಯರೂಪಕ್ಕೆ ತಂದಿದ್ದು, ಆಹಾರದ ಮಾತ್ರೆಗಳು, ವಿಟಮಿನ್‌ಗಳು, ಖನಿಜಗಳು ತುಂಬಿರುವ ವಿವಿಧ ವಾಸನೆಯ ಮಾತ್ರೆಗಳು ಲಭ್ಯವಾಗತೊಡಗಿದವು. ನಾಲಿಗೆಯ ದಾಸರಾದ ಜನ ಮೊದಮೊದಲು ಪ್ರತಿಭಟಿಸಿದರೂ ನಂತರ ಅದಕ್ಕೇ ಹೊಂದಿಕೊಂಡರು. ಏನೇ ಹೊಸತು ಬಂದರೂ ಪ್ರತಿಭಟಿಸುವುದು, ವಿರೋಧಿಸುವುದು ನಮ್ಮ ಗುಣ. ಹೀಗಾಗಿ ಹೋಟೆಲುಗಳು, ತಿಂಡಿಯಂಗಡಿಗಳು ಮುಚ್ಚಲ್ಪಟ್ಟವು. ಅಷ್ಟು ಮಾತ್ರವಲ್ಲ, ವರ್ಷಕ್ಕೆ ಲಕ್ಷಗಳ ಸಂಖ್ಯೆಯಲ್ಲಿ ಹೊರಬರುತ್ತಿರುವ ಡಾಕ್ಟರುಗಳು ಕೆಲಸ ಕಳೆದುಕೊಂಡರು. ಹೋಟೆಲುಗಳು ಮತ್ತು ಕ್ಲಿನಿಕ್‌ಗಳು ಅವಿನಾಭಾವ ಸಂಬಂಧ ಹೊಂದಿದ್ದ ಕಾಲವೊಂದಿತ್ತು. ಆದರೆ ಈಗ ಎರಡಕ್ಕೂ ಅವಸಾನ ಉಂಟಾಗಿದೆ.

ಎಲೆಕ್ಟ್ರಾನಿಕ್ ಮಾಧ್ಯಮದ ಬಗ್ಗೆ ಇಲ್ಲಿ ಹೇಳಲು ಇಚ್ಛಿಸುತ್ತೇನೆ. ನೀವು ಟಿವಿಗಳನ್ನು ನೋಡಿರಬಹುದು. ಮೊದಮೊದಲು ದೊಡ್ಡ ಗಾತ್ರದಲ್ಲಿದ್ದ ಅವು ಬರಬರುತ್ತಾ ಚಪ್ಪಟೆಯಾಗತೊಡಗಿದವು. ಹಾಗೇ ಸಣ್ಣದಾಗುತ್ತಾ ಆಗುತ್ತಾ ಕೊನೆಗೆ ಮಾಯವೇ ಆದವು. ನಗುವಿರಾ? ಇದು ಸತ್ಯ. ಜನ ತಮ್ಮ ಜೊತೆ ಟಿವಿಯನ್ನು ಒಯ್ಯುವ ಬದಲು ರಿಮೋಟ್ ಇಟ್ಟುಕೊಳ್ಳತೊಡಗಿದರು. ಎಲ್ಲೇ ಆಗಲಿ, ಆ ರಿಮೋಟ್ ಒತ್ತಿದರೆ ಶೂನ್ಯದಲ್ಲಿ ಚಿತ್ರ ಕಾಣಿಸಿಕೊಳ್ಳುತ್ತದೆ. ನೀವು ಬೇಕಷ್ಟು ಕಾಲ ನೋಡಿ ನಂತರ ಆರಿಸಬಹುದು.

ಐವತ್ತು ವರ್ಷಗಳ ಹಿಂದೆ ಚಲಾವಣೆಯಲ್ಲಿದ್ದ ನಟರ ಬಗ್ಗೆ ನೀವು ಕೇಳಿರಬಹುದು. ಅವರೆಂದರೆ ಕನ್ನಡ ಮತ್ತು ಹಿಂದಿಯ ರಾಜ್‌ಕುಮಾರ್, ರಾಜ್‌ಕಪೂರ್, ಶಂಕರ್ ಮತ್ತು ಅನಂತನಾಗ್, ಧರ್ಮೇಂದ್ರ, ರಜನಿಕಾಂತ್, ಇತ್ಯಾದಿ. ಇವರುಗಳು ನಾಯಕರಾಗಿರುವ ಚಲನಚಿತ್ರವನ್ನು ಇಂದೂ ತಯಾರಿಸುತ್ತಿದ್ದಾರೆ. ಹೇಗೆ ಎನ್ನುವಿರಾ? ಕಂಪ್ಯೂಟರ್ ಗ್ರಾಫಿಕ್ಸ್. ಇದರಂತೆ ನಾಯಕಿಯರದು ಕೂಡಾ. ನಿಮ್ಮ ಮಾಧುರಿ ದೀಕ್ಷಿತ್ ಏಕ್ ದೋ ತೀನ್ ಎಂದು ಹಾಡುತ್ತಾ ಕುಣಿಯುವುದನ್ನು ನೋಡುವುದು ನಿಮಗೆ ಬೇಜಾರಾದರೆ ಒಂದು ಕೀಯನ್ನು ರಿಮೋಟ್‌ನಲ್ಲಿ ಒತ್ತಿ ಮಾಧುರಿಯ ಬದಲು ಐಶ್ವರ್ಯ ರೈ ಬರುವಂತೆ ಮಾಡಬಹುದು. ಆಕೆ ಚಾರ್ ಪಾಂಚ್ ಛೇ ಸಾಥ್ ಆಠ್ ನೌ.... ಎಂದು ಹಾಡಬಹುದು. ಇದು ವಿಜ್ಞಾನದ ಸಾಧನೆ.

ಜನಗಳಿಗೆ ಆಹಾರದ ಸಮಸ್ಯೆ ಇಲ್ಲವಾದ ಕಾರಣ ಕೆಲಸವಿಲ್ಲ. ಖರ್ಚು ಮಾಡುವುದೇ ಬೇಡವಾದಾಗ ಸಂಪಾದನೆಯಾದರೂ ಯಾಕೆ? ಮೊದಮೊದಲು ಸೋಮಾರಿತನದಿಂದ ಇರುವುದು ಆನಂದ ತಂದರೂ ಕೊನೆಕೊನೆಗೆ ಇದೊಂದು ತಾಪತ್ರಯವಾಗತೊಡಗಿತು ಜನಗಳಿಗೆ. ಇದರ ಫಲವಾಗಿ ಆರಂಭಗೊಂಡಿದ್ದು ಜೂಜು, ತರಹೇವಾರಿ. ಅದು ಎಂದಿನಂತೆ ಜಗಳದಲ್ಲಿ ಕೊನೆಗೊಳ್ಳುತ್ತದೆ. ಹಾಗಾಗಿ ಜನ ಬೇಸಾಯಗಳಲ್ಲಿ ತೊಡಗಿಸಿಕೊಳ್ಳುವ ಬದಲು ಹೋರಾಟ ಹೆಚ್ಚಿಸತೊಡಗಿದರು. ಹೆಂಡತಿಯನ್ನು ಹೊಡೆಯುವುದರಲ್ಲಿ ಕೂಡಾ ಎಲ್ಲೆಡೆ ಸ್ಪರ್ಧೆ ಏರ್ಪಡಿಸಲಾಯಿತು. ಗಂಡನನ್ನು ಬೈಯುವ ಅನೇಕ ವಿಧಾನಗಳನ್ನು ಹೆಂಗಸರು ಕಲಿತುಕೊಳ್ಳತೊಡಗಿದರು. ಇದರಿಂದ ಅಶಾಂತಿ ಹೆಚ್ಚುತ್ತಿದೆ ಎಂಬುದು ಸರಕಾರಕ್ಕೆ ಮನವರಿಕೆಯಾಗಿದೆ. ಆದರೆ ಸಚಿವ-ಸಂಸದರೇ ಇದನ್ನು ಮಾಡತೊಡಗಿದಾಗ ಜನಸಾಮಾನ್ಯರು ಮಾಡದಂತೆ ಕಾನೂನು ಮಾಡಲು ಸಾಧ್ಯವೇ?


- ಸೂರಿ ಹಾರ್ದಳ್ಳಿ, ಬೆಂಗಳೂರು

★

ಪುರುಷರಿಗೂ ಪ್ರಾಮುಖ್ಯ

ಜನಸಂಖ್ಯೆಯ ಅನುಗುಣವಾಗಿ ಬಸ್ - ರೈಲುಗಳ ಸಂಖ್ಯೆಯನ್ನು ಈಗ ಹೆಚ್ಚಿಸಲಾಗುತ್ತಿದ್ದು ಇವುಗಳಲ್ಲಿ ಮಹಿಳೆಯರು ಎಲ್ಲ ಆಸನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ ಎಂದು ಪುರುಷರಿಂದ ಬಂದ ದೂರುಗಳನ್ನು ಗಮನಿಸಿ, ಇನ್ನು ಮೇಲೆ ಪುರುಷರಿಗೆ ಮತ್ತು ಮಹಿಳೆಯರಿಗೆಂದೇ ಪ್ರತ್ಯೇಕ ಬಸ್‌ಗಳನ್ನು ಸಂಚಾರಕ್ಕೆ ಬಿಡಲಾಗುವುದು ಎಂದು ಸಾರಿಗೆ ಸಚಿವರು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ ಪ್ರತಿಯೊಂದು ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಆಸನಗಳನ್ನು ಮೀಸಲಾಗಿಡಲಾಗಿತ್ತು



ಇವನ್ನು ಪುರುಷರು ಆಕ್ರಮಿಸಿಕೊಳ್ಳುತ್ತಿದ್ದರು.... ಇತ್ತೀಚಿನ ದಿನಗಳಲ್ಲಿ ಇದು ಉಲ್ಟಾ ಪಲ್ಟಾವಾಗಿ ಪುರುಷರಿಗೆ ಮೀಸಲು ಸೀಟುಗಳನ್ನು ಪ್ರತ್ಯೇಕ ಮಾಡಲಾಗಿತ್ತು. ಇವುಗಳನ್ನು ಸ್ತ್ರೀಯರು ಆಕ್ರಮಿಸುವ ಸಂಪ್ರದಾಯ ಹೆಚ್ಚಾಯಿತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಇದರ ಬಗೆಗಿನ ದೂರುಗಳು ಸಮಸ್ಯೆಗಳನ್ನು ಗಮನಿಸಿ ಸ್ತ್ರೀಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಆಸನಗಳ ಬದಲು ಪ್ರತ್ಯೇಕ ಬಸ್ ರೈಲುಗಳನ್ನೆ ಸಂಚಾರಕ್ಕೆ ಬಿಡುವುದು..... ಪುರುಷರ ಬಸ್, ರೈಲಿನಲ್ಲಿ ಪುರುಷ ಚಾಲಕ, ನಿರ್ವಾಹಕ ಅವರನ್ನೆ ಮುಂದುವರಿಸುವುದು. ಸ್ತ್ರೀಯರ ಬಸ್, ರೈಲುಗಳಲ್ಲಿ ಸ್ತ್ರೀ ಚಾಲಕಿ ನಿರ್ವಾಹಕಿ ಅವರನ್ನೇ ನೇಮಿಸಲಾಗುವುದು ಎಂದು ಸಚಿವರು ತಿಳಿಸಿದರು.

ಈ ರೀತಿಯ ವಿಶೇಷ ಆಧುನಿಕ ಬಸ್ ರೈಲುಗಳಲ್ಲಿ, ಚಾಲಕ ನಿರ್ವಾಹಕ ರಹಿತವಾಗಿ ಓಡಿಸುವ ಯೋಜನೆ ಇದ್ದು, ಪುರುಷ ಮಹಿಳೆಯರ ಪ್ರತ್ಯೇಕ ಬಸ್ - ರೈಲುಗಳನ್ನು ಆಯ್ದ ಪ್ರಮುಖ ನಗರಗಳಲ್ಲಿ, ಓಡಿಸಿ ಪ್ರಯೋಗವನ್ನು ಮಾಡಲಾಗುವುದು. ನಂತರ ಉಳಿದ ನಗರ ಪಟ್ಟಣಗಳಲ್ಲಿ ಹಂತ ಹಂತವಾಗಿ ಓಡಿಸಲಾಗುವುದು ಎಂದು ಸಚಿವರು ತಿಳಿಸಿದರು.

ದೀಪಾವಳಿಯ ದಿನದಂದು ಬೆಂಗಳೂರಿನಲ್ಲಿ ಉದ್ಘಾಟಿಸುವುದರ ಜತೆಗೆ ಅದೇ ದಿನದಂದು ಹುಬ್ಬಳ್ಳಿ - ಧಾರವಾಡ, ಮೈಸೂರು, ಮಂಗಳೂರು ಬೆಳಗಾಂ, ಕಲಬುರ್ಗಿ, ದಾವಣಗೆರೆಯಲ್ಲಿ ಏಕಕಾಲಕ್ಕೆ ಸಂಚರಿಸಲಿವೆ ಎಂದು ಸಚಿವರು ತಿಳಿಸಿದರು.

ಆದಷ್ಟು ಬೇಗ ಪ್ರಯಾಣಿಕರ ಅಭಿಪ್ರಾಯ ತಿಳಿಯುವ ಕುತೂಹಲ ಸಚಿವರಿಗೆ ಇದೆ ಎಂದು ಸಚಿವರು ಕೊನೆಯಲ್ಲಿ ತಿಳಿಸಿದರು.

-ವಿಜಯಾನಂದ ಬಿ. ಕಾಲವಾಡ, ಧಾರವಾಡ

★




ಹನಿಗವನಗಳು

• ಸಿ.ಪಿ.ಕೆ

ಅಣಕ

ವಾಸ್ತವದಂತೆ
ಕನಸುಗಳೂ
ಅಣಕಿಸುತ್ತವೆ
ಅನೇಕರನ್ನ!



ನಿಘಂಟು

ಯಾವುದೇ ಭಾಷೆಯ
ಅತ್ಯಂತ
ಮಹೋನ್ನತ ಗ್ರಂಥ
ಯಾವುದೆಂದರೆ :
ನಿಘಂಟು!



ಸುಖ

ಮರಣಶಯ್ಯೆಯು
ಹಲವರ ಪಾಲಿಗೆ
ಸುಖದ
ಸುಪ್ಪತ್ತಿಗೆ!



ಮದ್ದು

ಹೆಣ್ಣು ಮದ್ದು :
ಔಷಧವೂ ಹೌದು,
ಸ್ಫೋಟಕ
ವಸ್ತುವೂ ಹೌದು!



ಜ್ವಲಂತ

ಅಚ್ಚರಿ -
ಯಲ್ಲವೆ ಒಮ್ಮೊಮ್ಮೆ
ನೀರಿನ ಸಮಸ್ಯೆ
ಹೊತ್ತಿ ಉರಿಯುವ ಪರಿ!




ಬೇಟೆ

ಮನ್ಮಥನ ಜೊತೆಗೆ
ಮಾನಿನಿಯೂ ಬಿಲ್ಲು ಬಾಣ
ಹಿಡಿದರೆ ಗತಿಯೇನು ?-
ಹಿಡಿದಿದ್ದಾಳೆ,
ಹಳೆಯ ಬೀಡಿನಲ್ಲಿ!



ವ್ಯರ್ಥ

ಲೋಕದಲ್ಲಿ ಬಹುಮಂದಿ
ಬದುಕನ್ನು
ವ್ಯರ್ಥಗೊಳಿಸುತ್ತಾರೆ,
ಉಸಿರಾಡುವುದರಲ್ಲೆ!



ದೀಪಾವಳಿಯ ಹಾರ್ದಿಕ ಶುಭಾಶಯಗಳು

ಶಾಲಿ ಸಿದ್ದಯ್ಯಸ್ವಾಮಿ

ಅಧ್ಯಕ್ಷರು

ತಾಲೂಕು ಪಂಚಾಯಿತಿ

ಸೊಂಡೂರು

ಮನೆ ವಿಳಾಸ :

100 ಹಾಸಿಗೆ ಆಸ್ಪತ್ರೆ ಹತ್ತಿರ, 15ನೇ ವಾರ್ಡ್, ಚಪ್ಪರದಹಳ್ಳಿ,

ಹೊಸಪೇಟೆ-583 201

ದೂರವಾಣಿ :

ಮನೆ - (08394) 27120

ಕಛೇರಿ - (08395) 60494

ಮೊಬೈಲ್ - 98440-95799

ಕರ್ನಾಟಕ ಹೃದಯ ಸಿಂಹಾಸನಾಧೀಶ್ವರ

ಡಾ. ರಾಜಕುಮಾರ್


'ಚಿರಂಜೀವಿ'

1954-ಕನ್ನಡ ಚಿತ್ರರಂಗದಲ್ಲೊಂದು ನವತಾರೆಯ ಉದಯವಾಯಿತು. ಗುಬ್ಬಿವೀರಣ್ಣನವರ ಮತ್ತು ಸುಬ್ಬಯ್ಯನಾಯ್ಡು ಅವರ ಗರಡಿಯಲ್ಲಿ ಕಲಾವಿದನಾಗಿ ಪಳಗಿದ್ದ ಮುತ್ತುರಾಜ್ ಎನ್ನುವ ಯುವಕ ಬಣ್ಣದ ಪರದೆಯಿಂದ ಬೆಳ್ಳಿ ತೆರೆಗೆ ಕಾಲಿಡುವುದು ಸಾಧ್ಯವಾಯಿತು. ಗುಬ್ಬಿಕಂಪನಿಯವರದೇ ಜನಪ್ರಿಯ ನಾಟಕ 'ಬೇಡರ ಕಣ್ಣಪ್ಪ'ನನ್ನು ಮದ್ರಾಸ್‌ನ ಸುಪ್ರಸಿದ್ಧ ಚಿತ್ರ ನಿರ್ಮಾಣ ಸಂಸ್ಥೆಯೊಂದಿಗೆ, ವೀರಣ್ಣನವರ ಗುಬ್ಬಿ ಕರ್ನಾಟಕ ಫಿಲಮ್ಸ್ ಸಂಸ್ಥೆ ಚಲನಚಿತ್ರ ಮಾಡಲು ನಿರ್ಧರಿಸಿದಾಗ, ಮುತ್ತುರಾಜ್ ಎನ್ನುವ ತೆರೆಮರೆಯ ತಾರೆಗೆ ಅದೃಷ್ಟದ ಬಾಗಿಲು ತೆರೆದಿತ್ತು. ಕನ್ನಡ ವೃತ್ತಿರಂಗಭೂಮಿಯಲ್ಲಿ ಲೇಖಕರಾಗಿ, ನಿರ್ದೇಶಕರಾಗಿ ದುಡಿದು, ಕನ್ನಡದ ಮೊದಲ (ದಕ್ಷಿಣ ಭಾರತದ ಮೊಟ್ಟ ಮೊದಲು ಎಂದೂ ಹೇಳುತ್ತಾರೆ) ಸಾಮಾಜಿಕ ಚಲನಚಿತ್ರ 'ಸಂಸಾರ ನೌಕೆ' (1936 - ಕನ್ನಡದ ನಾಲ್ಕನೆಯ ಚಲನಚಿತ್ರ) ನಿರ್ದೇಶಿಸಿ, ಉತ್ತಮ ತಂತ್ರಜ್ಞರೆಂದು ಹೆಸರು ಮಾಡಿದ್ದ, ಎಚ್.ಎಲ್.ಎನ್.ಸಿಂಹ ಅವರು ಮುತ್ತುರಾಜ್ ಎನ್ನುವ ಆ ನಾಟಕದ ಕಲಾವಿದರನ್ನು ಬೇಡರ ಕಣ್ಣಪ್ಪನಾಗಿ ಆಯ್ಕೆ ಮಾಡಿಕೊಂಡಿದ್ದರು. ಈ ಕಿರಿಯನಿಗೆ ಅದನ್ನವರು ಸೂಕ್ಷ್ಮವಾಗಿ ತಿಳಿಸಿ ಆತನಲ್ಲಿ ಆಸೆ-ಉತ್ಸಾಹಗಳನ್ನು ಬಿತ್ತಿಬಿಟ್ಟಿದ್ದರು. ಚಿತ್ರೀಕರಣ ಪ್ರಾರಂಭವಾಗುವುದು ಸ್ವಲ್ಪ ನಿಧಾನವಾಯಿತು. ಮುತ್ತುರಾಜನನ್ನು ನೋಡಿದ ಎವಿಎಂ ಸ್ಟೂಡಿಯೋದ ಒಡೆಯರಾದ ಎ.ವಿ.ಮೇಯಪ್ಪ ಚೆಟ್ಟಿಯಾರ್ ಅವರು ಸ್ವಲ್ಪ ಯೋಚನೆ ಮಾಡಿದರು. ಈ ಸರಳ ವ್ಯಕ್ತಿತ್ವದ ಹುಡುಗ ರಂಗುರಂಗಿನ ಸಿನಿಮಾ ಪ್ರಪಂಚದ ಹೀರೋ ಆಗಬಹುದೇ ಎಂದು ಯೋಚಿಸಿದರು. ಇನ್ನೊಮ್ಮೆ ಯೋಚಿಸಿ ಎಂದೂ ನಿರ್ದೇಶಕರಿಗೆ ಹೇಳಿದರು. ಆದರೆ, ಆ ಕಿರಿಯ ಕಲಾವಿದನಿಗೆ ಅದೃಷ್ಟ ದೇವತೆ ಒಲಿದು ಬಂದಿದ್ದಾಗ ಯಾರು ತಡೆಯಲು ಸಾಧ್ಯ? ಎಚ್.ಎಲ್.ಎನ್.ಸಿಂಹ 'ಈ ಕಲಾವಿದನೇ ಇರಲಿ, ತುಂಬಾ ಭಾವಪೂರ್ಣವಾಗಿ ಅಭಿನಯಿಸುವ ನುರಿತ ಕಲಾವಿದ' - ಎಂದರು. ಮುಂದೆ ಯಾವುದೂ ಅಡ್ಡಿಯಾಗಲಿಲ್ಲ. ಆ ಕಾಲದ ನಿಧಾನವೇಗದಲ್ಲಿ ಚಿತ್ರ ನಿರ್ಮಾಣ ಪ್ರಾರಂಭವಾಯಿತು. ಆದರೆ, ಎವಿಎಂ ಅಂಥ ಸಂಸ್ಥೆಗೆ ಯಾವ ಕೊರತೆಯೂ ಇರಲಿಲ್ಲ. ಅವರಲ್ಲಿ ಎಲ್ಲವೂ ಇತ್ತು. ಇದು ಮುತ್ತುರಾಜರ ಇನ್ನೊಂದು ಅದೃಷ್ಟ. ಹಣದ ಮುಗ್ಗಟ್ಟಿನಿಂದಲೇ ಬೇರೆ ಯಾರಾದರೂ ಚಿತ್ರ ಪ್ರಾರಂಭಿಸಿ ಅರ್ಧದಲ್ಲಿಯೆ ನಿಲ್ಲಿಸಿದ್ದರೆ, ಆ ಕಲಾವಿದನ ಭವಿಷ್ಯ ಬೇರೆಯೇ ಆಗಿರುತ್ತಿತ್ತು. ಎವಿಎಂ ಸಂಸ್ಥೆ ದೊಡ್ಡದಾಗಿ ಚಿತ್ರ ನಿರ್ಮಿಸಿ ತೆರೆಕಾಣಿಸಿತು. ಗುಬ್ಬಿ ವೀರಣ್ಣ ಅವರದೇ ಚಲನಚಿತ್ರ ಮಂದಿರ ಬೆಂಗಳೂರು 'ಸಾಗರ್' ಟಾಕೀಸ್ ಮತ್ತಿತರ ಊರುಗಳಲ್ಲಿ ಚಿತ್ರಬಿಡುಗಡೆ ಯಾಯಿತು. ನಾಟಕದ ತೆರೆಯ ಹಿಂದೆ ಇದ್ದ ಆ ಸವಿನಯ ಮೂರ್ತಿಯ ಭಾಗ್ಯದ ಬಾಗಿಲು

ಅಭಿಮಾನ ವಿಶೇಷ

ಕನ್ನಡ ವೃತ್ತಿ ರಂಗಭೂಮಿಗೂ ಕನ್ನಡ ಚಿತ್ರರಂಗಕ್ಕೂ ಆರು ದಶಕಗಳ ಸೇವೆ ಪೂರೈಸಿರುವ 'ಕರ್ನಾಟಕ ರತ್ನ' ಡಾ.ರಾಜ್ ಅವರ ಬಗ್ಗೆ ಇಡೀ ಕನ್ನಡನಾಡು ಇಟ್ಟಿರುವ ಅಭಿಮಾನ ಎಂಥದ್ದು ಎನ್ನುವುದೀಗ ಸಾಬೀತಾಗಿದೆ. ಅವರು ಕನ್ನಡ ನಾಡು-ನುಡಿಯ ಶಕ್ತಿ ಎನ್ನುವುದು ಖಚಿತವಾಗಿದೆ. ಈ ಸಂದರ್ಭದಲ್ಲಿ ಡಾ.ರಾಜ್ ನಡೆದುಬಂದ ದಾರಿಯನ್ನು ಅಭಿಮಾನದಿಂದ 'ಬದುಕು' ಗಮನಿಸಿ ನೋಡುತ್ತಿದೆ.

ಫೋಟೋಗಳು : ಕೆ.ಎಸ್.ನಾಗೇಶ್ ಕುಮಾರ್




ತೆರೆಯಿತು.

ಆವರೆಗೆ ಕನ್ನಡದಲ್ಲಿ ಇಪ್ಪತ್ತು ವರ್ಷಗಳಲ್ಲಿ (1934-54) ನಲವತ್ತು ಚಿತ್ರಗಳು ಮಾತ್ರ ತಯಾರಾಗಿತ್ತು. ವರ್ಷಕ್ಕೆ ಒಂದು ಚಿತ್ರ ಎಂದು ಪ್ರಾರಂಭವಾಗಿ (ಮೊದಲ ವರ್ಷದಲ್ಲಿ ಮಾತ್ರ ಎರಡು ಚಿತ್ರಗಳು) ಎರಡು, ಮೂರು, ಒಂದೂ ಇಲ್ಲ (1938, 39, 40, 44, 46, 50 ಇಸವಿಗಳಲ್ಲಿ ಒಂದು ಕನ್ನಡ ಚಿತ್ರವೂ ತಯಾರಾಗಲಿಲ್ಲ) ಎಂದಾಗಿ, ಐವತ್ತರ ದಶಕದ ಪ್ರಾರಂಭಕ್ಕೆ ವರ್ಷಕ್ಕೆ ಏಳೆಂಟು ಚಿತ್ರಗಳು ತಯಾರಾಗುವ ಹಂತ ಮುಟ್ಟಿತ್ತು. ಕನ್ನಡದ ದೊಡ್ಡ ದೊಡ್ಡ ನಾಟಕ ಕಂಪನಿಗಳು, ತಮಿಳುನಾಡಿನ ಒಂದೆರಡು ದೊಡ್ಡ ಚಿತ್ರತಯಾರಿಕಾ ಸಂಸ್ಥೆಗಳು ಕನ್ನಡದ ಸುಪ್ರಸಿದ್ಧ ಪೌರಾಣಿಕ ನಾಟಕಗಳನ್ನು ಮೂಕಿ ಚಿತ್ರಗಳನ್ನು ಮಾತನಾಡುವ ಚಿತ್ರಗಳನ್ನಾಗಿ ತಯಾರಿಸಲು ಪ್ರಾರಂಭಿಸಿದ್ದರು. ಹಾಗಾಗಿ ಹಣದ ಬೆಂಬಲ ಒದಗುತ್ತ ಕನ್ನಡದ್ದೂ ಒಂದು ಚಿತ್ರರಂಗ ಎನ್ನುವುದು ಸ್ಥಾಪನೆಗೊಂಡಿತು. ಇಪ್ಪತ್ತು ವರ್ಷಗಳಲ್ಲಿ ತಯಾರಾದ ನಲವತ್ತು ಕನ್ನಡ ಚಿತ್ರಗಳಲ್ಲಿ ಹತ್ತು ಸಾಮಾಜಿಕ ವಸ್ತು ಚಿತ್ರಗಳು, ಉಳಿದ ಮೂವತ್ತು ಪೌರಾಣಿಕ ನಾಟಕಗಳ ಸಿನಿಮಾ ಅವತರಣಿಕೆಗಳು.

'ಬೇಡರಕಣ್ಣಪ್ಪ' ಜಯಭೇರಿ ಹೊಡೆಯಿತು. ಭಾವಪೂರ್ಣವಾಗಿ ಅಭಿನಯಿಸಿದ ರಾಜಕುಮಾರ್ ಎನ್ನುವ ಕಲಾವಿದನನ್ನು ಕನ್ನಡಿಗರು ಹೃತ್ಪೂರ್ವಕ ಸ್ವೀಕರಿಸಿದರು. (ಸಿಂಹ ಅವರೇ ಮುತ್ತುರಾಜ್ ಎನ್ನುವ ಹೆಸರನ್ನು ರಾಜಕುಮಾರ್ ಮಾಡಿದವರು). ಬೆಂಗಳೂರು-ಮೈಸೂರು ಮೊದಲಾಗಿ ಕೆಲ ಊರುಗಳಲ್ಲಿ ಬೆಳ್ಳಿ ಹಬ್ಬ ಆಚರಿಸಿತು. ರಾಜಕುಮಾರ್ ಬಗ್ಗೆ ಪತ್ರಿಕೆಗಳು ಮೆಚ್ಚಿ ಬರೆದವು. ಇದರ ನಡುವೆಯೊಂದು ಆತ್ಮೀಯ ಲೇಖನ : ಮುತ್ತುರಾಜ್‌ರ ಬಾಲ್ಯಸ್ನೇಹಿತರಾದ ತಿಪಟೂರು ರಾಮಸ್ವಾಮಿ ಅವರು ಬರೆದ ಪತ್ರಿಕಾ ಲೇಖನ. 'ನನಗೆ ಬರೆಯುವ ಆಲೋಚನೆ ಇರಲಿಲ್ಲ. ನನ್ನ ಮುತ್ತುರಾಜ ರಾಜಕುಮಾರ್ ಆಗಿ ಚಿತ್ರರಂಗ ಪ್ರವೇಶಿಸಿದ್ದು ನನಗಂತೂ ತಡೆದುಕೊಳ್ಳಲಾರದಷ್ಟು ಆನಂದವಾಗಿತ್ತು. ನನ್ನ ಪ್ರೀತಿಯ ಬಹುಕಾಲದ ಮಿತ್ರ ಬದುಕಿನಲ್ಲಿ ಬೆಳಗಬೇಕೆಂದು ನನಗೆ ತುಂಬಾ ಆಸೆಯಿತ್ತು. ಅವರಿಗಿಂತಲೂ ತುಂಬಾ ಆಸೆಯಿತ್ತು. ಅದು ಈಡೇರಿದಾಗ ನನಗಿಂತಲೂ ಸಂತೋಷಪಡುವವರು ಬೇರೊಬ್ಬರುಂಟೇ? ಆತ್ಮೀಯರು ಕೆಲವರ ಬಲವಂತದಿಂದ ಪುಟ್ಟದೊಂದು ಸಂತೋಷ ತುಂಬಿದ ಲೇಖನವನ್ನು ನನ್ನ ಮಿತ್ರರ ಬಗ್ಗೆ ಬರೆದೆ' - ಎನ್ನುತ್ತಾರೆ, ತಿಪಟೂರು ರಾಮಸ್ವಾಮಿ ಅವರು.

ಈಗ ತಿಪಟೂರಿನಲ್ಲಿ ವಾಸವಾಗಿರುವ, ಸುಮಾರು ಡಾ.ರಾಜಕುಮಾರ್ ವಯಸ್ಸಿನವರೇ ಆದ ಬಿ.ಎಸ್.ರಾಮಸ್ವಾಮಿ ನಲವತ್ತರ ದಶಕದಲ್ಲಿ ಮುತ್ತುರಾಜರನ್ನು ಸಂಧಿಸಿದರು. ಗುಬ್ಬಿ ಕಂಪನಿ ಆಗ ತಿಪಟೂರಿನಲ್ಲಿ ಕ್ಯಾಂಪ್ ಮಾಡಿತ್ತು. ಮುತ್ತುರಾಜ ಆಗ ಹೆಚ್ಚು ಪಾತ್ರವಹಿಸಲು ಅವಕಾಶ ಇರಲಿಲ್ಲ. ಅವರ




ತಂದೆಯವರೇ ಪಾತ್ರಮಾಡಿ ಸಂಸಾರ ನಡೆಯುತ್ತಿತ್ತು. ಮುತ್ತುರಾಜರಿಗೆ ಬೇಕಾದಷ್ಟು ಬಿಡುವಿತ್ತು. ಊರಿನಿಂದ ಸ್ವಲ್ಪ ದೂರದ ಪುಟ್ಟಮನೆಯಲ್ಲಿ ಇವರ ಕುಟುಂಬ ಕ್ಯಾಂಪ್ ಹಾಕಿತ್ತು. ರಂಗನಾಟಕ ಪ್ರಿಯರಾದ ರಾಮಸ್ವಾಮಿ ಅವರಿಗೆ ಗುಬ್ಬಿ ಕಂಪನಿ ವಲಯದಲ್ಲಿ ಓಡಾಡುತ್ತಿದ್ದ ಮುತ್ತುರಾಜ್ ಪರಿಚಯವಾಯಿತು. ಓಡಾಟ, ಹರಟೆ, ದಾರಿಯಲ್ಲೊಂದು ಕಡೆ ವಡೇಬೋಂಡ ಮಾಡುತ್ತಿದ್ದ ಕಡೆ ಬಿಸಿಬಿಸಿ ತಿಂಡಿ ಕೊಂಡು 'ಉಸ್‌ಉಸ್' ಎನ್ನುತ್ತ ತಿರುಗುವುದು, ನಾಟಕದ ಬಗ್ಗೆ ಮಾತನಾಡುವುದು, ರಂಗಭೂಮಿಯ ದೊಡ್ಡ ನಟನಾಗಬೇಕು ಎನ್ನುವ ಮುತ್ತುರಾಜ ಆಸೆ ಕನಸು ಕೇಳುವುದು, ಆಗಾಗ್ಗೆ ಮುತ್ತುರಾಜ ರಾಮಸ್ವಾಮಿ ಮನೆಗೆ ಬಂದು ಕೈತುತ್ತು ತಿನ್ನುವುದು ಇವೆಲ್ಲ ಆಗುತ್ತಿತ್ತು. ಪರಿಚಯ ಗಾಢವಾದ ಸ್ನೇಹವಾಯಿತು. ಸ್ನೇಹ ಎರಡು ಆತ್ಮಗಳು ಒಂದಾಗುವಂತಾಯಿತು. ಈಗ ಐವತ್ತು-ಐವತ್ತೈದು ವರ್ಷಗಳ ನಂತರ ಈ ಬಂಧ ಬಿಗಿಗೊಂಡಿದೆ. ಒಬ್ಬರನ್ನೊಬ್ಬರು ಬಿಟ್ಟಿರಲಾರರು. ಇಂದಿಗೂ ಹಾಗಿದ್ದಾರೆ. ಇವರನ್ನು ನೋಡಲು ಅವರು ಬೆಂಗಳೂರಿಗೆ ಬರುವುದು, ಅವರನ್ನು ನೋಡಲು ಇವರು ಇದ್ದಕ್ಕಿದ್ದಹಾಗೆಯೇ ತಿಪಟೂರಿಗೆ ಹೋಗಿ ಬಿಡುವುದು ಆಗುತ್ತಲೇ ಇದೆ. ಎಷ್ಟು ಹೊತ್ತು ಜೊತೆಗಿದ್ದರೂ, ಎಷ್ಟು ಮಾತನಾಡಿದರೂ ಸಾಲದು. ಕೊನೆಗೆ ಬೀಳ್ಕೊಡುವ ಸಂದರ್ಭ ಬಂದಾಗ ಇಬ್ಬರ ಕಣ್ಣಲ್ಲೂ ಧಾರಾಕಾರವಾಗಿ ನೀರು, ಈಗ ಡಾ.ರಾಜಕುಮಾರ್ ಅಪಹರಣವಂತೂ ರಾಮಸ್ವಾಮಿಯವರಿಗೆ ದೊಡ್ಡ ಆಘಾತ, ದಿಕ್ಕೆ ತೋರದ ಸ್ಥಿತಿ. ಊಟ ನಿದ್ದೆ ಸಂತೋಷ ಯಾವುದೂ ಅವರತ್ತ ಸುಳಿದಿಲ್ಲ.

'ಬೇಡರ ಕಣ್ಣಪ್ಪ' ಬಿಡುಗಡೆಯಾಗಿ ಹೆಸರು ಬಂದ ಮೇಲೆ ರಾಜಕುಮಾರ್ ಮುಂದಿನ ಮೂರುವರ್ಷದಲ್ಲಿ (1954-56) ಅಭಿನಯಿಸಿದ್ದು ಇನ್ನೂ ನಾಲ್ಕು ಚಿತ್ರಗಳಲ್ಲಿ. ಅವರು ಅಭಿನಯಿಸಿದ ಮೊದಲ ಐದೂ ಚಿತ್ರಗಳು ಪೌರಾಣಿಕ ಮತ್ತು ಜಾನಪದ (ಬೇಡರ ಕಣ್ಣಪ್ಪ, ಸೋದರಿ, ಭಕ್ತ ವಿಜಯ, ಹರಿಭಕ್ತ, ಓಹಿಲೇಶ್ವರ). ಅವರ ಐದನೇ ಚಿತ್ರ ಅಕಸ್ಮಾತ್ ಸಾಮಾಜಿಕವಾಯಿತು. ಆವರೆಗೆ ರಂಗಭೂಮಿ ಕಲಾವಿದನ ಭಾಗವತರ್ ಕ್ರಾಪ್ ಇಟ್ಟುಕೊಂಡಿದ್ದ ಅವರು ಪಂಡರಿಬಾಯಿ ಮತ್ತು ಕಲ್ಯಾಣ್‌ಕುಮಾರ್ ಅವರ ಒತ್ತಾಯಕ್ಕೆ ಕಟ್ಟುಬಿದ್ದು ಭಾಗವತರ್ ತಲೆಗೂದಲು ತೆಗೆಸಿ ಕ್ರಾಪ್ ಮಾಡಿಸಿಕೊಳ್ಳಬೇಕಾಯಿತು. ಈ ಚಿತ್ರ 'ರಾಯರ ಸೊಸೆ' (1957). ಇದಕ್ಕೆ ಮುಂದಿನ ನಾಲ್ಕು ಚಿತ್ರಗಳು ಪೌರಾಣಿಕ (ಸತಿ ನಳಾಯಿನಿ, ಭೂಕೈಲಾಸ, ಕೃಷ್ಣಗಾರುಡಿ) ಅನಂತರ ಇನ್ನೊಂದು ಸೊಗಸಾದ ಸುಂದರ ಗ್ರಾಮೀಣ ಸಾಮಾಜಿಕ ವಸ್ತುವಿನ ಚಿತ್ರ 'ಅಣ್ಣ ತಂಗಿ'. ಅದೇ ತಾನೆ ಚಿತ್ರರಂಗದಲ್ಲಿ ಹೆಸರು ಮಾಡುತ್ತಿದ್ದ ಬಿ.ಸರೋಜಾದೇವಿ ಅವರೊಂದಿಗೆ, ಕು.ರಾ.ಸೀತಾರಾಮಶಾಸ್ತ್ರಿ ಅವರ ನಿರ್ದೇಶನದಲ್ಲಿ 'ಅಣ್ಣ ತಂಗಿ' ತಯಾರಾಯಿತು. ಸೊಗಸಾದ ಚಿತ್ರ ಎಂದು ಎಲ್ಲರಿಂದಲೂ ಮೆಚ್ಚುಗೆ ಗಳಿಸಿತು. ರಾಜಕುಮಾರ್ ಇವೆಲ್ಲ ಚಿತ್ರಗಳಲ್ಲೂ ಅದ್ಭುತವಾಗಿ ಅಭಿನಯಿಸಿದರು. ಈಗ ಈ ಚಿತ್ರಗಳನ್ನು ಮತ್ತೆ ನೋಡಿದಾಗ ಅವೆಲ್ಲ ಇವರ ಪ್ರಾರಂಭದ ಚಿತ್ರಗಳು ಅನ್ನಿಸುವುದೇ ಇಲ್ಲ. ನುರಿತ ಕಲಾವಿದರೊಬ್ಬರ ಸಲೀಸಾದ ಅಭಿನಯ, ಸೊಗಸಾದ ಮಾತುಗಾರಿಕೆ ಎದ್ದುಕಾಣುತ್ತದೆ.

ಬಹುಶಃ, ಇಲ್ಲಿಂದ ರಾಜಕುಮಾರ್ ಹಿಂತಿರುಗಿ ನೋಡಲಿಲ್ಲ. ಆಗಲೇ ಅವರೊಂದಿಗೆ ಉದಯಕುಮಾರ್ ಮತ್ತು ಕಲ್ಯಾಣಕುಮಾರ್ ಬಂದು ಸೇರಿಕೊಂಡು ಇವರಷ್ಟೆ ಜನಪ್ರಿಯತೆ, ಭಾವಾಭಿನಯ ಚತುರತೆ ಸಾಧಿಸಿದ್ದರು. ಬಹುಶಃ, ಅನೇಕಾನೇಕ ಪೌರಾಣಿಕ ಚಿತ್ರಗಳಲ್ಲಿ ಅಭಿನಯಿಸುವ ಅವಕಾಶ, ಪುರಾಣದ ಶಕ್ತಿಯುತ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಅವಕಾಶ ದೊರಕಿದ್ದರಿಂದಲೇನೊ, ರಾಜಕುಮಾರ್ ಉಳಿವು-ಬೆಳವಣಿಗೆ ಗಟ್ಟಿಯಾಯಿತು.

'ಬೇಡರ ಕಣ್ಣಪ್ಪ' 'ಹರಿಭಕ್ತ', 'ಓಹಿಲೇಶ್ವರ', 'ಭೂಕೈಲಾಸ', 'ಧರ್ಮವಿಜಯ', 'ಮಹಿಷಾಸುರ ಮರ್ಧಿನಿ', 'ರಣಧೀರ ಕಂಠೀರವ' ಮೊದಲಾದ ಚಿತ್ರಗಳಲ್ಲಿ ಹಂತಹಂತವಾಗಿ ಅವರ ಜನಪ್ರಿಯತೆ ಬೆಳೆಯಿತು. 'ಭಕ್ತ ಕನಕದಾಸ' (1960), 'ಕಣ್ತೆರೆದು ನೋಡು' (1961), 'ಸ್ವರ್ಣಗೌರಿ' (1962), 'ಕರುಣೆಯೇ ಕುಟುಂಬದ ಕಣ್ಣು' (1962), 'ನಂದಾದೀಪ' (1963), 'ಕನ್ಯಾರತ್ನ', 'ಕುಲವಧು' (1963), 'ಮನಮೆಚ್ಚಿದ ಮಡದಿ',





'ಸತೀಶಕ್ತಿ' (1963), - ಚಿತ್ರಗಳು ಅವರನ್ನು ಕನ್ನಡಿಗರ ಹೃದಯ ಸಿಂಹಾಸನದಲ್ಲಿ ಸ್ಥಾಪಿಸಿಬಿಟ್ಟಿತು.

ಮೊದಲ ಹತ್ತುವರ್ಷ (1954-63) ನಲವತ್ತಾರು ಚಿತ್ರಗಳಲ್ಲಿ ಅಭಿನಯಿಸಿದ ಅವರು, ಎರಡನೆ ಹತ್ತು ವರ್ಷಗಳಲ್ಲಿ (1964-73) ನೂರಾಒಂದು ಚಿತ್ರಗಳಲ್ಲಿ ಅಭಿನಯಿಸಿದರು. ಆ ವೇಳೆಗವರು, ಮುತ್ತುರಾಜನಿಂದ ರಾಜಕುಮಾರ್ ಆಗಿ, ರಾಜಕುಮಾರ್‌ನಿಂದ ಡಾ.ರಾಜಕುಮಾರ್ ಆಗಿದ್ದರು. ಮುಂದೆ ಅವರು ಚಿತ್ರಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತ ಹೋದರು. ಬೇರೆ ಸಂಸ್ಥೆಗಳಿಗೆ ಕೆಲವು ಚಿತ್ರಗಳಲ್ಲಿ ಅಭಿನಯಿಸಿ, ಎಂಭತ್ತರ ದಶಕದಿಂದಾಚೆ ತಮ್ಮದೇ ಸ್ವಂತ ಸಂಸ್ಥೆಯ ಚಿತ್ರಗಳಲ್ಲಿ ಮಾತ್ರ ಅಭಿನಯಿಸತೊಡಗಿದರು. ಅತ್ಯುತ್ತಮ ಕಥೆ, ಅತ್ಯುತ್ತಮ ಪಾತ್ರ ಬಂದಾಗ ಮಾತ್ರ ಅಭಿನಯಿಸುತ್ತಿದ್ದರು. ಇಲ್ಲದಿದ್ದರೆ ಅಭಿನಯಿಸುತ್ತಲೇ ಇರಲಿಲ್ಲ. ಆ ವೇಳೆ ಅವರ ವಯಸ್ಸು ಐವತ್ತೈದನ್ನು ದಾಟಿದ್ದು, ಅವರ ಅಭಿನಯ-ಪಾತ್ರ ಅಪರೂಪವಾಗಿ, ಅವರ ಚಿತ್ರಗಳಿಗಾಗಿ ಕನ್ನಡ ಪ್ರೇಕ್ಷಕರು ಕಾಯುವಂತಾಯಿತು. ಅವರಿಗಾಗಿ, ಅವರ ವ್ಯಕ್ತಿತ್ವಕ್ಕೆ ಪೂರಕವಾಗುವಂಥ ವಸ್ತು-ಸಂಭಾಷಣೆ- ಹಾಡುಗಳು ಸೃಷ್ಟಿಯಾದವು. ಈ ಬೆಳವಣಿಗೆ, ಜೊತೆಗೆ ಅವರ ಸರಳ-ಸೌಜನ್ಯಗುಣ, ಕನ್ನಡನಾಡು-ನುಡಿ ಪ್ರೀತಿ ಅವರನ್ನು ಕನ್ನಡದ ಕಣ್ಮಣಿಯಾಗಿಸಿತು.


ಡಾ.ರಾಜ್ ಅವರು ಅನೇಕ ಹೃದಯಸ್ಪರ್ಶಿ ಚಿತ್ರಗಳಲ್ಲಿ, ಸರಳ ಸುಂದರ ಪಾತ್ರಗಳಲ್ಲಿ ಅಭಿನಯಿಸಿದರು. ಹಾಡಿ ಕುಣಿದು ನಲಿಯುವ ಪ್ರೇಮಿಯ ಪಾತ್ರದಿಂದ, ಇಡೀ ನಾಡನ್ನು ಕಾಪಾಡುವ, ಕುಟುಂಬವೊಂದರ ಘನತೆಗೌರವ ಕಾಪಾಡುವ ತ್ಯಾಗಮಯಿ ಉನ್ನತ ಪಾತ್ರಗಳಲ್ಲೂ ಶೋಭಿಸಿದರು. ನಾಂದಿ (1964), ಕಸ್ತೂರಿ ನಿವಾಸ (1971), ಬಂಗಾರದ ಮನುಷ್ಯ (1972) ಎರಡು ಕನಸು, ಸಂಪತ್ತಿಗೆ ಸವಾಲ್, ಭಕ್ತ ಕುಂಬಾರ (1974), ಮಯೂರ (1975), ಬಬ್ರುವಾಹನ, ಭಾಗ್ಯವಂತರು, ಸನಾದಿ ಅಪ್ಪಣ್ಣ (1977), ಶಂಕರ್‌ಗುರು (1978), ಹಾಲುಜೇನು (1982), ಚಲಿಸುವ ಮೋಡಗಳು (1982), ಕವಿರತ್ನ ಕಾಳಿದಾಸ (1983), ಜೀವನ ಚೈತ್ರ (1990), ಶಬ್ದವೇಧಿ (2000) - ಮೊದಲಾದ ಚಿತ್ರಗಳು ಕನ್ನಡ ಚಲನಚಿತ್ರ ರತ್ನಗಳು.


ಮದ್ರಾಸ್‌ನಲ್ಲಿ (ಈಗಿನ ಚೆನ್ನೈ) ಸುಮಾರು ನಾಲ್ಕು ದಶಕಗಳಿಗಿಂತಲೂ ಹೆಚ್ಚು ಕಾಲ ವಾಸಮಾಡಿ, ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಅವರು ಹಿಂತಿರುಗಿದ ಮೇಲೆ, ಇಡೀ ಕನ್ನಡ ಚಿತ್ರರಂಗ ಮದ್ರಾಸ್‌ನಿಂದ ಕನ್ನಡ ನಾಡಿಗೆ ವರ್ಗಾವಣೆಗೊಂಡಿತು. ಪ್ರಾದೇಶಿಕವಾಗಿ ಬೆಳೆಯಿತು. ಕನ್ನಡ ಕಲಾವಿದರು, ತಂತ್ರಜ್ಞರು, ಗಾಯಕ ಗಾಯಕಿಯರು, ನಿರ್ಮಾಪಕ- ನಿರ್ದೇಶಕರು, ಚಿತ್ರ ನಿರ್ಮಾಣ ಸ್ಟೂಡಿಯೋ, ಧ್ವನಿಮುದ್ರಣ, ಸಂಕಲನ, ಚಿತ್ರ ಮುದ್ರಣ, ಜಾಹಿರಾತು-ಪ್ರಚಾರ, ಹೀಗೆ ಎಲ್ಲವೂ ಕನ್ನಡ ಪ್ರಯತ್ನಗಳಾದವು. ಕೆಲಸಗಳಲ್ಲಿ ಕನ್ನಡ

ಹೀರೋ : ಆಕಾಶವಾಣಿ

ಟೆಲಿವಿಷನ್ ಬಂದಮೇಲೆ ಆಕಾಶವಾಣಿ ಸತ್ತು ಹೋಯಿತು ಎಂದು ಎಲ್ಲ ಕಡೆಯೂ ದನಿ ಕೇಳಿ ಬಂದಿತು. ಆದರೆ, ಆಕಾಶವಾಣಿ ತನ್ನಪಾಡಿಗೆ ತಾನು ಕಾರ್ಯಕ್ರಮಗಳನ್ನು ಉಪಯುಕ್ತಗೊಳಿಸುತ್ತಲೇ ಬಂದಿದೆ. ಗ್ರಾಮಾಂತರ ಪ್ರದೇಶಗಳಲ್ಲಿ 'ಆಕಾಶವಾಣಿ' ಇಂದಿಗೂ ಪ್ರಸ್ತುತ.

ಡಾ.ರಾಜ್ ಅಪಹರಣದ ದುರದೃಷ್ಟ ಘಟನಾವಳಿಗಳ ನಂತರ ಆಕಾಶವಾಣಿ ದಿಢೀರನೆ ಮುಖ್ಯಪಾತ್ರವಹಿಸುವ ಮಾಧ್ಯಮವಾಯಿತು. ಗೋಪಾಲ್ ಕಾಡಿಗೆ ಹೋಗುವ ಮೊದಲೇ ಆಕಾಶವಾಣಿಯಿಂದ ಮುಖ್ಯಮಂತ್ರಿಗಳ, ಶ್ರೀಮತಿ ಪಾರ್ವತಮ್ಮನವರ ಮತ್ತು ಮಕ್ಕಳ ದನಿಗಳು ಕಾಡಿನಲ್ಲಿದ್ದ ವೀರಪ್ಪನ್, ಡಾ.ರಾಜ್ ಅವರನ್ನು ಸೇರಿತು. ಅಷ್ಟೇ ಅಲ್ಲ, ಕರ್ನಾಟಕದ ಎಲ್ಲ ಜನರೂ ಆಕಾಶವಾಣಿಯ ದನಿಗಳಿಗೆ ಕಾತುರದಿಂದ ಕಾಯುವಂತಾಯಿತು. ರೇಡಿಯೋ ಇಲ್ಲದಿದ್ದವರೆಲ್ಲ ರೇಡಿಯೋ-ಟ್ರಾನ್ಸಿಸ್ಟರ್ ಕೊಂಡರು. ವೀರಪ್ಪನ್‌ನನ್ನು ಕೂಡಲೇ ತಲುಪುವ ವಾಹಿನಿ ಆಕಾಶವಾಣಿ ದಿಢೀರ್ ಜನಪ್ರಿಯತೆ-ಕೀರ್ತಿ ಸಂಪಾದಿಸಿ, ಎಲ್ಲ ಮಾಧ್ಯಮಗಳಿಗಿಂತಲೂ ಕೆಲ ಹೆಜ್ಜೆಗಳು ಮುಂದೆಯೆ ಹೋಗಿ, 'ಹೀರೋ' ಆಗಿ ಹೋಗಿತು. ಶುಭಾಶಯಗಳು ಆಕಾಶವಾಣಿಗೆ.





ವಾತಾವರಣ ಮೂಡಿತು. ಚಕ್ರವರ್ತಿ ಹೋದೆಡೆಗೇ ಪ್ರಜೆಗಳೂ, ರಾಜಧಾನಿಯೂ ಹೋಗುವಹಾಗೆ, ಡಾ.ರಾಜ್ ಇಡೀ ಕನ್ನಡ ಚಿತ್ರರಂಗವನ್ನು ಬುಡಸಮೇತ ಕನ್ನಡ ನಾಡಿಗೆ ತಂದಿಟ್ಟುಬಿಟ್ಟರು.

ಈಗ 66 ವರ್ಷಗಳ ಮಾಗಿದ ಕನ್ನಡ ಚಿತ್ರರಂಗದ ದೊಡ್ಡ ಶಕ್ತಿ ಡಾ.ರಾಜಕುಮಾರ್, ಅವರೊಂದಿಗೆ ಮಕ್ಕಳು ಶಿವರಾಜಕುಮಾರ್, ರಾಘವೇಂದ್ರ ರಾಜಕುಮಾರ್, ಪುನೀತ್ ರಾಜಕುಮಾರ್ ಕನ್ನಡ ಚಿತ್ರರಂಗದ ನಾಡಿಮಿಡಿತವಾಗಿದ್ದಾರೆ. ಅಭಿನಯ, ಚಿತ್ರನಿರ್ಮಾಣ, ಹಂಚಿಕೆ ಎನ್ನುವ ಪ್ರಮುಖ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಡಾ.ರಾಜ್ ಅವರಿಗೀಗ 73 ವಯಸ್ಸು. ಕನ್ನಡ ಚಿತ್ರರಂಗದ ನಂಟು 46 ವರ್ಷ ದಾಟಿದೆ. ಅಭಿನಯ, ಗಾಯನ ಅವರನ್ನು ಚಟುವಟಿಕೆಯಿಂದಿಟ್ಟಿದೆ. ಯೋಗಾಭ್ಯಾಸ ಅವರನ್ನು ಆರೋಗ್ಯವಂತರನ್ನಾಗಿಸಿದೆ. ಕನ್ನಡನಾಡು-ನುಡಿಗೆ ಸಂಬಂಧಿಸಿದ ಪ್ರತಿಯೊಂದು ಆಗುಹೋಗು ಬಗ್ಗೆಯೂ ಅವರ ಕುತೂಹಲ, ತೊಡಗಿಕೊಳ್ಳುವಿಕೆ ಇದೆ. ಡಾ.ರಾಜ್ ಎನ್ನುವುದೇ ಒಂದು 'ಕನ್ನಡ ಶಕ್ತಿ' ಆಗಿಹೋಗಿದೆ.

ಡಾ.ರಾಜ್ ಸಹಧರ್ಮಿಣಿ ಶ್ರೀಮತಿ ಪಾರ್ವತಮ್ಮ ರಾಜಕುಮಾರ್ ಅವರು ಈ ಕನ್ನಡ ಶಕ್ತಿಯ ಹಿಂದಿನ ಶಕ್ತಿ. ಈಗ ಬದುಕಿನ ಪಕ್ವ ಘಟ್ಟದಲ್ಲಿ ಡಾ.ರಾಜ್ ಅವರು ಯಾವ ಚಿಂತೆಯೂ ಇಲ್ಲದೆ, ಯಾವ ಸಮಸ್ಯೆಯೂ ಇಲ್ಲದೆ, ಯಾವ ಏರುಪೇರುಗಳೂ ಇಲ್ಲದೆ ಇರುವುದಾದರೆ, ಅದು ಈ ಸ್ತ್ರೀ ಶಕ್ತಿಯ ಬೆಂಬಲ, ಡಾ.ರಾಜ್ ಅವರ ಬದುಕು-ಭವಿಷ್ಯ ಮತ್ತು ಕುಟುಂಬದ ಸ್ಥಿತಿಗತಿಗಳು ಇಂದು ಒಂದು ವ್ಯವಸ್ಥಿತ-ಸುಸ್ಥಿತಿಗೆ ಬರಲು ಅವರು ಕಾರಣ. ಡಾ.ರಾಜ್ ಅವರ ಜನಾಭಿಮಾನದ ಹಿನ್ನೆಲೆಯಲ್ಲಿ ತಮ್ಮದೇ ಚಿತ್ರ ನಿರ್ಮಾಣ-ಹಂಚಿಕಾ ಸಂಸ್ಥೆ ಸ್ಥಾಪಿಸಿ, ಅದು ಎಲ್ಲ ವಿಷಯಗಳಲ್ಲೂ ಶಕ್ತಿಯುತವಾಗಿ ಬೇರೂರುವಂತೆ ಮಾಡಿದವರು ಅವರು. 'ಈ ಸ್ಥಿತಿಗೆ ಬರಲು ನಾನು ಬೇಕಾದಷ್ಟು ಕಷ್ಟಪಟ್ಟಿದ್ದೀನಿ. ಎಲ್ಲವನ್ನೂ ಒಂದು ತಹಬಂದಿಗೆ ತರಲು ಎಷ್ಟೋ

ಜೈ ಮಾಧ್ಯಮ....

ಡಾ.ರಾಜಕುಮಾರ್ ದಿಢೀರ್ ಅಪಹರಣ ಕರ್ನಾಟಕದ ಯಾರೂ ಎದುರು ನೋಡದಂಥದ್ದು. ಇಂಥದೊಂದು ಘಟನೆ ಸೃಷ್ಟಿಯಾಗಬಹುದು ಎಂದು ಯಾರೂ ಕನಸು ಮನಸುಗಳಲ್ಲೂ ನಿರೀಕ್ಷಿಸಿಕೊಂಡಿರಲಿಲ್ಲ. ಆದರೆ, ದುರದೃಷ್ಟವಶಾತ್ ಅದು ಆಗಿಹೋಯಿತು. ಡಾ.ರಾಜ್ ಅವರೇನೊ ಸುಲಭ-ಸರಳವಾಗಿ, 'ಬರೀ ಪಂಚೆ-ಒಂದು ಷರಟು' ಅಂದುಬಿಟ್ಟರು. ಆದರೆ, ಅದು ಸಾರ್ವಜನಿಕವಾಗಿ ಹೇಗೆಲ್ಲ ಕೆಲಸಮಾಡಿತು ಎಂದು ನೋಡಿದಮೇಲೆಯೇ ಇದರ ಗಂಭೀರ ಪರಿಣಾಮ ತಿಳಿದದ್ದು. ಇಡೀ ಬೆಂಗಳೂರು ನಗರ, ಅಶಾಂತವಾಯಿತು. ಕರ್ನಾಟಕದಲ್ಲೆಲ್ಲ ಜೀವನ ಏರುಪೇರಾಯಿತು. ಚಿತ್ರರಂಗ ಸ್ತಬ್ಧವಾಯಿತು. ಇನ್ನೂ ಏನೇನೊ?

ಆದರೆ, ಮಾಧ್ಯಮಗಳಿಗೆ ಈ ಘಟನೆ ಅನಿರೀಕ್ಷಿತವಾಗಿ ಬಂದರೂ ಕೆಲಸಮಾಡಿ ತೋರಿಸುವ ಅವಕಾಶವೂ ಆಯಿತು.

ಕನ್ನಡ-ಇಂಗ್ಲಿಷ್ ಪತ್ರಿಕೆಗಳು ಸಂಕೋಚ ಬಿಟ್ಟು ಈ ಪ್ರಸಂಗದ ಎಲ್ಲ ಮುಖಗಳನ್ನೂ-ಆಗುಹೋಗುಗಳನ್ನೂ ಸವಿವರವಾಗಿ, ಸಚಿತ್ರವಾಗಿ ಕಾಣಿಸಿದವು. 'ಟೈಮ್ಸ್ ಆಫ್ ಇಂಡಿಯಾ' ಮತ್ತು 'ಕನ್ನಡ ಪ್ರಭ' ಸೊಗಸಾಗಿ ವರದಿಗಳನ್ನು ಮಾಡಿದವು. 'ಟೈಮ್ಸ್ ಆಫ್ ಇಂಡಿಯಾ' ಯಾವಾಗಲೂ ವಿಷಯ ತಿಳಿಸುವುದರಲ್ಲಿ ಒಂದು ಹೆಜ್ಜೆ ಮುಂದೆಯೇ ಇದ್ದಿತು. 'ಕನ್ನಡ ಪ್ರಭ'ದ ಗಾಜನೂರು ಸುತ್ತಮುತ್ತ ಪ್ರತಿನಿಧಿ ಅಂಶಿ ಪ್ರಸನ್ನಕುಮಾರ್ ಸಂದರ್ಭವನ್ನು ಅದ್ಭುತವಾಗಿ ಉಪಯೋಗಿಸಿಕೊಂಡು ದಿನಕ್ಕೊಂದೊಂದು ಭಿನ್ನವಾದ, ಜನ ಕಾತುರದಿಂದ ಬಯಸುವ ಫೋಟೋ ವರದಿಗಳನ್ನು ಕಳುಹಿಸಿಕೊಡುತ್ತಿದ್ದದ್ದು ಮೆಚ್ಚುವಂಥ ಅಂಶ (ಬಹುಶಃ, ಮೈಸೂರಿನ ಕೆಲವು ಪತ್ರಕರ್ತರು ಹೀಗೆ ಸಾಹಸದ ಓಡಾಟ ಮಾಡಿರಬಹುದು). 'ಇಗ್ಗಲೂರು-ಹಾಸನೂರು ಅರಣ್ಯದಲ್ಲಿ ವೀರಪ್ಪನ್ ತಂಡ ಬೀಡು' ಎಂದೊಂದು ದಿನ 'ಕನ್ನಡ ಪ್ರಭ'ದಲ್ಲಿ ಪ್ರಕಟವಾದ ಅಂಶಿ ಅವರ ಫೋಟೋ ವರದಿ ಅತ್ಯುತ್ತಮ ಮತ್ತು ಯಾವ ಪತ್ರಕರ್ತರಿಗಾದರೂ ಮಾದರಿಯಾಗುವಂಥದ್ದು, ವೀರಪ್ಪನ್ ಜಾಡು ಹಿಡಿದು ಕಾಡಿನೊಳಗೇ ಕಾರಿನಲ್ಲಿ ಹೊರಟ ಅಂಶಿ ಮಿತ್ರವೃಂದದ ಧೈರ್ಯ ಅನುಕರಣೀಯ. ವೀರಪ್ಪನ್ (ಬಹುಶಃ ಡಾ.ರಾಜ್ ಜೊತೆಗೆ) ಉಳಿದುಕೊಂಡಿದ್ದ, ಬಿಟ್ಟು ಹೋದ ಅನೇಕ ಅಡಗು ತಾಣಗಳನ್ನು ಫೋಟೋ ಹಿಡಿದು, ಓಡಾಟದ ವರದಿ ಬಹಳ ಚೆನ್ನಾಗಿ ಮೂಡಿ ಬಂದಿದೆ.


ಕನ್ನಡ ಟೆಲಿವಿಷನ್ ಛಾನೆಲ್‌ಗಳಲ್ಲಿ 'ಉದಯ ಟಿವಿ' ಸಂದರ್ಭವನ್ನು ಸೊಗಸಾಗಿ ಉಪಯೋಗಿಸಿಕೊಂಡಿತು. ಬಹುಶಃ, ಇದು ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಅವರ ಸಂಬಂಧದ 'ಸನ್ ಟಿವಿ'ಯ ಸೋದರನಾಗಿರುವುದರಿಂದ, ವಿಷಯ-ವಿವರ ಎಲ್ಲರಿಗೂ ತಲುಪುವ ಮೊದಲು ಇವರಿಗೆ ತಲುಪುತ್ತಿತ್ತು. ಡಾ.ರಾಜ್ ಕುಟುಂಬಕ್ಕೆ ಮೊಟ್ಟ ಮೊದಲು ವಿಷಯ ತಿಳಿಸಿ ಅವರ ಅನಿಸಿಕೆಗಳನ್ನು ಪಡೆದು ಕೋಟಿ ಕೋಟಿ ಕನ್ನಡಿಗರಿಗೆ ತಿಳಿಸಿದ ಕೀರ್ತಿ 'ಉದಯ ಟಿವಿ'ಯದ್ದಾಯಿತು. ಡಾ.ರಾಜ್ ದನಿಯ ಕ್ಯಾಸೆಟ್‌ಗಳು, ಗೋಪಾಲ್ ಕಳುಹಿಸಿದ ಫೋಟೋ - ವೀಡಿಯೋ ಕ್ಯಾಸೆಟ್ ಇವೆಲ್ಲ 'ಉದಯ'ಕ್ಕೆ ಕೂಡಲೇ ಸಿಕ್ಕಿತು. ಎಲ್ಲದರಲ್ಲೂ ಮೊದಲನೆಯದಾಗಿ ನಿಂತಿತು. ವೃತ್ತಿಯ ಮೇಲುಗೈ ಸಾಧಿಸಿತು. ಈ ಗದ್ದಲದಲ್ಲಿಯೇ 'ಉಷೆ ಟೀವಿ'ಗೂ ಪ್ರಾಮುಖ್ಯತೆ ಬಂದಿತು. ಮತ್ತು ದಿಢೀರನೆ ಪ್ರಾರಂಭಿಸಿದ, 24 ಘಂಟೆಗಳ 'ಉದಯ ನ್ಯೂಸ್' ಛಾನೆಲ್ ಕೂಡ ಜನರನ್ನು ಸೆಳೆಯಿತು. 'ಉದಯ ನ್ಯೂಸ್' ಛಾನೆಲ್‌ನ್ನು ಕೇಬಲ್ ಆಪರೇಟರುಗಳು ಹಾಕದೆ ವಿಧಿಯಿರಲಿಲ್ಲ. ಜನರೇ ಅದು ಬೇಕು ಎಂದು ಬಯಸುವಂತಾಯಿತು. ಹೀಗೆ ನಿಧಿಯೇ 'ಉದಯ' ಸಮೂಹಕ್ಕೆ ದಕ್ಕಿತು. ಈ ಜಾಣತನಕ್ಕಾಗಿ 'ಸನ್-ಉದಯ' ಆಡಳಿತದವರನ್ನು ಅಭಿನಂದಿಸಲೇಬೇಕು. ಅವರಿಂದ ಕರ್ನಾಟಕಕ್ಕಂತೂ ಅನುಕೂಲವಾಗಿದೆ. ಕಂಗ್ರಾಟ್ಸ್ 'ಸನ್-ಉದಯ'.

ಕನ್ನಡದ ಇನ್ನೆರಡು ಹೊಸ ಛಾನೆಲ್‌ಗಳು ಸಂದರ್ಭವನ್ನು ಚೆನ್ನಾಗಿ ಏಕೋ ಉಪಯೋಗಿಸಿಕೊಳ್ಳಲಿಲ್ಲ. 'ಸುಪ್ರಭಾತ' ಕೆಲದಿನಗಳ ಅನಂತರ ಜಾಗೃತವಾಯಿತು. ನಿರ್ಮಾಣದವರಿಂದ ಚರ್ಚಾಗೋಷ್ಠಿ ಏರ್ಪಡಿಸಿತು. ಜೊತೆಗೆ, ಕಾಯಕ್ರಮದಲ್ಲೆಲ್ಲ ಹೊಸ ಸುದ್ದಿಯ ಸಾಲು ಹಾಕಿತು. 'ಕಾವೇರಿ' ಛಾನಲ್ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಲಿಲ್ಲ ಎಂದೇ ಹೇಳಬೇಕು. ಆದರೆ, ಕೆಲವು ಉತ್ತಮ ಸಂಗೀತ ಕಾರ್ಯಕ್ರಮಗಳು ಇಲ್ಲಿ ಕಂಡವು. ದೂರದರ್ಶನ ಮಾತ್ರ ಎಂದಿನಂತೆಯೇ ಕೆಲಸ ಮಾಡಿತು.

Slow down in the fastest growing City in Asia







Jacarandas and Gulmohars. Quaint, gabled houses. The aroma of fresh coffee beans. The strains of the veena. The swish of silk...... Rapid industrial growth has not taken away Bangalore's charm and unhurried pace of life.





And a holiday here promises to be truly delightful. Just the right place to relax. To get away from your deadlines, your appointments, your meetings. And discover that there's so much more to life...

While in Bangalore, don't forget to see these capital sights.
The Vidhana Soudha, Cubbon Park, Lalbagh, Tipu's Palace, Rajarajeshwari Temple and lots more.

Finished your sight seeing ? How about some shopping now ? Or a delicious dinner at any of the dozens of speciality restaurants in Bangalore ? Or may be a cool, refreshing drink at the popular Pubs ? Maybe you'd like to take off for a picnic at any of the picturesque spots around Bangalore ? Yes, there's a lot you can do - and experience - here. Come live your life. At your own pace.

History. Nature. Adventure.
Srirangapatna. The island fortress of Tipu Sultan - the Tiger of Mysore. The brave warrior - king who caused terror among the British. Stories of his valour are still told at Srirangapatna. And an obelisk at the Fort, marks where this great king fell - shot by an unknown soldier. Betrayed by his own men.

Worth a visit is the Daria Daulat Bagh - Tipu's Summer Palace, the Gumbaz , the Fort, the mosque and the Ranganathaswamy Temple.

Close to Srirangapatna is the Ranganathittu Bird Sanctuary. Home to some of the rarest species of birds - who holiday here from as far away as Siberia, Australia and North America.

The Cauvery River offers you miles and miles of Aqua Adventure. Rafting, boating, fishing..... Come, feel the excitement. The thrill. The magic. You'll never be the same again


Malgudi Days !
Mysore - the inspiration for R.K. Narayan's Malgudi town - is a place you can fall in love with easily ! The heady fragrance of the celebrated Mysore Mallige , beautiful gardens and Palaces. So many of them ! No wonder, Mysore is known as the City of Palaces. The most famous of these of course, is the Mysore Palace with its magnificent gold throne.

The Brindavan Gardens with its terraced gardens and musical fountains, the Chamundi Hills with a temple right on the top, the vast Mysore Zoo with many exotic species of flora and fauna, the St. Philomena's Church with its stained glass windows.... are 'musts' for any tourist.

Climb 625 steps to meet a Jain saint.
At Sravanabelagola is the gigantic 17 m. tall monolith of Lord Bahubali. An important Jain pilgrim centre, Sravanabelagola attracts thousands of devotees every year.

Immortal stones. Temple towns.
At Belur and Halebid are some of the most exquisite temples that you can find. With intricate carvings and friezes - god and goddesses, rows of elephants, birds and animals, episodes from the epics and sensuous dancers... You'll need more than a day to study the sculptural details of the temples at Belur and Halebid.

But that's Karnataka. Savour it slowly. Enjoy its every moment. Delight in its every surprise. And promise yourself another holiday here. For as you would have already discovered.... there's a lot, lot more to Karnataka.



Department of Tourism
Government of Karnataka
1st Floor, 'F' Block,
Cauvery Bhavan
K.G. Road, Bangalore - 560 009
Tel : 80 - 2215489 Fax : 80 - 2272403

Karnataka. A lasting romance.

ಸಮಸ್ಯೆ-ಅಡ್ಡಿಗಳನ್ನು ಎದುರಿಸಿದ್ದೀನಿ' ಎಂದಿದ್ದರವರು. ಒಮ್ಮೆ, ಬಹುಶಃ ಪತಿಯನ್ನು ಹಾಯಾಗಿಟ್ಟು, ಎಲ್ಲ ವ್ಯವಹಾರಗಳ ಒತ್ತಡಗಳನ್ನೂ ಅವರು ತಮ್ಮ ಮೇಲೆ ಹಾಕಿಕೊಂಡರು. ಆದರೆ, ಇಂದು ಈ ಮಹಿಳೆ (ಒಬ್ಬ ಗ್ರಾಮೀಣ ಮೂಲದ ಹೆಣ್ಣು) ಕನ್ನಡ ನಾಡಿನ, ಕನ್ನಡ ಚಿತ್ರರಂಗದ ಅತಿ ಶಕ್ತಿಯುತ ವ್ಯವಸ್ಥೆಯೊಂದನ್ನು ಕಟ್ಟಿದ್ದಾರೆ. ಡಾ.ರಾಜ್ ಸಂಸ್ಥೆಯ ಚಿತ್ರಗಳು ಎಂದರೆ ಎಲ್ಲ ವಿಷಯಗಳಲ್ಲೂ 'ಯೋಜಿತ' ಪ್ರಯತ್ನಗಳು ಎಂದು ಎಲ್ಲರೂ ಹೇಳುವಷ್ಟು ಇವರು ತಮ್ಮ ವ್ಯವಹಾರಗಳನ್ನು ಒಂದು ಚೌಕಟ್ಟಿನಲ್ಲಿಟ್ಟುಕೊಂಡಿದ್ದಾರೆ.

ಡಾ.ರಾಜಕುಮಾರ್ 75ರ ಹುಟ್ಟುಹಬ್ಬ ಆಚರಿಸಿ, ಶತಮಾನೋತ್ಸವದ ಘಟ್ಟ ತಲುಪಲಿ, ಕನ್ನಡಿಗರೆಲ್ಲರ ಹೃದಯಸಿಂಹಾಸನಾಧೀಶ್ವರರಾಗಿ ಮೆರೆಯಲಿ ಎಂದು ನಾವೆಲ್ಲರೂ ಹಾರೈಸೋಣ. ■









ಕನ್ನಡ ಚಿತ್ರರಂಗದ ಎಲ್ಲ ಕಲಾವಿದರಿಗೆ,
ತಂತ್ರಜ್ಞರಿಗೆ ಮತ್ತು ಲೇಖಕರಿಗೆ
ಈ ದೀಪಾವಳಿ ಶುಭವನ್ನುಂಟುಮಾಡಲಿ,
ಬೆಳಕನ್ನು ತರಲಿ ಎಂದು 'ಬಿಸಿಲ ಬದುಕು'
ಹೃದಯಪೂರ್ವಕವಾಗಿ ಹಾರೈಸುತ್ತದೆ. ಜೊತೆಗೆ
ಡಾ.ರಾಜ್ ಎಂದೆಂದಿಗೂ ನಮ್ಮೊಂದಿಗಿರಲಿ, ನಮಗೆ
ಎಂದೆಂದಿಗೂ ತಮ್ಮ ಅದ್ಭುತ ಅಭಿನಯವನ್ನು
ಸಮರ್ಪಿಸುತ್ತಿರಲಿ ಎಂದು ನಮ್ಮೆಲ್ಲರ ಹಾರೈಕೆ.

ಹಳೆ ಬೇರು - ಹೊಸ ಚಿಗುರು

ಹಿರಿಯಣ್ಣ ಡಾ. ರಾಜ್ ಹೆಮ್ಮರವಾಗಿ ಬೆಳೆದು ನಿಂತಿರುವಾಗ, ವಿಷ್ಣುವರ್ಧನ್, ಅಂಬರೀಷ್, ಅನಂತನಾಗ್, ಲೋಕೇಶ್, ಮೊದಲಾದವರು ಸಾಧನಶೀಲ ಕಲಾವಿದರಾಗಿ ಬೆಳಗುತ್ತಿರುವಾಗ, ರಾಜೇಂದ್ರಸಿಂಗ್ ಬಾಬು, ರಾಜೇಂದ್ರ ಬಾಬು, ಭಗವಾನ್, ಎಂ.ಎಸ್. ರಾಜಶೇಖರ್, ಸಿದ್ಧಲಿಂಗಯ್ಯ, ಪಿ.ಎಚ್. ವಿಶ್ವನಾಥ್, ಭಾರ್ಗವ, ಸೋಮಶೇಖರ್, ನಾಗಾಭರಣ, ರೇಣುಕಾಶರ್ಮ ಮೊದಲಾದ ನುರಿತ ನಿರ್ದೇಶಕರು ಚಟುವಟಿಕೆಯಿಂದ ಇರುವಾಗ, ಕನ್ನಡ ಚಿತ್ರರಂಗ ಹಿಂದೆಂದೂ ಕಾಣದ ರೀತಿಯಲ್ಲಿ ತ್ರಿವಿಕ್ರಮಾವತಾರ ತಾಳಲು ಪ್ರಯತ್ನಿಸುತ್ತಲೇ ಇದೆ. ಕೋಟಿ ದಾಟಿರುವ ಸಿನಿಮಾ ನಿರ್ಮಾಣ ಹತ್ತು ಕೋಟಿ ಗಡಿಯನ್ನೂ ಸಮೀಪಿಸಿದೆ (ರಾಮು ನಿರ್ಮಾಣದ ಚಿತ್ರ ವೈಭವ 'ಹಾಲಿವುಡ್') ಉಪೇಂದ್ರ ಅವರಂಥ ಅಚ್ಚರಿ ಯಶಸ್ವಿಯ ಹಾದಿಯಲ್ಲಿಯೇ ಇದೆ. ರವಿಚಂದ್ರನ್ ಅಂಥವರ ಆಶಾಭಾವನೆಯ ಹೊಸ ಹೊಸ ಪ್ರಯತ್ನಗಳು ಜಾರಿಯಲ್ಲಿ ಇದ್ದುಕೊಂಡೇ ಇದೆ. ಎಸ್. ನಾರಾಯಣ್ ಅಂಥ ಯುವ ಉತ್ಸಾಹಿ ಚಲಾವಣೆಯಲ್ಲಿ ಬಂದಾಗಿದೆ.





ಕನ್ನಡ ಚಿತ್ರರಂಗ ಮೊದಲಿನಿಂದಲೂ ಸಾಧನಶೀಲರನ್ನು ಕಾಣುತ್ತಲೇ ಬಂದಿದೆ. ನಿರ್ಮಾಣ, ನಿರ್ದೇಶನದ ದಿಗ್ಗಜರು, ಕಲಾವಿದರು - ತಂತ್ರಜ್ಞರು ಕಂಡಿದ್ದಾರೆ. ಪುಟ್ಟಣ್ಣ ಕಣಗಾಲ್, ಎನ್. ಲಕ್ಷ್ಮೀನಾರಾಯಣ, ಗಿರೀಶ್ ಕಾರ್ನಾಡ್, ಗಿರೀಶ್ ಕಾಸರವಳ್ಳಿ ಅಂಥವರು ಕನ್ನಡ ಚಿತ್ರದ ಗೌರವ ಹೆಚ್ಚಿದ್ದಾರೆ. ಜಯಶ್ರೀ, ಪಂಡರಿಭಾಯಿ, ಪ್ರತಿಮಾದೇವಿ, ಹರಿಣಿಯಂಥ ಕಲಾವಿದೆಯರಿಂದ ಪ್ರಾರಂಭವಾಗಿ ಬಿ. ಸರೋಜಾದೇವಿ, ಜಯಂತಿ, ಭಾರತಿ, ಲೀಲಾವತಿ, ಆರತಿ ಮೊದಲಾದವರು ಬೆಳ್ಳಿ ತೆರೆಯ ಮೇಲೆ ಬೆಳಗಿದ್ದಾರೆ. ಅಶ್ವತ್ಥ್, ಸಂಪತ್, ಬಾಲಕೃಷ್ಣ, ನರಸಿಂಹರಾಜು ಅವರಂಥ ಕಲಾವಿದರು ಕಂಡಿದ್ದಾರೆ.



ಭಾರತೀಯ ಚಿತ್ರರಂಗದ, ದಕ್ಷಿಣ ಭಾರತ ಚಿತ್ರರಂಗದ ಮೂಲಭೂತ ಚೌಕಟ್ಟಿನಲ್ಲಿ, ಹಿರಿಯರು ಹಾಕಿಕೊಟ್ಟ ಸಂಪ್ರದಾಯದಲ್ಲಿ ಕನ್ನಡ ಚಿತ್ರರಂಗವೂ ಬೆಳೆದಿದೆ.

ಆದರೆ, ಈಗ ರೀತಿ ಬದಲಾಗಿದೆ. ಅಭಿರುಚಿ ಬದಲಾಗಿದೆ. ನೋಟಗಳು ಬದಲಾಗಿದೆ. ಹಿಂದಿ - ತಮಿಳು- ತೆಲುಗು ಚಿತ್ರಗಳೊಂದಿಗೆ ಪೈಪೋಟಿಯಿಡಲು ಪ್ರಯತ್ನಗಳು ನಡೆದು, ಕನ್ನಡ ಚಿತ್ರಗಳ ವ್ಯಕ್ತಿತ್ವವೇ ಬದಲಾಯಿಸಿದೆ. ಅಡಿಪಾಯದ ವಿನ್ಯಾಸ ಬದಲಾಗಿದೆ. ತಾಂತ್ರಿಕತೆ ದಿನೇ ದಿನೇ ಹೊಸದಾಗುತ್ತಿದೆ. ಇವೆಲ್ಲವೂ ಕನ್ನಡ ಚಿತ್ರಗಳ ಪ್ರಾದೇಶಿಕ ಅಂಶಗಳನ್ನೇ





ಬದಲಾಯಿಸಿಬಿಟ್ಟಿದೆ. ಕನ್ನಡ ಸಾಹಿತ್ಯ ಉಪಯೋಗವೇ ಇಲ್ಲದಂತಾಗಿ, ವ್ಯಾಪಾರೀ ಚಿತ್ರ ಬ್ರಹ್ಮರ ಸೃಷ್ಟಿ ಅತಿಮುಖ್ಯವಾಗಿದೆ.

ರವಿಚಂದ್ರನ್ ಹಿಂದೊಂದು ದಶಕದಲ್ಲಿ ದಿಢೀರ್ ಪ್ರವೇಶಿಸಿ ಕನ್ನಡ ಚಿತ್ರರಂಗದ ಮುಖವನ್ನೇ ಬದಲಾಯಿಸಿದ ಹಾಗೆ, ಉಪೇಂದ್ರ ಎಂದೊಂದು ಅಲೆ ಈಚೆಗೆ ಪ್ರವಹಿಸಿ, ಸಿನಿಮಾ ಎನ್ನುವುದರ ಜಾತಕವನ್ನೇ ಬದಲಾಯಿಸುತ್ತಿದೆ. ರವಿಚಂದ್ರನ್ ಹಾಗೆಯೂ ಮುನ್ನುಗ್ಗದವರು, ಉಪೇಂದ್ರ ಹಾಗೆಯೂ ಆಲೋಚಿಸದವರು, ಮುಂದೇನು ಎನ್ನುವ ಸಂದಿಗ್ಧದಲ್ಲಿಯೇ ಇದ್ದಾರೆ. ಸಂಪ್ರದಾಯ ಶೈಲಿಯ ಚಿತ್ರಗಳು ತಯಾರು ಮಾಡಿದರೆ ಏನಾಗುತ್ತವೋ, ಹೇಗಾಗುತ್ತದೊ ಎನ್ನುವ ಅನುಮಾನ ಎಲ್ಲರನ್ನೂ ಕಾಡುತ್ತಿದೆ. ಹಿಂದಿ ತಮಿಳು ತೆಲುಗು ಚಿತ್ರಗಳ ಮಸಾಲೆ ಲೇಪನವಿಲ್ಲ. ಕನ್ನಡ ಚಿತ್ರಗಳ ನಿರ್ಮಾಣವೇ ಸಾಧ್ಯವಿಲ್ಲ ಎನ್ನುವಂಥ ಘಟ್ಟ ಬಂದಿದೆ.

ಆದರೂ, ಹೊಸ ಹೊಸ ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು, ಕಲಾವಿದರು ಕನ್ನಡ ಚಿತ್ರರಂಗಕ್ಕೆ ಮುತ್ತಿಗೆ ಹಾಕುತ್ತಲೇ ಇದ್ದಾರೆ. ಬಹುಶಃ ಟೆಲಿವಿಷನ್ ಎಂದೊಂದು ಪ್ರಾಥಮಿಕ ಘಟ್ಟ, ಸಿನಿಮಾ ಎನ್ನುವ ವಿಶಾಲ ಜಗತ್ತಿಗೆ ಕೆಲವಾದರೂ ಉತ್ತಮ ಕೊಡುಗೆಗಳನ್ನು ಕೊಡುತ್ತಿದೆ. ಸರ್ಕಾರದ ಚಾನೆಲ್ ಮಾತ್ರ ಇದ್ದದ್ದು ಈಗ ಖಾಸಗಿ ಛಾನೆಲ್‌ಗಳ ಅವತಾರ ಆಗಿದೆ. ಇದರಿಂದ ಸಾವಿರಾರು ಕಿರಿಯರಿಗೆ ಅವಕಾಶವಾಗಿದೆ ಎಂದಂತೂ ಹೇಳಲೇಬೇಕು. ಸಿನಿಮಾ ನಿರ್ಮಾಪಕ, ನಿರ್ದೇಶಕರಿಗೆ ಈಗ ಆಯ್ಕೆಗೆ ಬೇಕಾದಷ್ಟು ಮುಖಗಳಿವೆ.


ಆದರೆ, ಸಿನಿಮಾ ನಿರ್ಮಾಣದ ಬಡ್ಜೆಟ್ ಎನ್ನುವುದು ಮಾತ್ರ ಯಾರನ್ನಾದರೂ ಕಂಗೆಡಿಸುವಂಥ ಎತ್ತರ ಮುಟ್ಟಿಬಿಟ್ಟಿದೆ. ಅಷ್ಟೊಂದು ಖರ್ಚಿನಲ್ಲಿ ಪ್ರೇಕ್ಷಕರಿಗೆ ಏನು ಹೊಸದು ಕೊಡಲಾಗುತ್ತಿದೆ ಎಂದು ಯೋಚಿಸಿದಾಗ ಸರಿಯಾದ ಉತ್ತರ ಹೊಳೆಯುತ್ತಿಲ್ಲ. ಇಷ್ಟೆಲ್ಲ ಹಣ ಹೂಡಿ ಮಾಡಿದ ಕೆಲಸ ಏನಾಗುತ್ತದೆಂದು ಯಾರಿಗೂ ಗೊತ್ತಿಲ್ಲ. ಇಂದಿನ ಪರಿಸ್ಥಿತಿ ಇದು.

ಹೃಷಿಕೇಶ್ ಮುಖರ್ಜಿ, ಬಾಲಚಂದರ್, ಬಾಲುಮಹೇಂದ್ರ, ಕೆ.ವಿಶ್ವನಾಥ್, ಸಿಂಗೀತಂ ಶ್ರೀನಿವಾಸರಾವ್, ನಾಗಾಭರಣ ಅಂಥವರ ಸರಳ ರೀತಿ ಶೈಲಿಯಲ್ಲಿ ಭಾರತೀಯ ಸಿನಿಮಾ ಬೆಳೆದಿದ್ದರೆ, ಸರಿಯಾದ ಬೆಳವಣಿಗೆ ಆಗುತ್ತಿತ್ತೇನೊ? ಹಾಗಾಗಲಿಲ್ಲ.


ಕ್ರಿಕೆಟಿಗರ ವಿಷಯದಲ್ಲಿ ಐವತ್ತು ಲಕ್ಷ, ಒಂದು ಕೋಟಿ, ಹತ್ತು ಕೋಟಿ, ನೂರು ಕೋಟಿ ಎಂದೆಲ್ಲ ಸುದ್ದಿ ಸಮಾಚಾರಗಳು ಕಂಡಾಗ; ರಜನಿಕಾಂತ್, ಚಿರಂಜೀವಿ, ಅಮಿತಾಬ್ ಬಚ್ಚನ್, ಷಾರುಖ್‌ಖಾನ್ ಮೊದಲಾದ ಸೂಪರ್‌ಸ್ಟಾರ್‌ಗಳು ಕೋಟಿಗಳಾಚೆಯ ವ್ಯವಹಾರದಲ್ಲಿಯೆ ಇದ್ದಾರೆ ಎಂದುಕೊಂಡಾಗ, ಭಾರತೀಯ ವಾಣಿಜ್ಯ ಉದ್ಯಮಗಳು ಸಾವಿರ ಸಾವಿರ ಕೋಟಿಗಳಲ್ಲಿ ನಡೆಯುತ್ತಿರುವಾಗ, ಎಲ್ಲ





ವ್ಯವಹಾರಗಳೂ
ಸಾಮಾನ್ಯ ಲಾಭದ
ದಾರಿಬಿಟ್ಟು, ಬೃಹತ್
ಲಾಭದ
ದೃಷ್ಟಿಯಲ್ಲಿಯೆ
ಕೆಲಸ
ಮಾಡುತ್ತಿರುವಾಗ,
ಕನ್ನಡ
ಚಿತ್ರರಂಗದಂಥ
ಚಟುವಟಿಕೆ ಅದಕ್ಕೆ
ತಕ್ಕ ಮಟ್ಟಕ್ಕೆ ಏರದೆ
ಸುಮ್ಮನಿರಲು
ಸಾಧ್ಯವೇ? ಅಟ್ಟಕ್ಕೆ
ಹಾರಲಾಗುತ್ತದೆಯೊ
ಇಲ್ಲವೊ, ಅಂತೂ
ಬೆಟ್ಟಕ್ಕಂತೂ
ಹಾರಲು
ಪ್ರಯತ್ನಿಸುತ್ತಿದೆ.
■



ಕನ್ನಡ ಚಿತ್ರರಂಗ 65







ಕನ್ನಡ ಚಿತ್ರರಂಗ 65 ವರ್ಷಗಳ ಗಡಿದಾಟಿ ದಷ್ಟಪುಷ್ಟದ ಘಟ್ಟದಲ್ಲಿ ಇರಬೇಕಾದ್ದು, ಈ ದೀಪಾವಳಿಯಲ್ಲಿ ಬಳಲಿ ಬಾಡಿದಂತಾಗಿದೆ. 65 ವರ್ಷಗಳಲ್ಲಿ ಏನಾಯಿತು, ಈಗ ಯಾವ ಬೆಳವಣಿಗೆಯನ್ನು ಗಮನಿಸಿ ಸಂತೋಷಪಡಬೇಕು ಎನ್ನುವುದೇ


ಗೊತ್ತಾಗದ ಹಾಗೆ ಅದು ಮುದುರಿ ಕುಳಿತಿದೆ. ಡಾ. ರಾಜ್ ಅಪಹರಣದ ಹಿನ್ನೆಲೆಯಲ್ಲಿ ಇಡೀ ಚಿತ್ರರಂಗ (ನಿರ್ಮಾಪಕರು, ಹಂಚಿಕೆದಾರರು, ಪ್ರದರ್ಶಕರು, ಕಲಾವಿದರು, ತಂತ್ರಜ್ಞರು) ಮಂಕುಕವಿದಂತೆ ಕುಳಿತು ಬಿಡುವಂತಾಯಿತು, ಯಾವ ನಿರ್ಧಾರಕ್ಕೆ ಬರಲು ಯಾರಿಗೂ ಆಗಲಿಲ್ಲ. ಇಡೀ ಚಿತ್ರರಂಗದ (ಟಿವಿ ಕೆಲಸಗಳೂ ಸೇರಿ) ಚಟುವಟಿಕೆ ದೀರ್ಘಕಾಲ ಸ್ತಬ್ಧವಾದದ್ದು, ಕೋಟ್ಯಾಂತರ ರೂಪಾಯಿಗಳ ನಷ್ಟ, ಸಾಮಾನ್ಯ ಜನರಿಗೆ ಕೆಲಸವಿಲ್ಲದಂತಾದದ್ದು, ಹೊಸ ಚಿತ್ರ ನಿರ್ಮಾಣ ಇಲ್ಲದಿದ್ದದ್ದು, ಹೊಸ ಚಿತ್ರ ಬಿಡುಗಡೆಯಾಗದಿದ್ದದ್ದು - ಕನ್ನಡ ಚಿತ್ರರಂಗ ಭರಿಸಲಾಗದ, ನುಂಗಲಾದ ಬಿಸಿ ತುತ್ತುಗಳಾದವು.

ಆದರೆ, ಹೀಗೆಲ್ಲ ಆಗುತ್ತದೆ ಎಂದು ತಿಳಿದಿದ್ದರೂ, ಕನ್ನಡ ಚಿತ್ರರಂಗದ (ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ) ಪ್ರತಿಯೊಬ್ಬರೂ ಹಿರಿಯಣ್ಣನಿಗಾಗಿ ತೆಗೆದುಕೊಂಡ ದಿಟ್ಟ ನಿಲುವು ಐತಿಹಾಸಿಕವಾಗಿ ಹೋಯಿತು. ಯಾವ ಚಿತ್ರರಂಗವೂ ಕಾಣದಂಥ, ಅನುಭವಿಸದಂಥ ಮಾನಸಿಕ ನಿಷ್ಠೆಯ ವೈಯಕ್ತಿಕ ಬೆಂಬಲ ಎನಿಸಿಕೊಂಡಿತು. ಕೊನೆಕೊನೆಗೆ ತಾಳ್ಮೆ ಒಂದಿಷ್ಟು ಕರಗಿ ಸಾಮರಸ್ಯದಲ್ಲಿ ಚೂರುಪಾರು ಒಡಕು ಬಂದಿದ್ದರೂ, ಕನ್ನಡ ಚಿತ್ರರಂಗದ ಒಮ್ಮತದ









ನಿರ್ಧಾರ ಮಾತ್ರ ಮುಂದೆ ಎಷ್ಟೋ ವರ್ಷಗಳು ಆಲೋಚನೆಗೆ ಒಳಪಡುವಂಥದ್ದು.

ಕನ್ನಡ ಚಿತ್ರರಂಗ ಈ ಸಂದರ್ಭದಲ್ಲಿ ಸೋಲುಗೆಲುವುಗಳ ನಡುವೆ ಒಂದು ರೀತಿ ದಿಕ್ಕು ತೋರದ ಸ್ಥಿತಿಯಲ್ಲಿಯೇ ಇದ್ದಿತು. ಯಾವ ಕಥಾವಸ್ತು, ಯಾವ ಕಥಾನಾಯಕ-ನಾಯಕಿ, ಯಾವ ಆಕರ್ಷಣೆ-ವೈಭವ, ಯಾವ ವಿಶೇಷ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಸೆಳೆಯಬಹುದು ಎಂದು ಆಲೋಚಿಸಲೂ ಆಗದೆ, ನಿರ್ಧರಿಸಲೂ ಆಗದೆ, ಪ್ರೇಕ್ಷಕರಿಗೆ ಎಂಥ ಚಿತ್ರಬೇಕು, ಅವರ ಒಲವುಗಳೇನು ಎನ್ನುವುದನ್ನು ತಿಳಿದುಕೊಳ್ಳಲಾಗದೆ, ಪ್ರತಿ ಚಿತ್ರ ಪ್ರಯತ್ನವೂ ಒಂದು ಪ್ರಯೋಗ -ನಿರೀಕ್ಷೆ ಎನ್ನುವಂತೆ ಸಿದ್ಧವಾಗುತ್ತಿದೆ.

ಬಹುಶಃ ಕನ್ನಡ ಚಿತ್ರರಂಗಕ್ಕೆ ಒಂದು ಹೊಸ ಅಲೆ ಬೀಸಬೇಕು, ಪ್ರೇಕ್ಷಕರಿಗೆ ಹೊಸತು ಬೇಕಾಗಿದೆ. ವಿಶೇಷ ಅನುಭವಗಳು ಬೇಕಾಗಿವೆ. ಆಧುನಿಕ ಮನೋಭಾವಕ್ಕೆ ಹೊಂದುವಂಥ, ಬದುಕನ್ನು ಪ್ರತಿಫಲಿಸುವಂಥ, ತಂತ್ರಜ್ಞಾನದ ಬೆಳವಣಿಗೆಯನ್ನು ದಾಖಲಿಸುವಂಥ ಚಿತ್ರರತ್ನಗಳು ಬೆಳಗಬೇಕಾಗಿದೆ.

ಅಂಥದೊಂದು ನಿರೀಕ್ಷೆಯೊಂದಿಗೆ ಕನ್ನಡ ಸಿನಿಮಾ ಪ್ರೇಕ್ಷಕ ಕನ್ನಡ ಚಿತ್ರರಂಗವನ್ನು ಬೆಳೆಸಬೇಕು.

ಬೆಳಕಿನ ಲೋಕದವರಿಗೆಲ್ಲ, ಬೆಳಕಿನ ಹಬ್ಬದ ಶುಭಾಕಾಂಕ್ಷೆಗಳು. ■

BISILA BADUKU Kannada Monthly NOVEMBER 2000 RNI No. 67406 / 97 Regd. CPMG /KA /BGW-59 / 2000

ದೀಪಾವಳಿ ತರಲಿ ಸಂತಸದ ಪ್ರಭಾವಳಿ



ಸಹಸ್ರಮಾನದ ಮೊದಲ ದೀಪಾವಳಿ
ಅಜ್ಞಾನದ ಅಂಧಕಾರ ಅಳಿಸಿ
ಸುಜ್ಞಾನದ ಬೆಳಕು ಮೂಡಿಸಿ
ಹರುಷದ ಹೊನಲು ಹರಿಸಲಿ



ಶ್ರೀ ಎಸ್. ಎಂ. ಕೃಷ್ಣ
ಮುಖ್ಯ ಮಂತ್ರಿಗಳು

ಮನೆಮನಗಳನ್ನು ಬೆಳಗಿಸುವ ದೀಪಾವಳಿ, ದುಷ್ಟಶಕ್ತಿ ಎಷ್ಟೇ ಪ್ರಬಲವಾಗಿದ್ದರೂ ಅದು ಧ್ವಂಸಗೊಂಡು ಅಂತ್ಯದಲ್ಲಿ ಶಿಷ್ಟತೆಯೇ ಮೆರೆಯುವುದು ಎಂದು ಸಾರುವುದರ ಸಂಕೇತ. ಪ್ರತಿವರ್ಷ ಆಶ್ವಯುಜ ಚತುರ್ದಶಿಯಿಂದ ಕಾರ್ತಿಕ ಮಾಸದ ಪಾಡ್ಯದವರೆಗೆ 3 ದಿನಗಳ ಕಾಲ ಚಿಕ್ಕ ಮಕ್ಕಳಿಂದ ವಯೋವೃದ್ಧರೂ ಸ್ತ್ರೀಪುರುಷರೆಂಬ ಭೇದವಿಲ್ಲದೆ, ಜಾತಿ ಮತ ಧರ್ಮಗಳ ಕಟ್ಟಳೆಗಳಿಲ್ಲದೆ, ಎಲ್ಲರೂ ಒಂದಾಗಿ ಸಂಭ್ರಮಿಸುವ ಸಂದರ್ಭ ದೀಪಾವಳಿ.

ದೀಪಾವಳಿ ನಮ್ಮ ಜೀವನದ ಅರ್ಥಪೂರ್ಣ ಆಚರಣೆ ಆಗುವಂತಾಗಲು ಕರ್ನಾಟಕ ಸರ್ಕಾರ ರಾಜ್ಯದ ಜನತೆಯಲ್ಲಿ ಶಾಂತಿ, ಸಮಾನತೆ, ಸಮೃದ್ಧಿ ತರಲು ನಿರಂತರ ಶ್ರಮಿಸುತ್ತಿದೆ.

ಮಹಿಳೆಯರು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗದವರ ಏಳಿಗೆಗಾಗಿ **ಸ್ತ್ರೀಶಕ್ತಿ, ಜಾಗೃತಿ, ವಿಕಾಸಿನಿ, ನವಜೀವನ, ಆಧಾರ, ಹೊಸಹೆಜ್ಜೆ, ಭಾಗ್ಯಜ್ಯೋತಿ, ಕುಟೀರಜ್ಯೋತಿ, ಸುರಕ್ಷ, ಹೆರಿಗೆ, ಸ್ವಸ್ತಿ** ಹೀಗೆ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುತ್ತಿದೆ. **ರೈತಮಿತ್ರ** ಯೋಜನೆಯಡಿ ಕೃಷಿಕರ ಕಲ್ಯಾಣಕ್ಕೆ ದಾರಿ ಮಾಡಿ, ಮಾಹಿತಿ ತಂತ್ರಜ್ಞಾನವನ್ನು ಜನಸಾಮಾನ್ಯರಿಗೆ ತಲುಪಿಸುವತ್ತ ಗ್ರಾಮೀಣ ಯುವಕರ ತರಬೇತಿಗೆ **ಯುವ.ಕಾಂ** ಕೇಂದ್ರಗಳನ್ನೂ ಸ್ಥಾಪಿಸಿರುತ್ತದೆ. ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಿ ವಿಶ್ವಕ್ಕೇ ಕರ್ನಾಟಕದ ಪ್ರಾಮುಖ್ಯತೆಯ ಮನವರಿಕೆ ಮಾಡಿರುವುದಲ್ಲದೆ ರಾಜ್ಯಕ್ಕೆ ಬಹಳಷ್ಟು ಬಂಡವಾಳ ಆಕರ್ಷಿಸುವಲ್ಲಿ ಸಫಲವಾಗಿದೆ. ಆ ಮೂಲಕ ರಾಜ್ಯದಲ್ಲಿ **ನಿರುದ್ಯೋಗ ನಿವಾರಣೆಗೆ** ಒಂದು ದಿಟ್ಟ ಹೆಜ್ಜೆಯನ್ನಿಟ್ಟಿದೆ. ಸರ್ವರಿಗೂ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಗುರಿಯೊಂದಿಗೆ ಈ ವಲಯಗಳಲ್ಲಿ **"ಟಾಸ್ಕ್ ಫೋರ್ಸ್"** ರಚಿಸಿದೆ.

ರಾಜ್ಯ ಸರ್ಕಾರ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಈ ಎಲ್ಲಾ ಜನಪರ ಯೋಜನೆಗಳ ಪ್ರಯೋಜನ ಪಡೆದು ಸಮಾಜದಲ್ಲಿ ಎಲ್ಲರೂ ಸಮಾನತೆಯ ಸವಿಯುಂಡು ಭೇದಭಾವ ತೊರೆದು ಒಂದಾಗಿ ಬಾಳಿದಾಗಲೇ ದೀಪಾವಳಿ ಆಚರಣೆ ಸಾರ್ಥಕ. ದೀಪಾವಳಿಯ ಈ ಅರಿವಿನ ಬೆಳಕು ನಮ್ಮೆಲ್ಲರ ಬಾಳು ಬೆಳಗಲೆಂದು ಆಶಿಸೋಣ.

ಅಸತೋ ಮಾ ಸದ್ಗಮಯ ।
ತಮಸೋ ಮಾ ಜ್ಯೋತಿರ್ಗಮಯ ।
ಮೃತ್ಯೋರ್ಮಾ ಅಮೃತಂಗಮಯ ।
- ಬೃಹದಾರಣ್ಯಕೋಪನಿಷತ್



ದೀಪಾವಳಿಯ ಶುಭಸಂದರ್ಭದಲ್ಲಿ ಎಲ್ಲರಿಗೂ
ಕರ್ನಾಟಕ ಸರ್ಕಾರದ ಹಾರ್ದಿಕ ಶುಭಾಶಯಗಳು

ಕರ್ನಾಟಕ ವಾರ್ತೆ